ಹೊಸತು

ಜುಲೈ ೨೦೦೭ ಸಂ. ೨೦

ಅಣುದೇವ... ಹುಟ್ಟಿಸಿರುವ ಪ್ರಶ್ನೆಗಳು

1857: ದಲಿತ ವೀರನಾರಿಯರ ಮರುಕಥನಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೯
ಜೂನ್ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧
© ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23287943, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ




❑ ಪತ್ರಗಳು ೦೩
❑ ಮೇರಾ ಭಾರತ್ ಮಹಾನ್ ೦೪
❑ ಅಂತರಂಗ ೦೫
❑ ಸಾಮಾಜಿಕ ಚಿಂತನೆ: ಗಾಂಧಿ, ಲೋಹಿಯಾ, ಅಂಬೇಡ್ಕರ್ ೦೬
○ ಹೆಚ್.ಕೆ. ವೆಂಕಟೇಶ್
❑ ಖಾಕಿ, ಖಾದಿ, ಕಾವಿ ಸಂಘರ್ಷ ೦೯
○ ಡಿ.ಎಂ. ಚಿಣ್ಣಪ್ಪ
❑ ಯಾತನೆಯಲ್ಲಿ ದಲಿತ ಕ್ರೈಸ್ತರು ೧೦
○ ವೈ. ಮರಿಸ್ವಾಮಿ

❑ 'ಅನುದೇವ...' ಹುಟ್ಟಿಸಿರುವ ಪ್ರಶ್ನೆಗಳು ೧೫
○ ಪ್ರೊ॥ ರಹಮತ್ ತರೀಕೆರೆ
❑ ಬಸವಣ್ಣನಿಗೆ ಅವಮಾನ ೧೬
○ ಪ್ರೊ॥ ಬಿ.ವಿ. ವೀರಭದ್ರಪ್ಪ
❑ 'ಹೂರಣ ಬಯಸುವ... ಹೊರಗಣವನು' ೧೮
○ ಮಹೇಶ್ ತಿಪ್ಪಶೆಟ್ಟಿ
❑ ಅನು ಕುಲ ಹೊರಗಿನವನು... ೨೦
○ ಕಿರಣ ಎಂ. ಗಾಜನೂರು
❑ ಬಸವಣ್ಣ ಮಾದಾರ!? ೨೨
○ ಡಾ॥ ಕೆ.ಎಸ್. ಭಗವಾನ್
❑ ದಲಿತ ವೀರನಾರಿಯರು ೨೬
○ ಸತ್ಯ ಪ್ರಕಾಶ್ ಎಂ.ಆರ್.
❑ ಆಧ್ಯಾತ್ಮಿಕ ದಂಗೆಯ ಸ್ವರೂಪ ೩೦
○ ವಡ್ಡಗೆರೆ ನಾಗರಾಜಯ್ಯ
❑ ಕೇಡಿರಾಯ (ಕಥೆ) ೩೧
○ ವೈ. ಗ. ಜಗದೀಶ್
❑ ದಲಿತ್ ಡೈರಿ ೩೮
○ ಚಂದ್ರಭಾನ್ ಪ್ರಸಾದ್
❑ ಬುದ್ಧಾಯಣ ೪೨
○ ಸಿ. ಎಚ್. ರಾಜಶೇಖರ್



ಕವನಗಳು :

❑ ಮೆಹರ್, ಜೀವನದಿಯಾಗಲಿ ೧೩
❑ ಧರ್ಮ ೩೩

ಮುಖಪುಟ ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಉತ್ತರ ಪ್ರದೇಶದ ಗೆಲುವು ಕರ್ನಾಟಕದಲ್ಲಿ ಪವಾಡ ಮಾಡುತ್ತದೆಯೇ?

ಪ್ರೀತಿಯ ಸಂಪಾದಕರೇ,

ಜೂನ್ ತಿಂಗಳ 'ಸಂವಾದ'ದಲ್ಲಿ ಮೂಡಿ ಬಂದ 'ಬೆಹೆನ್‌ಜಿ ಬರೆದ ಇತಿಹಾಸ' ಅತ್ಯಂತ ಸಮರ್ಥವಾಗಿ ಮೂಡಿ ಬಂದಿದೆ. ಭಾರತದ ಚರಿತ್ರೆಯಲ್ಲಿ ಮಾಯಾವತಿಯವರು ಹೊಸ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಬಿ.ಜೆ.ಪಿ, ಸಮಾಜವಾದಿ ಪಕ್ಷ ಹಾಗೂ ಕಾಂಗ್ರೆಸ್‌ಗಳಂತ ಹಳೇ ಹುಲಿಗಳನ್ನು ಮಣಿಸಿ ಮುಖ್ಯಮಂತ್ರಿ ಗದ್ದುಗೆ ಏರಿದ ಮಾಯಾವತಿಯವರ ಸಾಧನೆ ಅಮೋಘವಾದದ್ದು. ಯಾವ ಜನ ತಾವು ಮುಂದುವರೆದವರೆಂದು ತಿಳಿದು ಅಪಮಾನ ಪಡಿಸುತ್ತಿದ್ದರೋ ಅದೇ ಜನರನ್ನು ಬಳಸಿ ಅಧಿಕಾರ ಹಿಡಿಯುವುದು ಸುಲಭದ ಮಾತೇನಲ್ಲ. ಇಂಥ ಅಸಾಧ್ಯದ ಕೆಲಸವನ್ನು ಮಾಯಾವತಿ ಮಾಡಿ ತೋರಿಸಿದ್ದಾರೆ.

ಬಿ.ಎಸ್.ಪಿಯ ಈ ಸಾದನೆ ಬಗೆಗೆ ಚಿಂತಕರಲ್ಲಿ ವಿವಿಧ ಆಲೋಚನೆಗಳಿವೆ. ಕೆಲವರಂತೂ ಇದನ್ನು 'ನವಬ್ರಾಹ್ಮಣ್ಯ' ಎಂದು ಹೀಗಳೆಯುತ್ತಿದ್ದರೆ ಇನ್ನು ಕೆಲವರು ಬ್ರಾಹ್ಮಣರು ಮಾಯಾವತಿ ಮೂಲಕ ಪರೋಕ್ಷವಾಗಿ ಆಡಳಿತರ ಚುಕ್ಕಾಣಿ ಹಿಡಿದಿದ್ದಾರೆಂದು ಲೇವಡಿ ಮಾಡುತ್ತಿದ್ದಾರೆ. ಆದರೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ಮತ್ತು ಮತದಾರ ಪ್ರಭುಗಳು 'ಮಾಯಾ ಮೋಡಿ'ಗೆ ಒಳಗೊಳಗೇ ಖುಷಿ ಪಡುತ್ತಿದ್ದಾರೆ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು (ಅಧಿಕಾರದ ಕೀಲಿಕೈಯನ್ನು ತಮ್ಮದಾಗಿಸಿಕೊಳ್ಳುವುದು) ಅತ್ಯಂತ ಸಮರ್ಥವಾಗಿ ಮುನ್ನಡೆಸಿದವರು ಮಾಯಾವತಿಯವರೆಂದು ಹೊಗಳುತ್ತಿದ್ದಾರೆ. ಅದು ಅತಿಶಯ ಎನಿಸಬಹುದಾದರೂ ಅಂಬೇಡ್ಕರ್-ಕಾನ್ಷಿರಾಂ ಅವರ ಕನಸನ್ನು ಮಾಯಾವತಿ ಹಲವು ರಾಜಿಗಳ ಹೊರತಾಗಿಯೂ ನನಸು ಮಾಡಿರುವುದಂತು ಸತ್ಯ.

ಆದರೆ ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ ಸಾಧಿಸಿದ್ದನ್ನು ದೇಶದ ಬೇರೆ ರಾಜ್ಯಗಳಲ್ಲಿ ಯಾಕೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂಬುದು ಅತ್ಯಂತ ಮುಖ್ಯ ಪ್ರಶ್ನೆಯಾಗಿದೆ. ಕರ್ನಾಟಕವನ್ನೇ ಉದಾಹರಣೆಯಾಗಿ ತೆಗೆದು ಕೊಳ್ಳುವುದಾದರೆ ಇಲ್ಲಿ ಬಿ.ಎಸ್.ಪಿಗೆ ಸಮರ್ಥ ನಾಯಕರೇ ಇಲ್ಲ. ಅಂದರೆ ಜನಪ್ರಿಯ ನಾಯಕರಿಲ್ಲ. ಈಗ ಇರುವ ನಾಯಕರು ಉತ್ತಮ ಕಾರ್ಯಕರ್ತರೇ ವಿನಃ ನಾಯಕರಲ್ಲ. 'ಪ್ರಭಾವಿ ವ್ಯಕ್ತಿತ್ವ' ಇರುವ ವ್ಯಕ್ತಿಗಳು ಬಿ.ಎಸ್.ಪಿ ನಾಯಕತ್ವ ವಹಿಸಿದರೆ ಕರ್ನಾಟಕ ಸಹ ಉತ್ತರ ಪ್ರದೇಶವಾಗುವುದರಲ್ಲಿ ಅನುಮಾನವಿಲ್ಲ.

ಇದಕ್ಕೆ, ಈಗಿನ ಬಿ.ಎಸ್.ಪಿ ರಾಜ್ಯ ನಾಯಕತ್ವ ಮೊದಲು ಪ್ರಯತ್ನಿಸಬೇಕಾಗಿದೆ. ವಿವಿಧ ದಲಿತ ಸಂಘಟನೆಗಳಲ್ಲಿರುವ ಪ್ರಭಾವಿ ಮುಖಂಡರನ್ನು ಪ್ರೀತಿ ವಿಶ್ವಾಸಗಳಿಂದ ಮೊದಲು ಸೆಳೆದುಕೊಳ್ಳಬೇಕಾಗಿದೆ. ವಿಶೇಷವಾಗಿ 'ಸರ್ವೋದಯ ಕರ್ನಾಟಕ ಪಕ್ಷ'ದ ಮುಖಂಡರೊಂದಿಗೆ ಚರ್ಚಿಸಿ ಅವರ ಸಹಕಾರ ಪಡೆದುಕೊಳ್ಳಲು ಪ್ರಯತ್ನಿಸಬೇಕಾಗಿದೆ. ನಂತರ ವಿವಿಧ ಜನಾಂಗಗಳ ಪ್ರಭಾವಿ

ನಾಯಕರನ್ನು ಮನವೊಲಿಸಿ ಪಕ್ಷಕ್ಕೆ ಕರೆತರಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ಹಾಲಿ ನಾಯಕತ್ವ ವಹಿಸಿರುವವರಲ್ಲಿ ಸಾಕಷ್ಟು ಮನಃಪರಿವರ್ತನೆ ಆಗಬೇಕು. ಅವರ ನಡೆ-ನುಡಿಗಳಲ್ಲಿ ತುಂಬಾ ಬದಲಾವಣೆ ಆಗಬೇಕು. ಯಾಕೆಂದರೆ ನನಗೆ ತಿಳಿದು ಬಂದಂತೆ ಬಹಳಷ್ಟು ನಾಯಕರು ಇತರ ದಲಿತ ನಾಯಕರ ಬಗ್ಗೆ ಬಹಳ ಅಸಹನೆ, ಅಸೂಯೆ ಮತ್ತು ಅವಹೇಳನಕರ ಭಾವನೆ ಹೊಂದಿರುವುದು ನನ್ನ ಗಮನಕ್ಕೆ ಬಂದಿದೆ. ನಾವೇ ಸಮರ್ಥರು ಎಂಬ ಅಹಂಕಾರವೂ ಅವರಿಗಿದೆ. ಇದು ಪಕ್ಷ ಬೆಳೆಯಲು ನಿಜವಾಗಲೂ ದೊಡ್ಡ ಅಡ್ಡಗೋಡೆಯಾಗಿದೆ.

ಉತ್ತರ ಪ್ರದೇಶದಲ್ಲಿ ಅಧಿಕಾರಕ್ಕೆ ಬಂದಾಕ್ಷಣ ಕರ್ನಾಟಕದಲ್ಲಿ ಪವಾಡವಾಗುತ್ತದೆ ಎಂದು ನಿರೀಕ್ಷಿಸುವುದು ತಪ್ಪು. ಆದರೆ ಪ್ರಯತ್ನವಂತೂ ಆಗಲೇಬೇಕು. ಅಂಥ ಯಾವ ಅವಕಾಶವನ್ನು ಬಿ.ಎಸ್.ಪಿ. ನಾಯಕರು ಕಳೆದುಕೊಳ್ಳಬಾರದೆಂಬುದೇ ನನ್ನ ಅಪೇಕ್ಷೆ.

ಎಸ್. ಮುನಿ ವೆಂಕಟಪ್ಪ
ಬೆಂಗಳೂರು.

ಪತ್ರಗಳು

ಕಾಡು ಹಣ್ಣುಗಳ ನೆನಪಿನಲ್ಲಿ

ಪ್ರೀತಿಯ ಸಂಪಾದಕರೇ,

'ಕಾಲದ ಮರದಲ್ಲಿ ಕಲ್ಲು ಹಣ್ಣುಗಳು' ಲೇಖನ ನನ್ನನ್ನು ಗತಕಾಲದ 'ಬಾಲ ವೈಭವ'ಕ್ಕೆ ಕರೆದೊಯ್ಯಿತು. ಚಿಕ್ಕವರಿದ್ದಾಗ ಕಾಡು-ಮೇಡುಗಳಲ್ಲಿ ಅಲೆದು ಸರ್ಕಸ್ ಮಾಡುತ್ತ ಕದ್ದು ಕಿತ್ತು ತಿನ್ನುತ್ತಿದ್ದ ಹಲಸು, ಮಾವು, ಸೀಬೆ ಹಣ್ಣುಗಳು ಈಗಲೂ ನನ್ನ ಬಾಯಲ್ಲಿ ನೀರೂರಿಸುತ್ತವೆ. ಊರಿನ ಕಡೆ ಆಗೊಮ್ಮೆ ಈಗೊಮ್ಮೆ ಹೋದಾಗ ಈಗಲೂ ಕಾಡು ಅಲೆಯಬೇಕೆನಿಸುತ್ತದೆ. ಕಾಡಿನಲ್ಲಿ ಸಿಕ್ಕುತ್ತಿದ್ದ 'ಕಾರೆ ಹಣ್ಣು' ತಿಂದು ಎಷ್ಟೋ ವರ್ಷಗಳೇ ಆಗಿ ಹೋಗಿವೆ.

ಹಲಸಿನ ಹಣ್ಣನ್ನು ಕದಿಯುವಾಗಂತೂ ಅದನ್ನು ಕುಯ್ಯುವುದೇ ದೊಡ್ಡ ಸಾಹಸವಾಗುತ್ತಿತ್ತು. ಕಳ್ಳತನದಲ್ಲೇ ಈ ಸಾಹಸ ನಡೆಯಬೇಕಾದ್ದರಿಂದ ಅದಕ್ಕೆ ತಕ್ಕ ಕುಶಲತೆ ಉಳ್ಳ ಗೆಳೆಯರನ್ನೇ ಆಶ್ರಯಿಸಬೇಕಾಗುತ್ತಿತ್ತು. ನನ್ನ ಗೆಳೆಯನೊಬ್ಬ ಹಲಸಿನ ಮರದ ಮೇಲೇ ಹಣ್ಣನ್ನು ಪೂರ್ತಿ ಕೂದು, ತೊಳೆ ಬಿಡಿಸಿ, ತಿಂದು, ನಮಗೂ ತಿನ್ನಿಸಿ ಒಂದು ಚೂರು ಸಿಪ್ಪೆ-ಸಿದರೆ ಕೆಳಗೆ ಬೀಳದಂತೆ ತನ್ನ ಚೌಕದಲ್ಲೇ(ಟವೆಲ್) ಬಚ್ಚಿಟ್ಟು ಅದನ್ನು ಗೌಪ್ಯವಾಗಿ ಯಾರಿಗೂ ಕಾಣದ ಜಾಗದಲ್ಲಿ ಹೂತುಬಿಡುತ್ತಿದ್ದ. ಹಾಗಾಗಿ ಕಳ್ಳತನ ಬಯಲಾಗುತ್ತಲೇ ಇರಲಿಲ್ಲ! ಅದನ್ನೆಲ್ಲ ನೆನೆದರೆ ಈಗಲೂ ರೋಮಾಂಚನವಾಗುತ್ತದೆ.

ಬಾಲ್ಯದ ನೆನಪನ್ನು ಮರುಕಳಿಸುವಂತೆ ಮಾಡಿದ ಕೃಷ್ಣಮೂರ್ತಿ ಬಿಳಿಗೆರೆ ಹಾಗೂ ಅದನ್ನು ಪ್ರಕಟಿಸುವ ಮೂಲಕ ನನ್ನಂಥವರನ್ನೆಲ್ಲ ಬಾಲ್ಯದ ನೆನಪಿನ ಲೋಕಕ್ಕೆ ಕರೆದೊಯ್ಯುವಲ್ಲಿ ಸಹಕರಿಸಿದ 'ಸಂವಾದ'ಕ್ಕೆ ವಂದನೆಗಳು

ಕೆ. ಭಾಸ್ಕರ ರೆಡ್ಡಿ, ಚಿಕ್ಕಬಳ್ಳಾಪುರ.

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಆಗಸ್ಟ್ ೨೦೦೭ ರಿಂದ ಆರಂಭ



ಮಾತಿನ ಹಂಗು

ಪ್ರೊ॥ ರಹಮತ್ ತರೀಕೆರೆ

ವರ್ತಮಾನದ ನಡೆ, ನುಡಿ, ನಡಾವಳಿಗೊಂದು ಕೈಗನ್ನಡಿ

ದಲಿತರು ಬ್ರಾಹ್ಮಣರಾಗುತ್ತಾರೆ ಇಲ್ಲಿ!

ತುಮಕೂರು ಏ.೨- ಆರು ಜನ ದಲಿತರು ತಾತ್ಕಾಲಿಕವಾಗಿ ಬ್ರಾಹ್ಮಣರಾಗಿರುವ ಕಥೆ ಇದು.

ಕುಣಿಗಲ್ ತಾಲೂಕು ಹುಲಿಯೂರು ದುರ್ಗ ಹೋಬಳಿಯ ಪುಟ್ಟ ಗ್ರಾಮ ಉಜ್ಜನಿಯಲ್ಲಿ ಈ ವಿಚಿತ್ರ ಆಚರಣೆ ಹಲವಾರು ವರ್ಷಗಳಿಂದ ಚಾಲ್ತಿಯಲ್ಲಿದೆ.

ಯುಗಾದಿ ಹಬ್ಬ ಆಚರಣೆ ಆದ ಮಾರನೆಯ ದಿನ ೬ ಮಂದಿ ದಲಿತರು ಜನಿವಾರ ಹಾಕುತ್ತಾರೆ. ೧೫ ದಿವಸ ಕಳೆದ ನಂತರ ಅಂದರೆ ಮಂಗಳವಾರ ಮಧ್ಯರಾತ್ರಿ ಅಗ್ನಿ ಕೊಂಡ ಹಾಯ್ದು ಜನಿವಾರ ವಿಸರ್ಜಿಸುತ್ತಾರೆ.

ಅಲ್ಲಿಂದ ಸುಮಾರು ೧ ವರ್ಷಗಳ ಕಾಲ ಈ ಐದು ದಲಿತ ಯುವಕರು ಚಪ್ಪಲಿ ಹಾಕುವುದಿಲ್ಲ ಹಾಗೂ ಮಾಂಸವನ್ನು ತಿನ್ನುವುದಿಲ್ಲ.

ಈ ೧೫ ದಿವಸದ ಆಚರಣೆಯಲ್ಲಿ ದಿನಕ್ಕೆ ಒಮ್ಮೆ ಮಾತ್ರ ಊಟ. ಅದು ಮುದ್ದೆ ಊಟ. ಏಕೆಂದರೆ, ಒಬ್ಬ ವ್ಯಕ್ತಿ ಅಗಿಯುವುದು ಮತ್ತೊಬ್ಬನಿಗೆ ಕೇಳಿಸಿದರೆ ಆ ದಿನದ ಮಟ್ಟಿಗೆ ಯಾರೂ ಊಟ ಮಾಡುವಂತಿಲ್ಲ.

ಮಂಗಳವಾರ ಮಧ್ಯ ರಾತ್ರಿ ಈ ೬ ಜನ ದಲಿತರು ಹಾಗೂ ಎರಡು ದೇವರು ಮತ್ತು ಕರಗ ಒಟ್ಟಾಗಿ ಅಗ್ನಿ ಕುಂಡ ಹಾದು ಹೋಗುತ್ತಾರೆ. ಶುಕ್ರವಾರ ಈ ೬ ಜನ ದಲಿತರು ಜನಿವಾರ ವಿಸರ್ಜಿಸಿದರೂ ೧ ವರ್ಷಗಳ ಕಾಲ ಬೇರೆಯವರ ಮನೆಯಲ್ಲಿ ಊಟ ಮಾಡುವುದಿಲ್ಲ. ಒಂದು ವೇಳೆ ಬೇರೆ ಊರಿಗೆ ಹೋದರೆ ಇವರೇ ಅಡುಗೆ ಮಾಡಿಕೊಂಡು ಊಟ ಮಾಡಬೇಕಾದ ಆಚರಣೆಯನ್ನು ಕಳೆದ ಹಲವಾರು ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದಾರೆ.

ಏಕೆ ಈ ಆಚರಣೆ: ಈ ರೀತಿಯ ಆಚರಣೆಗೆ ಈ ಊರಿನಲ್ಲೊಂದು ಕಥೆಯಿದೆ. ಹೆಬ್ಬಾರಮ್ಮ ಎಂಬ ಬ್ರಾಹ್ಮಣ ಯುವತಿ ದಲಿತ ಯುವಕನೊಬ್ಬನನ್ನು ಪ್ರೇಮಿಸಿ ಮದುವೆಯಾಗಿದ್ದರಂತೆ. ಆಕೆಗೆ ೫ ಜನ ಮಕ್ಕಳಾಗುತ್ತಾರೆ.

ನಂತರ ಆಕೆಗೆ ತನ್ನ ಗಂಡ ದಲಿತ ಎಂಬುದು ತಿಳಿಯುತ್ತದೆ. ಹಾಗಾಗಿ ಆಕೆ ಚೌಡೇಶ್ವರಿ ದೇವಿ ಅಗ್ನಿ ಕುಂಡಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಆಗ ಊರವರೆಲ್ಲರೂ ಸೇರಿ ಈಕೆಗೆ ಗ್ರಾಮದೇವತೆ ಪಟ್ಟ ಕಟ್ಟುತ್ತಾರೆ. ತಾನು ಸುಳ್ಳು ಹೇಳಬಾರದಿತ್ತು. ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಏನು ಎಂದು ಆಕೆಯ ಗಂಡ ಕೇಳಿದಾಗ ಈ ಐದು ಜನ ಮಕ್ಕಳು ತಾತ್ಕಾಲಿಕವಾಗಿ ಬ್ರಾಹ್ಮಣರಾಗಬೇಕು ಎಂದು ದೇವರು ತಾಕೀತು ಮಾಡಿದಂತೆ

ಅಲ್ಲಿಂದ ಇಲ್ಲಿಯವರೆಗೂ ಈ ಆಚರಣೆ ನಡೆದುಕೊಂಡು ಬಂದಿದೆ. ಈ ೬ ಮಂದಿಯನ್ನು ತಾತ್ಕಾಲಿಕವಾಗಿ 'ಗುಡ್ಡರು' ಎಂದು ಕರೆಯಲಾಗುವುದು.

ಈ ಆರು ಮಂದಿ ದಲಿತರಿಗೆ ಯುಗಾದಿ ಹಬ್ಬ ಆದ ಮಾರನೆಯ ದಿನ ಜನಿವಾರ ಹಾಕಿಸುವುದು ಕೂಡ ಪುರೋಹಿತರೇ. ಜನಿವಾರ ಹಾಕಿಸಿದ ನಂತರ ಅವರು ದೇವಸ್ಥಾನ ಸೇರುತ್ತಾರೆ.

ಪ್ರತಿ ವರ್ಷ ಯುಗಾದಿ ಹಬ್ಬ ಆದ ಮಾರನೆಯ ದಿನ ಊರವರು ಸೇರಿ ಬ್ರಾಹ್ಮಣರಾಗುವ ೬ ಮಂದಿ ದಲಿತರನ್ನು ಆಯ್ಕೆ ಮಾಡಿ ತಾತ್ಕಾಲಿಕವಾಗಿ ಅವರಿಗೆ ಜನಿವಾರ ಹಾಕಿಸುತ್ತಾರೆ. ಈ ೬ ಮಂದಿ ದಲಿತರ ವಾಸ ೧೫ ದಿನದ ಮಟ್ಟಿಗೆ ದೇವಸ್ಥಾನವೇ ಆಗಿರುತ್ತದೆ.

ಯುಗಾದಿ ಹಬ್ಬ ಆದ ನಂತರ ಬೆಳಗಿನ ಜಾವ ಪೂಜಾ ವಿಧಿ ವಿಧಾನ ಮುಗಿಸಿದ ಮೇಲೆ ಜನಿವಾರ ಹಾಕಲಾಗುವುದು. ಸುಮಾರು ೧೫ ದಿವಸಗಳ ಮಟ್ಟಿಗೆ ಜನಿವಾರ ಧರಿಸುವ ಇವರು ನಂತರ ಜನಿವಾರ ವಿಸರ್ಜಿಸಿದರೂ ಕಟ್ಟುನಿಟ್ಟಿನ ಆಚರಣೆಯನ್ನು ಇಡೀ ವರ್ಷ ಮಾಡುತ್ತಾರೆ. (ಕನ್ನಡ ಪ್ರಭ)

ಮಲ ಹೊರುವ ಪದ್ಧತಿ ನಿರ್ಮೂಲನೆಗೆ ನೀಡಿದ್ದ ಹಣ ಖರ್ಚೇ ಆಗಿಲ್ಲ

ನವದೆಹಲಿ ಮೇ ೧೯. ಮಲ ಹೊರುವ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆಂದು ನೀಡಲಾಗಿರುವ ೩೨೫ ಕೋಟಿ ರೂಪಾಯಿಯಷ್ಟು ಹಣ ರಾಜ್ಯ ಸರ್ಕಾರಗಳ ಬಳಿ ಖರ್ಚಾಗದೆ ಕೊಳೆಯುತ್ತ ಬಿದ್ದಿದೆ ಎಂದು ಬಿ.ಕೆ. ಹರಿಪ್ರಸಾದ್ ರಾಜ್ಯಸಭೆಯಲ್ಲಿ ದೂರಿದ್ದಾರೆ.

ಬಹು ದೊಡ್ಡ ಸಾಮಾಜಿಕ ಕಳಂಕವಾಗಿರುವ ಈ ಅನಿಷ್ಟವನ್ನು ತೊಲಗಿಸುವ ತುರ್ತಾಗಲಿ, ಬದ್ಧತೆಯಾಗಲಿ ಸಂಬಂಧಪಟ್ಟ ಮಂತ್ರಾಲಯಕ್ಕೆ ಇಲ್ಲವೆಂದು ಅವರು ಆಕ್ಷೇಪ ಪ್ರಕಟಿಸಿದ್ದಾರೆ.

ಮಲ ಹೊರುವವರಿಗೆ ಬೇರೆ ಉದ್ಯೋಗ ಒದಗಿಸುವ ಮತ್ತು ಶುಷ್ಕ ಪಾಯಿಖಾನೆಗಳ ನಿರ್ಮಾಣವನ್ನು ನಿಷೇಧಿಸುವ ೧೯೯೩ರ ಕೇಂದ್ರ ಕಾಯಿದೆ ಜಾರಿಗೆ ರಾಜ್ಯ ಸರ್ಕಾರಗಳು ಸಾಕಷ್ಟು ಆಸಕ್ತಿ ತೋರುತ್ತಿಲ್ಲ. ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

೨೦೦೭ರ ಅಂತ್ಯದೊಳಗೆ ಈ ಪದ್ಧತಿಯ ನಿರ್ಮೂಲನೆ ಆಗಬೇಕೆಂದು ಯೋಜನಾ ಆಯೋಗ ತನ್ನ ರಾಷ್ಟ್ರೀಯ ಕ್ರಿಯಾಯೋಜನೆಯನ್ನೇ ನೀಡಿ ಗಡುವು ನಿಗದಿ ಮಾಡಿದೆ.

ಆದರೆ ಈ ಅಮಾನವೀಯ ದಾಸ್ಯದಿಂದ ಮುಕ್ತರಾಗಲು ಕಾಯುತ್ತಿರುವ ನತದೃಷ್ಟರ ಅಧಿಕೃತ ಸಂಖ್ಯೆ ೬.೭೬ ಲಕ್ಷವಾದರೆ, ಅನಧಿಕೃತ ಸಂಖ್ಯೆ ೧೩ ಲಕ್ಷ ಎಂದು ಪ್ರಸಾದ್ ತಿಳಿಸಿದ್ದಾರೆ. (ಕನ್ನಡ ಪ್ರಭ)

ಮಾರಲು ತಂದಿದ್ದ ಹಸುಗೂಸು ಸಾವು

ಕಂಪ್ಲಿ, ಮೇ ೧೮- ಕುರುಗೋಡಿನ ಹುಸೇನ್ ಬೀ ಎಂಬುವವರು ಇಲ್ಲಿ ಬುಧವಾರ ಮಾರಾಟ ಮಾಡಲೆಯತ್ನಿಸಿದ ಹಸುಗೂಸು ಗುರುವಾರ ಮೃತಪಟ್ಟಿದೆ

ಮಗುವನ್ನು ಮಾರಲು ಯತ್ನಿಸಿದ ಹುಸೇನ್ ಬೀಗೆ ಮಹಿಳೆಯರು ಮತ್ತು ಪೊಲೀಸರು ಬುದ್ಧಿವಾದ ಹೇಳಿ ತವರೂರಿಗೆ ಹೊರಡಲು ಸಹಕರಿಸಿ ಬಸ್ ಹತ್ತಿಸಿದ್ದರು. ಆದರೆ ಕಂಪ್ಲಿಯಿಂದ ಸ್ವಲ್ಪ ದೂರ ಹೋಗಿ ಬಸ್‌ನಿಂದ ಇಳಿದು ಮತ್ತೆ ಇಲ್ಲಿಗೇ ಬಂದಿದ್ದಳು. ಕೂಸಿಗೆ ಎದೆ ಹಾಲು ಇಲ್ಲದೆ ಅಸ್ವಸ್ಥವಾಗಿ ಮೃತಪಟ್ಟಿತೆಂದು ಹುಸೇನ್ ಬೀ ಹಾಗೂ ತಾತ್ಕಾಲಿಕ ಆಶ್ರಯ ನೀಡಿರುವ ರಾಜಾಬೀ ಮತ್ತು ಸುತ್ತಲಿನ ಜನ ತಿಳಿಸಿದ್ದಾರೆ. (ವಿಜಯ ಕರ್ನಾಟಕ)

ದಲಿತ ಮುಖ್ಯ ಶಿಕ್ಷಕಿಯ ಪಾಠ ಕೇಳಿದ ಮಕ್ಕಳಿಗೆ ಗಂಜಲ ಪ್ರೋಕ್ಷಣೆ!

ನಾಗ್ಪುರ ಏ. ೨೪- ದಲಿತ ಮುಖ್ಯೋಪಾಧ್ಯಾಯಿನಿಯ ಬೋಧನೆ ಕೇಳಿದ ವಿದ್ಯಾರ್ಥಿಗಳಿಗೆ. ಇತರೆ ಅಧ್ಯಾಪಕರು ಹಸುವಿನ ಗಂಜಲ ಪ್ರೋಕ್ಷಣೆ ಮಾಡಿ 'ಶುದ್ಧೀಕರಿಸಿದರು'!

ಬೆಚ್ಚಿ ಬಿದ್ದಿರಾ? ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಉದಾಹರಣೆ ಎಂಬಂತೆ, ಉತ್ತರಪ್ರದೇಶದ ಸರ್ಕಾರಿ ಶಾಲೆಯೊಂದರಲ್ಲಿ ಈ ಘಟನೆ ನಡೆದಿದೆ.

ಘಟನೆ ವಿವರ: ಉ. ಪ್ರದೇಶದ ಬಂದಾರಾ ಜಿಲ್ಲೆಯ ಶಾಲೆಯೊಂದರಲ್ಲಿ ದಲಿತ ಮಹಿಳೆಯೊಬ್ಬರು ಮುಖ್ಯ ಶಿಕ್ಷಕಿಯಾಗಿದ್ದರು. ಅವರು ವರ್ಗವಾದಾಗ ಆ ಜಾಗಕ್ಕೆ ಮುಖ್ಯೋಪಾಧ್ಯಾಯರಾಗಿ ಸೇರಿದ ಶರದ್ ಕಾಯ್ಕಡೆ ನೇಮಕಗೊಂಡರು. ಹುದ್ದೆ ವಹಿಸಿದ ತಕ್ಷಣ ಕಾಯ್ಕಡೆ ಶಾಲೆಯ ಮಕ್ಕಳಿಗೆಲ್ಲಾ ಗಂಜಲ ಪ್ರೋಕ್ಷಿಸಿ 'ಶುದ್ಧೀಕರಣ' ಮಾಡಿದರು. ಈ ಆರೋಪದ ಮೇಲೆ ಕಾಯ್ಕಡೆಯನ್ನು ಬಂಧಿಸಲಾಗಿದೆ. (ಪಿಟಿಐ, ಕನ್ನಡ ಪ್ರಭ)

ಧರಣಿ ಸತ್ಯಾಗ್ರಹ

ಬಿಜಾಪುರ, ಏ ೧೬. ತಾಲೂಕಿನ ಸಾರವಾಡ ಗ್ರಾಮದ ಪರಿಶಿಷ್ಟ ಕುಟುಂಬದ ಮಲ್ಲಿಕಾರ್ಜುನ ಬಟಗಿ ತನ್ನ ತಾಯಿ, ಹೆಂಡತಿ ಹಾಗೂ ಮಕ್ಕಳ ಸಮೇತ ಜಿಲ್ಲಾಧಿಕಾರಿ ಮುಂದೆ ೯ ದಿನಗಳಿಂದ ನಿರಂತರವಾಗಿ ಧರಣಿ ಸತ್ಯಾಗ್ರಹ ಕೈಗೊಂಡಿದ್ದಾರೆ. (ಕನ್ನಡ ಪ್ರಭ)

ಸಂಪಾದಕೀಯ



ಅನು ದೇವ... ಹಾಗೂ ಅನಂತರ...

ನಾಡಿನ ಸಾಂಸ್ಕೃತಿಕ ಲೋಕದಲ್ಲಿ ಹಿಂದೆಂದೂ ಕಾಣದ ತಲ್ಲಣ-ಆತಂಕ ಕಾಣಿಸಿಕೊಂಡಿದೆ. ಈಚೆಗೆ ಬಿಡುಗಡೆಯಾದ ಭೈರಪ್ಪ ಅವರ 'ಆವರಣ' ಕಾದಂಬರಿ, ಮತ್ತು ಡಾ॥ ಬಂಜಗೆರೆ ಜಯ ಪ್ರಕಾಶ್ ಅವರ 'ಅನುದೇವ ಹೊರಗಣವನು' ಎಂಬ ಬಸವಣ್ಣನ ಜಾತಿ ಮೂಲದ ವಿಶ್ಲೇಷಣೆ ಈ ತಲ್ಲಣಕ್ಕೆ ಕಾರಣವಾಗಿವೆ.

ಭೈರಪ್ಪನವರ 'ಆವರಣ' ತನ್ನ ಜನಾಂಗ ದ್ವೇಷ ಹಾಗೂ ವಿಕಾರಗಳಿಂದಾಗಿ ಸಾಹಿತ್ಯ ವಲಯದಲ್ಲಿ ಚರ್ಚೆಗೊಳಗಾಗಿದೆ. ಕೋಮುವಾದಿಗಳ ದಾಹ ತಣಿಸುವ ದುರುದ್ದೇಶದಿಂದಲೇ ಕೃತಿ ರಚನೆಯಾಗಿರುವುದರಿಂದ ಸಮಾನತೆ-ಶಾಂತಿ ಬಯಸುವ ಎಲ್ಲ ಪ್ರಜ್ಞಾವಂತರಲ್ಲೂ ಒಂದು ರೀತಿಯ ತಳಮಳವನ್ನು ಹುಟ್ಟುಹಾಕಿದೆ. ವಿಶೇಷವಾಗಿ 'ಆವರಣ'ವನ್ನು ಓದಿದ ಯಾವ ಪ್ರಜ್ಞಾವಂತರೂ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಇಡೀ ಮುಸ್ಲಿಂ ಜನಾಂಗವನ್ನು ಅವಹೇಳನ ಮಾಡುವ, ಅಪಾರಾಧಿಗಳೆಂದು ಚಿತ್ರಿಸಿರುವ ರೀತಿಗೆ ಎಂಥ ಶಾಂತಿಪ್ರಿಯರೂ ಕೆರಳಬೇಕು! ಆದರೆ ಇಡೀ ಮುಸ್ಲಿಂ ಸಮುದಾಯ ಇಂಥದೊಂದು ಕಾದಂಬರಿ ಹೊರಬಂದಿದೆ ಎನ್ನುವುದೂ ತಿಳಿಯದವರಂತೆ ಮೌನ ವಹಿಸಿ ಜಾಣ್ಮೆ ತೋರಿದ್ದಾರೆ. ಅವರ ತಾಳ್ಮೆ ಸಂಯಮಕ್ಕೆ ಶಹಬ್ಬಾಸ್ ಎನ್ನಲೇಬೇಕು!.

ಆದರೆ ಅತ್ಯಂತ ಅಭಿಮಾನ ಮತ್ತು ಗೌರವದಿಂದಲೇ ಬಸವಣ್ಣನ ಜಾತಿ ಮೂಲದ ಪ್ರಶ್ನೆಯನ್ನೆತ್ತಿಕೊಂಡು ವಿಶ್ಲೇಷಿಸಿರುವ ಬಂಜಗೆರೆಯವರ 'ಅನು ದೇವ ಹೊರಗಣವನು' ಕೃತಿಗೆ ಬಸವಾಭಿಮಾನಿಗಳೆಂದು ಹೇಳಿಕೊಳ್ಳುತ್ತಿರುವ ಕೆಲವರು ವ್ಯಕ್ತ ಪಡಿಸುತ್ತಿರುವ ಆಕ್ರೋಶ ದಂಗು ಬಡಿಸುವಂತಿದೆ. 'ಅನು ದೇವ ಹೊರಗಣವನು' ಕೃತಿಯಲ್ಲಿ ದುರ್ಬೀನು ಹಾಕಿ ಹುಡುಕಿದರೂ ಬಸವಣ್ಣನಿಗಾಗಲಿ, ಲಿಂಗಾಯಿತ ಸಮುದಾಯಕ್ಕಾಗಲಿ ಅಪಮಾನವಾಗುವ ಯಾವುದೇ ವಿಚಾರಗಳು ಇಲ್ಲ. ಬಸವಣ್ಣನ ಜಾತಿ ಮೂಲದ ಬಗೆಗೆ ನಿಖರವಾದ ಐತಿಹಾಸಿಕ ದಾಖಲೆಗಳಿಲ್ಲದ್ದರಿಂದ ಅದರ ಸತ್ಯಾಸತ್ಯತೆಯನ್ನು ಹುಡುಕುವ ನಮ್ರ ಪ್ರಯತ್ನ ಮಾತ್ರ ಕೃತಿಯಲ್ಲಿದೆ.

ಬಸವಣ್ಣ ಬ್ರಾಹ್ಮಣರವನೋ? ಅಥವಾ ಮಾದಿಗರವನೋ? ತಳಸಮುದಾಯದ ಸಾಂಸ್ಕೃತಿಕ ಹುಡುಕಾಟದಲ್ಲಿ ಈ ಪ್ರಶ್ನೆ ಬಹಳ ಮುಖ್ಯವೆಂದೇ ನನಗನ್ನಿಸುತ್ತದೆ. ಯಾಕೆಂದರೆ ಬಸವಣ್ಣ ಹನ್ನೆರಡನೇ ಶತಮಾನದ ಸಾಂಸ್ಕೃತಿಕ ಕ್ರಾಂತಿಯ ಹರಿಕಾರ. ಆತ ಇಡೀ ಸಮಾಜದ ನೈತಿಕತೆಯನ್ನೇ ಪ್ರಶ್ನಿಸಿ ತಳಸಮುದಾಯಗಳಿಗೆ ಸಾಂಸ್ಕೃತಿಕ ನೆಲೆಗಟ್ಟೊಂದನ್ನು ಒದಗಿಸಿ ಕೊಟ್ಟ ಮಹಾ ಪುರುಷ. ಬಸವಣ್ಣ ಕೇವಲ ಸಮಾಜ ಸುಧಾರಕ ಮಾತ್ರವಾಗಿರಲಿಲ್ಲ. ಆತ ದುರ್ಬಲ ವರ್ಗಗಳಿಗೆ ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಅರಿವು ಮೂಡಿಸಿದ ಮಹಾ ದಾರ್ಶನಿಕ. ದುಡಿಮೆಯೇ ದೇವರೆಂದು ಸಾರಿದ ಮಹಾ ತತ್ವಜ್ಞಾನಿ.

ಇಂಥ ಮನೋಧರ್ಮದ ಬಸವಣ್ಣ ಯಾವ ಜಾತಿ ಮೂಲದವನೆಂದು ವಿಶ್ಲೇಷಿಸುವುದರಲ್ಲಿ ಯಾರನ್ನೇ ನೋಯಿಸುವುದಾಗಲಿ, ಅವಮಾನ ಮಾಡುವುದಾಗಲಿ ಎನಿದೆ? ಇಂದು ಬಸವಾಭಿಮಾನಿಗಳೆಂದು ಹೇಳಿಕೊಳ್ಳುವ ಕೆಲವರು ಎಬ್ಬಿಸುತ್ತಿರುವ ದಾಂಧಲೆಗೆ ಇರುವ ಕಾರಣಗಳಾದರೂ ಏನು? ನಿಜವಾದ ಬಸವಾಭಿಮಾನಿಗಳು ಬಸವಣ್ಣ ಮಾದಿಗರವನೆಂದರೆ ಹೆಮ್ಮೆ ಪಡುತ್ತಾರೆಯೇ ಹೊರತು ಅಪಮಾನದಿಂದ ಕುಗ್ಗುವುದಿಲ್ಲ. ಆದರೆ ಬಸವ ಬ್ರಾಹ್ಮಣನೆಂದರೆ ಖುಷಿ ಪಡುವ, ಮಾದಿಗನೆಂದರೆ ಚೀರಾಡುವ ಇವರೆಂಥ ಬಸವಾಭಿಮಾನಿಗಳು?

ಇಷ್ಟಕ್ಕೂ ಬಸವಣ್ಣನ ಜಾತಿ ವಿವಾದ ಇನ್ನೂ ಬಗೆ ಹರಿದಿಲ್ಲ. ಆತ ಬ್ರಾಹ್ಮಣನೆಂಬುದು ಚಾರಿತ್ರಿಕ ದಾಖಲೆಗಳಿಂದೇನೂ ಸಾಬೀತಾಗಿಲ್ಲ. ಸಂಶೋಧನೆಗಾಗಿ ಎಲ್ಲ ವಿದ್ವಾಂಸರೂ ಆಶ್ರಯಿಸಿರುವುದು ಸಾಹಿತ್ಯ-ಸಾಂಸ್ಕೃತಿಕ ಆಕರಗಳನ್ನು ಮಾತ್ರ. ಈ ಆಕರಗಳಲ್ಲಿ ಎಷ್ಟು ನಿಖರತೆ ಇರುತ್ತದೆ ಮತ್ತು ಅಲ್ಲಿನ ಮಾಹಿತಿಗಳು ಸತ್ಯಕ್ಕೆಷ್ಟು ಹತ್ತಿರವಾಗಿರುತ್ತವೆಂಬ ಬಗ್ಗೆ ಎಲ್ಲರಿಗೂ ಗೊತ್ತಿದೆ. ಕೃತಿಕಾರನ ಹಿನ್ನೆಲೆ, ಆತನ ಚಿಂತನಾ ಕ್ರಮ, ಆತ ಪ್ರತಿನಿಧಿಸುವ ಸಾಂಸ್ಕೃತಿಕ ಹಿನ್ನೆಲೆಯ ಮೂಲಕ ಈ 'ಸತ್ಯ' ರೂಪಾಂತರವಾಗುತ್ತಲೇ ಇರುತ್ತದೆ.

ಬಸವಣ್ಣನವರ ವಚನಗಳನ್ನೇ ನೋಡಿ. 'ತಾನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ' ಎಂದು ಒಮ್ಮೆ ಬರೆಯುವ ಬಸವಣ್ಣ, ತಾನು ಅಸ್ಪೃಶ್ಯರ ಮಗನೆಂದು ಹತ್ತು ಹಲವು ಬಾರಿ ಬರೆದಿದ್ದಾರೆ. ತಾನೊಬ್ಬ 'ದಾಸನ ಮಗ, ತೊತ್ತಿನ ಮಗ' ಎಂದು ಬಸವಣ್ಣ ಪದೇ ಪದೇ ಹೇಳಿಕೊಳ್ಳುತ್ತಾರೆ. ಈ ಎಲ್ಲಾ ವಚನಗಳನ್ನೇ ಆಧಾರವಾಗಿ ತೆಗೆದುಕೊಂಡರೂ ಬಸವಣ್ಣ ಬ್ರಾಹ್ಮಣನೆಂದು ಖಚಿತವಾಗಿ ಹೇಳಲಾಗುವುದಿಲ್ಲ ಬಸವಣ್ಣ ಬ್ರಾಹ್ಮಣ ಎನ್ನುವುದು ಹೇಗೆ ಅನುಮಾನಿತ ಸತ್ಯವೋ, ಅತ ಅಸ್ಪೃಶ್ಯ ಎನ್ನುವುದು ಕೂಡ ಅನುಮಾನಿತ ಸತ್ಯವೇ. ಆದರೆ ಒಂದು ಅನುಮಾನಿತ ಸತ್ಯ ಮಾತ್ರ ಪ್ರಿಯವಾಗಿ ಮತ್ತೊಂದು ಅಪ್ರಿಯವಾಗುವುದರ ಹಿಂದಿನ ಸಾಂಸ್ಕೃತಿಕ ದಿವಾಳಿತನ ಮಾತ್ರ ಆಶ್ಚರ್ಯಕರವಾಗಿದೆ.

ಭಾರತೀಯ ಸಮಾಜದ ಶ್ರೇಣೀಕೃತ ಜಾತಿವ್ಯವಸ್ಥೆ ವಿರುದ್ಧ ಹೋರಾಡಿದ ಬಸವಣ್ಣನ ಅನುಯಾಯಿಗಳೆಂದು ಹೇಳಿಕೊಳ್ಳುವ ಕೆಲವೇ ಕೆಲವು ಜನ ಮಾತ್ರ ಯಾಕೆ ಹೀಗೆ ನಡೆದುಕೊಳ್ಳುತ್ತಿದ್ದಾರೆಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಮತ್ತಷ್ಟು ಆಘಾತವಾಗುತ್ತದೆ. 'ಅನು ದೇವ' ಕೃತಿ ಪ್ರಕಟವಾದ ನಂತರ ಯಾರೂ ಆ ಕೃತಿ ಕುರಿತಂತೆ ವಸ್ತುನಿಷ್ಠ ಚರ್ಚೆಗೆ ಮುಂದಾಗಲಿಲ್ಲ. ಒಂದು ಸಂಶೋಧನಾ ಕೃತಿಗೆ ಮತ್ತೊಂದು ಸಂಶೋಧನಾ ಕೃತಿಯೇ ಉತ್ತರವೆಂಬ ಕನಿಷ್ಠ ಜ್ಞಾನವೂ ಇವರಿಗಿದ್ದಂತಿಲ್ಲ. ವಿಶ್ವವಿದ್ಯಾಲಯಗಳು ಮತ್ತು ವಿದ್ವಾಂಸರ ಮಟ್ಟದಲ್ಲಿ ನಡೆಯಬೇಕಾದ ವಿಚಾರವನ್ನು ಬೀದಿ ರಂಪ ಮಾಡಲಾಗುತ್ತಿದೆ. ಬಹಿಷ್ಕಾರ ಮತ್ತು ಕೊಲೆ ಬೆದರಿಕೆಗಳನ್ನು ಹಾಕಲಾಗುತ್ತಿದೆ. ಪುಸ್ತಕವನ್ನು ಮುಟ್ಟುಗೋಲು ಹಾಕದಿದ್ದರೆ ರಕ್ತದೋಕುಳಿ ಯಾಡುವುದಾಗಿ ಒಬ್ಬ ಮುಖಂಡರು ಬೆದರಿಕೆ ಒಡ್ಡಿದ್ದಾರೆ.

ಇದೆಲ್ಲದರ ಸಾರಂಶವೆಂದರೆ ಬಂಜಗೆರೆ ಎತ್ತಿರುವ ಪ್ರಶ್ನೆಗಳು ಹಾಗೂ ಅನುಮಾನಗಳಿಗೆ ಸೂಕ್ತ ಉತ್ತರ ಕೊಡುವ ಸಾತ್ವಿಕ ತಾಕತ್ತು ಇವರಾರಿಗೂ ಇಲ್ಲ. ಅಸಹಾಯಕ ಮತ್ತು ದುರ್ಬಲ ಮನಸ್ಸಿನವರು ಮಾತ್ರ ಬೀದಿ ಜಗಳಕ್ಕೆ ಇಳಿಯುತ್ತಾರೆ. ಅಂತಃಶಕ್ತಿ ಉಳ್ಳವರು ಸಾತ್ವಿಕ ವಾಗ್ವಾದಕ್ಕಿಳಿಯುತ್ತಾರೆ. ಬಸವಾಭಿಮಾನದ ಹೆಸರಿನಲ್ಲಿ ಇಂದು ಬೀದಿರಂಪ ಮಾಡುತ್ತಿರುವವರೆಲ್ಲ ಎರಡನೇ ಸಾಲಿಗೆ ಸೇರಿದವರು. ಅವರು ಬಸವಣ್ಣ ವಿರೋಧಿಸಿದ ಸನಾತನ ವಾದದ ವಾರಸುದಾರರು. ಪುರೋಹಿತ ಶಾಹಿಯ ಪ್ರತಿಪಾದಕರು. ಹಿಂಸೆಯೊಂದೇ ಇವರ ಮಾನದಂಡ. ಅದಕ್ಕೆ ಇವರ ಬಾಯಲ್ಲಿ ಬರೀ ಬಹಿಷ್ಕಾರ, ಕೊಲೆ, ರಕ್ತಪಾತದ ಮಾತುಗಳು ಮಾತ್ರ ಬರುತ್ತಿವೆ.

ಬಸವಣ್ಣ ಯಾವುದೇ ಒಂದು ನಿರ್ದಿಷ್ಟ ಜಾತಿಗೆ ಸೇರಿದವರಲ್ಲ. ಅವರು ಇಡೀ ಮಾನವ ಕೋಟಿಗೆ ಬೆಳಕು ನೀಡಿದ ಮಹಾ ಪುರುಷ. ಅವರು ಎಲ್ಲರಿಗೂ ಸೇರಿದವರು. ಅದರಲ್ಲೂ ತಳಸಮುದಾಯದ ಜನರಿಗೆ ಅವರ ಮೇಲೆ ಹೆಚ್ಚಿನ ಅಧಿಕಾರ ಇದೆ. ಬಸವಣ್ಣ ಯಾವುದೇ ನಿರ್ದಿಷ್ಟ ಜಾತಿಯ ಆಸ್ತಿ ಅಲ್ಲ.

ಬಸವಣ್ಣನ ಜಾತಿ ಮೂಲದ ಪ್ರಶ್ನೆ ತಳಸಮುದಾಯಗಳ ಸಾಂಸ್ಕೃತಿಕ ಅಸ್ತಿತ್ವಕ್ಕೆ ಅತ್ಯಂತ ಪ್ರಸ್ತುತವಾದುದರಿಂದ ಆ ಕುರಿತಂತೆ ವ್ಯಾಪಕ ಸಂಶೋಧನೆ ನಡೆಯಬೇಕೆಂಬುದು 'ಸಂವಾದ'ದ ಆಶಯ

○ ಇಂದೂಧರ ಹೊನ್ನಾಪುರ

ಸಾಮಾಜಿಕ ಚಿಂತನೆ: ಲೋಹಿಯಾ, ಅಂಬೇಡ್ಕರ್ ಮತ್ತು ಗಾಂಧಿ

ಹೆಚ್.ಕೆ. ವೆಂಕಟೇಶ್

"ಭಾರತದ ವಿಶ್ವದ ಅತ್ಯಂತ ಹಸಿದ ಮತ್ತು ಆಹಾರವನ್ನು ಬೇಡುವ ಒಂದು ಭಿಕ್ಷುಕ ದೇಶ ಎಂಬುದು ತಿಳಿದ ಸಂಗತಿಯಾಗಿದೆ. ಸ್ವಾತಂತ್ರ್ಯಾನಂತರದ ಹದಿನೆಂಟು ವರ್ಷಗಳಲ್ಲಿ ಇಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ. ಸ್ಥಿತಿಗತಿಗಳು ಇನ್ನೂ ಅಧೋಗತಿಗಿಳಿದಿವೆ. ಈಗ ಅವು ಇನ್ನೂ ಭೀಕರ ಹಂತ ತಲುಪುತ್ತಿವೆ. ಈಗಿನ ಸರ್ಕಾರ ಮತ್ತು ಅದರ ನೀತಿ ಮುಂದುವರಿದರೆ ಕ್ಷಾಮವು ವಾರ್ಷಿಕ ಘಟನೆಯಾಗುತ್ತದೆ." ಭಾರತ ಸ್ವಾತಂತ್ರ್ಯ ಪಡೆದು ಹತ್ತಿರ ಹತ್ತಿರ ೬೦ ವರ್ಷಗಳಾಗುತ್ತಿದ್ದರೂ ಲೋಹಿಯಾ ಹೇಳಿದುದಕ್ಕಿಂತ ಪರಿಸ್ಥಿತಿಯೇನೂ ಉತ್ತಮವಾಗಿಲ್ಲ. ಭಾರತ ಪ್ರಕಾಶಿಸುತ್ತಿದೆ ನಿಜ. ಆದರೆ ಅದು ಕಾಗದದ ಮೇಲೆ ಮಾತ್ರ. ಗುಡಿಸಲುಗಳ ನೊಂದ ಜನಗಳ ಸ್ಥಿತಿ-ಗತಿ ಶೋಚನೀಯವಾಗಿದೆ, ಭಾರತ 'ಬಡಭಾರತ' ಎಂಬ ಪದಮೌಲ್ಯವನ್ನು ಸಾರುವಂತಿದೆ.

ಶತಶತಮಾನಗಳ ಕಾಲ ದಾರಿದ್ರ್ಯ, ಅಸಮಾನತೆ, ಅನಕ್ಷರತೆ ಮತ್ತು ಕೈಂಕರ್ಯಗಳಿಗೆ ಬಲಿಯಾಗಿ ಬಳಲಿ ಬೆಂಡಾಗಿರುವ, ನೊಂದು ಹಿಂದುಳಿದ ಜನಾಂಗ ಭಾರತದಲ್ಲಿ ಹೇರಳವಾಗಿದೆ. ವರ್ಣ-ವರ್ಗಗಳ ವೈವಿಧ್ಯಮಯವಾದ ಬಲಾತ್ಕಾರಗಳಿಂದ ಬಂಧಿತರಾದ ಭಾರತದ ಜನಕೋಟಿಯ ಬವಣೆಯನ್ನು ನೀಗಿಸಲು ಅನೇಕ ಸುಧಾರಣಾವಾದಿಗಳು ಭಗೀರಥ ಪ್ರಯತ್ನಗಳನ್ನು ನಡೆಸುತ್ತಲೇ ಇದ್ದಾರೆ. ಬದುಕಿನ ದಿನದಿನದ ದುಗುಡದಲ್ಲಿ ಅಲ್ಲೊಂದು ಇಲ್ಲೊಂದು ತೇಪೆ ಹಾಕುವ ಪ್ರಯತ್ನ ಮರೀಚಿಕೆಯಂತೆ ಕಂಡಿರಬಹುದು. ವಿಶ್ವದ ನರಕಯಾತನೆಯ ನೂಕುನುಗ್ಗಲಿನ ಬಾಳಿನಲ್ಲಿ ಇಂದೊಂದು ಆಶಾಕಿರಣವಾಗಿ ಹೊಳೆದಿರಬಹುದು ಶೋಷಕರ ಕಪಿಮುಷ್ಟಿಯ ಹಿಡಿತದಲ್ಲಿ ಇದೂ ಒಂದು ಸಾಧನವಾಗಿ ಹೋಗುವ ಅಪಾಯವಿದೆ.

ಈ ಬೆಳಕು ನಂದದಂತೆ ನೋಡಿಕೊಳ್ಳಬೇಕಾದ ಎಚ್ಚರ ಅಗತ್ಯ. ಪ್ರಜ್ಞಾಪೂರ್ವಕ ಸಂಘಟಿತ ಹೋರಾಟಗಳಿಂದ ಮಾತ್ರ ವಿಶ್ವದ ಮುಕ್ತಿ, ಮಾನವ ಜನಾಂಗದ ಏಳ್ಗೆ ಸಾಧ್ಯ. ಅಂಥ ನಿರಂತರ ಪರಿಶ್ರಮದ ಮಾನವ ಶಿಲ್ಪಿಗಳು, ಸಾಮಾನ್ಯರೆಡೆಗೆ ಇಟ್ಟ ಹೆಜ್ಜೆ ಗುರುತುಗಳು ಇವು. ಸಮಾಜದಲ್ಲಿ ಸಾಮರಸ್ಯ, ಸಮಾನತೆಗಳು ನೆಲೆಯೂರಬೇಕೆಂಬುದು ಚಿಂತಕರ ಸದಾಶಯ. "...ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣೀಗಳೂ, ವಿಜ್ಞಾನಿಗಳು, ಕವಿ, ಕಲಾವಿದರು, ಕ್ರಾಂತಿಕಾರಿಗಳು ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ."[1]

ರಾಮಮನೋಹರ ಲೋಹಿಯಾ

ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್ ಜಗತ್ತಿನ ಸಮಾಜವಾದದ ಸ್ಥಾಪಕರು. ಇವರ ಸಮಾಜವಾದದ ಪ್ರಭಾವ, ಪ್ರೇರಣೆ ಪಡೆದ ಹಲವು ಮಹನೀಯರು ಅನೇಕ ದೇಶಗಳಲ್ಲಿ ಹರಡಿದ್ದಾರೆ. ಭಾರತೀಯ ಸಮಾಜವಾದದ ಪ್ರಮುಖ ಚಿಂತಕ-ರಾಜಕಾರಣಿ ರಾಮಮನೋಹರ ಲೋಹಿಯಾ ಅವರು. ಇವರು ಗಾಂಧಿಯ ಆರಾಧಕರು ಹೌದು, ವಿಮರ್ಶಕರೂ ಹೌದು. ಲೋಹಿಯಾ ಅವರು ಬಡವರ, ಎಲ್ಲಾ ಬಗೆಯ ಅವಮಾನಿತ ಜನವರ್ಗದ ಅಂತರಾಳದ ದನಿಯಾಗಿ ಬಾಳಿದವರು. ಗಾಂಧಿಯವರ ನೇರ ಶಿಷ್ಯರೂ, ಮಾನಸ ಪುತ್ರರೂ ಆಗಿದ್ದ ಇವರು ಹೋರಾಟದಲ್ಲಿ ಎಂದೂ ಮುಂದೆ. ನಾಡಿನ ಹಿರಿಯ ಚೇತನಾರಾಗಿದ್ದ ಇವರು ಸಮಾಜದ ಬಗೆಬಗೆಯ ಅನ್ಯಾಯಗಳ ಬೇರುಗಳನ್ನು ಹುಡುಕಿ, ಅವುಗಳ ಮೂಲೋಚ್ಚಾಟನೆ ಮಾಡಲು ಬಯಸಿದರು. ವರ್ಗ, ವರ್ಣ, ಜಾತಿ, ಅಸ್ಪೃಶ್ಯತೆ, ಲಿಂಗಭೇದ ನೀತಿಯ ಸೂಕ್ಷ್ಮತೆ, ಕೀಳರಿಮೆಗಳ ವಿರುದ್ಧ ಅವಿರತ ಹೋರಾಟ ಕೈಗೊಂಡಿದ್ದರು.

"ಭಾರತದ ವಿಶ್ವದ ಅತ್ಯಂತ ಹಸಿದ ಮತ್ತು ಆಹಾರವನ್ನು ಬೇಡುವ ಒಂದು ಭಿಕ್ಷುಕ ದೇಶ ಎಂಬುದು ತಿಳಿದ ಸಂಗತಿಯಾಗಿದೆ. ಸ್ವಾತಂತ್ರ್ಯಾನಂತರದ ಹದಿನೆಂಟು ವರ್ಷಗಳಲ್ಲಿ ಇಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ. ಸ್ಥಿತಿಗತಿಗಳು ಇನ್ನೂ ಅಧೋಗತಿಗಿಳಿದಿವೆ. ಈಗ ಅವು ಇನ್ನೂ ಭೀಕರ ಹಂತ ತಲುಪುತ್ತಿವೆ. ಈಗಿನ ಸರ್ಕಾರ ಮತ್ತು ಅದರ ನೀತಿ ಮುಂದುವರಿದರೆ ಕ್ಷಾಮವು ವಾರ್ಷಿಕ ಘಟನೆಯಾಗುತ್ತದೆ."[2] ಇಂದಿಗೆ ಭಾರತ ಸ್ವಾತಂತ್ರ್ಯ ಪಡೆದು ಹತ್ತಿರ ಹತ್ತಿರ ೬೦ ವರ್ಷಗಳಾಗುತ್ತಿದ್ದರೂ ಲೋಹಿಯಾ ಹೇಳಿದುದಕ್ಕಿಂತ ಪರಿಸ್ಥಿತಿಯೇನೂ ಉತ್ತಮವಾಗಿಲ್ಲ. ಭಾರತ ಪ್ರಕಾಶಿಸುತ್ತಿದೆ ನಿಜ. ಆದರೆ ಅದು ಕಾಗದದ ಮೇಲೆ ಮಾತ್ರ. ಗುಡಿಸಲುಗಳ ನೊಂದ ಜನಗಳ ಸ್ಥಿತಿ-ಗತಿ ಶೋಚನೀಯವಾಗಿದೆ, ಭಾರತ 'ಬಡಭಾರತ' ಎಂಬ ಪದಮೌಲ್ಯವನ್ನು ಸಾರುವಂತಿದೆ.

ಸೂಕ್ಷ್ಮ ಸಂವೇದನೆಯ ಅಪ್ಪಟ ಭಾರತೀಯ ಮನಸ್ಸು ಲೋಹಿಯಾ ಅವರದು. ಅವರಿಗೆ ಆಹಾರ ರಾಷ್ಟ್ರೀಯ ತುರ್ತಿನ ವಿಚಾರವಾಗಿತ್ತು. ಪ್ರತಿಯೊಬ್ಬರೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಬಾರದೆಂಬ ಅಕಾಂಕ್ಷೆ, ಅದಮ್ಯ ಚೇತನ ಲೋಹಿಯ ಅವರದಾಗಿತ್ತು. ಸದಾ ಚಲನಶೀಲತೆಯ ಲೋಹಿಯಾರ ಜೀವಂತಿಕೆಯ ಲಕ್ಷಣ. "ಜನರ, ಜನರಿಗಾಗಿ ಹಾಗೂ ಜನರಿಂದ ರಚಿತವಾದ ಸರ್ಕಾರವು ಅಂತಿಮವಾಗಿ ಮಾನವಕುಲ ಪರವಾದ ಹಾಗೂ ಸಮುದಾಯ ಪರವಾದ, ಸಮುದಾಯದಿಂದ ರಚಿತವಾದ ಸರ್ಕಾರವಾಗಿ ಬೆಳೆದು ಹೊಸ ನಾಗರಿಕತೆಯ ಉಗಮವಾಗಬೇಕು."[3] ಈ ರೀತಿಯ ಸಾಮಾಜಿಕ ಕಳಕಳಿ ಲೋಹಿಯಾ ಅವರ ಸೃಜನ ಚಿಂತನೆಯ ಕೇಂದ್ರ ವಸ್ತು.

ಭಾರತ ಬಡತನ ಮತ್ತು ಹಸಿವಿನ ಸಮುದ್ರದಿಂದ ಸುತ್ತುವರಿದಿದೆ. ಭಾರತವು ಮಧ್ಯಮ-ವರ್ಗದವರ ಹಿಡಿತದಲ್ಲಿ ಸಿಕ್ಕಿಬಿಟ್ಟಿದೆ. ಮಧ್ಯಮವರ್ಗದವರು ತಾವೇ ಕಟ್ಟಿಕೊಂಡ ಪುಟ್ಟ ಪುಟ್ಟ ದ್ವೀಪಗಳ ಹೊರಗೆ ಬಂದು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಜನಸ್ತೋಮದೊಡನೆ ಬೆರೆಯುವ ಕಾಲ ಬಂದೀತೇ? ಪ್ರಾಮಾಣಿಕತನದಿಂದ ಮಾತ್ರ ಈ ಕಾರ್ಯ ಸಾಧ್ಯ. ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್, ಗಾಂಧಿಯಂಥ ವ್ಯಕ್ತಿಗಳಿಂದ ಇತಿಹಾಸದ ಪುನರ್ ಸೃಷ್ಟಿ ಸಾಧ್ಯ. ಈ ಮಹಾವ್ಯಕ್ತಿಗಳು ಧೀರ್ಘಕಾಲ ಬಾಳಿ ಬಂದು ಬಹು ಆಳದವರೆಗೆ ಬೇರು ಬಿಟ್ಟಿರುವ ಸಾಮಾಜಿಕ ಅವ್ಯವಸ್ಥೆಯನ್ನು ಕೆಡವುವ ಮೊದಲ ಕೆಲಸ ಮಾಡುವರು. ಹೀಗೆ ಕೆಡವುದಷ್ಟೇ ಅಲ್ಲ, ಆ ಸಾಮಗ್ರಿಯನ್ನೇ



ಬಳಸಿ ಸಮಾನತೆ ಇರುವ ಹೊಸಸಮಾಜದ ನಿರ್ಮಾಣವನ್ನೂ ಮಾಡುವರು. ಇದು ಎಲ್ಲರಿಗೂ ಸಾಧ್ಯವಿಲ್ಲ. ಕೆಲವೇ ಕೆಲವರಿಗೆ ಮಾತ್ರ ಸಾಧ್ಯ. ಆದ್ದರಿಂದಲೇ ಅವರು ಮಹನೀಯರಾಗಿರುವುದು.

ಲೋಹಿಯ ಅವರು ವ್ಯವಸ್ಥೆಯ ಸೂಕ್ಷ್ಮ ಅಧ್ಯಯನ ಮಾಡಬಲ್ಲರು. ಅವರ ಈ ಶೋಧನೆ ಸತ್ಯಕ್ಕೆ ಹೆಚ್ಚು ಹತ್ತಿರವಾಗಿ ಕಾಣುತ್ತದೆ. "ಬಡವರು ಅತಿಬಡವರಾಗುತ್ತಾರೆ ಮತ್ತು ಶ್ರೀಮಂತರು ಅತಿ ಶ್ರೀಮಂತರಾಗುತ್ತಾರೆ ಎಂದು ಮಾತ್ರ ವಿರೋಧ ಪಕ್ಷದವರು ಹೇಳಬಲ್ಲರು. ಇದು ಕೇವಲ ಅರ್ಧಸತ್ಯ. ಮೂರು ರೀತಿಯ ಬದಲಾವಣೆಗಳು ಉಂಟಾಗಿವೆ. ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿದ್ದಾರೆ. ಮಧ್ಯಮ ವರ್ಗದ ಒಂದು ಚಿಕ್ಕಭಾಗ ಪ್ರತಿವರ್ಷ ಮೇಲು ವರ್ಗದ ಸ್ತರಕ್ಕೆ ಏರುತ್ತದೆ. ಅನಾವಶ್ಯಕವಾಗಿ ಆಡಳಿತವನ್ನು ವಿಸ್ತರಗೊಳಿಸುವುದರಿಂದ ಮಧ್ಯಮವರ್ಗ ಅತಿಯಾಗಿ ಬೆಳೆಯತೊಡಗಿದೆ. ೫ ರಿಂದ ೭ ಕೋಟಿ ಜನ ನಗರಗಳಿಗೆ ವಲಸೆ ಬಂದು ಕೈಗಾರಿಕೆಗಳಲ್ಲಿ ದುಡಿಯುತ್ತಿರುವುದರಿಂದ ಅವರು ಶೋಷಣೆಗೆ ಒಳಗಾಗುವ ಪ್ರಮಾಣವು ಹೆಚ್ಚಾಗಿದೆ."[೪]

ಶತಶತಮಾನಗಳಿಂದ ಬಡತನವೆಂಬ ಬೀಸುವ ಕಲ್ಲಿನ ಮಧ್ಯೆ ಭಾರತ, ಭಾರತದ ಜನರು ನರಳುತ್ತಲೇ ಇದ್ದಾರೆ. ಸಾವಿರಾರು ವರ್ಷಗಳಿಂದ ನಮ್ಮನ್ನು ಆವರಿಸಿಕೊಂಡಿರುವ ಈ ಅಸಹ್ಯರಾಶಿಯ ನಾಶಕ್ಕೆ ಲೋಹಿಯಾ ಮುಂದಾಗುತ್ತಾರೆ. ಈ ರೀತಿಯ ಕ್ರಾಂತಿಕಾರಿ ಚಿಂತನೆಗಾಗಿ ಅವರು ತಮ್ಮ ಜೀವನವನ್ನೇ ಪಣವಾಗಿಟ್ಟರು. "ಅನ್ಯಾಯವೆನ್ನುವುದು ಯಾವ ಗುಹೆಯಲ್ಲಿ ಅಡಗಿದ್ದರೂ 'ಮ್ಯಾನ್ ಕೈಂಡ್' ಪತ್ರಿಕೆ ಅದನ್ನು ಬೇಟೆಯಾಡಲು ಪ್ರಯತ್ನಿಸುತ್ತದೆ..."[೫]

ಲೋಹಿಯಾ ಅವರು ತಮ್ಮನ್ನು ತೊಡಗಿಸಿಕೊಂಡಿದ್ದ ಹೋರಾಟದ ಕ್ಷೇತ್ರ ಬಹುವ್ಯಾಪಿಯುಳ್ಳದ್ದು. ರೈತ ಚಳವಳಿ, ವಿದ್ಯಾರ್ಥಿ ಚಳವಳಿ, ಬೆಲೆಯೇರಿಕೆ, ಭಾಷಾ ಸಮಸ್ಯೆ, ಪೋಲೀಸ್ ಮುಷ್ಕರ, ಪೌರಕಾರ್ಮಿಕರ ಮುಷ್ಕರ... ಮೊದಲಾದ ಸಮಾಜದ ಹಲವು ರೋಗಗ್ರಸ್ಥ ಅಂಗಭಾಗಗಳಿಗೆ ಔಷಧೋಪಚಾರ ಮಾಡುವ ವೈದ್ಯದೃಷ್ಟಿ ಬೀರಿದರು. ಆದುದರಿಂದಲೇ ಅವರಿಗೆ ಸಮಾಜವಾದ, ಪ್ರಜಾಪ್ರಭುತ್ವಗಳು ಸಮಾನತೆಗಾಗಿನ ಸಮರಗಳಾಗಿ ಗೋಚರವಾಗುತ್ತವೆ.

ಹೀಗೆ ಲೋಹಿಯಾ ಅವರ ಬದುಕು-ಬರಹ-ಚಿಂತನೆ ತೆರೆದ ಪುಸ್ತಕದಂತೆ. ಇಲ್ಲಿ ಎಲ್ಲವೂ ಸ್ಪಷ್ಟ, ಖಚಿತ, ಸರಳ ಅರ್ಥಗ್ರಹಿಕೆಗೆ ಸಿಗುವಂಥವು. ದ್ವಂದ್ವ ನಿಲುವಿಗಿಲ್ಲಿ ಎಡೆಯೇ ಇಲ್ಲ. ಸ್ಪಷ್ಟ ನಿಲುವುಗಳು ಸ್ಪಷ್ಟ, ಆಲೋಚನೆಯ ಪ್ರತಿಬಿಂಬಗಳು. ಅಂತೆಯೇ ಲೋಹಿಯಾ ಸಮಾಜದ ಸಾಮಾನ್ಯ ಜನರ ಏಳ್ಗೆಗೆ ದುಡಿಯುವ ಸ್ಪಷ್ಟ ಗುರಿ ಹೊಂದಿದ್ದರು. ಅಜೀವನಪರ್ಯಂತ ಅವಿವಾಹಿತರಾಗಿಯೇ ಉಳಿದು ಸಮಾಜಕ್ಕಾಗಿಯೇ ದುಡಿದರು, ಮಡಿದರು. ಮಡಿದರೂ ನಮ್ಮೊಳಗೆ ಬದುಕಿ ಬಾಳಿದರು, ಬಾಳುವರು. ಕನ್ನಡ ಸಾಹಿತ್ಯದ ಪುನರಾವಲೋಕನಕ್ಕೆ ಲೋಹಿಯಾ ಅವರ ಇಂಥ ಅಮೂಲ್ಯ ಚಿಂತನೆಗಳು ಪ್ರೇರಣೆಯಾಗಿವೆ.

ಡಾ॥ ಬಿ.ಆರ್. ಅಂಬೇಡ್ಕರ್

ಅಸಮಾನತೆ, ಶೋಷಣೆಯ ವಿರುದ್ಧ ಅವಿರತ ಹೋರಾಟ ನಡೆಸಿದ ಆಧುನಿಕ ಭಾರತದ ನಿರ್ಮಾಪಕರು ಡಾ॥ ಬಿ.ಆರ್. ಅಂಬೇಡ್ಕರ್. ಭಾರತದ ದಲಿತ ಮತ್ತು

ಹಿಂದುಳಿದ ವರ್ಗಗಳು ವಿದ್ಯೆಯ ವಿಮೋಚನೆ ಅವರ ಪರಮ ಗುರಿಯಾಗಿತ್ತು. 'ಪ್ರಗತಿಗೆ ವಿದ್ಯೆಯೆ ಮೂಲ.' ಶೋಷಿತ ವರ್ಗಗಳು ವಿದ್ಯೆಯ ಮೂಲಕ ಉದ್ಧಾರದ ಹಾದಿ ಹಿಡಿಯಬೇಕು. 'ಭಾರತ ಸ್ವತಂತ್ರವಾದರಷ್ಟೇ ಸಾಲದು. ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳಲ್ಲಿ ಭರತಖಂಡದಲ್ಲಿ ಜನಿಸಿದವರೆಲ್ಲ ಸಮಾನ ಹಕ್ಕುಳ್ಳವರಾಗಬೇಕು' ಎಂಬ ಅಂಬೇಡ್ಕರ್ ವಿಚಾರಧಾರೆಯಲ್ಲಿ ಪರದಾಶ್ಯ, ಆಂತರಿಕ ದಾಸ್ಯದ ಮೂಲೋಚ್ಚಾಟನೆ ಏಕಕಾಲದಲ್ಲಿ ಆಗಬೇಕೆಂಬ ತುಡಿತವಿದೆ.

ಅಂಬೇಡ್ಕರ್ ಶತಶತಮಾನಗಳಿಂದ ತುಳಿತಕ್ಕೊಳಗಾದ ಜನಾಂಗದ ದನಿಗೆ ಮುಖವಾಣಿಯಾದರು. ಶೋಷಣೆಯಿಂದ ಜರ್ಜರಿತರಾದ ಜನಸಮೂಹಕ್ಕೆ ಉಸಿರನ್ನು ತುಂಬುವ ಕೆಲಸ ಮಾಡಿದರು. ಪ್ರಜಾಸತ್ತಾತ್ಮಕ ಸಮಾಜವಾದದ ತತ್ವಗಳನ್ನು ಜಾರಿಗೊಳಿಸಬೇಕೆಂಬ ವೈಚಾರಿಕ ನಿಲುವಿನ ಧ್ಯೇಯವಾದಿಗಳು. ಆ ಮೂಲಕ ದಲಿತರು, ಬಡವರ ಸುಧಾರಣೆ ಮಾಡಬೇಕೆಂಬ ತೀವ್ರ ಕಳಕಳಿ ಹೊಂದಿದ್ದರು.

ಧ್ವನಿಯಿಲ್ಲದವರ ಧ್ವನಿಯಾಗಿ ಸಾಮಾಜಿಕ ನ್ಯಾಯಕ್ಕೆ ತಮ್ಮನ್ನು ತೆತ್ತುಕೊಂಡವರು ಅಂಬೇಡ್ಕರರು. ಸಿರಿವಂತರ ಸಿರಿತನ ದರಿದ್ರರ ಬಡತನದಲ್ಲಿದೆ. ಇದನ್ನು ನಿವಾರಿಸಬೇಕು. ಆದುದರಿಂದ ದುಡಿಯುವವರೆಲ್ಲರೂ ಸಂಘಟಿತರಾಗಬೇಕು. ಈ ಒಗ್ಗಟ್ಟಾದ ಹೋರಾಟದಿಂದ ಬಡವರನ್ನು ಪ್ರತಿನಿಧಿಸುವವರು ನಾಯಕರಾಗಲು ಸಾಧ್ಯ. ಆಗ ಮಾತ್ರ ನವಸಮಾಜದ ನಿರ್ಮಾಣ ಸಾಧ್ಯ. ಸಂಪತ್ತನ್ನು ಉತ್ಪಾದಿಸುವ ಮೂಲ ಕರ್ತೃಗಳು ಹಸಿವೆಯಿಂದ ಸಾಯಬೇಕಾದ ಅಗತ್ಯವಿಲ್ಲ. ಸಂಘಟನಾತ್ಮಕ ಹೋರಾಟದ ಅದಮ್ಯಶಕ್ತಿ ಅವರಿಗೆ ತಿಳಿದಿತ್ತು. ಮಾರ್ಕ್ಸ್‌ರವರ ಸಮಾಜವಾದದ ಪ್ರಭಾವ ಇಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ದುಡಿಯುವ ವರ್ಗವೇ ಮುಂದೆ ರಾಜ್ಯವಾಳುವುದು, ಅದೇ ಸರಿಯಾದುದು ಎಂಬುದು ಇವರ ಅಚಲ ನಿರ್ಧಾರ.

ಬಡತನ, ಅಸ್ಪೃಶ್ಯತೆ, ಜಾತಿಪದ್ಧತಿ ಮುಂತಾದ ಸಾಮಾಜಿಕ-ಆರ್ಥಿಕ ಸಮಸ್ಯೆಗಳ ಉಗಮ ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗೆಗೆ ವಿಶಿಷ್ಟ ಸಿದ್ಧಾಂತಗಳನ್ನು ಅಂಬೇಡ್ಕರರು ತಮ್ಮದೇ ಆದ ಶೈಲಿಯಲ್ಲಿ ಪ್ರಸ್ತುತಪಡಿಸಿದರು. ಜೊತೆಗೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿರುವುದು ಪ್ರಮುಖವಾಗಿದೆ. ತಮ್ಮ ಅಧಿಕಾರದ ಅವಧಿಯಲ್ಲಿ ಅಂಬೇಡ್ಕರರು ಕಾರ್ಮಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದರಲ್ಲದೆ ಅವರ ಸ್ಥಿತಿಗತಿಗಳಲ್ಲಿ ಗಮನಾರ್ಹವಾದ ಸುಧಾರಣೆ ಜಾರಿಗೆ ತಂದರು. ಅಂಬೇಡ್ಕರರಿಗೆ ಕಾರ್ಮಿಕ ಸಮಸ್ಯೆಗಳ ಬಗೆಗೆ ಅಪಾರ ಅರಿವಿತ್ತು. "ಅವರೇ ಮುಂಬಯಿಯ ಪರೇಲ್‌ನಲ್ಲಿ ಕೂಲಿಕಾರರ ಚಾಲಿನಲ್ಲಿ ವಾಸವಾಗಿದ್ದ ದಿನಗಳಲ್ಲಿ ಪ್ರತಿನಿತ್ಯವೂ ನೋಡುತ್ತಿದ್ದ ಕೂಲಿಕಾರನ ಕಠಿಣ ಜೀವನದ ಅರಿವು ಅವರಲ್ಲುಂಟಾಗಿತ್ತು. ಈ ಕಟು ಅನುಭವದ ಹಿನ್ನೆಲೆಯಲ್ಲಿ ಅವರು ಅಧಿಕಾರದ ಅವಕಾಶ ಸಿಕ್ಕಾಗ ಸ್ವತಃ ತಾವೇ ಕಾರ್ಮಿಕ ಇಲಾಖೆಯನ್ನು ಆಯ್ದುಕೊಂಡು ಕಾರ್ಮಿಕರ ಕಲ್ಯಾಣ ಸಾಧಿಸುವ ಪಣತೊಟ್ಟರು."[೬] ಭಾರತದ ಕಾರ್ಮಿಕರು ಬಹುವಾಗಿ ಶೋಷಿತರಾದವರು. ಆದುದರಿಂದ ಅವರ ಕಲ್ಯಾಣಕಾರ್ಯ ಕಾರ್ಮಿಕರಿಗೆ ಜೀವ ತುಂಬುವ ಕೆಲಸ ಮಾಡಿತು.

ಲಿಂಕನ್ ಮತ್ತು ಸ್ಟಾಲಿನ್ ಅವರ ಸಾಮಾಜಿಕ ವಾತಾವರಣ ಅನುಕೂಲಕರವಾಗಿರಲಿಲ್ಲ. ಇದಕ್ಕೆ ಅಂಬೇಡ್ಕರ್‌ರವರ ಜೀವನ ಹೊರತಾಗಿರಲಿಲ್ಲ. ಲಿಂಕನ್ ದಕ್ಷಿಣೋತ್ತರ ರಾಜ್ಯಗಳಲ್ಲಿ ಐಕ್ಯತೆ ಸಾಧಿಸಿ ಪ್ರಜಾಸತ್ತಾತ್ಮಕ ರಾಜ್ಯಾಡಳಿತ ಸ್ಥಾಪಿಸಿದರು. ಸ್ಟಾಲಿನ್ ವ್ಯಕ್ತಿಸ್ವಾತಂತ್ರ್ಯವನ್ನು ಹತ್ತಿಕ್ಕಿ ಸಮಾಜಸತ್ತಾತ್ಮಕ ಅರ್ಥ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಆದರೆ ಅಂಬೇಡ್ಕರ್ ಅವರು ಪ್ರಜಾಪ್ರಭುತ್ವ ಹಾಗೂ ಸಮಾಜವಾದ ಇವೆರಡರಲ್ಲೂ ಸಮನ್ವಯ ಸಾಧಿಸಿದ ಹಿರಿಮೆ ಪಡೆದರು. ಆ ಮೂಲಕ ದೇಶದ ದೀನದಲಿತ ದುರ್ಬಲ ಬಡವರ್ಗಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಗುರುತರ ಜವಾಬ್ದಾರಿ ನಿರ್ವಹಿಸಿದರು.

"ನಾನು ಬಡತನದಲ್ಲೇ ಹುಟ್ಟಿ ಬಂದವ, ಬೆಳೆದವ, ಬದುಕಿದವ. ಅಂತೆಯೇ ಹಸೀ ನೆಲದ ಮೇಲೆ ಗೋಣೀ ತಟ್ಟು ಹಾಸಿ ಇತರರ ಸಂಗಡ ನಾನು ಮೊದಲಿನಂತೆಯೇ ವರ್ತಿಸುತ್ತೇನೆ. ದೆಹಲಿಯಲ್ಲಿರುವ ನನ್ನ ಬಂಗಲೆಯ ಬಾಗಿಲು ಎಲ್ಲರಿಗಾಗಿ ತೆರೆದಿರುತ್ತದೆ."[೭] ಅಂಬೆಡ್ಕರರದೇ ಈ ಮಾತುಗಳಲ್ಲಿ ಅವರು ಎತ್ತರದ ಕೀರ್ತಿ ಶಿಖರಗಳನ್ನೇರಿದರೂ ತಾವು ಬೆಳೆದು ಬಂದ ಕಷ್ಟದ ಹಾದಿಯನ್ನು ಮರೆಯಲಾರರು ಎಂಬುದಿಲ್ಲ. ಸ್ಪಷ್ಟವಾಗಿ ಬಿಂಬಿತವಾಗಿದೆ. ಅಂಬೇಡ್ಕರ್ ಅವರಿಗೆ ತನ್ನ ಶೋಷಿತ ಜನಾಂಗದ ಬದುಕನ್ನು ಸುಧಾರಿಸಬೇಕೆಂಬ ಅದಮ್ಯ ಆಸಕ್ತಿ ಇತ್ತು. ಅಂಬೇಡ್ಕರರ ವಿಚಾಧಾರೆ ಪ್ರಖರವಾಗಿತ್ತು. "ದೇವ ಪೂಜೆಗಿಂತ ಹೊಟ್ಟೆ ತುಂಬ ಅನ್ನ ದೊರೆಯುವುದು ಮಹತ್ವದ ಸಂಗತಿ. ನಮಗೆ ಕೇಡಾದದ್ದು ಇತರ ಜನರ ಸ್ವಾರ್ಥ ಸಾಧನೆಯ ಕಾರಣದಿಂದ..."[೮] ಮಾರ್ಕ್ಸ್ ಅವರ ರಾಜಕೀಯ ಅರ್ಥಶಾಸ್ತ್ರ ಅಂಬೇಡ್ಕರವರ ಮೇಲೆ ವಿಶೇಷ ಪ್ರಭಾವ ಬೀರಿತ್ತು. "ಜಗತ್ತಿನಲ್ಲಿ ಎರಡೇ ಎರಡು ವರ್ಗಗಳುಂಟು. ಶೋಷಕರ ವರ್ಗ ಹಾಗೂ ಶೋಷಿತರ ವರ್ಗ. ರೈತರೂ ಕಾರ್ಮಿಕರೂ ಜಾತ್ಯಾತೀತ ಬುದ್ಧಿಯಿಂದ ಸಂಘಟಿತರಾಗಿ ತಮ್ಮ ಪ್ರತಿನಿಧಿಗಳನ್ನು ವಿಧಾನಸಭೆಗೆ ಕಳಿಸಿದರೆ ಮಾತ್ರ ಅವರ ಹಿತಸಾಧನೆಯಾದೀತು."[೯] ಅಂಬೇಡ್ಕರರು ಇಂಥ ನಿಖರ ಗುರಿಯ ಮೂಲಕ ಸಮಾಜದಲ್ಲಿ ಸಮಾನತೆ ತರುವಂತೆ, ದುಡಿವ ವರ್ಗವೇ ಆಳ್ವಿಕೆಯ ಹಿಡಿತ ಪಡೆಯುವಂತೆ ಪ್ರೋತ್ಸಾಹ ನೀಡಿದರು.

ಈ ದೇಶದಲ್ಲಿ ಅನೇಕ ಮಹಾತ್ಮರು ಬಂದರು, ಬಂದಂತೆಯೇ ಹೋದರು. ಆದರೆ ಅಸ್ಪೃಶ್ಯ ಸಮಾಜವು

ಮಾತ್ರ ಎಲ್ಲಿತ್ತೋ ಇಂದೂ ಅಲ್ಲೇ ಇದೆ. ಆದುದರಿಂದ ಅಂಬೇಡ್ಕರರು ಮುಂದಿನ ಪೀಳಿಗೆಯು ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಇವರಿಬ್ಬರಲ್ಲಿ ಒಬ್ಬರನ್ನು ಆಯ್ದುಕೊಳ್ಳಬೇಕೆಂದು ತಿಳಿಹೇಳಿದರು. ಸಮಾಜಜೀವನಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅಂಬೇಡ್ಕರರ ಬಗ್ಗೆ ಅವರ ಅನುಯಾಯಿಗಳು ಹೇಳಿರುವ ಈ ಮಾತು ಹೆಚ್ಚು ಅರ್ಥಸಂಪತ್ತಿನಿಂದ ಕೂಡಿದೆ. "ಅಸ್ಪೃಶ್ಯರಿಗೆ ವೇದ ಬೇಕಿಲ್ಲ, ಗೀತೆ ಬೇಕಿಲ್ಲ, ಶಂಕರಾಚಾರ್ಯರು ಬೇಕಿಲ್ಲ ಅಥವಾ ದೇವದೂತರು ಬೇಕಿಲ್ಲ. ಅವರಿಗೆ ಅಂಬೇಡ್ಕರ್‌ರಿದ್ದರೆ ಸಾಕು."[೧೦]

ಮಹಾತ್ಮ ಗಾಂಧೀಜಿ

ಮಹಾತ್ಮ ಗಾಂಧೀಜಿ ಭಾರತದ ಸ್ವತಂತ್ರ ಏಳ್ಗೆಗಾಗಿ ದುಡಿದ ಧೀಮಂತ ವ್ಯಕ್ತಿ. ಭಾರತೀಯರಿಗೆ ಗಾಂಧೀಜಿ ಕೇವಲ ವ್ಯಕ್ತಿಯಲ್ಲ, ಅದೊಂದು ಶಕ್ತಿ. ನಿಧಾನ ಹೆಜ್ಜೆಗಳನ್ನಿಡುತ್ತಿದ್ದ ಸ್ವಾತಂತ್ರ್ಯ ಹೋರಾಟಕ್ಕೆ ದಾರಿ ತೋರಿದುದು, ಶತಶತಮಾನಗಳಿಂದ ಶೋಷಣೆಗೊಳಗಾದ ದೀನ ದಲಿತರ, ಸ್ತ್ರೀವರ್ಗದ ವಿಮೋಚನೆಗೆ ಯತ್ನಿಸಿದುದು, ಗ್ರಾಮಸ್ವರಾಜ್ಯದ ಸ್ಥಾಪಿತ ಏಳ್ಗೆಯಲ್ಲಿ ಭಾರತದ ಅಭಿವೃದ್ಧಿಯಿದೆ ಎಂಬುದರೆಡೆಗೆ ದೃಷ್ಟಿ ಬೀರಿದುದು... ಮುಂತಾಗಿ ಗಾಂಧಿ ಸಮಗ್ರ ಭಾರತದ ನಿರ್ಮಾಣಕ್ಕೆ ಅವಿರತವಾಗಿ ಶ್ರಮಿಸಿದರು. ತಿಲಕರು ಈ ಹಿಂದೆ ಹೋರಾಡಿದಂತೆ ಜನಸಾಮಾನ್ಯರು ಪ್ರಧಾನಧಾರೆಗೆ ಬರಬೇಕು ಎಂಬುದು ಗಾಂಧೀ ನಿಲುವೂ ಆಗಿತ್ತು. ಆದುದರಿಂದ ಅವರು ಚಂಪಾರಣ್ಯ, ಖೇಡಾ, ಅಲಹಾಬಾದ್‌ನ ರೈತ, ಬಡಕಾರ್ಮಿಕರ ಮೂಲಕ ಹೋರಾಟದ ಹಾದಿ ತುಳಿದರು.

ಆಧುನಿಕ ಯುಗಪ್ರವರ್ತಕರು ಗಾಂಧೀಜಿ. ಜಗತ್ತಿನಲ್ಲಿ ಭೇದ ಇರಬಾರದು. ಯಾರೂ ಯಾರ ಮೇಲೂ ಸವಾರಿ ಮಾಡಬಾರದು. ಈ ತತ್ವಗಳನ್ನು ಗಾಂಧೀಜಿಯವರು ಸಾರಿ ಹೇಳುತ್ತಿದ್ದರು. ಗಾಂಧೀಜಿಯವರ ಜೀವನ ವೃತ್ತ, ಅವರ ಅತ್ಯಂತ ಸರ್ವವ್ಯಾಪಕವಾದ ವಿಚಾರ ಪ್ರಾಲಿ ಮತ್ತು ಅವರ ನಡೆವಳಿಕೆ ಎಲ್ಲ ಸಾಮಾನ್ಯ ಜನರ ಪರವಾಗಿತ್ತು, ಗಾಂಧೀಜಿ ತಮ್ಮ ವಿಚಾರ-ಉಚ್ಚಾರ-ಆಚಾರಗಳ ಮೂಲಕ ಮಾನವನ ಏಳ್ಗೆಗಾಗಿ ದುಡಿದರು. ಜಡಸೃಷ್ಟಿಯಲ್ಲಿರುವ ಪದಾರ್ಥಗಳು, ಅವುಗಳಲ್ಲಿರುವ ಶಕ್ತಿ-ವಿಶೇಷತೆಗಳು, ಅವುಗಳೊಡನೆ ಸಬಲ-ದುರ್ಬಲ ಹಾಗೂ ಅಜ್ಞಾನಾವೃತ-ಬಡಪಾಯಿ ಮಾನವರನ್ನು ಕೂಡ ತಮ್ಮಾಳುಗಳನ್ನಾಗಿಸಿ ತಮ್ಮ ದೇಹದ ಹಸಿವನ್ನು ತೀರಿಸಿಕೊಳ್ಳುವುದಕ್ಕಾಗಿ ಹಲವೇ ಬಲಿಷ್ಠ ಜನರು ಮೆರೆಯುವುದು ನಿಜವಾದ ಮಾನವ ಸಂಸ್ಕೃತಿಯ ಲಕ್ಷಣವಲ್ಲ ಎಂಬುದನ್ನು ಗಾಂಧೀಜಿ ತಿಳಿಹೇಳಿದರು. 'ಸರ್ವೋದಯ' ಮಂತ್ರ ಸಾರಿದರು. ಸ್ವಾತಂತ್ರ್ಯದ ಜೊತೆಗೆ ಗಾಂಧೀಜಿ ಹೀನ-ದೀನ-ದುರ್ಬಲರ ಸಮಸ್ಯೆಗಳನ್ನು ಬಿಡಿಸುವುದು ತಮ್ಮ ಸಾಧನ ಸಂಪತ್ತು ಎಂದು ತಿಳಿದಿದ್ದರು. ಗಾಂಧಿ ಗ್ರಾಮಾಂತರಗಳಲ್ಲಿ ಬಳಲುವ, ಬಡತನದ ಬೇಗೆಯಲ್ಲಿ ಬೆಂದು ಸುಣ್ಣಾಗುವ, ಶೋಷಣೆಗೆ ತುತ್ತಾಗಿ ನರಳುವ ಜನರ ಸೇವೆಯನ್ನು ಕೈಗೊಂಡು. ಮಾನವರು ಪರಸ್ಪರ ಸ್ನೇಹದಿಂದ, ಸಹಕಾರದಿಂದ, ಸಮಭಾವದಿಂದ ಬಾಳಿ ಬಡತನವೆಂಬ ಶಬ್ಧವೇ ಇಲ್ಲದಂತೆ ಮಾಡಬಲ್ಲರೆಂದು ಭಾವಿಸಿದ್ದರು. ಶೋಷಣೆ ರಹಿತ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆ ಸತ್ಯ-ಅಹಿಂಸೆಯ ಮಾರ್ಗದ ಮೂಲಕ ಸಾಧ್ಯ ಎಂದು ಗಾಂಧೀ ನಂಬಿದ್ದರು, ಅದರಂತೆ ನಡೆದರು.



ಭಾರತದ ಉದ್ಧಾರ ಹಳ್ಳಿಯನ್ನು ಅವಲಂಬಿಸಿದೆ ಎಂದರು ಗಾಂಧೀಜಿ. ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ; ವ್ಯವಸಾಯ ಭೂಮಿ ಹೆಚ್ಚುತ್ತಿದೆ, ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಆದರೆ ಉಣ್ಣಲು ಅನ್ನ ಎಲ್ಲರಿಗೂ ಸಮನಾಗಿ ದೊರಕದು. ಅರೆ ಊಟ, ಅರೆನಗ್ನತೆ, ಅರಕ್ಷಿತ ಜೀವನ ಸಂಸ್ಕೃತಿಯ ಪುನರುತ್ಥಾನವೇ ನಿಜವಾದ ಸ್ವರಾಜ್ಯ. ಭಾರತದ ಜೀವ ಜೀವಗಳು ಕೃತಕ ನಗರ ಸಂಸ್ಕೃತಿಯಿಂದ ಎಂದೂ ಪೋಷಿತವಾಗದು. ಅದರ ಅಸಂಖ್ಯಾತ ಹಳ್ಳಿಗಳಲ್ಲಿ ಪಸರಿಸಿ ನಿಲ್ಲುವಂತಹ ವಿಕೇಂದ್ರಿತ, ವಿಜ್ಞಾನಾಧಾರಿತ, ವಿಶ್ವಾಸವರ್ಧಕ ಗ್ರಾಮಸ್ವರಾಜ್ಯ ಸ್ಥಾಪನೆಯಿಂದ ಮಾತ್ರ ಸಾಧ್ಯ."[೧೧]

ಆಚಾರ್ಯ ಕೃಪಲಾನಿ ಅವರು 'ಯೋಜನೆಗಳು ಮತ್ತು ಸರ್ವೋದಯ' ಎಂಬ ಕೃತಿಯಲ್ಲಿ ಗಾಂಧೀಜಿಯವರ ಜೀವನಾದರ್ಶನದ ಬಗ್ಗೆ ಬೆಳಕು ಚೆಲ್ಲಿದ್ದಾರೆ. "ಭಾರತದ ಸಮಸ್ಯೆ ಆ ವಾದ ಈ ವಾದಗಳ ಸಮಸ್ಯೆಯಲ್ಲ ಎಂದು ಗಾಂಧೀಜಿ ತಿಳಿದಿದ್ದರು. ಬಂಡವಾಳವಾದ, ಸಮಾಜವಾದ ಅಥವಾ ಸಾಮ್ಯವಾದ ಎಂಬ ವಾಗ್ದಾನ ಅಲ್ಲ. ಭಾರತದ ಅಸಂಖ್ಯಾತ ಗ್ರಾಮಗಳಲ್ಲಿ ಅರೆಮಾನವ ಸ್ಥಿತಿಯಲ್ಲಿ ಬದುಕುತ್ತಿರುವ ಅಗಾಧ ದೇಶಬಾಂಧವರ ಸಹಿಸಲಾಗದ ದಾರಿದ್ರ್ಯ ಮತ್ತು ಅಜ್ಞಾನ, ಎಂದು ಮನಗಂಡರು. ಈ ಜನಕೋಟಿಯ ಮೇಲ್ಮೆಯಲ್ಲದೆ ಸ್ವರಾಜ್ಯಕ್ಕೆ ಬೇರೆ ಅರ್ಥವೇ ಇಲ್ಲ ಎಂದೇ ಅವರ ದೃಢನಿಶ್ಚಯ. "ಹಳಸಿದ ರೊಟ್ಟಿ ಒಂದು ಚಿಟಿಕೆ ಉಪ್ಪು ಉಂಡು ದಿನ ಕಳೆಯುವ ದೀನ ಸ್ಥಿತಿಯಲ್ಲೇ ತೆವಳುತ್ತಾ ದುಡಿಯುತ್ತಿರುವ ಅಥವಾ ನಿರುದ್ಯೋಗಿಗಳಾಗಿರುವ ಜನಕೋಟಿಗಾಗಿ ಸ್ವರಾಜ್ಯ ಪಡೆಯಲೆಂದೇ ನಾನು ಶ್ರಮಿಸುತ್ತಿದ್ದೇನೆ" ಎಂದರು. ಈ ಹೃದಯವಿದ್ರಾವಕ ದಾರಿದ್ರ್ಯಕ್ಕೆ ಕಾರಣ ದುಡಿಮೆಯ ಅಪಮೌಲ್ಯ. ಈ ದೇಶದ ಬಡಜನತೆಗೆ ಅಷ್ಟೇ ಅಲ್ಲ ಜಗತ್ತಿನ ದಲಿತಕೋಟಿಗೆ ಬೇಕಾದುದೇನು? ಸಂಭಾವನೆಯುಳ್ಳ ಉದ್ಯೋಗ, ಸಾಮಾಜಿಕ ಭದ್ರತೆ ಮತ್ತು ಅಭಿವೃದ್ಧಿಯಾಗುವ ಜೀವನಮಟ್ಟ-ಆಡಳಿತಗಾರರಿಗೆ, ಬುದ್ಧಿಜೀವಿಗಳಿಗೆ ಈ ವಿಷಯ ನನಗಿಂತ ಹೆಚ್ಚು ಅರಿವಾಗಿರಬೇಕು"[೧೨] ಎಂದಿದ್ದಾರೆ.

ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ; ವ್ಯವಸಾಯ ಭೂಮಿ ಹೆಚ್ಚುತ್ತಿದೆ, ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಆದರೆ ಉಣ್ಣಲು ಅನ್ನ ಎಲ್ಲರಿಗೂ ಸಮನಾಗಿ ದೊರಕದು.

ಗಾಂಧೀಜಿ ಬಗೆಗೆ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್ಡಾಲ್ ಹೇಳಿರುವ ಮಾತುಗಳು ಅವರ ಸಾಮಾಜಿಕ ಕಳಕಳಿಯನ್ನು ತಿಳಿಸುತ್ತವೆ. "ಆರ್ಥಿಕ ಬೆಳವಣಿಗೆಯಲ್ಲಿ ವ್ಯಕ್ತಿಯೇ ಕೇಂದ್ರ ಬಿಂದು ಎಂದು ಭಾರತದ ಮಹಾತ್ಮ ಗಾಂಧಿ ಏಕಪ್ರಕಾರವಾಗಿ ಒತ್ತಿ ಹೇಳುತ್ತಿದ್ದರು.... ಗಾಂಧೀ ಶ್ರೇಷ್ಠ ಚಿಂತನಶೀಲರು. ವಿಚಾರಬದ್ಧ ಯೋಜನಾಚತುರರು. ಅವರ ಯೋಜನೆ ಸಮಗ್ರ ದೃಷ್ಟಿಯದು... ಸಮಾನತೆಯ ಸಾಧನೆಗಾಗಿ ಭೂಮಿ ಮತ್ತು ಸಂಪತ್ತುಗಳ ಹಂಚಿಕೆ ಇವು ಆ ಯೋಜನೆಯ ಮೂಲ ಅಂಶಗಳು... ಇತ್ತೀಚಿನ 'ದಿನಗಳಲ್ಲಿ ನಾವು ಪುನಃ ಗಾಂಧೀ ಆದರ್ಶಗಳಿಗೆ ಮರಳಿದ್ದೇವೆ. ಆರ್ಥಿಕ ತಜ್ಞರು ಯಾವುದನ್ನು ಸರ್ವಾಗೀಣ ಯೋಜನೆ ಎನ್ನುವರೋ ಅದು ಗಾಂಧೀಜಿ ಸದಾ ಹೇಳುತ್ತಿದ್ದ ಮಾತುಗಳ ಆಧುನಿಕ ಪುನರಾವರ್ತನೆ."[೧೩]

ಗಾಂಧಿಜೀಯವರು ಸತತವಾಗಿ ದುಡಿದುದು ಸಾಮಾನ್ಯ ಜನರ ಏಳ್ಗೆಗಾಗಿ, ಬಾಳುವೆಗಾಗಿ. ಆಚಾರ್ಯ ವಿನೋಬ ಭಾವೆ ಅವರ ಭೂದಾನ-ಗ್ರಾಮದಾನ ಚಳುವಳಿಯ ಪ್ರಧಾನೋದ್ದೇಶ ಸಾಮಾಜಿಕ ಕ್ರಾಂತಿ. ಸರ್ವೋದಯ ಸಮಾಜದ ಸ್ಥಾಪನೆ. ಜಯಪ್ರಕಾಶ ನಾರಾಯಣರಂಥ ವಿಚಾರವಂತರು ಗಾಂಧೀ ವಿಚಾರಧಾರೆ ಮೂಲಕ ಸರ್ವೋದಯಕ್ಕಾಗಿ ದುಡಿದರು. ಇವರೆಲ್ಲರ ಮೂಲೋದ್ದೇಶ ಕಟ್ಟಕಡೆಯವನಿಗೂ ನ್ಯಾಯ (ಅಂಟು ದಿ ಲಾಸ್ಟ್) ದೊರೆಯಬೇಕೆಂಬುದೇ ಆಗಿತ್ತು. ಆದುದರಿಂದ ಸಾಮಾನ್ಯ ಜನರ ಉದ್ಧಾರಕಾರ್ಯಕ್ಕಾಗಿ ದುಡಿದ ಇವರ ಸಾಧನೆ ಸ್ಮರಣೀಯವಾದುದೂ, ಅನುಕರಣೀಯವಾದುದೂ ಆಗಿದೆ.

೧. ನಾಗಮೋಹನದಾಸ್, ಕಾರ್ಲ್‌ಮಾರ್ಕ್ಸ್, ೧೯೯೪, ಪು. ೪.
೨. ಸಂ. ಡಾ॥ ನಟರಾಜ್ ಹುಳಿಯಾರ್, ಚಿಂತಾಮಣಿ ಕೊಡ್ಲೆಕೆರೆ, ಮಾನವಕುಲದ ಏಕತೆ, ಸಂ. ೪, ೨೦೦೦, ಪು. ೧೧೦.
೩. ಸಂ. ಡಾ॥ ನಟರಾಜ್ ಹುಳಿಯಾರ್, ಚಿಂತಾಮಣೀ ಕೊಡ್ಲೆಕೆರೆ, ಮಾನವಕುಲದ ಏಕತೆ, ಸಂ. ೪, ೨೦೦೦, ಪು. XX
೪. ಸಂ. ಡಾ॥ ನಟರಾಜ್ ಹುಳಿಯಾರ್, ಚಿಂತಾಮಣಿ ಕೊಡ್ಲೆಕೆರೆ, ಮಾನವಕುಲದ ಏಕತೆ, ಸಂ. ೪, ೨೦೦೦, ಪು. ೧೧೧
೫. ಸಂ. ಡಾ॥ ನಟರಾಜ್ ಹುಳಿಯಾರ್, ಚಿಂತಾಮಣಿ ಕೊಡ್ಲೆಕೆರೆ, ಮಾನವಕುಲದ ಏಕತೆ, ಸಂ. ೪, ೨೦೦೦, ಪು. XiX
೬. ಡಾ॥ ಎ.ಎಂ. ರಾಜಶೇಖರಯ್ಯ, ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳೂ, ಸಂ-೧೪, ಭಾಗ-೧ ವಿಭಾಗ-೧-೩, ೨೦೦೧, ಪು. ೨೩೪
೭. ಉದ್ಧೃತ: ವಸಂತಮೂನ್ ಅನು. ಬಿ.ಎ. ಸನದಿ, ಡಾ॥ ಬಾಬಾಸಾಹೇಬ್ ಅಂಬೇಡ್ಕರ್, ೨೦೦೨, ಪು. ೧೫೨
೮. ಉದ್ಧೃತ: ವಸಂತಮೂನ, ಅನು. ಬಿ.ಎ. ಸನದಿ, ಡಾ॥ ಬಾಬಾಸಾಹೇಬ್ ಅಂಬೇಡ್ಕರ್, ೨೦೦೨, ಪು. ೯೭
೯. ಉದ್ಧೃ: ವಸಂತಮೂನ್, ಅನು. ಬಿ.ಎ. ಸನದಿ, ಡಾ॥ ಬಾಬಾಸಾಹೇಬ್ ಅಂಬೇಡ್ಕರ್, ೨೦೦೨, ಪು. ೧೨೯
೧೦. ಉದ್ಧೃತ: ವಸಂತಮೂನ್, ಅನು. ಬಿ.ಎ. ಸನದಿ, ಡಾ॥ ಬಾಬಾಸಾಹೇಬ್ ಅಂಬೇಡ್ಕರ್, ೨೦೦೨, ಪು. ೮೪
೧೧. ಮಹಾತ್ಮಗಾಂಧಿ, ನನ್ನ ಆದರ್ಶಗ್ರಾಮ, (ಸಂ.ಕೆ.ಎಸ್. ನಾರಾಯಣಸ್ವಾಮಿ), ೧೯೮೪, ಪು. ೨
೧೨. ಮಹಾತ್ಮಗಾಂಧಿ, ನನ್ನ ಆದರ್ಶಗ್ರಾಮ, (ಸಂ.ಕೆ.ಎಸ್. ನಾರಾಯಣಸ್ವಾಮಿ, ೧೯೮೪, ಪು. ೫
೧೩. ಮಹಾತ್ಮಗಾಂಧಿ, ನನ್ನ ಆದರ್ಶಗ್ರಾಮ, (ಸಂ.ಕೆ.ಎಸ್. ನಾರಾಯಣಸ್ವಾಮಿ), ೧೯೮೪, ಪು. ೨೯.

ಖಾಕಿ, ಖಾದಿ, ಕಾವಿಗಳ ನಡುವಣ ಸಂಘರ್ಷ

ಖಾಕಿ, ಖಾದಿ, ಕಾವಿಗಳ ನಡುವಣ ಸಂಘರ್ಷವೆಂದೇ ಪರಿಗಣಿಸಲಾಗಿದ್ದ ಕಂಚಿ ಶ್ರೀ ಹಗರಣ ಜನಮನದಿಂದ ದೂರವಾಗುವ ಮೊದಲೇ ಉಡುಪಿಯ ಪೇಜಾವರ ಮಠಾಧೀಶರ "ಕಪ್ಪು ಹಣ"ದ ವ್ಯವಹಾರ, ಸಾಲ ವಸೂಲಾತಿಗೆ ಅನುಸರಿಸಿದ ಕಾನೂನು ಬಾಹಿರ ಕ್ರಮಗಳು ಸತ್ಯಸಂಗತಿಗಳನ್ನು ಮುಚ್ಚಿ ಹಾಕಲು ನಡೆಸಿದ ವಿಫಲ ಯತ್ನಗಳು ಸುದ್ದಿಯಾಗತೊಡಗಿವೆ. ಈ ಹಗರಣವನ್ನು ಪ್ರಾರಂಭದಲ್ಲೇ ಮುಚ್ಚಿ ಹಾಕಲು ಈ ಮಠಾಧೀಶರ "ಭಕ್ತರು" ಶತಪ್ರಯತ್ನ ನಡೆಸಿದ್ದು ಗುಟ್ಟಾಗಿ ಉಳಿದಿಲ್ಲ.

ಅನ್ಯಾಯದ ವಿರುದ್ಧ ಧ್ವನಿಯೆತ್ತಿದ ಸಂಸ್ಕೃತ ಉಪನ್ಯಾಸಕ ಮತ್ತು ಆತನ ಸಹೋದರಿಗೆ ರೌಡಿಪಡೆ ನೀಡಿದ ಮಾನಸಿಕ ಹಾಗೂ ದೈಹಿಕ ಹಿಂಸೆ ಊಹಿಸಲಸಾಧ್ಯ. ಜತೆಗೆ ಪೊಲೀಸ್ ಇಲಾಖೆಯಲ್ಲಿ ಉನ್ನತ ಸ್ಥಾನದಲ್ಲಿರುವ ಬ್ರಾಹ್ಮಣರು ಶಶ್ತಾನುಸಾರ ತಮ್ಮ ಪಾಲಿನ "ಕಾಣಿಕೆ" ಸಲ್ಲಿಸಿದ್ದಾರೆ- ಎಂದು ಮಿತ್ರರೊಬ್ಬರು ಇತ್ತೀಚೆಗೆ ಹೇಳಿದ್ದು ನೆನಪಿಗೆ ಬರುತ್ತಿದೆ. "ಕಂಚಿ ಶ್ರೀ" ಹಗರಣದ ಕುರಿತು ದೇಶಾದ್ಯತ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ನಮ್ಮ ಪೇಜಾವರ ಮಠಾಧೀಶರು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ "ಮಠಾಧೀಶರ ಒಂದು ರೋಮ ಕೊಂಕಿದರೂ ಅವರ ಭಕ್ತರು ರೊಚ್ಚಿಗೇಳುತ್ತಾರೆ" ಎಂದು ಅಪ್ಪಣೆ ಕೊಟ್ಟಿದ್ದರು. ಕಂಚಿ ಮಠಾಧೀಶರ ಬಂಧನ ಕುರಿತು ಪ್ರತಿಕ್ರಯಿಸಿದ್ದ ನನ್ನ ವಕೀಲ ಮಿತ್ರರೊಬ್ಬರು "ಭಕ್ತರ ಪ್ರತಿಭಟನೆಯ ಸ್ವರೂಪ ಹೇಗಿರುತ್ತದೆ ಎಂದು ಹೇಳುವುದು ಕಷ್ಟ" ಎಂದಿದ್ದರು. ಅರ್ಥಾತ್ ಪ್ರತಿಭಟನೆ ಹಿಂಸಾರೂಪಕ್ಕಿಳಿಯಬಹುದೆಂಬ ಪರೋಕ್ಷ ಎಚ್ಚರಿಕೆ!

ರಾಮೋಜಿರಾವ್ ಒಡೆತನದ ಟಿ.ವಿ. ಚಾನಲ್ ಅನ್ನು ನೀವು ಸೂಕ್ಷ್ಮವಾಗಿ ಗಮನಿಸುತ್ತಿದ್ದರೆ ಕಿರುತೆರೆಯ ಧಾರಾವಾಹಿ ನಿರ್ಮಾಪಕರೊಬ್ಬರು ಕರ್ನಾಟಕದ ಕ್ರಾಂತಿಕಾರಿ ಪತ್ರಕರ್ತ(!)ರೊಬ್ಬರೊಂದಿಗೆ ಕೈ ಜೋಡಿಸಿ "ಬ್ರಾಹ್ಮಣ್ಯ"ದ ಉಳಿವಿಗಾಗಿ ಏನೆಲ್ಲಾ ಕರಾಮತ್ತು ನಡೆಸುತ್ತಿದ್ದಾರೆ ಎಂಬುದರ ಅರಿವಾಗುತ್ತದೆ.

ಪಾಪದಜನ ಮೇಲ್ನೋಟಕ್ಕೆ ಕಾಣುವ ಮನರಂಜನೆಗೆ ಮಾರು ಹೋಗುತ್ತಾರೆ. ತೆರೆಮರೆಯ "ಮರ್ಮ" ಅವರಿಗೆ ಗೊತ್ತೇ ಆಗುವುದಿಲ್ಲ. ಇದನ್ನೆಲ್ಲಾ ಪಟ್ಟಾಭಿ ಸೋಮಯಾಜಿ ಅವರು ಬಹು ಸ್ವಾರಸ್ಯವಾಗಿ ವಿವರಿಸುತ್ತಾರೆ. ಈ 'ಅಸ್ಪೃಶ್ಯ' ವಿಪ್ರನಿಗೆ ಆಪತ್ತು ಕಾದಿದೆ ಎಂದು ಅವರು ಮಡಿಕೇರಿ ಕಾಲೇಜಿನಲ್ಲಿ ದ್ದಾಗ ನಾವು ಕೆಲವು ಪತ್ರಕರ್ತ ಮಿತ್ರರು ಆಡಿಕೊಳ್ಳುತ್ತಿ ದ್ದೆವು. ಸೋಮಯಾಜಿ ಅವರ ವಿಚಾರಧಾರೆಗೆ ನಾವು ಮಾರುಹೋಗುತ್ತಿದ್ದೆವು. "ನೇರ ನಡೆ; ನೇರನುಡಿ" ಎಂದರೇನು ಎಂಬುದನ್ನು ಅವರನ್ನು ನೋಡಿ ಕಲಿಯಬೇಕಿತ್ತು "ನ ಬ್ರೂಯಾತ್ ಸತ್ಯಂ ಅಪ್ರಿಯಂ" ಎಂದು ಹೇಳಿದೊಡನೆ ಅವರು ಸಿಡಿದೇಳುತ್ತಿದ್ದರು.

> **ಪೇಜಾವರ ಮಠಾಧೀಶರು ಮತ್ತೆ ಸುದ್ದಿಯಲ್ಲಿದ್ದಾರೆ. ಪ್ರಾಧ್ಯಾಪಕ ಕೆ.ಎಸ್. ವೆಂಕಟೇಶ್ ಸದ್ಯದಲ್ಲೇ ಮಠಾಧಿಪತಿಗಳು, ಉಪಮುಖ್ಯಮಂತ್ರಿ ಯಡಿಯೂರಪ್ಪ ಪೋಲೀಸ್ ಅಧಿಕಾರಿ ಗಂಗಾಧರ್ ನಾಯಕ್ ಇವರುಗಳ ವಿರುದ್ಧ ಮೊಕದ್ದಮೆ ದಾಖಲಿಸುವುದಾಗಿ ಪ್ರಕಟಿಸಿದ್ದಾರೆ. ವೆಂಕಟೇಶ್ ಮೇಲೆ ದೌರ್ಜನ್ಯ ನಡೆಸಿರುವುದು ಸುಳ್ಳಲ್ಲ. ಅವರನ್ನು ಮಾನಸಿಕವಾಗಿ ದೈಹಿಕವಾಗಿ ಹಿಂಸಿಸಲಾಗಿದೆ. ಅವರ ಮನೋಸ್ಥೈರ್ಯವನ್ನು ಕುಗ್ಗಿಸಲು ಎಲ್ಲ ಪ್ರಯತ್ನ ನಡೆದಿದೆ. ಇಷ್ಟೆಲ್ಲ ಆಗಿರುವುದು ಜಗಜ್ಜಾಹೀರಾದರೂ ಯಾರೊಬ್ಬರೂ ಅವರ ಪರವಾಗಿ ಧ್ವನಿಯೆತ್ತುತ್ತಿಲ್ಲ. ಇದು ಸಂಕಟದ ಸಂಗತಿ. ಕನಿಷ್ಟ ಕೆಲವಾದರೂ ಪ್ರಗತಿಪರ ಸಂಘಟನೆಗಳು ವೆಂಕಟೇಶ್ ಅವರ ಬೆನ್ನಿಗೆ ನಿಲ್ಲಬೇಕಿತ್ತು. ಈಗಲೂ ಕಾಲ ಮಿಂಚಿಲ್ಲ. ವೆಂಕಟೇಶ್ ಅವರ ಪರವಾಗಿ ಜನಾಭಿಪ್ರಾಯವನ್ನು ಬಡಿದೆಬ್ಬಿಸಬಹುದು. ಹಾಗಾಗದಿದ್ದಲ್ಲಿ "ನರಿ ಕೂಗು ಗಿರಿ ಮುಟ್ಟೀತೆ?" ಎಂಬ ಗಾದೆ ಮಾತು ನಿಜವಾದೀತು.**

ಡಿ.ಎಂ. ಚಿಣ್ಣಪ್ಪ



"ಕಾವಿಧಾರಿಗಳನ್ನು ಟೀಕಿಸುವುದು ಒಂದು ಫ್ಯಾಶನ್ ಆಗಿ ಬಿಟ್ಟಿದೆ" ಎಂದು ಹೇಳುವವರಿದ್ದಾರೆ. ಕಾವಿಧಾರಿಗಳು ಟೀಕಾತೀತರು ಎಂದು ವಿತಂಡ ವಾದ ಮಂಡಿಸುವವರಿಗೂ ಕಡಿಮೆಯಿಲ್ಲ. ಜನಸಾಮಾನ್ಯರ "ಮೌಢ್ಯತನ"ದ ದುರ್ಲಾಭ ಯಾವ ರೀತಿಯಲ್ಲಿ ನಡೆಯುತಿದೆ ಎಂಬುದನ್ನು ಕಣ್ಣಾರೆ ನೋಡಲು ನೀವು ಕೆಲದಿನಗಳ ಮಟ್ಟಿಗಾದರೂ ಉಡುಪಿಯ ರಥ ಬೀದಿಯಲ್ಲಿ ಅಡ್ಡಾಡಬೇಕು ಸಿದ್ದಗಂಗೆಯ ಶಿವಕುಮಾರ ಸ್ವಾಮಿಜಿಯವರ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ ಆದಿಚುಂಚನಗಿರಿಯ ಮಠಾಧಿಪತಿಗಳ ಕುರಿತು ಸದ್ಭಾವನೆಯಿಲ್ಲ. ಧರ್ಮದ ಹೆಸರಿನಲ್ಲಿ ಕಪಟತನ ಸಹಿಸಲಸಾಧ್ಯ.

ನಾವು ಚಿಕ್ಕವರಿದ್ದಾಗ ಶಾಲೆಗೆ "ಮಠ" ಎನ್ನುತ್ತಿದ್ದರು. ದಾರಿತಪ್ಪಿದವರನ್ನು ಸರಿದಾರಿಗೆ ತರುವ ಕೆಲಸವನ್ನು "ಮಠ"ಗಳು ನಿರ್ವಹಿಸಬೇಕು. ಇಂದು ಧಾರ್ಮಿಕ ಕೇಂದ್ರಗಳು ಯಾರ ಹತೋಟಿಯಲ್ಲಿವೆ? ಧರ್ಮದ ಹೆಸರಿನಲ್ಲಿ ಈ ದೇಶದ ಏಕತೆ, ಸಮಗ್ರತೆಗೆ ಅಪಾಯ ಬಂದೊದಗಿದೆ. ಸೌಹಾರ್ದಯುತ ಸಹ ಬಾಳ್ವೆ ಕನಸಿನ ಮಾತಷ್ಟೆ.

ಈ ಹಿಂದೆ ರಾಜಕಾರಣಿಗಳನ್ನು ಭ್ರಷ್ಟರು ಎನ್ನುತ್ತಿದ್ದರು. ಕ್ರಮೇಣ ಅಧಿಕಾರಿಗಳು ಭ್ರಷ್ಟರು ಎನಿಸಿಕೊಂಡರು. ಭ್ರಷ್ಟಾಚಾರ ಇಂದು ಸರ್ವಾಂತರಯಾಮಿ. ಒಟ್ಟು ವ್ಯವಸ್ಥೆಯೇ ಭ್ರಷ್ಟಾಗೊಂಡಿರುವಾಗ ಯಾರತ್ತ ಬೆರಳು ತೋರಿಸಬಹುದು? "World may be Corrupt; But let There not be my contribution" ಎನ್ನುವ ಗಣ್ಯರೊಬ್ಬರು ನಮ್ಮೂರಿನಲ್ಲಿದ್ದಾರೆ.

ಪೇಜಾವರ ಮಠಾಧಿಪತಿಗಳು ಮತ್ತೆ ಸುದ್ದಿಯಲ್ಲಿದ್ದಾರೆ. ಪ್ರಾಧ್ಯಾಪಕ ಕೆ.ಎಸ್. ವೆಂಕಟೇಶ್ ಸದ್ಯದಲ್ಲೇ ಮಠಾಧಿಪತಿಗಳು ಉಪಮುಖ್ಯಮಂತ್ರಿ ಯಡಿಯೂರಪ್ಪ ಪೊಲೀಸ್ ಅಧಿಕಾರಿ ಗಂಗಾಧಾರ್ ನಾಯಕ್ ಇವರುಗಳ ವಿರುದ್ಧ ಮೊಖದ್ದಮೆ ದಾಖಲಿಸುವುದಾಗಿ ಪ್ರಕಟಿಸಿದ್ದಾರೆ. ವೆಂಕಟೇಶ್ ಮೇಲೆ ದೌರ್ಜನ್ಯ ನಡೆಸಿರುವುದು ಸುಳ್ಳಲ್ಲ. ಅವರನ್ನು ಮಾನಸಿಕವಾಗಿ ದೈಹಿಕವಾಗಿ ಹಿಂಸಿಸಲಾಗಿದೆ. ಅವರ ಮನೋ ಸ್ಥೈರ್ಯವನ್ನು ಕುಗ್ಗಿಸಲು ಎಲ್ಲ ಪ್ರಯತ್ನ ನಡೆದಿದೆ. ಇಷ್ಟೆಲ್ಲ ಆಗಿರುವುದು ಜಗಜ್ಜಾಹೀರಾದರೂ ಯಾರೊಬ್ಬರೂ ಅವರ ಪರವಾಗಿ ಧ್ವನಿಯೆತ್ತುತ್ತಿಲ್ಲ. ಇದು ಸಂಕಟದ ಸಂಗತಿ. ಕನಿಷ್ಟ ಕೆಲವಾದರೂ ಪ್ರಗತಿಪರ ಸಂಘಟನೆಗಳು ವೆಂಕಟೇಶ್ ಅವರ ಬೆನ್ನಿಗೆ ನಿಲ್ಲಬೇಕಿತ್ತು. ಈಗಲೂ ಕಾಲ ಮಿಂಚಿಲ್ಲ. ವೆಂಕಟೇಶ್ ಅವರ ಪರವಾಗಿ ಜನಾಭಿಪ್ರಾಯವನ್ನು ಬಡಿದೆಬ್ಬಿಸಬಹುದು. ಹಾಗಾಗದಿದ್ದಲ್ಲಿ "ನರಿ ಕೂಗು ಗಿರಿ ಮುಟ್ಟೀತೆ?" ಎಂಬ ಗಾದೆ ಮಾತು ನಿಜವಾದೀತು. □

ಹಸಿವು, ಅವಮಾನ, ಬಡತನ, ಅನಕ್ಷರತೆ, ಮೂಢನಂಬಿಕೆಗಳು ದಲಿತ ಕ್ರೈಸ್ತರನ್ನು ಹುರಿದು ಮುಕ್ಕುತ್ತಿವೆ. ಜೀತಪದ್ಧತಿ, ಬಾಲಕಾರ್ಮಿಕ ಪ್ಧಧತಿ, ದೇವದಾಸಿ ಪದ್ಧತಿ, ಬಾಲ್ಯವಿವಾಹದಂಥ ಅನಿಷ್ಟ ಪದ್ಧತಿಗಳು ಇನ್ನೂ ಜೀವಂತವಾಗಿವೆ. ಬರಗಾಲ, ಪ್ರವಾಹ, ಸಾಲ ಇತ್ಯಾದಿ ಕಾರಣಗಳಿಂದ ಉತ್ತರ ಕರ್ನಾಟಕದ ದಲಿತ ಕ್ರೈಸ್ತರು ಬೆಂಗಳೂರು, ಮುಂಬೈ, ಸೊಲ್ಲಾಪುರ, ಪೂನಾ ಇತ್ಯಾದಿ ನಗರಗಳಿಗೆ ಗುಳೇ ಹೋಗುತ್ತಿದ್ದಾರೆ. ಬೆಂಗಳೂರಿನ ಕೊಳೆಗೇರಿಗಳಲ್ಲಿ ಶೇ. ೨೫ರಷ್ಟು ದಲಿತ ಕ್ರೈಸ್ತರಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆ ಪೌರಕಾರ್ಯಕರಲ್ಲಿ ಶೇ. ೨೭ರಷ್ಟು ದಲಿತ ಕ್ರೈಸ್ತ ಮಹಿಳೆಯರಿದ್ದಾರೆ. ಕೋಲಾರದ ಚಿನ್ನದ ಗಣಿ ಗಣಿಕಾರ್ಮಿಕರಾಗಿ ದುಡಿಯುತ್ತಿದ್ದ ಶೇ. ೫೫ರಷ್ಟು ಕಾರ್ಮಿಕರು ದಲಿತ ಕ್ರೈಸ್ತರಾಗಿದ್ದು, ಇಂದು ಮೂಲಸೌಕರ್ಯಗಳಿಲ್ಲದೆ ಜೀವಂತ ಹೆಣವಾಗಿದ್ದಾರೆ.

ವೈ. ಮರಿಸ್ವಾಮಿ

ದಿನನಿತ್ಯದ ಶಿಲುಬೆ ಯಾತನೆಯಲ್ಲಿ ದಲಿತ ಕ್ರೈಸ್ತರು

ಸ್ವಾತಂತ್ರ್ಯದ ೫೪ ವರ್ಷಗಳ ನಂತರವೂ ದಲಿತ ಕ್ರೈಸ್ತರು ಮೀಸಲಾತಿಗಾಗಿ ಆಕ್ರಂದನಗೈಯ್ಯುತ್ತಿರುವುದು, ಮಾನವೀಯತೆ ಮತ್ತು ಸಮಾನತೆಯಲ್ಲಿ ನಂಬಿಕೆಯಿಟ್ಟಿರುವ ಪ್ರತಿಯೊಬ್ಬರ ಕರಳು ಚುರ್ರ್ ಎನಿಸುವ ಸಂಗತಿಯಾಗಿದೆ. ಸಮಾನತೆಯನ್ನು ನಿರಾಕರಿಸುವ ಮನು ಕಟ್ಟಳೆಯ ವೈಧಿಕ (ಹಿಂದು) ಧರ್ಮವನ್ನು ಧಿಕ್ಕರಿಸಿ ಪ್ರೀತಿ-ಪ್ರೇಮ-ಸೋದರತೆ-ಸಮಾನತೆಯನ್ನರಸಿ ಮಾನವೀಯತೆಯ ಪ್ರತೀಕವಾಗಿರುವ ಯೇಸುಕ್ರಿಸ್ತನ ತತ್ವಗಳನ್ನೊಳಗೊಂಡ ಕ್ರೈಸ್ತ ಧರ್ಮವನ್ನು ಅಂಗೀಕರಿಸುವುದರಿಂದ, ತಮ್ಮ ಬದುಕು ಹಸನಾಗಬಹುದೆಂಬ ದಲಿತ ಕ್ರೈಸ್ತರ ಕನಸು ಕೇವಲ ಮರೀಚಿಕೆಯಾಗಿ ಉಳಿದಿದೆ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ವಿದೇಶಿ ಕ್ರೈಸ್ತ ಮಿಷಿನರಿಗಳು ಇಲ್ಲಿನ ಅಸ್ಪೃಶ್ಯತೆ, ಜಾತಿಪದ್ಧತಿ, ಜೀತಪದ್ಧತಿ, ದೇವದಾಸಿಪದ್ಧತಿ ಮತ್ತು ಭೂಮಾಲೀಕರ ವಿರುದ್ಧ ಬಡಿದಾಡುವುದರ ಜೊತೆಗೆ ಅನೇಕ ಶೈಕ್ಷಣಿಕ ಸೇವಾಕೇಂದ್ರಗಳನ್ನು ತೆರೆದು ಅಸ್ಪೃಶ್ಯರ ಬಾಳಿನಲ್ಲಿ ಹೊಸ ಭರವಸೆಯ ಆಶಾಕಿರಣವನ್ನು ಹೊತ್ತಿಸಿದ್ದರು. ಆದರೆ ಅದು ಬಹು ಕಾಲ ಬೆಳಗಲಿಲ್ಲ.

ಸ್ವಾತಂತ್ರ್ಯದ ನಂತರ ತಮ್ಮ ತಾಯ್ನಾಡುಗಳಿಗೆ ಮರಳುವಂತೆ ವಿದೇಶಿ ಮಿಷನರಿಗಳಿಗೆ ಬುಲಾವ್ ಬಂತು. ಅವರು ಇಲ್ಲಿದ್ದರೆ ಜನರ ಆಕ್ರೋಶಕ್ಕೆ ಬಲಿಯಾಗಬಹುದೆನ್ನುವ ಅದಕ್ಕೆ ಸಂಬಂಧ ಪಟ್ಟ ಸಾಮಾಜಿಕ ಶೈಕ್ಷಣಿಕ ಕೇಂದ್ರಗಳನ್ನು ಸ್ವದೇಶಿ ಮಿಷನರಿಗಳಿಗೆ ವಹಿಸಿಕೊಟ್ಟರು. ಆ ಸ್ವದೇಶಿ ಮಿಷನರಿಗಳಲ್ಲಿ ಬಹುತೇಕರು ಮೇಲ್ಜಾತಿ ಕ್ರೈಸ್ತರಾಗಿದ್ದು, ಚರ್ಚ್‌ನ ಆಯಕಟ್ಟಿನ ಜಾಗಗಳನ್ನು ಆಕ್ರಮಿಸಿಕೊಂಡು ಮನುವಾದಿ ವ್ಯವಸ್ಥೆಯನ್ನು ಜಾರಿಗೆ ತಂದು ದಲಿತಕ್ರೈಸ್ತರನ್ನು ಗುಲಾಮರನ್ನಾಗಿ ಇಟ್ಟುಕೊಂಡರು. ಇದರ ಪರಿಣಾಮವಾಗಿ ದಲಿತ ಮತ್ತು ಮೇಲ್ಜಾತಿ ಕ್ರೈಸ್ತರ ನಡುವಿನ ಕಂದಕ ಹಿಗ್ಗುತ್ತಲೇ ಸಾಗಿತ್ತು. ಅದು ಈ ಕ್ಷಣಕ್ಕೂ ಮುಂದುವರಿದಿದೆ.

ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಹುಟ್ಟಿದ ಜಾತಿಯ ಆಧಾರದ ಮೇಲೆ ನಿರ್ಧರಿಸುವ ಭಾರತದ ಜಾತಿ ಆಧಾರಿತ ಸಮಾಜದಲ್ಲಿ ಧಾರ್ಮಿಕ ಬದಲಾವಣೆಯು ಜನರ ಬದುಕಿನಲ್ಲಿ ಯಾವುದೇ ಬದಲಾವಣೆಯನ್ನು ಮೂಡಿಸುವುದಿಲ್ಲ ಎನ್ನುವುದಕ್ಕೆ ದಲಿತ ಕ್ರೈಸ್ತರ ಸ್ಥಿತಿಗತಿಗಳೇ ಸಾಕ್ಷಿಯಾಗಿವೆ. ದಲಿತರು ಕ್ರೈಸ್ತರಾಗಿ ಇನ್ನೂರು-ಮುನ್ನೂರು ವರ್ಷಗಳೇ ಆಗಿರುವ ಅನೇಕ ಹಳ್ಳಿಗಳಲ್ಲಿ, ದಲಿತ ಮತ್ತು ಮೇಲ್ಜಾತಿ ಕ್ರೈಸ್ತರ ಮಧ್ಯೆ ಸಾಮಾಜಿಕ-ವೈವಾಹಿಕ ಸಂಬಂಧಗಳಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತ ಪ್ರವೇಶವಿಲ್ಲ. ನಾಮಕರಣ, ಮದುವೆಯಿಂದ ಹಿಡಿದು ಸುಡುಗಾಡಿನವರೆಗೆ ಜಾತಿಯೇ ನಿರ್ಧಾರಕ ಪಾತ್ರ ವಹಿಸುತ್ತದೆ. ಅನೇಕ ಕಡೆಗಳಲ್ಲಿ ಸ್ಮಶಾನಗಳಲ್ಲಿ ದಲಿತ ಕ್ರೈಸ್ತರಿಗೆಂದೇ ಪ್ರತ್ಯೇಕ ಜಾಗವನ್ನು ಗುರುತಿಸಲಾಗಿರುತ್ತದೆ. ಜಾತಿ ದೌರ್ಜನ್ಯ, ಅಸ್ಪೃಶ್ಯತೆಯ ಆಚರಣೆ ಹಾಗೂ ಸಾಮಾಜಿಕ ಬಹಿಷ್ಕಾರಗಳು ನಿರಂತರವಾಗಿ ದಲಿತ ಕ್ರೈಸ್ತರ ಮೇಲೆ ನಡೆಯುತ್ತಲೇ ಇರುತ್ತವೆ.

ಆಂಧ್ರದ ಕಾರಮ್‌ಚೇಡು (೧೯೮೫) ಹಾಗೂ ಟಿ. ಚುಂಡೂರು (೧೯೯೧) ಗಳಲ್ಲಿ ನಡೆದ ಸಾಮೂಹಿಕ ಕಗ್ಗೊಲೆಗೆ ಬಲಿಯಾದವರು ದಲಿತ ಕ್ರೈಸ್ತರೇ. ಅವರನ್ನು ಕತ್ತರಿಸಿ ಬೀಸಾಕಿದವರು ರೆಡ್ಡಿ ಕ್ರೈಸ್ತರಾಗಿದ್ದರು. ಕರ್ನಾಟಕದ ಬಳ್ಳಾರಿ ಜಿಲ್ಲೆಯ ಸಂಗನಕಲ್ ಗ್ರಾಮದ ದಲಿತ ಕ್ರೈಸ್ತರು ೧೯೯೦ರಲ್ಲಿ ಸಾಮಾಜಿಕ ಬಹಿಷ್ಕಾರಕ್ಕೊಳಗಾಗಿದ್ದರು. ೧೯೯೨ರಲ್ಲಿ ರಾಯಚೂರು ಜಿಲ್ಲೆಯ ಇಡಪನೂರು ಗ್ರಾಮದ ದಲಿತಕ್ರೈಸ್ತರ ಕೇರಿಗೆ ನುಗ್ಗಿ ದಾಂಧಲೆ ನಡೆಸಿದ ಸವರ್ಣೀಯರನ್ನು ನಿಯಂತ್ರಿಸಲು ಪೊಲೀಸರು ಗುಂಡು ಹಾರಿಸಿದಾಗ ಮೂವರು ಸವರ್ಣೀಯರು ಹೆಣವಾದರು ಹಾಸನ ಜಿಲ್ಲೆಯ ಮರಿಯಾನಗರದಲ್ಲಿ ದಲಿತ ಕ್ರೈಸ್ತ ಮಹಿಳೆ ಲೂರ್ದಮ್ಮ ಎನ್ನುವವರು ಮೊದಲ ಸಲ ೨೦೦೦ದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮೇಲ್ಜಾತಿ ಕ್ರೈಸ್ತ ಅಭ್ಯರ್ಥಿ ವಿರುದ್ಧ ಸ್ವರ್ಧಿಸಿ ಗೆದ್ದು, ಗ್ರಾಮಪಂಚಾ

ಯತಿ ಅಧ್ಯಕ್ಷೆಯಾಗಿ ಆಯ್ಕೆಯಾದುದನ್ನು ಜೀರ್ಣಿಸಿಕೊಳ್ಳಲಾಗದೇ, ಅಲ್ಲಿನ ಒಕ್ಕಲಿಗೆ ಕ್ರೈಸ್ತರು ಜ್ಞಾನ ಪ್ರಕಾಶ್ ಎನ್ನುವ ದಲಿತಕ್ರೈಸ್ತ ಯುವಕನ ಬಲಿತೆಗೆದುಕೊಂಡರು. ೨೦೦೨ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಬಲೆ ಗ್ರಾಮದ ಅಂದ್ರೇಯಸ್ ಜೋಸೆಫ್ ಎನ್ನುವ ದಲಿತ ಕ್ರೈಸ್ತರ ಮೇಲೆ ಹಲ್ಲೆ ನಡೆಸಿದ ಸವರ್ಣೀಯ ಕ್ರೈಸ್ತರು, ಆ ಗ್ರಾಮದ ಒಕ್ಕಲಿಗ ಜಾತಿಯ ಪಾದ್ರಿಯೊಬ್ಬರ ಕುಮ್ಮಕ್ಕಿನಿಂದ ಅವರ ಮನೆಯನ್ನೇ ಧ್ವಂಸಗೊಳಿಸಿದರು.

ಹೀಗೆ ದಲಿತ ಕ್ರೈಸ್ತರ ಮೇಲಿನ ಜಾತಿದೌರ್ಜನ್ಯಗಳ ಪಟ್ಟಿ ಮುಂದುವರಿಯುತ್ತಲೇ ಹೋಗುತ್ತದೆ. ದುರಂತದ ವಿಷಯವೆಂದರೆ, ದಲಿತ ಕ್ರೈಸ್ತರ ಮೇಲೆ ನಡೆಯುತ್ತಿರುವ ಜಾತಿ ದೌರ್ಜನ್ಯಗಳು ಪರಿಶಿಷ್ಟಜಾತಿ/ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ. ದಲಿತರಾಗಿದ್ದುಕೊಂಡು ಅಸ್ಪೃಶ್ಯತೆ, ಸಾಮಾಜಿಕ ಬಹಿಷ್ಕಾರ, ಜಾತಿ ದೌರ್ಜನ್ಯಗಳಡಿ ನಲುಗುತ್ತಿರುವ ದಲಿತಕ್ರೈಸ್ತರನ್ನು ಕಾನೂನು 'ಕ್ರೈಸ್ತ'ರೆಂದು ಪರಿಗಣಿಸಿ ಕೈತೊಳೆದುಕೊಂಡು ಬಿಡುತ್ತಿದೆ. ಇದು ಸಾಲದೆಂಬಂತೆ ಇತ್ತೀಚೆಗಿನ ವರ್ಷಗಳಲ್ಲಿ ಕೋಮುವಾದಿಗಳ ಕೆಂಗಣ್ಣಿಗೆ ದಲಿತ ಕ್ರೈಸ್ತರು ಬಲಿಯಾಗುತ್ತಿದ್ದಾರೆ. ಕ್ರೈಸ್ತರ ಮೇಲೆ ನಡೆಯುತ್ತಿರುವ ಶೇ. ೯೦ ರಷ್ಟು ಕೋಮುದಳ್ಳುರಿಗಳಲ್ಲಿ ಬಲಿಯಾದವರು, ಬಲಿಯಾಗುತ್ತಿರುವವರು ದಲಿತಕ್ರೈಸ್ತರೇ ಆಗಿದ್ದಾರೆ. ಈ ಸಾಲಿನಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿದೆ.

ಹಸಿವು, ಅವಮಾನ, ಬಡತನ, ಅನಕ್ಷರತೆ, ಮೂಢ ನಂಬಿಕೆಗಳು ದಲಿತ ಕ್ರೈಸ್ತರನ್ನು ಹುರಿದು ಮುಕ್ಕುತ್ತಿವೆ. ಜೀತಪದ್ಧತಿ, ಬಾಲಕಾರ್ಮಿಕ ಪ್ಧಧತಿ, ದೇವದಾಸಿ ಪದ್ಧತಿ, ಬಾಲ್ಯವಿವಾಹದಂಥ ಅನಿಷ್ಟ ಪದ್ಧತಿಗಳು ಇನ್ನೂ ಜೀವಂತವಾಗಿವೆ. ಬರಗಾಲ, ಪ್ರವಾಹ, ಸಾಲ ಇತ್ಯಾದಿ ಕಾರಣಗಳಿಂದ ಉತ್ತರ ಕರ್ನಾಟಕದ ದಲಿತ ಕ್ರೈಸ್ತರು ಬೆಂಗಳೂರು, ಮುಂಬೈ, ಸೊಲ್ಲಾಪುರ, ಪೂನಾ ಇತ್ಯಾದಿ ನಗರಗಳಿಗೆ ಗುಳೇ ಹೋಗುತ್ತಿದ್ದಾರೆ. ಬೆಂಗಳೂರಿನ ಕೊಳೆಗೇರಿಗಳಲ್ಲಿ ಶೇ. ೨೫ರಷ್ಟು ದಲಿತ ಕ್ರೈಸ್ತರಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆ ಪೌರಕಾರ್ಯಕರಲ್ಲಿ ಶೇ. ೨೭ರಷ್ಟು ದಲಿತ ಕ್ರೈಸ್ತ ಮಹಿಳೆಯರಿದ್ದಾರೆ. ಕನ್ನಡ ನಾಡು ಚಿನ್ನದ ಬೀಡು ಎಂಬ ಕೀರ್ತಿಗೆ ಪಾತ್ರವಾದ ಕೋಲಾರದ ಚಿನ್ನದ ಗಣಿ ಕಳೆದ ನಾಲ್ಕೈದು ವರ್ಷಗಳಿಂದ ಮುಚ್ಚಿದ್ದು, ಗಣಿಕಾರ್ಮಿಕರಾಗಿ ದುಡಿಯುತ್ತಿದ್ದ ಶೇ. ೫೫ ರಷ್ಟು ಕಾರ್ಮಿಕರು ದಲಿತ ಕ್ರೈಸ್ತರಾಗಿದ್ದು, ಇಂದು ಮೂಲಸೌಕರ್ಯಗಳಿಲ್ಲದೆ ಜೀವಂತ ಹೆಣವಾಗಿದ್ದಾರೆ. ಚಿನ್ನ ಹೆಕ್ಕಿಕೊಟ್ಟ ಕೈಗಳಿಂದು ಅನ್ನಕ್ಕಾಗಿ ತಡಕಾಡುತ್ತಿವೆ. ಮಲೆನಾಡಿನ ಕಾಫಿ ಎಸ್ಟೇಟ್‌ಗಳಲ್ಲಿ ಕೂಲಿಗಳಾಗಿ ಗೇಯುತ್ತಿರುವ ದಲಿತ ಕ್ರೈಸ್ತರು ಕನಿಷ್ಠ ಕೂಲಿ ಸಿಗದೇ ಮಾಲೀಕರ ಕ್ರೌರ್ಯಕ್ಕೆ ಹೆದರಿ ಉಸಿರು ಬಿಗಿ ಹಿಡಿದುಕೊಂಡು ದಿನಗಳನ್ನು ಎಣಿಸುತ್ತಿದ್ದಾರೆ.

ಶೇ. ೩ರಷ್ಟಿರುವ ಕ್ರೈಸ್ತರ ರಾಷ್ಟ್ರೀಯ ಜನಸಂಖ್ಯೆಯಲ್ಲಿ, ದಲಿತ ಕ್ರೈಸ್ತರ ಜನಸಂಖ್ಯೆ ಶೇ. ೨ರಷ್ಟಿದೆ. ಅಂದರೆ ಸುಮಾರು ೨ ಕೋಟಿ ಜನಸಂಖ್ಯೆ. ದಕ್ಷಿಣ ಭಾರತದ ಒಟ್ಟಾರೆ ಕ್ರೈಸ್ತರ ಜನಸಂಖ್ಯೆಯಲ್ಲಿ ಶೇ. ೭೦ರಿಂದ ೭೫ ರಷ್ಟಿರುವ ದಲಿತ ಕ್ರೈಸ್ತರು ರಾಜಕೀಯವಾಗಿ ಕಳೆದು ಹೋಗಿದ್ದಾರೆ. ಆಂಧ್ರದಲ್ಲಿ ಸ್ಯಾಮುಯಲ್ ರಾಜಶೇಖರ್ ರೆಡ್ಡಿ, ಜನಾರ್ಧನರೆಡ್ಡಿಯಂಥ ರೆಡ್ಡಿಕ್ರೈಸ್ತರು, ಕರ್ನಾಟಕದಲ್ಲಿ ಆಸ್ಕರ್ ಫರ್ನಾಂಡೀಸ್, ಮಾರ್ಗರೇಟ್ ಆಳ್ವರಂತಹ

ಶೇ. ೩ರಷ್ಟಿರುವ ಕ್ರೈಸ್ತರ ರಾಷ್ಟ್ರೀಯ ಜನಸಂಖ್ಯೆಯಲ್ಲಿ, ದಲಿತ ಕ್ರೈಸ್ತರ ಜನಸಂಖ್ಯೆ ಶೇ. ೨ರಷ್ಟಿದೆ. ಅಂದರೆ ಸುಮಾರು ೨ ಕೋಟಿ ಜನಸಂಖ್ಯೆ. ದಕ್ಷಿಣ ಭಾರತದ ಒಟ್ಟಾರೆ ಕ್ರೈಸ್ತರ ಜನಸಂಖ್ಯೆಯಲ್ಲಿ ಶೇ. ೭೦ರಿಂದ ೭೫ ರಷ್ಟಿರುವ ದಲಿತ ಕ್ರೈಸ್ತರು ರಾಜಕೀಯವಾಗಿ ಕಳೆದು ಹೋಗಿದ್ದಾರೆ. ಆಂಧ್ರದಲ್ಲಿ ಸ್ಯಾಮುಯಲ್ ರಾಜಶೇಖರ್ ರೆಡ್ಡಿ, ಜನಾರ್ಧನರೆಡ್ಡಿಯಂಥ ರೆಡ್ಡಿ ಕ್ರೈಸ್ತರು, ಕರ್ನಾಟಕದಲ್ಲಿ ಆಸ್ಕರ್ ಫರ್ನಾಂಡೀಸ್, ಮಾರ್ಗರೇಟ್ ಆಳ್ವರಂತಹ ಕೊಂಕಣಿ ಭಾಷಿಕಗೌಡ ಸಾರಸ್ವತ ಬ್ರಾಹ್ಮಣ (ಜಿ.ಎಸ್.ಬಿ) ಕ್ರೈಸ್ತರು, ಕೇರಳದಲ್ಲಿ ಎ.ಕೆ. ಆ್ಯಂಟನಿ, ಓಮ್ಮನ್‌ಚಾಂಡಿಯಂತಹ ಸಿರಿಯನ್ ಕ್ರೈಸ್ತರು ಕ್ರೈಸ್ತರ ರಾಜಕೀಯ ಕೋಟಾದಡಿಯಲ್ಲಿ ಪ್ರಬಲರಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬೆಳೆದಿದ್ದಾರೆ. ಕರ್ನಾಟಕದ ವಿಧಾನಸಭೆ-ವಿಧಾನ ಪರಿಷತ್ತುಗಳಲ್ಲಿ ೩೦ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ದಲಿತಕ್ರೈಸ್ತರ ಪರವಾಗಿ ಒಬ್ಬನೇ ಒಬ್ಬ ಶಾಸಕನಿಲ್ಲ. ವಿಧಾನಪರಿಷತ್ ಸದಸ್ಯನಿಲ್ಲ.

ಕೊಂಕಣಿ ಭಾಷಿಕಗೌಡ ಸಾರಸ್ವತ ಬ್ರಾಹ್ಮಣ (ಜಿ.ಎಸ್.ಬಿ) ಕ್ರೈಸ್ತರು, ಕೇರಳದಲ್ಲಿ ಎ.ಕೆ. ಆ್ಯಂಟನಿ, ಜಮ್ಮನ್‌ಚಾಂಡಿಯಂತಹ ಸಿರಿಯನ್‌ಕ್ರೈಸ್ತರು ಕ್ರೈಸ್ತರ ರಾಜಕೀಯ ಕೋಟಾದಡಿಯಲ್ಲಿ ಪ್ರಬಲರಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬೆಳೆದಿದ್ದಾರೆ. ಕರ್ನಾಟಕದ ವಿಧಾನಸಭೆ-ವಿಧಾನ ಪರಿಷತ್ತುಗಳಲ್ಲಿ ೩೦ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ದಲಿತಕ್ರೈಸ್ತರ ಪರವಾಗಿ ಒಬ್ಬನೇ ಒಬ್ಬ ಶಾಸಕನಿಲ್ಲ. ವಿಧಾನಪರಿಷತ್ ಸದಸ್ಯನಿಲ್ಲ. ಪ್ರಸ್ತುತ ಅಧಿಕಾರದಲ್ಲಿರುವ ಜೆ.ಡಿ.ಎಸ್-ಬಿ.ಜೆ.ಪಿ ಮೈತ್ರಿ ಸರ್ಕಾರವಂತೂ ದಲಿತ ಕ್ರೈಸ್ತರೆಂಬ ಜನಾಂಗವೊಂದಿದೆ ಎಂಬುದನ್ನೇ ಮರೆತುಬಿಟ್ಟಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಮೇಲ್ಜಾತಿ ಕ್ರೈಸ್ತ ರಾಜಕೀಯ ನಾಯಕರು ದಲಿತ ಕ್ರೈಸ್ತರ ಮೀಸಲಾತಿಗೆ ಸಂಬಂಧಿಸಿದಂತೆ ಆತ್ಮವಂಚನೆಯ ರಾಜಕಾರಣದಲ್ಲೇ ಮುಳುಗಿದ್ದಾರೆ. ಮೇಲ್ಜಾತಿಕ್ರೈಸ್ತರ ನಾಯಕತ್ವದ ಎನ್.ಜಿ.ಒ.ಗಳು, ಸಾಮಾಜಿಕ ಸಂಘಟನೆಗಳು ಮತ್ತು ಬಿಷಪ್ಪರು (ಕ್ರೈಸ್ತ ಧರ್ಮಾಧ್ಯಕ್ಷರು) ಕೂಡ ಇದಕ್ಕೆ ಹೊರತಾಗಿಲ್ಲ. ಸಾಮಾಜಿಕ ನ್ಯಾಯ, ಮಾನವಹಕ್ಕು, ಮಾನವ ಪ್ರೀತಿ ಇತ್ಯಾದಿ ಬಡಬಡಿಸುವ ಇವರೆಲ್ಲರೂ ತಮ್ಮ ಅಂಗಳದಿಂದ ಕರುಣಾಮಯಿಯಾದ ಯೇಸುಕ್ರೈಸ್ತನನ್ನು ಯಾವತ್ತೋ ಓಡಿಸಿಬಿಟ್ಟಿದ್ದಾರೆ.

ದಲಿತ ಕ್ರೈಸ್ತರು ಜಾತಿ ಮತ್ತು ಧರ್ಮದ ಕಾರಣದಿಂದಾಗಿ; ಮೇಲ್ಜಾತಿ ಕ್ರೈಸ್ತರಿಂದ ಮಾತ್ರವಲ್ಲದೇ ಹಿಂದೂ ಸವರ್ಣೀಯರಿಂದಲೂ ಶೋಷಣೆ, ದೌರ್ಜನ್ಯ ದಬ್ಬಾಳಿಕೆಗಳಿಗೆ ತುತ್ತಾಗುತ್ತಿದ್ದಾರೆ. ಕ್ರೈಸ್ತ ಸಾಮಾಜಿಕ ಹಾಗೂ ಶೈಕ್ಷಣಿಕ ಸೌಲಭ್ಯಗಳಿಂದ ದೂರಕ್ಕೆ ಅಟ್ಟಲ್ಪಟ್ಟಿದ್ದಾರೆ. ಪರಿಶಿಷ್ಟ ಜಾತಿಯ ಮೀಸಲಾತಿ, ಸಂವಿಧಾನಾತ್ಮಕ ರಕ್ಷಣೆ ಮತ್ತು ರಾಜಕೀಯ ಪ್ರಾತಿನಿಧ್ಯದಿಂದ ವಂಚಿಸಲ್ಪಟ್ಟಿದ್ದಾರೆ.

ದಲಿತಕ್ರೈಸ್ತರ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಸಿರುವ ಕುಮಾರ ಪಿಳ್ಳೆ ಸಮಿತಿ (೧೯೬೫), ಸಂತಾನಮ್ ಸಮಿತಿ (೧೯೭೦), ಚಿದಂಬರಮ್ ಸಮಿತಿ (೧೯೭೫), ಮಂಡಲ್ ವರದಿ, ಚೆನ್ನಪ್ಪರೆಡ್ಡಿ ವರದಿ, ಫಾದರ್. ಅಂಬ್ರೋಸ್ ಪಿಂಟೋ ವರದಿಗಳ ಪ್ರಕಾರ ದಲಿತ ಕ್ರೈಸ್ತರ ಪರಿಸ್ಥಿತಿ ಇತರೆ ಧರ್ಮಗಳನ್ನು ಅನುಸರಿಸುತ್ತಿರುವ ದಲಿತರ ಪರಿಸ್ಥಿತಿಗಿಂತ ಯಾವುದೇ ರೀತಿಯಲ್ಲಿ ಭಿನ್ನವಾಗಿಲ್ಲ. ಕ್ರೈಸ್ತರಾಗಿರುವ ದಲಿತರು ಇಂದು ಎಲ್ಲೂ ಸಲ್ಲದವರಾಗಿ ಅತಂತ್ರ ಸ್ಥಿತಿಯಲ್ಲಿದ್ದಾರೆ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ.

ದಲಿತ ಕ್ರೈಸ್ತರಿಗೆ ಹಿಂದೂ, ಸಿಖ್ ಮತ್ತು ಬೌದ್ಧ ದಲಿತರಿಗಿರುವ ಪರಿಶಿಷ್ಟಜಾತಿಯ ಮೀಸಲಾತಿಯನ್ನು ಕಲ್ಪಿಸುವುದರ ಬಗ್ಗೆ ಎಲ್ಲಾ ಪ್ರಗತಿಪರ ಮತ್ತು ಜಾತ್ಯಾತೀತ ಚಳುವಳಿಗಳ ಬೆಂಬಲವಿದ್ದರೂ, ಇದಕ್ಕೆ ಆರಂಭದಿಂದಲೂ ಮನುವಾದಿ ಶಕ್ತಿಗಳ ವಿರೋಧವಿದೆ. ಮೀಸಲಾತಿ ಹಿಂದುಗಳು ಕೊಡುವ ಭಿಕ್ಷೆಯಾಗಿದ್ದು, ದಲಿತರು ಮೀಸಲಾತಿ ಪಡೆಯಲು ಹಿಂದುಗಳೆಂದೇ ಗುರುತಿಸಿಕೊಳ್ಳಬೇಕೆನ್ನುವ ರಾಷ್ಟ್ರವ್ಯಾಪಿ ಪ್ರಚಾರ ಸಂಘಪರಿವಾರ ಹಾಗೂ ಅದರ ರಾಜಕೀಯ ಮುಖವಾಡವಾಗಿರುವ ಬಿ.ಜೆ.ಪಿಯಿಂದ ನಡೆಯುತ್ತಿದೆ. ಆದರೆ, ಡಾ॥ ಬಾಬಾಸಾಹೇಬ್ ಅಂಬೇಡ್ಕರರ ಪ್ರಕಾರ ದಲಿತರು ಹಿಂದುಗಳಲ್ಲ. ಅವರೊಂದು ಪ್ರತ್ಯೇಕ ಜನಾಂಗ. ಆ ಜನಾಂಗಕ್ಕೆ ಈ ದೇಶದ ವಿದ್ಯೆ, ಉದ್ಯೋಗ, ಕೈಗಾರಿಕೆ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಸಲ್ಲಬೇಕಾದ ಪಾಲೇ ಮೀಸಲಾತಿ. ಈ ರಾಷ್ಟದ ನೆಲ, ಜಲ ಸಂಪನ್ಮೂಲಗಳಲ್ಲಿ ದೊರೆಯಬೇಕಾದ ಪ್ರಾತಿನಿಧ್ಯ.

ಹಿಂದುತ್ವದ ಕಡುವಿರೋಧಿಯಾಗಿದ್ದ ಅಂಬೇಡ್ಕರರು ಅದರ ನಿರ್ಮೂಲನೆಗಾಗಿ ತಾವು ಯಾವುದೇ ಬೆಲೆಯನ್ನಾದರೂ ತೆರಲು ಸಿದ್ಧವಾಗಿರುವುದಾಗಿ ಘೋಷಿಸಿ, ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧಧರ್ಮವನ್ನು ಸ್ವೀಕರಿಸಿದರು. ಹಿಂದು ಧರ್ಮಕ್ಕೆ ಪರ್ಯಾಯವಾಗಿ ಸಮಾನತೆ ಸಾರುವ ಯಾವುದೇ ಧರ್ಮವನ್ನು ದಲಿತರು ಸ್ವೀಕರಿಸಿದರೂ, ಅವರ ಹಕ್ಕುಗಳು ಅವರನ್ನು ಹಿಂಬಾಲಿಸಿಕೊಂಡು ಬರುತ್ತವೆ ಎಂದು 'why go For conversion' (ಮತಾಂತರ ಏಕೆ?) ಎನ್ನುವ ವೈಚಾರಿಕ ಕೃತಿಯನ್ನು ರಚಿಸುವುದರ ಮೂಲಕ ಸಾರಿದರು. ಅವರ ಈ ತೀಕ್ಷ್ಣ ನಿರ್ಧಾರ ಹಾಗೂ ಪ್ರಯೋಗ ಮನುವಾದಿಗಳ ಬುಡವನ್ನೇ ಅಲುಗಾಡಿಸಿತು. ಈ ಹಿನ್ನೆಲೆಯಲ್ಲಿಯೇ ಜನ್ಮ ತಳೆದದ್ದು ೧೯೫೦ರ ರಾಷ್ಟ್ರಪತಿ ಶಾಸನ, ಯಾವ ಜಾತಿಗಳನ್ನು ಪರಿಶಿಷ್ಟ ಜಾತಿಯ ವ್ಯಾಪ್ತಿಗೆ (ಪಟ್ಟಿಗೆ) ಸೇರಿಸಬೇಕೆಂಬ ನಿರ್ಧಾರಕ ಶಕ್ತಿಯನ್ನು ಹೊಂದಿರುವ ಈ ಶಾಸನವು ಆರಂಭದಲ್ಲಿ ಕೇವಲ ಹಿಂದು ದಲಿತರಿಗೆ ಮಾತ್ರ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ನಿರ್ಬಂಧಿಸಿತು. ಭಾರತದ ಸಂವಿಧಾನದ ಸಮಾನತೆ, ಸ್ವಾತಂತ್ರ್ಯ, ಧರ್ಮನಿರಪೇಕ್ಷತೆ ಮತ್ತು ಜಾತ್ಯತೀತ ಪರಿಕಲ್ಪನೆಗೆ ತದ್ವಿರುದ್ಧವಾಗಿ ಹಿಂದುತ್ವದ ಪರ ವಕಾಲತ್ತು ವಹಿಸಿದ ರಾಷ್ಟ್ರಪತಿ ಶಾಸನವು ಅಂಬೇಡ್ಕರರ ಆಶಯಗಳನ್ನು ಗಾಳಿಗೆ ತೂರಿತು. ಈ ಮನುವಾದಿ ಶಾಸನದ ವಿರುದ್ಧ ಕೆರಳಿ ಕೆಂಡವಾದ ಸಿಖ್ ಮತ್ತು ನವಬೌದ್ಧ ದಲಿತರು ತೀವ್ರವಾದ ರಾಜಕೀಯ ಹೋರಾಟವನ್ನು ಮಾಡಿ, ಕ್ರಮವಾಗಿ ೧೯೫೬ ಮತ್ತು ೯೦ ರಲ್ಲಿ ಮೀಸಲಾತಿಯನ್ನು ಪಡೆದರು. ಇದರಿಂದ ಮುಖಭಂಗ ಅನುಭವಿಸಿದ ಮನುವಾದಿಗಳು ಸಿಖ್ ಮತ್ತು ಬೌದ್ಧಧರ್ಮಗಳು ಕೂಡ ಹಿಂದೂ ಧರ್ಮದ ಅವಿಭಾಜ್ಯ ಅಂಗಗಳೆಂದು ತಿಪ್ಪೆಸಾರಿಸಿದರು. ಈಗಲೂ ಅದನ್ನೇ ಮಾಡುತ್ತಿದ್ದಾರೆ.

ಹಿಂದುಯೇತರ ಧರ್ಮಗಳನ್ನು ಅನುಸರಿಸುತ್ತಿರುವ ದಲಿತರಿಗೆ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಕಲ್ಪಿಸಬಾರದೆನ್ನುವ ಸಂಘಪರಿವಾರದ ಹುನ್ನಾರದ ಹಿಂದೆ ಅಡಗಿರುವ ಕುತಂತ್ರವೇನೆಂದರೆ, ಹಿಂದುಗಳಲ್ಲದ ದಲಿತರನ್ನು ಹಿಂದುಗಳನ್ನಾಗಿ ಮತಾಂತರಗೊಳಿಸುವುದಾಗಿದೆ. ಧರ್ಮದ ಆಧಾರದ ಮೇಲೆ ಒಡೆದಾಳುವುದಾಗಿದೆ. ಹಿಂದುತ್ವದ ಹೆಸರಿನಲ್ಲಿ ವೋಟ್‌ಬ್ಯಾಂಕ್ ರಾಜಕಾರಣ ನಡೆಸುವುದಾಗಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ವಿಸ್ತೃತವಾಗಿ ವ್ಯಾಪಿಸಿರುವ, ದೇಶದ ಜನಸಂಖ್ಯೆಯಲ್ಲಿ ಶೇ. ೩೦ ರಷ್ಟಿರುವ ದಲಿತರು ಒಂದು ಪ್ರಬಲ ಸಾಮಾಜಿಕ, ಸಾಂಸ್ಕೃತಿಕ ರಾಜಕೀಯ ಶಕ್ತಿಯಾಗಿ ಬೆಳೆಯದಂತೆ ತಡೆ ಒಡ್ಡುವ ಪೂರ್ವಗ್ರಹ ಪೀಡಿತ ದೂರಾಲೋಚನೆಯಾಗಿದೆ.

ಕಾಂಗ್ರೆಸ್ ಪಕ್ಷದ ನಿಲುವು ಸಹ ಈ ವಿಚಾರದಲ್ಲಿ ಸಂಘಪರಿವಾರಕ್ಕಿಂತ ಭಿನ್ನವಾಗಿಲ್ಲ ಸ್ವಾತಂತ್ರ್ಯ ನಂತರದಲ್ಲಿ ಸುಮಾರು ೫೦ ವರ್ಷಗಳಷ್ಟು ಧೀರ್ಘಕಾಲ ಕೇಂದ್ರದಲ್ಲಿ ಅಧಿಕಾರ ನಡೆಸಿರುವ ಈ ಪಕ್ಷವು ಮನಸ್ಸು ಮಾಡಿದ್ದರೆ, ದಲಿತ ಕ್ರೈಸ್ತರಿಗೆ ಎಂದೋ ಮೀಸಲಾತಿಯನ್ನು ಒದಗಿಸಬಹುದಾಗಿತ್ತು. ಈಗಲೂ ಕೂಡ ಯುಪಿಎ ಸರ್ಕಾರದ ಬಹುತೇಕ ಅಂಗ ಪಕ್ಷಗಳು ದಲಿತ ಕ್ರೈಸ್ತರ ಬಹುಧೀರ್ಘ ಕಾಲದ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿವೆ. ಬಿಜೆಪಿಯನ್ನು ಹೊರತು ಪಡಿಸಿ ಎನ್. ಡಿ.ಎ. ಅಂಗಪಕ್ಷಗಳೂ ತಮ್ಮ ಸಹಮತ ಸೂಚಿಸಿವೆ. ಆದಾಗ್ಯೂ ಕೂಡ ಕಾಂಗ್ರೆಸ್ ಎಂಬ ಪಕ್ಕಾ (ಒರಿಜಿನಲ್) ಮನುವಾದಿ

ಜಾಗತೀಕರಣ, ಖಾಸಗೀಕರಣ, ಕೋಮುವಾದಿ ಕರಣ ಎನ್ನುವ ತ್ರಿಕರಣಗಳ ಬಾಹುಗಳು ಎಲ್ಲೆಡೆ ಹರಡುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಶೋಷಿತ ಸಮುದಾಯಗಳು ಒಡಕಿನತ್ತ ಸಾಗುವುದರ ಬದಲು ಸಧೃಡಗೊಳ್ಳಬೇಕಾಗಿದೆ. ಬಿಡಿ ಬಿಡಿ ಹೋರಾಟಗಳಿಂದ ಶೋಷಿತರ ವಿಮೋಚನೆ ಅಸಾಧ್ಯ

ಪಕ್ಷ ಜಸ್ಟೀಸ್ ರಂಗನಾಥ್ ಮಿಶ್ರಾ ಆಯೋಗಕ್ಕೆ ಈ ವಿಷಯವನ್ನು ವರ್ಗಾಯಿಸಿ ಕಳ್ಳಾಟವಾಡುತ್ತಿದೆ. ಈ ಮಾರ್ಚ್ ೩೧ಕ್ಕೆ ತನ್ನ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಬೇಕಾಗಿದ್ದ ಜಸ್ಟೀಸ್ ರಂಗನಾಥ ಮಿಶ್ರಾ ಆಯೋಗವು, ಉತ್ತರಪ್ರದೇಶದ ವಿಧಾನಸಭಾ ಚುನಾವಣೆಯ ನೆಪವನ್ನು ಮುಂದೆ ಮಾಡಿ, ಬರುವ ಮೇ ೧೫ರಂದು ವರದಿ ಸಲ್ಲಿಸುವುದಾಗಿ ಆಶ್ವಾಸನೆಯಿತ್ತಿದೆ. ಅದರ ಆಧಾರದ ಮೇಲೆ ಅಂತಿಮ ತೀರ್ಮಾನ ಕೈಗೊಳ್ಳುವುದಾಗಿ ಕಾಂಗ್ರೆಸ್ ತಿಳಿಸಿದೆ.

ಜಾಗತೀಕರಣ, ಖಾಸಗೀಕರಣ, ಕೋಮುವಾದಿಕರಣ ಎನ್ನುವ ತ್ರಿಕರಣಗಳ ಬಾಹುಗಳು ಎಲ್ಲೆಡೆ ಹರಡುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಶೋಷಿತ ಸಮುದಾಯಗಳು ಒಡಕಿನತ್ತ ಸಾಗುವುದರ ಬದಲು ಸಧೃಡಗೊಳ್ಳಬೇಕಾಗಿದೆ. ಬಿಡಿ ಬಿಡಿ ಹೋರಾಟಗಳಿಂದ ಶೋಷಿತರ ವಿಮೋಚನೆ ಅಸಾಧ್ಯ. ದಲಿತ ಕ್ರೈಸ್ತರ ಹಕ್ಕುಗಳಿಗಾಗಿ ಕೇವಲ ದಲಿತ ಕ್ರೈಸ್ತರು ಮಾತ್ರ ಹೋರಾಟ ಮಾಡಬೇಕೇ? ದಲಿತ ಕ್ರೈಸ್ತರು ತಮ್ಮ ಅಣ್ಣತಮ್ಮಂದಿರಿಗೆ ಬೇಡವಾದರೇ? ಮಾರೆಮ್ಮನನ್ನು ಪೂಜಿಸುವ ಜಾಗದಲ್ಲಿ ಮೇರಿಯನ್ನು ಪೂಜಿಸಿದ ಮಾತ್ರಕ್ಕೆ ನಮ್ಮ ಕರುಳ ಸಂಬಂಧ ಕಡಿದು ಹೋಗುವುದೇ ಮನುವಾದಿಗಳ ಒಡೆದಾಳುವ ಅಸ್ತ್ರಕ್ಕೆ ನಾವು ಬಲಿಯಾಗಬೇಕು? ಇವು ಇಂದು ದಲಿತ ಕ್ರೈಸ್ತರನ್ನು ತೀವ್ರವಾಗಿ ಕಾಡುತ್ತಿರುವ ಪ್ರಶ್ನೆಗಳು.

ಅಂದಿನ ಸಮಾಜದಲ್ಲಿ ನಡೆಯುತ್ತಿದ್ದ ರಾಜರುಗಳ ದಬ್ಬಾಳಿಕೆ, ಪುರೋಹಿತಶಾಹಿಗಳ ವಕ್ರಬುದ್ಧಿ ಮತ್ತವರ ಚೇಲಾಗಳ ಮಾನವ ವಿರೋಧಿ-ಜೀವವಿರೋಧಿ ನೀತಿಗಳನ್ನು ಪ್ರಶ್ನಿಸಿದ್ದಕ್ಕಾಗಿ ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿ ಕೊಲ್ಲಲಾಯಿತು. ಆಯೇಸುಕ್ರಿಸ್ತನ ವಿಚಾರಗಳನ್ನು ಒಪ್ಪಿಕೊಂಡ ಕಾರಣದಿಂದ ಇಂದಿನ ಸಮಾಜದಲ್ಲಿ ಅದೇ ಸಾಮಾಜಿಕ ವ್ಯವಸ್ಥೆ ದಲಿತ ಕ್ರೈಸ್ತರನ್ನು ಪ್ರತಿನಿತ್ಯ ಶಿಲುಬೆಗೇರಿಸುತ್ತಿದೆ. ಕ್ಷಣಕ್ಷಣಕ್ಕೂ ಚಿತ್ರ ಹಿಂಸೆ ನೀಡುತ್ತಿದೆ.

ಈ ಹಿಂಸೆಯಿಂದ ವಿಮುಕ್ತರಾಗುವುದು ಹೇಗೆ ಎನ್ನುವ ಪ್ರಶ್ನೆಗೆ, ೧೯೯೬ರ ಆಗಸ್ಟ್ ೨೯ರಂದು ದಲಿತ ಕ್ರೈಸ್ತರಿಗೆ ಮೀಸಲಾತಿ ಒತ್ತಾಯಿಸಿ ಬೆಂಗಳೂರಿನ ಟೌನ್ ಹಾಲ್‌ನಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕರಾದ ಪ್ರೊಫೆಸರ್ ಬಿ. ಕೃಷ್ಣಪ್ಪನವರು ಆಡಿದ ಮಾತುಗಳು ಇಂದಿಗೂ ಪ್ರಸ್ತುತವಾಗುತ್ತವೆ. "ದಲಿತ ಕ್ರೈಸ್ತರ ಸಮಸ್ಯೆ, ಕೇವಲ ದಲಿತ ಕ್ರೈಸ್ತರ ಸಮಸ್ಯೆಯಲ್ಲ. ಅದು ಒಟ್ಟಾರೆಯಾಗಿ ಇಡೀ ದಲಿತ ಚಳುವಳಿಯ ಸಮಸ್ಯೆ. ದಲಿತ ಕ್ರೈಸ್ತರ ಮೀಸಲಾತಿಯ ಹೋರಾಟ, ಪ್ರಜಾಪ್ರಭುತ್ವದ ಮೌಲ್ಯಗಳ ಉಳಿವಿನ ಹೋರಾಟ. ಈ ಹೋರಾಟ ಇಡೀ ದಲಿತ ಚಳುವಳಿಯ ಹೋರಾಟವಾಗಿ ಪರಿವರ್ತನೆಯಾಗಬೇಕು. ಧರ್ಮದ ಹೆಸರಿನಲ್ಲಿ ಸನಾತನವಾದಿಗಳು ನಮ್ಮನ್ನು ಛಿದ್ರಗೊಳಿಸಿ ನಾಶಮಾಡಲು, ನಾವು ಅವಕಾಶ ಮಾಡಿಕೊಡುವುದಿಲ್ಲ."□

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಒಂದೇ ಉಸಿರಿನಲಿ
ಹೇಳಿ ಮೂರು ತಲ್ಲಾಕ್
ಹೊರಟೆ ನೀನು ಎಲ್ಲಿಗೆ?
ಬಹಳ ಸಹಿಸಿಹೆನು ಪೀಡನೆ
ಸಾಕು ಹೋಗು ನಿನ್ನ ದಾರಿಗೆ

ಮೆಹರ್‌ನ ಮೊತ್ತ ಇಟ್ಟು
ಹಸಿರು ನೋಟಿನ ಕಟ್ಟು
ಬಹುಮಾನವೆರಡು ಕೈಗಿಟ್ಟು
ನಿನ್ನ ಕರ್ಮಕಾಂಡದ ಫಲ
ಬದುಕೆಲ್ಲ ತೊಳೆಯಬೇಕು ಛಮಟು

ನಿನ್ನ ಮೆಹರಿನ ಮೊತ್ತ
ಸಾಕಾಗುತ್ತಿಲ್ಲ ವಿಷಕೊಳ್ಳಲು ಚುಟುಕು
ಸಿಕ್ಕಾಳು ನಿನಗೊಬ್ಬ ಸಂಗಾತಿ
ನನ್ನ ಮಕ್ಕಳಿಗೊಬ್ಬ ತಂದೆ
ಎಲ್ಲಿಂದ ತರಲಿ ಹೇಳು?

ಕೊಡುವುದೇ ಆದಲಿ ಕೊಟ್ಟು ಹೋಗು
ನನ್ನ ಮಕ್ಕಳ ಭವಿಷತ್ತಿಗೆ
ಬದುಕು ಕೊಟ್ಟು ಹೋಗು
ಎಳೆಯ ರಟ್ಟೆಗಳಲಿ ಕಸುವು ತುಂಬಿ
ನಿನ್ನ ನೆರಳಿನಲಿ ಕಳೆದು ಹೋದ
ನನ್ನ ಆತ್ಮವಿಶ್ವಾಸ ಮರಳಿ ಕೊಟ್ಟು ಹೋಗು.



ಜೀವನದಿಯಾಗಲಿ

ಎದೆಯಿಂದ ಚಿಮ್ಮಿದ
ಆ ನೋವಿನ ರಕುತ
ನರನಾಡಿಗಳ ಉಸಿರು
ಸೋರಿ ಹೋಗುವ ಬೆಳಕ
ಹಿಡಿದು ಕಟ್ಟಿದ ಬಂಧ
ಹೊಕ್ಕಳ ಬಳ್ಳಿಯ ಹಾಡು
ನಾಳ ಧಮನಿಗಳಿಗಿಳಿದು
ಜೀವ ತುಂಬಿ ಹರಿಯಲಿ
ಜೀವಜಾಲ ಬೆಳೆಯಲಿ.

ರಕ್ತ ಮಾಂಸದ ಹೊದಿಕೆ
ಒಳಗೆ ಕಿಡಿಯಾದ ಕನಸು
ಜೀವಜಲದ ಮಿಸುಕಾಟ
ಕಣ್ಣುಗಳಲ್ಲಿ ಮಿಂಚಾಗಿ
ಬೆಳಕಿನ ಸಂಚಾರವಾಗಿ
ಕೆಂಡದಲ್ಲಿ ಮಿಂದಿರುವ
ಸಂಕಷ್ಟಗಳ ಮೀರಿ
ಸೂತಕದ ಮೌನ ಮುರಿದು
ನೊಂದವರ ಧ್ವನಿಯಾಗಲಿ
ಬೆಂದವರ ನಾಡಿ ಮಿಡಿತವಾಗಲಿ

ನೈದಿಲೆಯ ತಂಪು ಗಾಳಿಗೆ
ಬೆವರು ಘನ ಇಬ್ಬನಿಯಾಗಿ
ಕಣ್ಣಿನಾಳದ ಮಿಂಚು ನಕ್ಷತ್ರ
ತಾರೆಗಳ ಬೆಳಕಿನ ಸೆಳಕಾಗಿ
ನರಮಂಡಲದಲಿ ಹರಿದು
ಜನರ ಜೀವನಾಡಿಯಾಗಲಿ

ಧಗಧಗಿಸುವ ಒಡಲ ಉರಿಗೆ
ಸುಟ್ಟು ಕಮರದೇ ಬದುಕು
ಬಿರುಕು ಬಿಟ್ಟ ಇಳೆಗೆ
ಸೊನೆ ಮಳೆಯಾಗಿ ಸುರಿದು
ಕತ್ತಲಾಗಸದ ಗರ್ಭದಲ್ಲಿ
ಹಚ್ಚಿಟ್ಟ ಮೇಣದ ಬತ್ತಿಯಾಗಿ
ನೆತ್ತರೋಕುಳಿಯ ಎದುರು
ನಿರಂತರ ಹರಿಯುವ ನದಿಯಾಗಲಿ
ಪ್ರೀತಿ ವಾರಿಧಿಯಾಗಲಿ.

ಕೆ. ಪರೀಘಾ

'ಆನುದೇವಾ ಹೊರಗಣವನು' ಹುಟ್ಟಿಸಿರುವ ಒಳಪ್ರಶ್ನೆಗಳು

ಬಂಜಗೆರೆಯವರ 'ಆನುದೇವಾ' ಕೃತಿಯು ಈಗ ವಿವಾದಕ್ಕೆ ಸಿಲುಕಿದೆ ಅಥವಾ ಸಿಲುಕಿಸಲಾಗಿದೆ. ಲಿಂಗಾಯತ ಮತಕ್ಕೆ ಸಂಬಂಧ ಪಟ್ಟಂತೆ ಬಂದ –ಮಾಸ್ತಿಯವರ 'ಚಿಕವೀರರಾಜೇಂದ್ರ' ಶಿವಪ್ರಕಾಶರ 'ಮಹಾಚೈತ್ರ' ಪಿ.ವಿ. ನಾರಾಯಣ ಅವರ 'ಧರ್ಮಕಾರಣ' ಎಂ. ಎಂ. ಕಲಬುರ್ಗಿಯವರ 'ಮಾರ್ಗ'. ಮಾತೆಮಹಾದೇವಿ ಅವರ 'ವಚನದೀಪ್ತಿ'– ಈ ಕೃತಿ ಸರಣಿಯಲ್ಲಿ ಈಗ ಇದೂ ಸೇರಿದಂತಾಗಿದೆ. ಆದರೆ ಇಲ್ಲಿನ ಪ್ರತಿಯೊಂದು ಕೃತಿಯ ವಿವಾದಕ್ಕೂ ಬೇರೆ ಬೇರೆ ಕಾರಣವಿದ್ದು, 'ಆನುದೇವಾ' ಕೃತಿ ಹುಟ್ಟಿಸಿರುವ ಸಿಟ್ಟು ಆಕ್ರೋಶಗಳಿಗೆ ಕಾರಣಗಳು ಬೇರೆಯಾಗಿವೆ. ಆ ಪುಸ್ತಕವನ್ನು ಸರ್ಕಾರ ನಿಷೇಧಿಸಬೇಕು, ಮುಟ್ಟುಗೋಲು ಹಾಕಿಕೊಳ್ಳಬೇಕು, ಇಲ್ಲದಿದ್ದರೆ ರಕ್ತದ ಕೋಡಿ ಹರಿಯುತ್ತದೆ, ಪುಸ್ತಕವನ್ನು ಸುಡಬೇಕು, ಲೇಖಕನನ್ನು ಕೊಲ್ಲಬೇಕು ಎಂಬ ಹೇಳಿಕೆಗಳು ಹೊರಡುತ್ತಿವೆ. ಈ ಹೇಳಿಕೆಗಳನ್ನು ಕೆಲವು (ಎಲ್ಲರೂ ಅಲ್ಲ) ಲಿಂಗಾಯತ ರಾಜಕಾರಣಿಗಳು ಹಾಗೂ ಮಠಾಧೀಶರು ಕೊಡುತ್ತಿದ್ದಾರೆ.

ಈ ಹೇಳಿಕೆಗಳಿಗೆ ಒಂದು ಕಾರಣ ಹಿಂದೆ 'ಧರ್ಮಕಾರಣ'ವನ್ನು ಸರ್ಕಾರ ನಿಷೇಧಿಸಿದ್ದು ಸರಿಯೆಂದು ಸುಪ್ರೀಂಕೋರ್ಟು ಈಚೆಗೆ ತೀರ್ಪು ಕೊಟ್ಟಿರುವುದು. ನಿಷೇಧಕ್ಕೆ ಒತ್ತಾಯ ಮಾಡುತ್ತಿರುವವರಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದ ಶ್ರೀ ಪಾಟೀಲ ಪುಟ್ಟಪ್ಪನವರಂತಹ ಹಿರಿಯ ಪತ್ರಕರ್ತರೂ ಸೇರಿರುವುದು ಸೋಜಿಗ. ಆದರೆ ಕೃತಿಯನ್ನು ಅದರ ವಿಚಾರಗಳಿಗಾಗಿ ನಿಷೇಧಿಸುವುದು ಸರಿಯಲ್ಲವೆಂದೂ, ವಿಚಾರವನ್ನು ವಿಚಾರದಿಂದಲೇ ಎದುರಿಸಬೇಕೆಂದೂ, ಈ ವಿಷಯದಲ್ಲಿ ಮತ್ತಷ್ಟು ಚಿಂತನೆ ಸಂಶೋಧನೆ ನಡೆಯುವ ಅಗತ್ಯ ಇದೆಯೆಂದೂ ಪ್ರಜ್ಞಾವಂತರಿಂದ ಪ್ರತಿಕ್ರಿಯೆಗಳೂ ಬರುತ್ತಿವೆ. ಬಂಜಗೆರೆಯವರ ಕೃತಿಯಲ್ಲಿರುವ ವಿಚಾರಗಳ ಬಗ್ಗೆ ಸಮ್ಮತಿ ಇಲ್ಲದವರೂ, ಬಂಜಗೆರೆಯವರಿಗೆ ಈ ದಿಸೆಯಲ್ಲಿ ಚಿಂತನೆ ಮಾಡಲು ಮತ್ತು ಪ್ರಕಟ ಮಾಡಲು ಹಕ್ಕಿದೆಯೆಂದೂ ಹೇಳುತ್ತಿದ್ದಾರೆ. ಆದರೂ ವಾಗ್ವಾದವು ಆರಂಭವಾಗುವ ಬದಲು ವಿವಾದವೇ ಬೆಳೆಯುತ್ತಿದೆ. ಸಾಹಿತ್ಯ ಪರಿಷತ್ತಿನಲ್ಲಿ ಈ ಕೃತಿ ಕುರಿತು ಏರ್ಪಾಟಾದ ಸಂವಾದ ಕಾರ್ಯಕ್ರಮದಲ್ಲಿ ದಯಾನಂದ ಸ್ವಾಮಿಯವರು, ರೌಡಿಯಂತೆ ವರ್ತನೆ ಮಾಡಿ ಆರ್.ಜಿ. ಹಳ್ಳಿನಾಗರಾಜ ಅವರ ಮೇಲೆ ದೈಹಿಕ ಹಲ್ಲೆ ಮಾಡಿದ ಕೆಟ್ಟ ವಿದ್ಯಮಾನವು ಇದರ ಒಂದು ಸೂಚನೆಯಾಗಿದೆ. ಇದು ಖಂಡನಾರ್ಹ ಮತ್ತು ದುರದೃಷ್ಟಕರ ಸಂಗತಿ. ಇಂತಹ ಸನ್ನಿವೇಶದಲ್ಲಿ ಧರ್ಮ, ಸಾಹಿತ್ಯ ಸಂಸ್ಕೃತಿ ಕುರಿತ ಸೂಕ್ಷ್ಮ ಸಂವೇದನೆಯುಳ್ಳ ಸಂವಾದ ಬಯಸುವ ವ್ಯಕ್ತಿಗಳು ಮೌನವಹಿಸಿದರೆ ಸಂವಾದಕ್ಕೆ ಬದಲಾಗಿ ಬಲಪ್ರದರ್ಶನದ ಮಾದರಿಗಳೇ ಗೆಲ್ಲುವ ಅಪಾಯವಿದೆ.

ಈ ಮೇಲೆ ಉಲ್ಲೇಖಿಸಿದ ಕಲಬುರ್ಗಿ, ಶಿವಪ್ರಕಾಶ್, 'ಸಂಕ್ರಾಂತಿ' ನಾಟಕದ ಲಂಕೇಶ್, ಪಿ. ವಿ. ನಾರಾಯಣ, ಬಂಜಗೆರೆ– ಇವರಲ್ಲಿ ಯಾರೂ ತಮ್ಮ ಲೇಖನ–ಕೃತಿಗಳನ್ನು ಜನರ ಧಾರ್ಮಿಕ ಭಾವನೆಗಳ ಜತೆ ಚೆಲ್ಲಾಟವಾಡಲು ಬರೆದವರಲ್ಲ. ಬದಲಾಗಿ ೧೨ನೇ ಶತಮಾನದ ಶರಣ ಚಳುವಳಿಯನ್ನು ಕರ್ನಾಟಕದ ಜನಪರ ಚಳುವಳಿಗಳಲ್ಲಿ ಒಂದೆಂದೂ ಬಸವಣ್ಣನು ನಾಡಿನ ಮುಖ್ಯ ಸಾಂಸ್ಕೃತಿಕ ನಾಯಕರಲ್ಲಿ ಒಬ್ಬನೆಂದೂ ನಂಬಿದವರು. ನಮ್ಮ ನಾಡಿನ ಮುಖ್ಯ ಲೇಖಕರಾದ ಇವರು ಶರಣ ಚಳುವಳಿಯನ್ನು ಹಾಗೂ ಶರಣರನ್ನು ಕುರಿತು ಇರುವ ಸಾಂಪ್ರದಾಯಕ ನಂಬಿಕೆ ವಿಚಾರಗಳ ಆಚೆ ಹೋಗಿ ನೋಡಲು ಯತ್ನಿಸಿದವರು. ಶಿವಪ್ರಕಾಶ್, ಲಂಕೇಶ್, ಬಂಜಗೆರೆ ಇವರು ಸಮಕಾಲೀನ ವಿಚಾರಗಳ ಮೂಲಕ ವಿಮರ್ಶಾತ್ಮಕವಾಗಿಯೂ ಭಿನ್ನವಾಗಿಯೂ ನೋಡಿದವರು. (ಈ ಮಾತನ್ನು 'ಚಿಕವೀರರಾಜೇಂದ್ರ'ದ ವಿವಾದದ ಬಳಿಕ 'ಚೋರಬಸವನಚರಿತೆ'ಯನ್ನು ಉದ್ದೇಶಪೂರ್ವಕವಾಗಿ ಸಂಪಾದಿಸಿ ಪ್ರಕಟಿಸಿದ ಮಾಸ್ತಿಯವರನ್ನು ಕುರಿತು ಹೇಳಲು ಬರುವುದಿಲ್ಲ.) 'ಆನುದೇವಾ' ಕೂಡ ೧೨ನೇ ಶತಮಾನದ ಚಳುವಳಿಯ ಬಗ್ಗೆ, ಶರಣ ಚಳುವಳಿಯ ಸಾಂಸ್ಕೃತಿಕ ಮಹತ್ವದ ಬಗ್ಗೆ ಅರಿವು ಹಾಗೂ ಆದರದಿಂದ ಹುಟ್ಟಿದ ಕೃತಿ; ಇದು ವಚನ ಸಾಹಿತ್ಯವನ್ನು ಜಾತ್ಯತೀತ ನೆಲೆಯಲ್ಲಿ ಅಭ್ಯಾಸ ಮಾಡಿದ ಎಲ್ಲರಿಗೂ ಮನವರಿಕೆ ಆಗುತ್ತದೆ.

ಕರ್ನಾಟಕದ ಲಿಂಗಾಯತರ ಒಂದು ದೊಡ್ಡ ಸಮುದಾಯಕ್ಕೂ ಬಸವಣ್ಣನಿಗೂ ಇರುವ ಧಾರ್ಮಿಕ ಸಂಬಂಧವು ಆಳವಾದುದು. ಆದರೆ ಬಸವಣ್ಣ ಲಿಂಗಾಯತ ಮತ ಜಾತಿಯ ಆಚೆ ಇರುವ ಹಲವಾರು ಜನರ ಪ್ರೀತಿಗೂ ಆದರಕ್ಕೂ ಪಾತ್ರನಾಗಿರುವ ವ್ಯಕ್ತಿತ್ವ. ಇದಕ್ಕೆ ಕಾರಣ, ಅವನೊಬ್ಬ ಕವಿಯಾಗಿರುವುದು; ಕೆಳಜಾತಿಗಳ ಮೇಲುಚಲನೆಯ ಪರವಾದ ನಿಲುವನ್ನು ತಳೆದಿದ್ದು; ವೈದಿಕ ಪುರೋಹಿತಶಾಹಿಯನ್ನು ನಿರಾಕರಿಸಿದ್ದು; ಅವನ ವಿನಯ ಹಾಗೂ ಮಾತೃತ್ವದ ಮನಸ್ಸು, ಕರ್ನಾಟಕದಲ್ಲೇ ಹುಟ್ಟಿದ ಮಧ್ವಾಚಾರ್ಯರಾಗಲಿ, ಕರ್ನಾಟಕದಲ್ಲಿ ಕೆಲವು ಕಾಲವಿದ್ದ ಶಂಕರಚಾರ್ಯ ರಾಮಾನುಜಚಾರ್ಯರಿಗಾಗಲಿ, ಈ ಬಗ್ಗೆ ವ್ಯಾಪಕ ಸ್ವೀಕೃತಿ ಕನ್ನಡದ ಚಿಂತಕರಿಂದ ಚಳುವಳಿಗಳಿಂದ ಸಿಕ್ಕಿಲ್ಲ. ರಂ.ರಾ ದಿವಾಕರ, ಎಂ.ಆರ್. ಶ್ರೀನಿವಾಸಮೂರ್ತಿ, ಅನಕೃ, ಕುವೆಂಪು, ರಂಜಾನ್ ದರ್ಗಾ, ಎಂ. ಜೀವನ, ದೇವನೂರ ಮಹಾದೇವ, ಗೋವಿಂದಯ್ಯ, ಕೆ. ರಾಮಯ್ಯ, ಬರಗೂರು, ಸಿದ್ಧಲಿಂಗಯ್ಯ, ಕಿ.ರಂ. ನಾಗರಾಜ, ಯು. ಆರ್. ಅನಂತಮೂರ್ತಿ, ಜಿ. ರಾಜಶೇಖರ, ಪಿ.ವಿ ನಾರಾಯಣ, ಸುಧಾಕರ, ದೇಜಗೌ, ಎಕೆ ರಾಮಾನುಜನ್, ಎಂ.ಜಿ. ಕೃಷ್ಣಮೂರ್ತಿ–ಇವರನ್ನು ಒಳಗೊಂಡಂತೆ ಬಸವಣ್ಣನ ಮೇಲೆ ಚಿಂತನೆ ಮಾಡಿದ ನೂರಾರು ಜನರಲ್ಲಿ ಯಾರೂ ಲಿಂಗಾಯತರಲ್ಲ. ಆದರೆ ಬಸವಣ್ಣನ ಮೇಲೆ ಆದರ ಪ್ರೀತಿ ಉಳ್ಳವರು.

ಆದ್ದರಿಂದ ಬಸವಣ್ಣನ ಪ್ರಶ್ನೆಯು ಕರ್ನಾಟಕದಲ್ಲಿ ಲಿಂಗಾಯತರಿಗೆ ಮಾತ್ರ ಸಂಬಂಧಪಟ್ಟಿದ್ದಲ್ಲ. ಬಸವಣ್ಣನನ್ನು ಜಾತಿಯ ಕಾರಣಕ್ಕಲ್ಲದೆ ತತ್ವದ ಕಾರಣದಿಂದ ಆದರಿಸುವವರ ಶ್ರದ್ಧೆಯು ನಿಜವಾಗಿ ದೊಡ್ಡದು. ಇವರಿಗೆ ಇಬ್ಬರು ದಲಿತ ಶರಣರ ಮನೆಯ ದಾಸರ ಮಕ್ಕಳು ಬೆರಣಿ ಆರಿಸಲು ಹೋಗಿ ಸಂಗಮಾಡಿದಾಗ ತಾನು ಹುಟ್ಟಿದೆ ಎಂದು ಹೇಳಿಕೊಳ್ಳುವ ಬಸವಣ್ಣ ದಲಿತ ಮೂಲದವನು ಎಂದು ಸಾಬೀತಾದರೆ ಸಂತೋಷವಾಗುತ್ತದೆ. ಸಾಬೀತಾಗದಿದ್ದರೆ ದುಗುಡವಾಗುವುದಿಲ್ಲ. ಬಸವಣ್ಣನ ಚಿಂತನೆಗಳ ಅರ್ಥಪೂರ್ಣ ವಿಸ್ತರಣೆಯು, ಅವನ ಹೆಸರನ್ನು ಕಟ್ಟಡಗಳಿಗೆ, ರಸ್ತೆಗಳಿಗೆ, ಸರ್ಕಲ್ಲುಗಳಿಗೆ ಇಡುವ, ಅಶ್ವಾರೂಢ ಪ್ರತಿಮೆಗಳನ್ನು ಸ್ಥಾಪನೆ ಮಾಡುವವರಿಗಿಂತಲೂ, ಅವನ

ಬಸವಣ್ಣನು ಧಾರ್ಮಿಕ ಕಾರಣದಿಂದ ಲಿಂಗಾಯತರಿಗೆ ಪವಿತ್ರ ಹೆಸರಾಗಿದ್ದರೂ, ಅವನ ಚಿಂತನೆಗಳಿಗೆ ವ್ಯತಿರಿಕ್ತವಾದ ಕೆಲಸಗಳಲ್ಲಿ ತೊಡಗಿ, ಅವನನ್ನು ಅಪಮಾನಿಸುವ ಶಕ್ತಿಗಳು ವೀರಶೈವ ಎನ್ನಲಾಗುವ ಸಮುದಾಯದಲ್ಲೇ ನಿರಂತರಾಗಿ ನಿರತವಾಗಿವೆ. ಅವೆಂದರೆ- ೧. ಪಂಚಾಚಾರ್ಯ ಪರಂಪರೆಗೆ ಸೇರಿದವರು. ಇವರು ಬಸವಣ್ಣನನ್ನು ಎಷ್ಟು ದ್ವೇಷ ಮಾಡುತ್ತಾರೆ ಎಂದರೆ, ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ಭೀಮಕವಿಯ 'ಬಸವಪುರಾಣ'ವನ್ನು ಸುಟ್ಟುಹಾಕಲಾಗಿತ್ತು. ಈ ಸಂಗತಿಯನ್ನು ಮುದೇನೂರ ಸಂಗಣ್ಣನವರು ನನಗೆ ತಮ್ಮ ಸಂದರ್ಶನದಲ್ಲಿ ಹೇಳಿದರು. ಈಗಲೂ ಇವರು ಬಸವಣ್ಣನ ಮಹತ್ವವನ್ನು ಕಡಿಮೆ ಮಾಡುವ ಯಾವ ಅವಕಾಶವನ್ನೂ ಕಳೆದುಕೊಳ್ಳುವುದಿಲ್ಲ. ಅವನ ವಚನಗಳನ್ನು ಹೇಳುವುದಿಲ್ಲ. ಬಸವಣ್ಣ ದಲಿತ ಮೂಲದವನು ಎಂಬ ಸಂಗತಿಗೆ ಇವರು ಮೌನವಾಗಿರುವುದು ಮಾರ್ಮಿಕವಾಗಿದೆ.

ವಚನಗಳ ವಿಮರ್ಶಾತ್ಮಕವಾಗಿ ಅನುಸಂಧಾನ ಮಾಡುವವರಿಂದ ನಡೆದಿದೆ.

ಬಸವಣ್ಣನು ಧಾರ್ಮಿಕ ಕಾರಣದಿಂದ ಲಿಂಗಾಯತರಿಗೆ ಪವಿತ್ರ ಹೆಸರಾಗಿದ್ದರೂ, ಅವನ ಚಿಂತನೆಗಳಿಗೆ ವ್ಯತಿರಿಕ್ತವಾದ ಕೆಲಸಗಳಲ್ಲಿ ತೊಡಗಿ, ಅವನನ್ನು ಅಪಮಾನಿಸುವ ಶಕ್ತಿಗಳು ವೀರಶೈವ ಎನ್ನಲಾಗುವ ಸಮುದಾಯದಲ್ಲೇ ನಿರಂತರಾಗಿ ನಿರತವಾಗಿವೆ. ಅವೆಂದರೆ–

೧. ಪಂಚಾಚಾರ್ಯ ಪರಂಪರೆಗೆ ಸೇರಿದವರು. ಇವರು ಬಸವಣ್ಣನನ್ನು ಎಷ್ಟು ದ್ವೇಷ ಮಾಡುತ್ತಾರೆ ಎಂದರೆ, ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ಭೀಮಕವಿಯ 'ಬಸವಪುರಾಣ'ವನ್ನು ಸುಟ್ಟುಹಾಕಲಾಗಿತ್ತು.

ಈ ಸಂಗತಿಯನ್ನು ಮುದೇನೂರ ಸಂಗಣ್ಣನವರು ನನಗೆ ತಮ್ಮ ಸಂದರ್ಶನದಲ್ಲಿ ಹೇಳಿದರು. ಈಗಲೂ ಇವರು ಬಸವಣ್ಣನ ಮಹತ್ವವನ್ನು ಕಡಿಮೆ ಮಾಡುವ ಯಾವ ಅವಕಾಶವನ್ನೂ ಕಳೆದುಕೊಳ್ಳುವುದಿಲ್ಲ. ಅವನ ವಚನಗಳನ್ನು ಹೇಳುವುದಿಲ್ಲ. ಬಸವಣ್ಣ ದಲಿತ ಮೂಲದವನು ಎಂಬ ಸಂಗತಿಗೆ ಇವರು ಮೌನವಾಗಿರುವುದು ಮಾರ್ಮಿಕವಾಗಿದೆ. ಇದರಿಂದ ಬಸವಣ್ಣನನ್ನು ಧಾರ್ಮಿಕ ನಾಯಕತ್ವದ ಜಾಗದಿಂದ ಸರಿಸುವುದು ಹಾಗೂ ತಮ್ಮ ಪುರೋಹಿತಶಾಹಿ ವೈದಿಕ ಸಂಸ್ಕೃತಿಯನ್ನು ಜನರ ಮೇಲೆ ಹೇರುವುದು ಮತ್ತಷ್ಟು ಸಲೀಸಾಗುತ್ತದೆ ಎಂದು ಅವರಿಗೆ ಅನಿಸಿರಬಹುದು.

೨. ಸಂಘಪರಿವಾರದವರು ಹಾಗೂ ವೈದಿಕ ಸನಾತನವಾದಿಗಳು. ಕರ್ನಾಟಕದಲ್ಲಿ ತನ್ನ ರಾಜಕೀಯ ನೆಲೆಯ ವಿಸ್ತರಣೆಗೆ ಲಿಂಗಾಯತರನ್ನು ಅವಲಂಬಿಸಿರುವ ಸಂಘಪರಿವಾರವು, ತಾತ್ವಿಕವಾಗಿ ವೈದಿಕ ಬ್ರಾಹ್ಮಣವಾದ, ಬ್ರಾಹ್ಮಣಪುರೋಹಿತಶಾಹಿ, ಸಂಸ್ಕೃತದ ಯಾಜಮಾನ್ಯಗಳನ್ನು ನಿರಾಕರಿಸಿದ ಬಸವಣ್ಣನನ್ನು ಆಳದಲ್ಲಿ ದ್ವೇಷಿಸುತ್ತದೆ. ಆದರೆ ಗೋಳ್ವಾಳ್ಕರರ ಜನ್ಮಶತಮಾನದ ಬ್ಯಾನರಿನಲ್ಲಿ ಬಸವಣ್ಣನನ್ನು ಅದು ಯುದ್ಧತಂತ್ರದಿಂದ ಬಳಸಿತು. ಈ ಬ್ಯಾನರನ್ನು ಕಟ್ಟಿಕೊಂಡು ಬಸವ ಪರಂಪರೆಯ ಕೆಲವು ಲಿಂಗಾಯತ ಮಠಗಳು ಹಿಂದೂ ಸಮಾಜೋತ್ಸವ ಕಾರ್ಯಕ್ರಮಗಳನ್ನೂ ಮಾಡಿದವು. ಜೇವರ್ಗಿ ತಾಲೂಕಿನ ಆಂದೋಲದಲ್ಲಿರುವ ಮಠ ಹಾಗೂ ಹುಬ್ಬಳ್ಳಿಯ ಮೂರುಸಾವಿರ ಮಠಗಳು ಬಸವತತ್ವ ವಿರೋಧಿಯಾದ ಸಂಘಪರಿವಾರವನ್ನು ಪೊರೆವ ತೊಟ್ಟಿಲುಗಳಾಗಿವೆ. ಇದರಲ್ಲಿ ಜಾತಿಮತ ನೋಡದೆ ಎಲ್ಲ ಬಡಮಕ್ಕಳಿಗೆ ಮುದ್ದೆಯಿಟ್ಟು ವಿದ್ಯೆ ಕೊಟ್ಟ ತಾಯಿಹೃದಯದ ಸಿದ್ಧಗಂಗೆಯ ಸ್ವಾಮಿಯವರು ಇರುವ ಮಠವೂ ಸೇರಿದ್ದು ವಿಷಾದದ ಸಂಗತಿ.

೩. ಬಸವಣ್ಣನ ಚಿಂತನೆಗೆ ಬಹಳ ದೊಡ್ಡ ವೈರುಧ್ಯ ಸೃಷ್ಟಿ ಮಾಡಿರುವವರು ಸಂಘಪರಿವಾರದಲ್ಲಿ ಗುರುತಿಸಿಕೊಂಡಿರುವ ಲಿಂಗಾಯತ ರಾಜಕಾರಣಿಗಳು. ಕರ್ನಾಟಕದಲ್ಲಿ ಇವತ್ತು ತಮ್ಮ ರಾಜಕೀಯ ಪಾಲಿಗಾಗಿ ಬಸವಣ್ಣನಿಗೆ ತೀರ ವಿರುದ್ಧ ನೆಲೆಯಲ್ಲಿರುವ ವೈದಿಕಶಾಹಿಯ ಸಂಘಪರಿವಾರವನ್ನು ಇವರು ಪರೋಕ್ಷವಾಗಿ ಪೋಷಿಸುತ್ತಿದ್ದಾರೆ. ಜಾತಿಕಟ್ಟುವ ಸಂಸ್ಕೃತಿಯನ್ನು ವಿರೋಧಿಸಿದ ಬಸವಣ್ಣನ ಮೂಲ ಆಶಯಕ್ಕೆ ವಿರುದ್ಧವಾಗಿ ಬ್ರಾಹ್ಮಣವಾದಿಯೂ ಗುಡಿಸಂಸ್ಕೃತಿಯನ್ನು ಪುನರುಜ್ಜೀವಿಸುತ್ತಿದ್ದಾರೆ;

ಹೀಗೆ ಹಲವಾರು ಬಗೆಯಲ್ಲಿ ಬಸವತತ್ವಕ್ಕೆ ಆಗುತ್ತಿರುವ ಅನ್ಯಾಯವನ್ನು ಸಹಿಸಿಕೊಂಡಿರುವವರು, ತನ್ನನ್ನು [illegible] ಮನೆಯ ಮಗ ಎಂದು ಕರೆದುಕೊಂಡ ಬಸವಣ್ಣ



ಪ್ರೊ॥ ರಹಮತ್ ತರೀಕೆರೆ

ನನ್ನು, ಅವನು ಹುಟ್ಟಿನಿಂದಲೂ ದಲಿತನಾಗಿರಬಹುದೇ ಎಂಬ 'ಅನುಮಾನಿತ ಸತ್ಯ'ವನ್ನು ಅನೇಕ ಆಧಾರಗಳ ಮೂಲಕ, ವಿನಯದಿಂದ ಸಾಂಸ್ಕೃತಿಕ ಹೊಣೆಗಾರಿಕೆಯಿಂದ ಮಂಡಿಸಿರುವ ಆನುದೇವ ಕೃತಿಯನ್ನು ಬಸವವಿರೋಧಿ ಎನ್ನುತ್ತಿರುವುದು ಆಶ್ಚರ್ಯಕರವಾಗಿದೆ. ಬಸವಣ್ಣನನ್ನು ಭಾವುಕವಾಗಿ ಮಾತ್ರ ಗ್ರಹಿಸುವ ಮುಗ್ಧಜನರ ಸಿಟ್ಟನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಈ ಕೃತಿಯನ್ನು ಓದದೆ, ಓದಿದರೆ ಅರ್ಥವಾಗದೆ, ಅರ್ಥವಾದರೂ ಸಂವಾದಕ್ಕೆ ಬರುವ ಬದಲು ಪ್ರಕ್ಷುಬ್ಧತೆಯನ್ನು ಹುಟ್ಟಿಸುತ್ತಿರುವವರನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಾಗಿದೆ. ದೊಡ್ಡ ಸಂಖ್ಯೆಯ ವಿಚಾರವಂತರೂ ಸಂಶೋಧಕರೂ ಇರುವ ಲಿಂಗಾಯತ ಸಮಾಜಕ್ಕೆ ಚರ್ಚೆಯ ವಾತಾವರಣವನ್ನು ಉಂಟುಮಾಡುವ ಶಕ್ತಿಯಿದೆ ಎಂದು ನನಗೆ ಅನಿಸುತ್ತದೆ.

ಪ್ರಶ್ನೆಯೆಂದರೆ, ಲಿಂಗಾಯತ ಧರ್ಮಕ್ಕೆ ಸಂಬಂಧಪಟ್ಟಂತಹ ಕೃತಿಗಳ ಬಗ್ಗೆಯೇ ಹೆಚ್ಚು ವಿವಾದ ಯಾಕೆ ಸೃಷ್ಟಿಯಾಗುತ್ತಿದೆ? ತಾತ್ವಿಕವಾಗಿ ನೋಡಿದರೆ ಕರ್ನಾಟಕದ ಧರ್ಮಗಳಲ್ಲೇ ಲಿಂಗಾಯತವು ಅತ್ಯಂತ ಆಧುನಿಕ ಹಾಗೂ ಪ್ರಗತಿಪರ ಆಯಾಮವನ್ನು ಹೊಂದಿರುವ ಧರ್ಮ. ಭಾರತದಲ್ಲಿ ಬೌದ್ಧವನ್ನು ಬಿಟ್ಟರೆ ಬಸವಣ್ಣ ಅಲ್ಲಮ ಅಕ್ಕ ಸಿದ್ಧರಾಮ ಕಾಳವ್ವೆ ಅಕ್ಕಮ್ಮ ಮೊದಲಾದ ವಿಚಾರವಂತ ಮನಸ್ಸಿನ ಚಿಂತಕರನ್ನು ತನ್ನ ಪ್ರಥಮರನ್ನಾಗಿ ಹೊಂದಿರುವ ಧರ್ಮ. ವಚನ ಚಳುವಳಿಯನ್ನು ನೋಡಿದರೆ, ಬಹಳ ತೀಕ್ಷ್ಣವಾದ ತಾತ್ವಿಕ ಭಿನ್ನತೆಯ ಪ್ರಶ್ನೆಗಳನ್ನು ಎತ್ತಿ ಮಥನ ಮಾಡಿರುವ ಪರಂಪರೆ ಇದಕ್ಕಿದೆ. ಕರ್ನಾಟಕದ ಚಿಂತನೆಯ ಮೇಲೆ ಪ್ರಭಾವ ಬೀರಿರುವ ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್, ಕುವೆಂಪು– ಮುಂತಾದ ಜೀವಪರ ಚಿಂತಕರ ಜತೆ ಬಸವಣ್ಣ ಅಲ್ಲಮ ಪ್ರಭು ದಾಸಿಮಯ್ಯ ಕೂಡ ಅಭಿನ್ನವಾಗಿ ಸೇರಿಕೊಂಡಿರುವರು; ಇದರಿಂದಲೇ ಕರ್ನಾಟಕದ ರೈತಮುಖಂಡರೂ, ಹಿರಿಯರೂ ಬಸವವಾದಿಯೂ ಆಗಿರುವ ಚೆನ್ನಬಸಪ್ಪ ಬೆಟದೂರು ಅವರು (ಅಲ್ಲಮಪ್ರಭು ಬೆಟದೂರು ಅವರ ತಂದೆಯವರು) ಬಸವಣ್ಣ ದಲಿತನೆಂದಾದರೆ, ಯಾಕಿಷ್ಟು ವ್ಯಥೆಯಾಗಬೇಕು ಎಂಬ ಮಾತನ್ನಾಡಲು ಸಾಧ್ಯವಾಗಿದ್ದು. ಕೆ. ಮರುಳಸಿದ್ಧಪ್ಪ, ಚಂದ್ರಶೇಖರತಾಳ್ಯ, ಚಂಪಾ, ಲಿಂಗದೇವರು ಮುಂತಾದವರು ಸಂವಾದ ಮಾಡುವ ಸಾಧ್ಯತೆಯ ಮಾತನ್ನಾಡಲು ಸಾಧ್ಯವಾಗಿದ್ದು; ಶರಣ ಚಳುವಳಿಯ ವೈಚಾರಿಕ ಹಿನ್ನೆಲೆಯುಳ್ಳ ಎಲ್ಲರಲ್ಲೂ ಸಂವಾದ ಮಾಡುವುದು ಒಂದು ದೊಡ್ಡ ಮೌಲ್ಯವಾಗಿದೆ.

ಆದರೂ ಸಂವಾದ ಚರ್ಚೆ ಯಾಕೆ ಸಾಧ್ಯವಾಗುತ್ತಿಲ್ಲ? ವಿವಾದದ ಸಮಸ್ಯೆಯ ಮೂಲಕವು ಇದನ್ನು ಕುರಿತು ಬರುತ್ತಿರುವ ಸಂಶೋಧನ ಬರೆಹ ಅಥವಾ ಕೃತಿಗಳಲ್ಲಿರುವ ದುಡುಕು ಅಥವಾ ಪೂರ್ವಗ್ರಹಗಳಲ್ಲಿದೆಯೊ? ಲಿಂಗಾಯತ ಧರ್ಮದಲ್ಲಿದೆಯೊ? ಸಮಕಾಲೀನ ಲಿಂಗಾಯತ ಸಮುದಾಯದ ಭಾವಾವೇಶ ಮತಾಂಧತೆಯಲ್ಲಿದೆಯೊ? ಅಥವಾ ಈ ವಿವಾದವು ಹುಟ್ಟಿಕೊಂಡಿರುವ ಸಮಕಾಲೀನ ಸಾಮಾಜಿಕ ರಾಜಕೀಯ ಸನ್ನಿವೇಶದಲ್ಲಿದೆಯೊ? ಭಾರತದಂತಹ ಬಹುಭಾಷಿಕ ಬಹುಧಾರ್ಮಿಕ ಬಹುಸಾಂಸ್ಕೃತಿಕ ಜಾತಿಪದ್ಧತಿಯಿರುವ ಲಿಂಗತಾರತಮ್ಯ ಇರುವ ಸಮಾಜದಲ್ಲಿ; ಬೇರೆಬೇರೆ ಹಿತಾಸಕ್ತಿಗಳು ರಾಜಕೀಯ ನಿಲುವುಗಳು ಕ್ರಿಯಾಶೀಲವಾಗಿರುವ ಸಮಾಜದಲ್ಲಿ, ಸಮುದಾಯಗಳ ನಡುವೆ ಸಂಘರ್ಷಕ್ಕೆ ಕಾರಣವಾಗುವ ವಿದ್ಯಮಾನಗಳು ಘಟಿಸುವುದು ಸಹಜ. ಆಗ ತನ್ನ ಧಾರ್ಮಿಕ ಭಾವನೆಗಳಿಗೆ ಸಾಮಾಜಿಕ ನಂಬಿಕೆಗಳಿಗೆ ಧಕ್ಕೆ ತಗುಲಿದೆ ಅನಿಸಿದಾಗ ಸಂಬಂಧಪಟ್ಟ ಸಮುದಾಯಗಳು ಪ್ರತಿಭಟಿಸುವುದು ಅವುಗಳ ಪ್ರಜಾಸತ್ತಾತ್ಮಕ ಹಕ್ಕು.

ತಮ್ಮ ಜನಾಂಗದವರನ್ನು ಹೀನಾಯವಾಗಿ ಚಿತ್ರಿಸಲಾಗಿದೆ ಎಂದು ಪಠ್ಯಪುಸ್ತಕ ಪಾಠಕ್ಕೊ, ಯಕ್ಷಗಾನಕ್ಕೊ, ನಾಟಕ ಅಥವಾ ಸಿನಿಮಾ ಕುರಿತೊ ಕರ್ನಾಟಕದಲ್ಲಿ ಇಂತಹ ಪ್ರತಿಭಟನೆಗಳು ನಡೆದಿವೆ. ಸಮಸ್ಯೆಯೆಂದರೆ ಇಂತಹ ವಿವಾದ ಎದ್ದಾಗ, ಕೃತಿಯ ಲೇಖಕರೂ ಅವರ ವಿಚಾರಗಳ ಬೆಂಬಲಿಗರೂ ಮತ್ತು ಕೃತಿಯನ್ನು ವಿರೋಧಿಸುವವರು ಅವರ ಬೆಂಬಲಿಗರು ಮಾಡುವ ಜಂಗಿಕುಸ್ತಿಯನ್ನಾಗಿ ಮಾತ್ರ ನೋಡಲಾಗುತ್ತದೆ. ಈ ಕದನದಲ್ಲಿ ತೆರೆಮರೆಯಲ್ಲಿದ್ದು ಪಾತ್ರಮಾಡುವ ಶಕ್ತಿಗಳನ್ನು ನಾವು ಸಾಮಾನ್ಯವಾಗಿ ಪರಿಗಣಿಸುವುದಿಲ್ಲ. ಆದ್ದರಿಂದ ಕೃತಿಯೊಂದಕ್ಕೆ ಹುಟ್ಟುವ ವಿರೋಧವನ್ನು 'ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ'ದ ಹಿನ್ನೆಲೆಯಲ್ಲಿ ಮಾತ್ರ ನೋಡುವುದು ಸೀಮಿತ ವೈಚಾರಿಕ ದೃಷ್ಟಿಕೋನವಾಗಿದೆ. ಈ ದೃಷ್ಟಿಕೋನಕ್ಕೆ ತಮಗೆ ನೋವಾಗಿದೆ ಎಂದು ಪ್ರತಿಭಟಿಸುವವರ ಕಷ್ಟ ಮತ್ತು ಸಿಟ್ಟು ಕೆಲವೊಮ್ಮೆ ದಕ್ಕುವುದಿಲ್ಲ; ತೆರೆಮರೆಯ ಪಾತ್ರಧಾರಿ ಕಾರಣಗಳನ್ನು ಗುರುತಿಸಿ ವಿಶ್ಲೇಷಿಸಲೂ ಆಗುವುದಿಲ್ಲ. ನನಗೆ ತಿಳಿದಂತೆ ಈ ವಿವಾದದಲ್ಲಿ ಈ ಕೆಲವು ಸಂಗತಿಗಳು ನಿರತವಾಗಿವೆ.

ಮೊದಲನೆಯದಾಗಿ–ಕೃತಿಯೊಂದು ತಮ್ಮ ಧರ್ಮಕ್ಕೊ ಧಾರ್ಮಿಕ ನಾಯಕರಿಗೊ ಅಪಮಾನ ಮಾಡಿದೆ ಎಂದು ತಿಳಿದು ಕೆರಳುವ ಸಮುದಾಯವು, ಪ್ರತಿಭಟನೆಗೆ ಇಳಿಯಲು ಕಾರಣ, ಬಹಳ ಸಲ ಅದರ ಮುಗ್ಧತೆ ಮತ್ತು ಭಾವುಕತೆಯೇ ಆಗಿರುತ್ತದೆ. ಕೃತಿಯನ್ನು ಅನುಸಂಧಾನ ಮಾಡಿ ಅದರ ಜತೆ ಬೌದ್ಧಿಕ ತಾತ್ವಿಕ ವಾಗ್ವಾದ ಆಗದೆ ಹೋಗಿರುತ್ತದೆ. ಬಹಳ ಸಲ ಈ ಪ್ರತಿಭಟನೆಗಳು ಭಾವನೆಗಳು ಘಾಸಿಯಾದ ಕಾರಣದಿಂದ ನಡೆಯುವುದಿಲ್ಲ. ಇಂತಹ ಭಾವನಾತ್ಮಕ ಅವಕಾಶ ಉಪಯೋಗಿಸಿಕೊಂಡು, ಆಯಾ ಸಮುದಾಯಗಳಲ್ಲಿ ಇರುವ ಕೆಲವು ವ್ಯಕ್ತಿ ಮತ್ತು ಸಂಘಟನೆಗಳು, ಸಮುದಾಯದ ನಾಯಕತ್ವ ಪಡೆದುಕೊಳ್ಳಲು ಯತ್ನಿಸುತ್ತವೆ. ('ಮಹಮ್ಮದ್ ದಿ ಈಡಿಯಟ್'ಗೆ

ಮುಸ್ಲಿಮರಿಂದ ಬಂದ ಪ್ರತಿಭಟನೆಯಲ್ಲಿ ಈ ಸಂಗತಿ ವ್ಯಕ್ತವಾಯಿತು. ಆ ಕತೆ ಮಹಮ್ಮದ್ ಮೇಲೆ ಅಗೌರವ ದಿಂದಲೇ ಬರೆದ ಶಿಥಿಲ ಕತೆಯಾಗಿತ್ತು, ಅದು ಬೇರೆ ವಿಷಯ)

ಇಲ್ಲಿ ಇದಕ್ಕೆ ನಿದರ್ಶನವೆಂದರೆ-ಬಸವಣ್ಣನ ಅಂಕಿತ ಬದ ಲಿಸಿದವರೂ 'ಆನುದೇವಾ' ಕೃತಿಯನ್ನು ವಿರೋಧಿ ಸುತ್ತಿರುವುದು; 'ಲಿಂಗಾಯತ'ದ ಸೀಮಿತ ಚೌಕಟ್ಟಿನಲ್ಲೇ ಜಂಗ ಮವಲ್ಲದ ಜಾತಿಯ ಶಿಷ್ಯರಿಗೆ ದೀಕ್ಷೆಕೊಟ್ಟು ಮಠದ ಉತ್ತರಾಧಿಕಾರಿ ಮಾಡುವಂತಹ, ಬಸವಣ್ಣನ ತತ್ವಕ್ಕೆ ಹತ್ತಿರ ವಾದ 'ಜಾತ್ಯತೀತ' ಕೆಲಸ ಮಾಡಿದ ಭಾಲ್ಕಿಯ ಪಟ್ಟದ್ದೇವರು ಹಾಗೂ ಇಳಕಲ್ಲಿನ ಚಿತ್ತರಗಿ ಮಠಗಳಿಗೆ ಕೂಡ ಬಾರದ ಕೋಟಲೆ ಕೊಟ್ಟ ಸ್ಥಳೀಯ ಲಿಂಗಾಯತ ರಾಜಕಾರಣಿಗಳು 'ಆನುದೇವಾ' ಬಸವಣ್ಣನಿಗೆ ಅಪಮಾನ ಮಾಡಿದೆ ಎಂದು ಗುಟುರು ಹಾಕುತ್ತಿರುವುದು.

೨. ಎರಡನೆಯದಾಗಿ-ಇಂತಹ ವಿವಾದಗಳು ಲಿಂಗಾಯತರಲ್ಲೇ ಇರುವ ವ್ಯಕ್ತಿಗಳ ಹಾಗೂ ಒಳಪಂಗಡಗಳ ಜಗಳಗಳ ಭಾಗವಾಗಿ ಹುಟ್ಟುವುದುಂಟು. ಕಲಬುರ್ಗಿಯವರ 'ಮಾರ್ಗ'ದ ಸಂದರ್ಭದಲ್ಲಿ ಇದಾಯಿತು. ನಾನು ಜಂಗಮನಾಗಿದ್ದರೆ ಈ ವಿವಾದವು ಹುಟ್ಟುತ್ತಿರಲಿಲ್ಲ ಎಂದು ಕಲಬುರ್ಗಿಯವರು ತಮ್ಮ ಸಂದರ್ಶನದಲ್ಲಿ ಸ್ಪಷ್ಟವಾಗಿ ಹೇಳಿದರು.

೩. ಮೂರನೆಯದಾಗಿ- ಇಂತಹ ವಿವಾದಗಳಲ್ಲಿ ಕೃತಿಯ ವಿಚಾರಗಳ ಬಗ್ಗೆಯಾಗಲಿ ಸಮುದಾಯಗಳ ಭಾವನೆಗಳ ಬಗ್ಗೆಯಾಗಲಿ ತಲೆಕೆಡಿಸಿಕೊಳ್ಳದೆ, ತನ್ನ ಅಸ್ತಿತ್ವ ಜನಪ್ರಿಯತೆ ಹಾಗೂ ಫಾಯಿದೆಗಳ ಬಗ್ಗೆ ಚಿಂತಿಸಿ ಬಲ ವಿದ್ದ ಕಡೆ ಬಾಗಿಬಿಡುವ ರಾಜಕೀಯ ಪ್ರಭುತ್ವಗಳು ಹಾಗೂ ಸಾಹಿತ್ಯ ಕೃತಿಯು ಮಂಡಿಸುವ ಸಾಂಸ್ಕೃತಿಕ ಸೂಕ್ಷ್ಮಗಳನ್ನು ಅರಿಯದೆ ತೀರ್ಪುಕೊಡುವ ನ್ಯಾಯಾಲಯಗಳು ಇರುವುದು- ಇವೇ ಕೃತಿ ವಿವಾದಗಳಲ್ಲಿ ತೆರೆಮರೆಯ ಪಾತ್ರಧಾರಿಗಳು. ಇವನ್ನು ಅಥವಾ ಇಂತಹ ಇನ್ನೂ ಅನೇಕ ಅಂಶಗಳನ್ನು ಗುರುತಿಸಿ ಚರ್ಚಿಸುವ ಕೆಲಸ ಆಗಬೇಕಿದೆ. ಆಗ ಕೃತಿಯು ವಿಭಿನ್ನ ವರ್ಗಗಳ ಕ್ರಿಯಾಶೀಲತೆಗೆ ಒಂದು ನೆಪವಾಗಿರುವುದು ಗೊತ್ತಾಗುತ್ತದೆ. ಇವೆಲ್ಲದರ ಜತೆಯಲ್ಲಿ ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಕಾರಣಕ್ಕಾಗಿ ಪ್ರಾಮಾಣಿಕವಾಗಿಯೂ ನೋವನ್ನು ಅನುಭವಿಸಿರುವವರೂ ಇದ್ದಾರೆಂಬುದನ್ನು ಮರೆಯುವಂತಿಲ್ಲ.

ಬಸವಣ್ಣನಿಗೆ ಅವಮಾನ?!

ಇತ್ತೀಚೆಗೆ ಮಾಧ್ಯಮಗಳಲ್ಲಿ ಬಸವಣ್ಣನವರಿಗೆ ಅವಮಾನವಾಗಿದೆ ಮತ್ತು ಬಸವಾನುಯಾಯಿಗಳಿಗೆ ಮಾನಸಿಕ ಆಘಾತವಾಗಿದೆ ಎಂದು ಕೆಲವರು ಬೊಬ್ಬೆ ಇಡುತ್ತಿದ್ದಾರೆ, ಅದಕ್ಕೆ ಕಾರಣವಾದ ಡಾ॥ ಬಂಜಗೆರೆ ಜಯಪ್ರಕಾಶರು, 'ಆನು ದೇವಾ ಹೊರಗಣವನು...' ಎಂಬ 'ಬಸವಣ್ಣನ ಜಾತಿ ಮೂಲದ ವಿಶ್ಲೇಷಣೆಯನ್ನು ಕುರಿತ ಕೃತಿಯನ್ನು ಸರ್ಕಾರ ಬಹಿಷ್ಕರಿಸಬೇಕು ಎಂದು ಕೋಲಾಹಲವನ್ನುಂಟು ಮಾಡುತ್ತಿದ್ದಾರೆ.

ಕಾನೂನು ಮತ್ತು ಗೃಹ ಮಂತ್ರಿಗಳಾದ ಎಂ.ಪಿ. ಪ್ರಕಾಶ್ ಅವರು ಅದೊಂದು ಸಂಶೋಧನ ಕೃತಿ, ಅದರಲ್ಲಿ ಪ್ರತಿಪಾದಿಸಲಾದ ವಾದಗಳನ್ನು ಒಪ್ಪದವರು ಅದನ್ನು ಖಂಡಿಸಿ ತಮ್ಮ ವಾದಗಳನ್ನು ಬರಹ ರೂಪ ದಲ್ಲಿ ಪ್ರಕಟಿಸಬಹುದು, ಹೀಗೆ ವಾದ ಮತ್ತು ಪ್ರತಿವಾದ ಗಳನ್ನು ಸಾರ್ವಜನಿಕವಾಗಿ ವಿನಿಮಯ ಮಾಡಿಕೊಳ್ಳುವ ಅಭಿವ್ಯಕ್ತಿ ಸ್ವಾತಂತ್ರ್ಯ ಲೇಖಕರಿಗೆ ಇದೆ. ಅದನ್ನು ಸರ್ಕಾರ ಮೊಟಕು ಮಾಡುವುದಿಲ್ಲ ಎಂದು ಬಳ್ಳಾರಿಯ ಒಂದು ಸಭೆಯಲ್ಲಿ ಹೇಳಿದರು.

ಅದಕ್ಕೆ ಪ್ರತಿ ಯಾಗಿ ವಿಶ್ವಬಸವಧರ್ಮ ಮಹಾಸಭಾ, ಬಳ್ಳಾರಿ ಮತ್ತು ಬಸವ ಸಮಿತಿ ಬೆಂಗಳೂರು ಇವರು, ಪ್ರಕಾಶ್ ವಿರುದ್ಧ ತಿರುಗಿ ಬಿದ್ದು ಅವರನ್ನು ಮಂತ್ರಿ ಪದವಿಯಿಂದ ಕಿತ್ತು ಹಾಕಬೇಕು ಎಂದು ಮುಖ್ಯಮಂತ್ರಿಗಳಿಗೆ ತಾಕೀತು ಮಾಡಿದ್ದಾರೆ! ಅಷ್ಟೇ ಅಲ್ಲ ಬಳ್ಳಾರಿ ಬಂದ್, ಕರ್ನಾಟಕ ಬಂದ್, ಪ್ರಕಾಶ್ ಮತ್ತು ಕುಮಾರ ಸ್ವಾಮಿ ನಿವಾಸಗಳ ಮುಂದೆ ಧರಣಿ ಎಂಬ ಬೆದರಿಕಾ ಗಂಟೆಗಳನ್ನು ಬಾರಿಸುತ್ತಿದ್ದಾರೆ.

ಈ ಎಲ್ಲ ರಂಪಾಟವನ್ನು ದೂರದಿಂದ ನೋಡುವ ನನ್ನಂಥವರಿಗೆ ಇದೊಂದು ರೋಚಕ ಪತ್ತೇದಾರಿ ಪ್ರಹಸನದಂತೆ ಕಾಣುತ್ತಿದೆ. 'ಋಷಿಮೂಲ, ನದಿಮೂಲ ಕೇಳಬಾರದು' ಎಂಬುದು ಒಂದು ಸನಾತನ ನಾಣ್ಣುಡಿ. ಆದರೆ ನಮ್ಮ ಸಂಶೋಧಕರು, ವಿದ್ವಾಂಸರು ಎನಿಸಿಕೊಂಡವರು ಅತ್ಯಂತ ಕಾಳಜಿಯಿಂದ ಆ ಕೆಲಸವನ್ನು ಮಾಡುತ್ತಲೇ ಇದ್ದಾರೆ. ಡಾ॥ ಎಂ. ಚಿದಾನಂದಮೂರ್ತಿ, ಡಾ॥ ಎಂ. ಎಂ. ಕಲಬುರ್ಗಿ ಮುಂತಾದವರು ಈ ಕ್ಷೇತ್ರದಲ್ಲಿ ಹೊಸ ಹೊಸ ಅನ್ವೇಷಣೆಗಳನ್ನು ಬಯಲು ಮಾಡಿದಾಗ ಅವರ ವಿರುದ್ಧ ವಾಗ್ದಾಳಿಗಳೇ ಆದವು. ವಾದ, ವಿವಾದಗಳ ನಂತರ ಈಗ ಅವು ತಣ್ಣಗಾಗಿವೆ.

ಅಮೆರಿಕಾದಲ್ಲಿ ಕೆಲವು ವರ್ಷಗಳ ಹಿಂದೆ ಇಂತಹುದೇ ಒಂದು ಪ್ರಹಸನ ನಡೆದುದನ್ನು ನಾನು ಕಣ್ಣಾರೆ ಕಂಡಿದ್ದೆ. ನ್ಯೂಯಾರ್ಕಿನ ಒಂದು ಕಲಾ ಪ್ರದರ್ಶನಾಲಯದಲ್ಲಿ 'ವರ್ಜಿನ್ ಮೇರಿ' ಎಂಬ ಶೀರ್ಷಿಕೆಯ ಒಂದು ಕಲಾಕೃತಿ ಪ್ರದರ್ಶಿತವಾಗಿತ್ತು. ಯೇಸುವಿನ ಮಾತೆಯಾದ ಮೇರಿಯನ್ನು ವರ್ಜಿನ್ (ಕನ್ಯೆ) ಎಂದು ಭಾವಿಸುತ್ತಾರೆ! ಅದೊಂದು ನಗ್ನ ಚಿತ್ರವಾಗಿದ್ದು ಚಿತ್ರದ ಮೈ ಮೇಲೆ ಬೂಟಿನ ಹೆಜ್ಜೆ ಗುರುತುಗಳಿದ್ದುವು. ಮದುವೆಯಾಗದೆ ಇದ್ದ ಮೇರಿಗೆ ಮಗ ಹೇಗೆ ಜನಿಸಿದ? ಮೇರಿಯ ಕನ್ಯತ್ವವನ್ನು ಅನುಮಾನದಿಂದ ಕಂಡ ಕಲಾವಿದನ ಅಭಿವ್ಯಕ್ತಿ ಅದನ್ನು ಸೂಚಿಸುತ್ತಿದ್ದಿರಬೇಕು ಅದನ್ನು ಕಂಡ ಸಂಪ್ರದಾಯ ಶೀಲ ಕ್ರಿಶ್ಚಿಯನ್ನರು ಒಂದು ಪ್ರತಿಭಟನಾ ಮೆರವಣಿಗೆ ಮಾಡಿ ಅಂದಿನ ರಾಷ್ಟ್ರಾಧ್ಯಕ್ಷರಿಗೆ ಆ ಚಿತ್ರ ಪ್ರದರ್ಶನವನ್ನು ಬಹಿಷ್ಕರಿಸಬೇಕೆಂದು ಮನವಿ ಮಾಡಿಕೊಂಡರು, ಆಗ ಅಮೆರಿಕದ ರಾಷ್ಟ್ರಾಧ್ಯಕ್ಷರು ಪ್ರತಿಕ್ರಿಯಿಸಿದ್ದು ಹೀಗೆ: ಅದೊಂದು ಕಲಾಕೃತಿ, ಕಲಾವಿದನಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ವಿದೆ. ಅದನ್ನು ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶಿಸಿಲ್ಲ. ಪ್ರವೇಶ ಶುಲ್ಕವನ್ನು ನೀಡಿ ಪ್ರವೇಶ ಪಡೆದವರು ಮಾತ್ರ ಅದನ್ನು ನೋಡಬಹುದು. ಅದನ್ನು ಬಹಿಷ್ಕರಿಸಲಾಗುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದರು.

ಇನ್ನು ಬಸವಣ್ಣನತ್ತ ಬಂದರೆ, ಅದೇಕೆ ಅವನು ತನ್ನ ವಚನಗಳಲ್ಲಿ ಅಷ್ಟೊಂದು ಸಾರಿ ತನ್ನನ್ನ ಮಾದಿಗ, ಹೊಲೆಯ, ಡೋಹರ ಎಂದು ಕರೆದುಕೊಳ್ಳುತ್ತಾನೆ ಎಂದು ಅಚ್ಚರಿಯಾಗುತ್ತದೆ. ಬಸವಣ್ಣ, ಕಾವ್ಯಗಳಲ್ಲಿ ಹೇಳಲಾದಂತೆ ಬ್ರಾಹ್ಮಣ ಎಂಬ ಮೇಲುಜಾತಿಯಲ್ಲಿ ಹುಟ್ಟಿದವನಾದರೂ ಕೀಳೆಂದು ಪರಿಗಣಿಸಲಾದ ಮಾದಾರ ಜಾತಿಯೊಡನೆ ಭಾವನಾತ್ಮಕವಾಗಿ ತನ್ನನ್ನು ಸಮೀಕರಿಸಿಕೊಳ್ಳುವುದು ಅವನ ವಿಶಾಲ ಹೃದಯ ಮತ್ತು ಮಾನವ ಪ್ರೇಮದ ಪ್ರತೀಕವಲ್ಲವೆ? ಬಸವಣ್ಣನನ್ನು ಕುರಿತ ಕಾವ್ಯ, ಪುರಾಣ ಮತ್ತು ಜೀವನ ಚರಿತ್ರೆಗಳಲ್ಲಿ ಅದನ್ನೆ ಹೇಳುತ್ತ ಬರಲಾಗಿದೆ. ಹೀಗಿರುವಾಗ ಅವನು ಮಾದಿಗನಾಗಿಯೇ ಹುಟ್ಟಿರಬಹುದೆಂದು ವಿಶ್ಲೇಷಣೆ ಮಾಡುವ ಲೇಖಕ ಮತ್ತು ಆತನನ್ನು ಅಹಾನುಭೂತಿಯಿಂದ ನೋಡುವ ಎಂ.ಪಿ. ಪ್ರಕಾಶ್ ಅವರು ಭಾವನಾತ್ಮಾಕವಾಗಿ ಬಸವಣ್ಣನಿಗೆ ಸಮೀಪ ವರ್ತಿಗಳಾಗುವುದಿಲ್ಲವೆ?

ಬಸವಣ್ಣನ ದೇಹ ಯಾವ ಜಾತಿಯಲ್ಲೇ ಹುಟ್ಟಿರಲಿ ಅವನ ಆತ್ಮ ಹುಟ್ಟಿದುದು ಮಾತ್ರ 'ಮಾದಾರ ಚನ್ನಯ್ಯನ ಜಾತಿಯಲ್ಲೇ ಎಂಬುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ.

ಬಸವಧರ್ಮ ಮಹಾಸಭಾ ಮತ್ತು ಬಸವ ಸಮಿತಿಗಳು ಬಂಜಗೆರೆ ತಮ್ಮ ಕೃತಿಯಲ್ಲಿ ಅಂಬೇಡ್ಕರ್ ಮತ್ತು ಕುವೆಂಪುರವರಿಗೂ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿವೆ. ಅಂಬೇಡ್ಕರ್ ಮತ್ತು ಕುವೆಂಪುರವರನ್ನು ಗುಟ್ಟಾಗಿ ಅವಮಾನಿಸುತ್ತಿದ್ದವರ ಗುಟ್ಟನ್ನು ಬಂಜಗೆರೆ ಅವರು ಬಯಲು ಮಾಡಿದ್ದಾರೆಯೇ ಹೊರತು ಅವರನ್ನು ಅವಮಾನಿಸಿಲ್ಲ ಎಂಬುದು 'ಆನು ದೇವಾ ಹೊರಗಣವನು' ಕೃತಿಯ ಪುಟ ೧೫೫ರಲ್ಲಿ ಸ್ಪಷ್ಟವಾಗಿ ಮೂಡಿದೆ, ಟೀಕಾಕಾರರು ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳಬಹುದು.

ಇಂದು ಮಠಮಾನ್ಯಗಳಲ್ಲಿ, ಬಸವ ಸಭಾ, ಸಮಿತಿಗಳಲ್ಲಿ ಮತ್ತು ಸಂಸ್ಥೆಗಳ ಅನುಯಾಯಿಗಳಲ್ಲಿ ಬಂಧಿತನಾಗಿರುವ ಬಸವಣ್ಣ, ನಿಜವಾದ ಬಸವತತ್ವಗಳಿಂದ ಎಷ್ಟು ದೂರವಾಗಿದ್ದಾನೆ ಎಂಬುದನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಬೇಕಾಗಿದೆ. ಇಲ್ಲದೆ ಹೋದರೆ ೧೨ನೇ ಶತಮಾನದ ಬಸವಣ್ಣ ಯಾರ ಸಂಪರ್ಕವನ್ನು ತೊರೆದು ಯಾರ ಒಡನಾಡಿಯಾಗಲು, ಯಾರತ್ತ ಪಥ ಸಂಚಲನ ಮಾಡಿದನೋ ಅದಕ್ಕೆ ತದ್ ವಿರುದ್ಧವಾದ ದಿಕ್ಕಿನಲ್ಲಿ ನಾವು ಹೋಗುತ್ತಿಲ್ಲವೆ ಎಂದು ಬಸವಾನುಯಾಯಿಗಳು ಎಂದು ತಮ್ಮನ್ನು ತಾವು ಕರೆದು ಕೊಳ್ಳುವ ಶರಣ ಸಂಜಾತರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಪ್ರೊ॥ ಬಿ.ವಿ. ವೀರಭದ್ರಪ್ಪ

೪. ನಾಲ್ಕನೆಯದಾಗಿ ಸಮುದಾಯಗಳ ಸುಪ್ತರಾಜಕೀಯ ಸಾಮಾಜಿಕ ಅತೃಪ್ತಿ ಹಾಗೂ ಆಶೋತ್ತರಗಳು ಇಂತಹ ವಿವಾದ ಸೃಷ್ಟಿಯಲ್ಲಿ ಸೂಕ್ಷ್ಮವಾಗಿ ಕೆಲಸ ಮಾಡುತ್ತವೆ. ಪ್ರಭುತ್ವವನ್ನು ಮಣಿಸುವುದು ಅದಕ್ಕೆ ತನ್ನ ಶಕ್ತಿಪ್ರದರ್ಶನ ಮಾಡುವುದು ಇಲ್ಲಿ ಕೆಲಸ ಮಾಡಬಹುದು. ಕರ್ನಾಟಕದಲ್ಲಿ ಬಹುಸಂಖ್ಯಾತ ಆಗಿರುವ ಲಿಂಗಾಯತ ಸಮುದಾಯವು ತನ್ನ ಬಲಕ್ಕೆ ಸಮನಾದ ರಾಜಕೀಯ ಪಾಲನ್ನು ಪಡೆಯಲು ಅಸಫಲವಾದಾಗೆಲ್ಲ, ತನ್ನ ಸುಪ್ತ ಆಕ್ರೋಶವನ್ನು ತನ್ನ ಧರ್ಮದ ಮೇಲೆ ವಿಮರ್ಶಾತ್ಮಕವಾಗಿ ಬರುವ ಕೃತಿಗಳ ವಿರುದ್ಧ ತನ್ನ ಸಿಟ್ಟನ್ನು ತಿರುಗಿಸುತ್ತ ಬಂದಿದೆ. ವೀರೇಂದ್ರಪಾಟೀಲರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ ಸನ್ನಿವೇಶದ ನಂತರ 'ಧರ್ಮಕಾರಣ'ಕ್ಕೊ 'ಮಹಾಚೈತ್ರ'ಕ್ಕೊ ತೀವ್ರವಾದ ಪ್ರತಿರೋಧಗಳು ಎದ್ದವು ಎಂಬುದನ್ನು ನೆನೆಯಬೇಕು. ಈಗಿನ ರಾಜಕೀಯ ಸ್ಥಿತಿಯೂ ಲಿಂಗಾಯತರ ಪಾಲಿಗೆ ಹೀಗೆಯೇ ಇದೆ. ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಸ್ಥಾನದ ಸಿಗುವ ವಿಷಯದಲ್ಲಿ ಬ್ರಾಹ್ಮಣ ಹಾಗೂ ಒಕ್ಕಲಿಗ ಲಾಬಿಗಳಿಂದ ತೊಡಕುಗಳನ್ನು ಒಡ್ಡಿ ಅಭದ್ರತೆ ತರಲಾಗಿದೆ.

ಒಕ್ಕಲಿಗರು ಕುರುಬರು ದಲಿತರು ಕರ್ನಾಟಕದ ರಾಜಕಾರಣದಲ್ಲಿ ತಮ್ಮನ್ನು ಹಿಂದಿಕ್ಕಿ ಮೇಲುಗೈ ಪಡೆಯುತ್ತಿರುವ ಸನ್ನಿವೇಶವಿದೆ; ದಲಿತರು ಗ್ರಾಮೀಣ ಪ್ರದೇಶಗಳಲ್ಲಿ ಲಿಂಗಾಯತ ಭೂಮಾಲಿಕರಿಗೆ ವಿಧೇಯವಾಗಿದ್ದು ಕೆಲಸ ಮಾಡುತ್ತಿದ್ದ ಪರಿಸ್ಥಿತಿಯಲ್ಲಿ ಉಂಟಾಗಿರುವ ಬದಲಾವಣೆ ಆಗುತ್ತಿದೆ. ತಾಲೂಕು ಪಂಚಾಯಿತಿ ಜಿಲ್ಲಾಪಂಚಾಯಿತಿಗಳಲ್ಲಿ ಮೀಸಲಾತಿ ಆಧಾರದಲ್ಲಿ ದಲಿತರು ಅಧ್ಯಕ್ಷರಾಗಿ ಅಧಿಕಾರ ಮಾಡುವುದು ನಡೆಯುತ್ತಿದೆ. ಇವೆಲ್ಲವೂ ಲಿಂಗಾಯತರಲ್ಲಿ ಮೊದಲಿಂದಲೂ ಭೂಮಿ ಮತ್ತು ಸ್ಥಳೀಯ ರಾಜಕೀಯ ಅಧಿಕಾರ ನಡೆಸಿಕೊಂಡು ಬಂದ ವರ್ಗಗಳಿಗೆ ಜೀರ್ಣಿಸಿಕೊಳ್ಳುವುದು ಕಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ಬಸವಣ್ಣನು ದಲಿತನೆಂಬ ವಾದವುಳ್ಳ ಕೃತಿಯು ಸಹಜವಾಗಿ ಅವರ ಅಸ್ತಿತ್ವವನ್ನು ಅಲುಗಿಸಿರಬಹುದು. ದಲಿತನೊಬ್ಬ ಗೌಡನ ಮುಂದೆ ನಿಂತರೆ, ನೀವು ದೇವರಾಗಿ ಪೂಜಿಸುವ ಬಸವಣ್ಣ ನಮ್ಮವನು ಎಂದು ಹೇಳುವಂತೆ ಆಗುವುದನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಗಿ ಕಾಣುತ್ತದೆ.

ಆದ್ದರಿಂದ 'ಆನುದೇವಾ' ಕೃತಿಯು ಹೇಳುವ ವಾದ ನಿಜವಾಗುತ್ತದೆಯೊ ಬಿದ್ದುಹೋಗುತ್ತದೆಯೊ ಅದು ಬೇರೆ ಮಾತು, ಆದರೆ ಅದು ಬಸವಣ್ಣನು ದಲಿತನಿರಬಹುದೇ ಎಂಬುದನ್ನು ಕಲ್ಪಿಸಿಕೊಳ್ಳಲು ಸಹ ಕೆಲವರು ಹಿಂಜರಿಯುವುದಕ್ಕೆ ನಿಜವಾದ ಕಾರಣವೆಂದರೆ, ಗ್ರಾಮೀಣ ಪ್ರದೇಶದಲ್ಲಿ ಕೃಷಿಕಾರ್ಮಿಕರಾದ ದಲಿತರು ಹಾಗೂ ಭೂಮಾಲೀಕ ಲಿಂಗಾಯತರ ನಡುವೆ ಇರುವ ಸಾಮಾಜಿಕ ಆರ್ಥಿಕ ಸಂಬಂಧ. ವೈರುಧ್ಯಗಳಿಂದ ತುಂಬಿದ ಈ ಸಂಬಂಧದಲ್ಲಿ ಈಗಲೂ ಸಂಘರ್ಷವಿದೆ. ಹೀಗಾಗಿ ಬಸವಣ್ಣನು ತನ್ನನ್ನು ದಲಿತರ ಹೊಟ್ಟೆಯಲ್ಲಿ ಹುಟ್ಟಿದವನೆಂದೂ, ತನ್ನನ್ನು ಬ್ರಾಹ್ಮಣ ಎಂದುಕೊಂಡರೆ ಕೂಡಲಸಂಗಮ ನಗುತ್ತಾನೆಂದೂ, ಬೇರೆ ಶರಣರ ಭಿನ್ನಾಭಿಪ್ರಾಯವನ್ನು ತಾನು ಯಾವಾಗಲೂ ಮನ್ನಿಸುವವನೆಂದೂ ಎಷ್ಟೇ ಹೇಳಿಕೊಂಡರೂ ಈ ಸಂಘರ್ಷದ ಸಂಬಂಧಗಳು ಬದಲಾಗಲಿಲ್ಲ. ಬಸವಣ್ಣನ ಚಿಂತನೆ ಪ್ರತಿನಿಧಿಸಿದ ದಲಿತೀಕರಣ, ಅಪವರ್ಗೀಕರಣ, ತನಗಿಂತ ಕೆಳಗಿರುವವರ ಜತೆ ಬಾಗಿ ಸಂವಾದ ಮಾಡುವ ಪ್ರಜಾಸತ್ತಾತ್ಮಕ ಗುಣಗಳನ್ನು ಲಿಂಗಾಯತ ಸಮುದಾಯದ



ಭೂಮಿ ಮತ್ತು ರಾಜಕೀಯ ಅಧಿಕಾರ ಹಿಡಿದ ವರ್ಗಗಳಿಗೆ ಪಡೆಯಲು ಸಾಧ್ಯವಾಗಲಿಲ್ಲ. ಈಗಲೂ ಲಿಂಗಾಯತರು ಪ್ರಬಲವಾಗಿರುವ ವಿಶ್ವವಿದ್ಯಾಲಯಗಳಲ್ಲಿ ದಲಿತರಲ್ಲಿ ಇರುವ ಚಡಪಡಿಕೆಯಲ್ಲಿ ಈ ವೈರುಧ್ಯದ ಸಂಬಂಧ ಮುಂದುವರೆದಿರುವುದನ್ನು ಗುರುತಿಸಬಹುದು. ಇದಕ್ಕೆ ಇನ್ನೊಂದು ಕಾರಣ, ಬಸವತತ್ವದ ಚರ್ಚೆಗಳು ವಿಚಾರದಲ್ಲಿ ನಿಂತವು. ಆಚಾರಕ್ಕೆ ಬರಲಿಲ್ಲ. ಈ ಕಾರಣದಿಂದಲೇ ಲಿಂಗಾಯತರು ಪ್ರಬಲವಾಗಿರುವ ಪ್ರದೇಶಗಳಲ್ಲಿ ದಲಿತರು ತಮ್ಮನ್ನು ಪ್ರೀತಿಸುತ್ತಿದ್ದ ಬಸವಣ್ಣನ ಧರ್ಮಕ್ಕೆ ಹೋಗದೆ, ಕ್ರೈಸ್ತ ಹಾಗೂ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುತ್ತಿದ್ದಾರೆ. ಇದು ನಿಜವಾದ ಕ್ರೈಸಿಸ್ಸು. ಬಸವಣ್ಣನು ಒಬ್ಬ ದಲಿತ ಇರಬಹುದು ಎಂಬುದನ್ನು ಊಹೆಯಲ್ಲಿ ಒಪ್ಪಲು ಕಷ್ಟಕರ ಮಾಡಿರುವ ಸಂಗತಿ. ಜತೆಗೆ ಬಸವಣ್ಣನ್ನು ಒಂದು ಸಂಕೇತವಾಗಿಟ್ಟುಕೊಂಡು ಸಾಂಸ್ಕೃತಿಕ ನಾಯಕನನ್ನಾಗಿ ಮಾಡಿಕೊಂಡು ಲಿಂಗಾಯತ ಸಮಾಜವು ರಾಜಕಾರಣದಲ್ಲಿ ಆರ್ಥಿಕತೆಯಲ್ಲಿ ಪಾಲು ಪಡೆಯುವ ಕೆಲಸವನ್ನು ಈ ಶತಮಾನದುದ್ದಕ್ಕೂ ಮಾಡಿದೆ. ಅನೇಕ ಸಂಸ್ಥೆಗಳನ್ನು ಕಟ್ಟಿದೆ. ಬಸವಣ್ಣನು ದಲಿತರವನು ಎಂಬ ವಾದವು ಈ ಪ್ರಕ್ರಿಯೆಯನ್ನು ಭಗ್ನಮಾಡುತ್ತದೆ ಎಂದು ಅವರಿಗೆ ಅನಿಸಿರಬಹುದು.

ಬಸವಣ್ಣನ ಹುಟ್ಟಿನ ಮೂಲದ ಬಗ್ಗೆ ಅಲ್ಲಲ್ಲಿ ಕಾಣಿಸಿಕೊಂಡಿದ್ದ ಸೂಕ್ಷ್ಮ ಎಳೆಗಳನ್ನು ಹಿಡಿದುಕೊಂಡು ಬಂಜಗೆರೆಯವರು ಅವಕ್ಕೆ ಒಂದು ಮೂರ್ತ ಮತ್ತು ತಾರ್ಕಿಕ ರೂಪವನ್ನು ಕೊಟ್ಟು, ಒಂದು ತಾತ್ಕಾಲಿಕ ಸಿದ್ಧಾಂತವನ್ನಾಗಿ ಮಂಡಿಸಲು ಯತ್ನಿಸಿದ್ದಾರೆ; ಅವರ ಸಂಶೋಧನೆಯ ಸಾಂಸ್ಕೃತಿಕ ಆಶಯ, ನಮ್ಮ ಸಾಂಸ್ಕೃತಿಕ ಮಹತ್ವದ ವ್ಯಕ್ತಿತ್ವಗಳ ಮೂಲವು ನಮ್ಮ ಸಾಮಾಜಿಕ ರಚನೆಯ ಕೆಳಸ್ತರದಲ್ಲಿ, ಅದರಲ್ಲಿಯೂ ಮಾತೃಮೂಲೀಯ ಪರಂಪರೆಯಲ್ಲಿ ಇರಬಹುದು ಎಂದು ಹುಡುಕುವುದು. ಇದಕ್ಕಾಗಿ ಈ ಕೃತಿಯು ಗತಕಾಲದ ಚರಿತ್ರೆಯನ್ನು ಪುನಾರಚನೆ ಮಾಡಲು ಸಾಮಾನ್ಯವಾಗಿ ಬಳಸುವ ಶಾಸನಗಳು ತಾಡೋಲೆಗಳು ಉತ್ಖನನದ ವಸ್ತುಗಳಂತಹ "ಅಧಿಕೃತ" ಆಕರಗಳಿಗಿಂತ ಹೆಚ್ಚಾಗಿ, ಕಾವ್ಯ, ಪುರಾಣ, ಜನಪದದ ದಾಖಲೆಗಳಂತಹ ಚಲನಶೀಲ ಆಕರಗಳನ್ನು ಬಳಸಿದೆ.

'ಆನುದೇವಾ' ಕೃತಿಯು ಬಸವಣ್ಣನು ಮೂಲತಃ ಮಾದಿಗರವನು ಇರಬಹುದು. ಅವನು ಮಾದರಸನ ಉದರ ಸಂಜಾತ ಎನ್ನುವ ಬದಲಿಗೆ ಅವನು ಕರಸಂಜಾತ ಇರಬಹುದು. ಅವನು ಬಸವಿಯರಿಗೆ ಹುಟ್ಟಿದ 'ಶಿವ ಸಂತಾನ' ಆಗಿರಬಹುದು. ಕೆಳಜಾತಿಯಲ್ಲಿ ಹುಟ್ಟಿದರೂ ನಿರ್ದಿಷ್ಟ ಪಂಥಗಳ ಗುರುದೀಕ್ಷೆ ಪಡೆಯುವವರು ಜಾತಿ ಹಿನ್ನೆಲೆ ಕಳೆದುಕೊಂಡು ಸಮಾಜದ ಪ್ರತಿಷ್ಠಿತ ವರ್ಗಕ್ಕೆ ಚಲಿಸುವ ಸನ್ನಿವೇಶದಲ್ಲಿ ಬಸವಣ್ಣನು ಚಲಿಸಿರಬಹುದು. ಖ್ಯಾತಿಪಡೆದ ಬಸವಣ್ಣನನ್ನು ನಂತರದ ಕೃತಿಗಳು ಬ್ರಾಹ್ಮಣ ಎಂದು ಚಿತ್ರೀಕರಿಸಿರಬಹುದು-ಎಂಬ ವಾದಗಳನ್ನು "ಅನುಮಾನಿತ ಸತ್ಯ"ಗಳನ್ನಾಗಿ ಮಂಡಿಸಿದೆಯಷ್ಟೆ. ತಮ್ಮ ಧಾರ್ಮಿಕ ಸಾಂಸ್ಕೃತಿಕ ನಾಯಕರು ಶ್ರೇಷ್ಠಜಾತಿಯಲ್ಲಿ ಹುಟ್ಟಿದವರು, ಅಯೋನಿಜರು ಇತ್ಯಾದಿ ಎಲ್ಲ ಧರ್ಮಗಳಲ್ಲಿ ಇರುವ ಶ್ರೇಷ್ಠಮೂಲ ಚಿಂತನೆಯನ್ನು ಭಗ್ನಮಾಡುವುದನ್ನು ಒಪ್ಪುವುದು ಸಂಪ್ರದಾಯಸ್ಥರಿಗೆ ಸಹಜವಾಗಿಯೇ ಕಷ್ಟ

ಬಸವಣ್ಣನ ಹುಟ್ಟಿನ ಮೂಲದ ಬಗ್ಗೆ ಅಲ್ಲಲ್ಲಿ ಕಾಣಿಸಿಕೊಂಡಿದ್ದ ಸೂಕ್ಷ್ಮ ಎಳೆಗಳನ್ನು ಹಿಡಿದುಕೊಂಡು ಬಂಜಗೆರೆಯವರು ಅವಕ್ಕೆ ಒಂದು ಮೂರ್ತ ಮತ್ತು ತಾರ್ಕಿಕ ರೂಪವನ್ನು ಕೊಟ್ಟು, ಒಂದು ತಾತ್ಕಾಲಿಕ ಸಿದ್ಧಾಂತವನ್ನಾಗಿ ಮಂಡಿಸಲು ಯತ್ನಿಸಿದ್ದಾರೆ; ಅವರ ಸಂಶೋಧನೆಯ ಸಾಂಸ್ಕೃತಿಕ ಆಶಯ, ನಮ್ಮ ಸಾಂಸ್ಕೃತಿಕ ಮಹತ್ವದ ವ್ಯಕ್ತಿತ್ವಗಳ ಮೂಲವು ನಮ್ಮ ಸಾಮಾಜಿಕ ರಚನೆಯ ಕೆಳಸ್ತರದಲ್ಲಿ, ಅದರಲ್ಲಿಯೂ ಮಾತೃಮೂಲೀಯ ಪರಂಪರೆಯಲ್ಲಿ ಇರಬಹುದು ಎಂದು ಹುಡುಕುವುದು. ಇದಕ್ಕಾಗಿ ಈ ಕೃತಿಯು ಗತಕಾಲದ ಚರಿತ್ರೆಯನ್ನು ಪುನಾರಚನೆ ಮಾಡಲು ಸಾಮಾನ್ಯವಾಗಿ ಬಳಸುವ ಶಾಸನಗಳು ತಾಡೋಲೆಗಳು ಉತ್ಖನನದ ವಸ್ತುಗಳಂತಹ "ಅಧಿಕೃತ" ಆಕರಗಳಿಗಿಂತ ಹೆಚ್ಚಾಗಿ, ಕಾವ್ಯ, ಪುರಾಣ, ಜನಪದದ ದಾಖಲೆಗಳಂತಹ ಚಲನಶೀಲ ಆಕರಗಳನ್ನು ಬಳಸಿದೆ; ಇದು ಕನ್ನಡದಲ್ಲಿ ಈಚೆಗೆ ಹೆಚ್ಚುಗೊಂಡಿರುವ ಸಾಂಸ್ಕೃತಿಕ ಅಧ್ಯಯನದ ವಿಧಾನದ ಭಾಗವಾಗಿದೆ. ಈ ಆಕರಗಳನ್ನ ಕೇವಲ ದಾಖಲಾತಿಗಳೆಂದು ಬಳಸದೆ, ಅವನ್ನು ತಮ್ಮ ಊಹಾವಾದಕ್ಕೆ ಲೇಖಕರು ಎಚ್ಚರಿಕೆಯಿಂದ ಹಾಗೂ ಸೂಕ್ಷ್ಮವಾಗಿ ವ್ಯಾಖ್ಯಾನಿಸಿಕೊಳ್ಳುತ್ತಾರೆ.

ಇಡೀಕೃತಿಯ ತರ್ಕದಲ್ಲಿರುವ ಮುಖ್ಯ ಸಂಗತಿಯೆಂದರೆ, ಈ ವಿಷಯದಲ್ಲಿ ಇನ್ನೂ ಚಿಂತನೆ-ಸಂಶೋಧನೆ ಮಾಡುವುದು ಇದೆ. ಈಗಿರುವುದು ಸದ್ಯ ದೊರಕಿರುವ ದಾಖಲೆಗಳ ಆಧಾರದಲ್ಲಿ ಮಾಡಿರುವ ಊಹೆ ಎಂದು ವಿನಯ ಹಾಗೂ ಮುಕ್ತತೆಯನ್ನು ತೋರಿರು

(೨೪ನೇ ಪುಟಕ್ಕೆ)

'ಹೂರಣ ಬಯಸುವ... ಹೊರಗಣವನು'

'ಬಸವಣ್ಣ ನಮ್ಮವನಂತೆ' ಎಂಬ ಒಬ್ಬ ಮಾದಿಗ ಬಾಲಕನ ಅನುಮಾನಿತ ಸತ್ಯದಿಂದ ಈ ಬರವಣಿಗೆ ಪ್ರಾರಂಭವಾಗುತ್ತದೆ. ಈ ಅನುಮಾನಿತ ಸತ್ಯ ಕೊನೆಯ ನಿರ್ಣಯವಲ್ಲ. ಲೇಖಕರು 'ಅನುಮಾನಿತ' 'ಅಲಂಕೃತ', 'ಪರಿಷ್ಕೃತ', 'ಸಂಭಾವ್ಯ' ಮುಂತಾದ ಸತ್ಯಗಳ ವಿವಿಧ ಮುಖಗಳನ್ನು ನಿರೂಪಿಸಿದ್ದಾರೆ. ಸತ್ಯ ಯಾವಾಗಲೂ ಒಂದೇ ಇರುವುದಿಲ್ಲ ಎಂಬ ಊಹೆ ಇಲ್ಲಿ ನಿಜ ವಾಗುತ್ತದೆ. ಸತ್ಯದ ಅನ್ವೇಷಣೆ ಮಾಡಲು ಸಂಶೋಧಕ ಹಲವು ಊಹೆಗಳನ್ನು ಮಾಡುತ್ತಾನೆ. ಸತ್ಯದ ತೀರ್ಮಾನಕ್ಕೆ ಬರಲು ಹಲವು ದಾರಿ ಹುಡುಕಿಕೊಳ್ಳುತ್ತಾನೆ. ಇಂದಿನ ಸಂಶೋಧನೆಗಳಲ್ಲಿ ಮುರಿದು ಕಟ್ಟುವ ಕೆಲಸ ಕಡಿಮೆ. ರೂಪಿತ ಜಾಡಿನಲ್ಲಿ ನಡೆಯುವವರೇ ಹೆಚ್ಚು. ಬಸವಣ್ಣನವರ ಹುಟ್ಟಿನ ಜಾತಿಯ ಬಗ್ಗೆ ಈಗಾಗಲೇ ಕೆಲವರು ಸಂಶಯ ವ್ಯಕ್ತಪಡಿಸಿದ್ದಾರೆ. ಕೆಲವರಿಗೆ ಆತ ಕುರುಬ, ವಿಶ್ವಕರ್ಮ ಬ್ರಾಹ್ಮಣ, ಆಂಧ್ರದ ಶೈವ ಬ್ರಾಹ್ಮಣ, ಹಾಗೂ ಕಮ್ಮೆ ಬ್ರಾಹ್ಮಣನಾಗಿ ಕಂಡಿದ್ದಾರೆ.

ಮಹೇಶ ತಿಪ್ಪಶೆಟ್ಟಿ

'ನೋವಿದ್ದ ಹಲ್ಲಿನ ಕಡೆಗೆ ನಾಲಿಗೆ ಹೊರಳುವಂತೆ' ಹನ್ನೆರಡನೇ ಶತಮಾನದ ಶರಣರ ಕ್ರಾಂತಿ ಚಿಂತಕರನ್ನು ನಿರಂತರ ಕಾಡುತ್ತಿದೆ. ಕನ್ನಡ ಸಂಸ್ಕೃತಿಯ ಮೇಲೆ ವಿಶೇಷ ಪ್ರಭಾವ ಬೀರಿದ ಈ ಸಂದರ್ಭದ ಬಗ್ಗೆ ವೈವಿಧ್ಯಮಯ ಸಾಹಿತ್ಯ ಸೃಷ್ಟಿಯಾಗುತ್ತಿದೆ. ಇಲ್ಲಿ ವಿಪುಲ ಹಾಗೂ ವಿಫಲ ಸಾಹಿತ್ಯವೂ ಇದೆ. ಇವೆಲ್ಲದರ ಒಟ್ಟು ಪರಿಣಾಮ ಎಂದರೆ ಆ ಕಾಲಘಟ್ಟದ ಜೀವಂತಿಕೆಯನ್ನು ಇದು ಸೂಚಿಸುತ್ತದೆ. ಕನ್ನಡಿಗರು ಇದಕ್ಕಾಗಿ ಅಭಿಮಾನ ಪಡಬಹುದು.

'ಆನುದೇವಾ ಹೊರಗಣವನು' ಎಂಬ ಬಂಜಗೆರೆಯವರ ಪುಸ್ತಕ ಬಸವಣ್ಣನವರ ಹುಟ್ಟಿನ ಮೂಲದ ವಿಶ್ಲೇಷಣೆ ಮಾಡುತ್ತದೆ. ಸಂಶೋಧನೆ ಎಂದರೆ ಲೇಖಕರು ಕಂಡುಕೊಂಡ ಸಾಕ್ಷ್ಯಾಧಾರಗಳನ್ನು ಓದುಗ ಸರಳವಾಗಿ ಗ್ರಹಿಸಬೇಕು. ಇಲ್ಲಿ ಸಮಸ್ಯೆಯ ಸ್ವರೂಪದ ವಿವರಣೆಬೇಕು. ಸಂಶೋಧನೆಗೆ ಅನುಸರಿಸಿದ ವಿಧಾನ ಹಾಗೂ ಅದರ ನಿಷ್ಕೃಷ್ಟತೆಯ (accuracy) ವಿವರ ಇರಬೇಕು. ಮಾಹಿತಿಯಲ್ಲಿ ತರ್ಕ ಬದ್ಧ ಸಂಬಂಧಗಳಿರಬೇಕು. ಲೇಖಕರು ನಿರುದ್ವಿಘ್ನವಾಗಿ ಶಾಂತ ಮನಸ್ಸಿನಿಂದ ಇಲ್ಲಿ ತಮ್ಮ ವಿಚಾರ ಮಂಡಿಸಿದ್ದಾರೆ. ಒಂದ ಸಂಶೋಧನ ಪ್ರಬಂಧದ ಶಿಸ್ತು ಇದಕ್ಕೆ ಇದೆ. ಬಸವಣ್ಣನವರ ಹುಟ್ಟಿನ 'ಅನುಮಾನಿತ ಸತ್ಯದ ಸಂಶೋಧನೆಯ ಮುಂದುವರೆಯುವಿಕೆಗೆ ನೆರವು ನೀಡಿ ಸಹಕರಿಸಬೇಕೆಂದು ಪ್ರಾಜ್ಞ ವಿದ್ವಾಂಸರನ್ನು ನಮ್ರವಾಗಿ ಕೇಳಿಕೊಂಡಿದ್ದಾರೆ.

ಈ ಪುಸ್ತಕವನ್ನು ಅವಲೋಕಿಸುವ ಮೊದಲು ಇದರ ಬಗ್ಗೆ ಕೆಲವರ ಅಭಿಪ್ರಾಯ ಸ್ಪಷ್ಟಪಡಿಸಬೇಕಾಗಿದೆ. ದಲಿತ ಮನೋಭಾವ ಇದ್ದವರಿಗೆ ಈ ತಲೆ ಬರಹ ಆಕರ್ಷಕವಾಗಿ ಕಾಣಬಹುದು. ಈ ಪುಸ್ತಕದ ಬರಹಗಾರ 'ವಿಲನ್' ಆಗುತ್ತಾನೆ ಎಂದು ಕೆಲವರ ಅಂಬೋಣ. ಬಸವಣ್ಣನವರ ತತ್ವ ಬಿಟ್ಟು ಜಾತಿಯ ಪ್ರಶ್ನೆ ಏಕೆ ಎಂಬ ಚಿಂತನೆ ಕೆಲವರಿಗಿದೆ. ಇದೆಲ್ಲ ಪ್ರಚಾರದ ಗಿಮಿಕ್ ಎಂಬ ಅಭಿಪ್ರಾಯವೂ ಇದೆ. ದೇವತ್ವದ ಸ್ಥಾನದಲ್ಲಿರುವ ಬಸವಣ್ಣನನ್ನು ಮಾನವೀಕರಣಗೊಳಿಸುವುದು ಕೆಲವರಿಗೆ ಪಾಪವಾಗಿ ಕಂಡಿದೆ. ಇದು ಪ್ರಜ್ಞಾವಂತ ದಲಿತರ ಹುನ್ನಾರ ಎಂಬ ಸಂಶಯ ಕೆಲವರಿಗಿದೆ. ಇಡೀ ಪುಸ್ತಕದ ಆಲೋಚನ ಕ್ರಮವನ್ನು ದಿಕ್ಕು ತಪ್ಪಿಸುವ ಕ್ರಿಯೆ ವಿವಿಧ ಮೂಲಗಳಿಂದ ಜರಗುತ್ತಿದೆ. ಇವೆಲ್ಲವುಗಳನ್ನು ಮೀರಿ ಈ ಪುಸ್ತಕದ ಪರಿಭಾಷೆ ಇದೆ.

'ಬಸವಣ್ಣ ನಮ್ಮವನಂತೆ' ಎಂಬ ಒಬ್ಬ ಮಾದಿಗ ಬಾಲಕನ ಅನುಮಾನಿತ ಸತ್ಯದಿಂದ ಈ ಬರವಣಿಗೆ ಪ್ರಾರಂಭವಾಗುತ್ತದೆ. ಈ ಅನುಮಾನಿತ ಸತ್ಯ ಕೊನೆಯ ನಿರ್ಣಯವಲ್ಲ. ಲೇಖಕರು 'ಅನುಮಾನಿತ' 'ಅಲಂಕೃತ', 'ಪರಿಷ್ಕೃತ', 'ಸಂಭಾವ್ಯ' ಮುಂತಾದ ಸತ್ಯಗಳ ವಿವಿಧ ಮುಖಗಳನ್ನು ನಿರೂಪಿಸಿದ್ದಾರೆ. ಸತ್ಯ ಯಾವಾಗಲೂ ಒಂದೇ ಇರುವುದಿಲ್ಲ ಎಂಬ ಊಹೆ ಇಲ್ಲಿ ನಿಜ ವಾಗುತ್ತದೆ. ಸತ್ಯದ ಅನ್ವೇಷಣೆ ಮಾಡಲು ಸಂಶೋಧಕ ಹಲವು ಊಹೆಗಳನ್ನು ಮಾಡುತ್ತಾನೆ. ಸತ್ಯದ ತೀರ್ಮಾನಕ್ಕೆ ಬರಲು ಹಲವು ದಾರಿ ಹುಡುಕಿಕೊಳ್ಳುತ್ತಾನೆ. ಇಂದಿನ ಸಂಶೋಧನೆಗಳಲ್ಲಿ ಮುರಿದು ಕಟ್ಟುವ ಕೆಲಸ ಕಡಿಮೆ. ರೂಪಿತ ಜಾಡಿನಲ್ಲಿ ನಡೆಯುವವರೇ ಹೆಚ್ಚು. ಬಸವಣ್ಣನವರ ಹುಟ್ಟಿನ ಜಾತಿಯ ಬಗ್ಗೆ ಈಗಾಗಲೇ ಕೆಲವರು ಸಂಶಯ ವ್ಯಕ್ತಪಡಿಸಿದ್ದಾರೆ. ಕೆಲವರಿಗೆ ಆತ ಕುರುಬ, ವಿಶ್ವಕರ್ಮ ಬ್ರಾಹ್ಮಣ, ಆಂಧ್ರದ ಶೈವ ಬ್ರಾಹ್ಮಣ, ಹಾಗೂ ಕಮ್ಮೆ ಬ್ರಾಹ್ಮಣನಾಗಿ ಕಂಡಿದ್ದಾರೆ. ಬಸವಣ್ಣನ ಹುಟ್ಟಿನ ಬಗ್ಗೆ ಬಂದ ಈ ಎಲ್ಲಾ ವಾದಗಳು ಕೆಲಕಾಲ ಸುಂಟರಗಾಳಿಯಾಗಿ ಬೀಸಿದವು. ಬಂಜಗೆರೆಯವರ ಈ ಪುಸ್ತಕ ಚಿಂತಕರಲ್ಲಿ ಬಿರುಗಾಳಿ ಎಬ್ಬಿಸಿದೆ.

ಈ ಪುಸ್ತಕದ ಮೊದಲ ಇಪ್ಪತ್ತು ಪುಟ ಭಾರತದ ಇತಿಹಾಸ ತಿರುಚುವಿಕೆಯ ಪರಿಚಯಕ್ಕಾಗಿಯೆ ಮೀಸಲಾಗಿದೆ. ರಾಹುಲ ಹಾಗೂ ಯಶೋಧೆಯನ್ನು ನಡುರಾತ್ರಿಯಲ್ಲಿ ತೊರೆದ ಸಿದ್ಧಾರ್ಥನ ಬಗ್ಗೆ ರೂಪಿತ, ರಮ್ಯ ಕಟ್ಟುಕತೆಯಿದೆ. ಆದರೆ ಸಿದ್ಧ ಬುದ್ಧನಾದ ಇತಿಹಾಸವೆ ಬೇರೆಯಿದೆ. ಭಾರತದಲ್ಲಿ ಆರ್ಯರ ಮೂಲ, ಅಶೋಕ, ಚಂದ್ರಗುಪ್ತ, ಶಿವಾಜಿ, ಕನಕದಾಸ ಮುಂತಾದವರ ಬಗ್ಗೆ ತಪ್ಪು ತಪ್ಪಾದ ಅತಿರಂಜಿತ ಇತಿಹಾಸವಿದೆ. ರಾಮಾಯಣ ಮಹಾಭಾರತ ರಚಿಸಿದವರು ಪುರೋಹಿತ ಶಾಹಿಯ ಕೃತ್ರಿಮ ವಿವರಣೆಗೆ ಬಲಿಯಾಗಿದ್ದಾರೆ. ಒಟ್ಟಿಗೆ ಅಕ್ಷರ ಸಂಸ್ಕೃತಿಯ ಸಂಪರ್ಕದಲ್ಲಿ ಬಂದವರು ಈ ದೇಶದ ಇತಿಹಾಸ ತಿರುಚಿದ್ದಾರೆ. ಅದಕ್ಕೆ ಪೂರಕವಾದ ದಂತ ಕತೆ, ಪುರಾಣ ಕತೆ ಸೃಷ್ಟಿಸಿದ್ದಾರೆ. ಪ್ರಬಲರು ದುರ್ಬಲರನ್ನು ವಂಚಿಸಿದ ಬಗ್ಗೆ ಹಲವು ಸಾಕ್ಷಿಗಳಿವೆ. ಇಂದಿಗೂ ಪುರೋಹಿತಶಾಹಿಯ ನಯ ವಂಚಕತನ ದಲಿತರಿಗೆ ತಿಳಿಯುವುದೇ ಇಲ್ಲ. ಈ ಹಿನ್ನೆಲೆಯಲ್ಲಿ ಭಾರತದ ಇತಿಹಾಸವನ್ನು ಹೊಸದಾಗಿ ರಚಿಸಬೇಕಾಗಿದೆ ಎಂದು ಲೇಖಕರು ವಾದಿಸಿದ್ದಾರೆ.

ಖ್ಯಾತ ಸಂಶೋಧಕರಾದ ಚಿದಾನಂದ ಮೂರ್ತಿ ಹಾಗೂ ಕಲಬುರ್ಗಿಯವರ ಅಭಿಪ್ರಾಯಗಳನ್ನು ಆಧಾರವಾಗಿಟ್ಟುಕೊಂಡೆ ಲೇಖಕರು ಹಲವು ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಬಸವಣ್ಣನವರ ಬಗ್ಗೆ ಇರುವ ಕತೆ ರೂಪಿತ ಹಾಗೂ ರಮ್ಯವಾಗಿದೆ. ಲೇಖಕರಿಗೆ ಇದು 'ಅಲಂಕೃತ ಸತ್ಯ'ವಾಗಿದೆ. ಬಸವಣ್ಣ ಬಾಗೇವಾಡಿ ಬಿಟ್ಟದ್ದು ಏಕೆ? ಆತನಿಗೆ ದೇವರಾಜ ಎಂಬ ಅಣ್ಣ ಇದ್ದಾನೆ? ಬಸವಣ್ಣನ ಅಜ್ಜ ಹಾಗೂ ಸಹೋದರಿಯ ವಿಕ್ಷಿಪ್ತ ವರ್ತನೆಗಳು ಬಾಗೇವಾಡಿ ಬಿಡಲು ಕಾರಣವೆ? ಕೂಡಲ ಸಂಗಮಕ್ಕೆ ನಾಗಾಯಿ ಹಾಗೂ ಬಸವಣ್ಣ ಆಶ್ರಯ ಅರಸಿ ಬಂದರೆ? ವಿದ್ಯಾಭ್ಯಾಸಕ್ಕಾಗಿ ಬಂದನೆ? ಬಸವಣ್ಣ ಹಾಗೂ ನಾಗಾಯಿ ದೇವರ ಸೇವೆಗೆ ಅಂಕಿತರೆ? ಶರಣ ಚಳುವಳಿ ಏಕೆ ಜಾತಿಯಾಯಿತು? ಬಸವಣ್ಣನಿಗೆ ಜಂಗಮ ಹಾಗೂ ಇಷ್ಟ ಲಿಂಗದೊಡನೆ ಇರುವ ಸಂಬಂಧ ಎಂತಹದು? ಪುಟ ೩೯-೪೯ರವರೆಗೆ ಇಂತಹ ಪ್ರಶ್ನೆಗಳನ್ನು ಹಾಕಿಕೊಂಡು ಲೇಖಕರು ಉತ್ತರಿಸುವ ಯತ್ನ ಮಾಡಿದ್ದಾರೆ. ಬಸವಣ್ಣನಿಗೆ ಮಾದಿಗರ ಹುಟ್ಟು ಇದೆ ಎಂದು ಎಲ್ಲಿಯೂ ಖಚಿತ ವಾಗಿ ಲೇಖಕರು ಹೇಳಿಯೇ ಇಲ್ಲ, '... ನಾವು ಊಹಿಸಬಹುದಾದ ಸಂಭಾವ್ಯ ಸತ್ಯವೆಂದರೆ ಮಾದಿರಾಜ ನಿಗೆ ಬಸವಣ್ಣ ಉದರ ಸಂಜಾತ ಮಗನಲ್ಲ'. ಪುಟ ೬೪ರಲ್ಲಿ ಈ ವಿಚಾರ ಮಂಡಿಸಿದ್ದಾರೆ.



ಕಾಲದ ಕಂದಕ ವಚನಕಾರರ ಜೀವನದ ಮಾಹಿತಿಯನ್ನು ನುಂಗಿ ಹಾಕಿದೆ (ಪುಟ-೧೭). ಅರ್ಜುನವಾಡ ಶಾಸನವನ್ನು ಹಲವು ಸಂಶೋಧಕರು ಬೇರೆ ಬೇರೆ ರೀತಿಯಲ್ಲಿ ಅರ್ಥೈಸಿದ್ದಾರೆ (ಪು-೨೨). ಬಸವಣ್ಣನ ಬಗ್ಗೆ ಈಗ ಲಭ್ಯವಿರುವ ಮಾಹಿತಿ ವಿದ್ವಾಂಸರ ವ್ಯಾಖ್ಯಾನ ಹಾಗೂ ಅವರ ಮನೋ ಲಹರಿಯನ್ನು ಅವಲಂಬಿಸಿದೆ (ಪು-೨೪,೨೬) ಎಂದು ಬಂಜಗೆರೆಯವರು ಸಂಶಯ ವ್ಯಕ್ತಪಡಿಸಿದ್ದಾರೆ. ಇಲ್ಲಿ ವಚನಗಳನ್ನು ಸಂಕಲ್ಪಿಸಿದವರ ಮನೋ ಇಚ್ಛೆ, ಕಾಯಕ ಜೀವಿಗಳ ಮನೋ ಇಚ್ಛೆ ಹಾಗೂ ಬಸವಣ್ಣನ ಬದುಕಿನಲ್ಲಿ ಇರುವ ಹಲವು ಗೊಂದಲಗಳನ್ನು ಗುರುತಿಸಲಾಗಿದೆ. ಲಿಂಗಾಯತ ಹಾಗೂ ವೀರಶೈವದ ಸೂಕ್ಷ್ಮ ಅಂತರಗಳನ್ನು ಗುರುತಿಸುತ್ತ, ಆರಾಧ್ಯ ಹಾಗು ಸ್ಮಾರ್ಥ ಬ್ರಾಹ್ಮಣರ ಪ್ರಭಾವದಿಂದ ಲಿಂಗಾಯತ ಧರ್ಮದಲ್ಲಿ ಶ್ರೇಣೀಕರಣ ಉಂಟಾಯಿತು ಎಂಬ ಸಂಶಯ ಇಲ್ಲಿ ವ್ಯಕ್ತವಾಗಿದೆ. ಹನ್ನೆರಡನೆ ಶತಮಾನದ ಲಿಂಗಾಯತ ಬಂಡಾಯದ ಬಿಸಿ ಹದಿನೈದನೆ ಶತಮಾನಕ್ಕೆ ಉಳಿಯಲಿಲ್ಲ. ಇದರಿಂದ ವಚನಗಳ ಸಂಕಲನದಲ್ಲಿ ಪ್ರಕ್ಷಿಪ್ತತೆ ಉಂಟಾಗಿದೆ ಎಂಬುದಕ್ಕೆ ಹಲವು ಉದಾಹರಣೆ ನೀಡಿದ್ದಾರೆ.

ಅಗ್ರಹಾರ, ಜನಿವಾರ ಮುಂತಾದ ಶಬ್ದಗಳ ಬಗ್ಗೆ ಸ್ಥಾಪಿತ ಅರ್ಥಗಳಿವೆ. ಅಗ್ರಹಾರ ಎಂದರೆ ಬ್ರಾಹ್ಮಣರ ಓಣಿ ಎಂಬ ನಂಬಿಕೆ ಇಲ್ಲಿಯವರೆಗೆ ಇತ್ತು. ಭಾರತದ ಗ್ರಾಮಗಳಿಗೆ ತಮ್ಮದೇ ಆದ ಇಕಾಲಜಿಯಿದೆ. ಜಾತಿ, ವೃತ್ತಿ, ಸಾಮಾಜಿಕ ಹಾಗು ಆರ್ಥಿಕ ಅಂತಸ್ತು ಇದರ ರಚನೆಯ ಮೇಲೆ ಪ್ರಭಾವ ಬೀರುತ್ತವೆ. ಭಾರತದ ಗ್ರಾಮಗಳಲ್ಲಿ ಓಣಿಯ ಹೆಸರು ಜಾತಿಯಿಂದ ಗುರುತಿಸಲ್ಪಟ್ಟಿವೆ. ಲೇಖಕರ ಪ್ರಕಾರ ಅಗ್ರಹಾರದಲ್ಲಿ ಇತರ ಕಸಬುದಾರರು, 'ಮಹಾಜನರು' ವಾಸಿಸುತ್ತಿದ್ದರು, ತಮಿಳುನಾಡಿನಲ್ಲಿ ಇದು ಅಮೂರ್ತ ಆಡಳಿತ ಘಟಕವಾಗಿದೆ. ಒಟ್ಟಿಗೆ ಜನಿವಾರ ಹಾಗು ಅಗ್ರಹಾರ ಯಾವಾಗ ಹುಟ್ಟಿಕೊಂಡವು ಹಾಗೂ ಅವುಗಳ ಅರ್ಥ ಹೆಚ್ಚಿನ ವಿಶ್ಲೇಷಣೆ ಬಯಸುತ್ತವೆ.

ವಚನ ಪಿತಾಮಹ ಹಳಕಟ್ಟಿಯವರ 'ಸಂಪಾದನೆ' ಇಂದು ಹಲವು ಹಂತ ದಾಟಿದೆ. ವಚನಗಳ ವಿಂಗಡನೆ, ವರ್ಗೀಕರಣದ ಪ್ರಕ್ರಿಯೆ ಇಂದಿಗೂ ಸಾಗಿದೆ. ವಚನಗಳ ಅಂಕಿತ ಬದಲಿಸಿದ ಕ್ರೂರಿಗಳಿದ್ದಾರೆ. ಆಧುನಿಕ ವಚನಕಾರರ ಶೈಲಿಯನ್ನಂತೂ ವಿವರಿಸುವುದೇ ಬೇಡ. ಕನ್ನಡ ಪಂಡಿತರ ಕೋಟೆಯಲ್ಲಿ ವಚನಗಳಿದ್ದಾಗ ಅವು ಕೇವಲ ಭಾಷಣದ ಸರಕುಗಳಾಗಿದ್ದವು. ಇವುಗಳನ್ನು ಸಂಗೀತಕ್ಕೆ ಅಳವಡಿಸಿದಾಗ ಶಬ್ದಗಳು ಮೂಲ ಅರ್ಥ ಕಳೆದುಕೊಳ್ಳುವ ಸಾಧ್ಯತೆಯನ್ನು ಗಿರಡ್ಡಿಯವರಂತಹ ವಿಮರ್ಶಕರು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ದಲಿತ ಬಂಡಾಯದ ಗುಂಪು ವಚನಗಳಿರುವ ಸಾಮಾಜಿಕ ಮಹತ್ವ ಗುರುತಿಸುವ ಮೊದಲು ಇವು ಕೇವಲ ಸುಪ್ರಭಾತವಾಗಿದ್ದವು. ವೇದಗಳನ್ನು ಕಂಠಪಾಠ ಮಾಡಿ ಒಪ್ಪಿಸುವ ಪರಂಪರೆ ವೈದಿಕರಲ್ಲಿ ಇದ್ದಂತೆ ಆ ಪರಂಪರೆ ವಚನಗಳಿಗಿರಲಿಲ್ಲ (ಪು-೫೫), ವಚನಗಳು ಒಂದು ವಿಶಿಷ್ಟ ಸಂದರ್ಭಕ್ಕೆ ಉತ್ತರ ಕೊಡುವಂತ ರೀತಿಯೆಲ್ಲಿವೆ. ಬಹುರೂಪಿ ಅರ್ಥ ಕೊಡುವ ಇವು ಒತ್ತಿಕೊಂಡವರ ಕೂಸಾಗಿವೆ.

ಬಂಜಗೆರೆಯವರ ಈ ಪುಸ್ತಕ ಅಂತರ ಶಿಸ್ತೀಯ ಅವಲೋಕನೆಗೆ ಒಳಪಡಬೇಕಾಗಿದೆ. ಸಂಶೋಧನೆಗೆ ಅರ್ಹ ದಾಖಲೆಗಳ ಕೊರತೆ ಇದ್ದಾಗ ಶಿಷ್ಟಕ್ಕಿಂತ 'ಪರಿಶಿಷ್ಟ' ಮೂಲಗಳನ್ನು ಅವಲಂಬಿಸಬಹುದು. ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಆಚರಣೆಗಳು, ಜನಪದರ ಭಾಷೆ, ಕಲೆ, ಕುರುಹು, ಹೆಳವರ ವಂಶವಳಿ ಮುಂತಾದವುಗಳನ್ನು ಆಧಾರವಾಗಿಟ್ಟುಕೊಂಡು ಒಂದು ಸುಸಂಗತ ಚಿತ್ರಣವನ್ನು ಕಟ್ಟಿಕೊಳ್ಳಬಹುದೆಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ (ಪು-೭೬). ಕಾವ್ಯ, ಪುರಾಣ ಬರೆಯುವವರು ಅನಪೇಕ್ಷಿತ ಸಂದರ್ಭಗಳನ್ನು ಮರೆಮಾಚಲು ಪವಾಡಿಕರಣದ ತಂತ್ರ ಬಳಸುತ್ತಾರೆ (ಪು-೭೦). ಬಸವಣ್ಣ ಪವಾಡ ಪುರುಷನಾದದ್ದು ಹೀಗೆಯೆ ಇರಬಹುದು. ಬಸವಣ್ಣನ ಮಾದಿಗರ ಹುಟ್ಟು ವಿವರಿಸಲು ಲೇಖಕರು ಪರಿಶಿಷ್ಟ ಮಾರ್ಗ ಹೆಚ್ಚು ಅನುಸರಿಸಿದ್ದಾರೆ.



ಬಸವಣ್ಣ ಜಾತಿಯನ್ನು ಅಪವರ್ಗಿಕರಸಿಕೊಂಡದ್ದು ತಾನು ಶ್ರೇಷ್ಠ ಜಾತಿಯವನಾಗಿದ್ದ ಎಂಬ ಕಾರಣಕ್ಕೆ ಎಂಬುದು ಸರಿಯಲ್ಲ ಎಂದು ಲೇಖಕರು (ಪು-೫೫) ಹೇಳುತ್ತಲೆ ವ್ಯಕ್ತಿಗತವಾದ ಮೇಲ್ಮುಖ ಚಲನೆ ವರ್ಣಿಸಿದ್ದಾರೆ. ಲಿಂಗಾಯತ ಧರ್ಮದಲ್ಲಿ ದಲಿತರು ಕೂಡ ಜಂಗಮರಾಗಬಹುದಿತ್ತು. ಬೆಲ್ದಾಳ ಶರಣರು ಇದಕ್ಕೆ ಸೂಕ್ತ ಉದಾಹರಣೆ. ಗುರೂಪದೇಶಕ್ಕೆ ಅರ್ಹನಾದವನು ಬ್ರಾಹ್ಮಣನೆ ಆಗುತ್ತಾನೆ ಎಂಬುದು ಪು-೫೯ರಲ್ಲಿ ಲೇಖಕರು ದಾಖಲಿಸಿದ್ದಾರೆ. ಬ್ರಾಹ್ಮಣರಲ್ಲಿ ಈ ತೆರನಾದ ಚಲನೆಗಳು ಇಲ್ಲ. ಶಿಶು ಮಗ, ಮನೆ ಮಗ, ತೊತ್ತಿನ ಮಗ, ಕರ ಸಂಜಾತ, ಉದರ ಸಂಜಾತ ಎಂಬ ಶಬ್ದಗಳು ಇಲ್ಲಿ ಬಳಕೆಯಾಗಿವೆ. ಇಂದಿಗೂ ಜಂಗಮರು ತಮ್ಮ ಭಕ್ತರನ್ನು ಶಿಶು ಮಕ್ಕಳೆಂದು ಕರೆಯುತ್ತಾರೆ. ಕೃಷಿಕರು ಮನೆ ಹೊಲೆಯರನ್ನು ಮನೆ ಮಗ ಎಂದೇ ಕರೆಯುತ್ತಾರೆ. ಇಲ್ಲ 'ಮಗ' ಎಂಬ ಶಬ್ಧಕ್ಕೆ ಅರ್ಥ ಬೇರೆಯಾಗುತ್ತದೆ. ಹಲವು ಕಾರಣಗಳಿಂದ ಬಸವ ಬಸವೇಶ್ವರನಾಗಿ ಬ್ರಾಹ್ಮಣ ಸಂಜಾತನಾಗಿ ರೂಪಗೊಂಡಿದ್ದಾನೆ ಎಂಬ ಅನುಮಾನಿತ ಸತ್ಯಕ್ಕೆ ವಿವರಣೆ ನೀಡಿದ್ದಾರೆ.

ಲೇಖಕರು ಕೂಡಲ ಸಂಗಮ ಕ್ಷೇತ್ರದ ಬಗ್ಗೆ ಇನ್ನೂ ಹೆಚ್ಚು ಕ್ಷೇತ್ರ ಕಾರ್ಯ ಮಾಡಬೇಕಾಗಿತ್ತು. ಇದು ಮೊದಲು ಕರ್ಪಡಿ (ಕಪ್ಪಡಿ) ಸಂಗಮವಾಗಿತ್ತು. ಕಾಳಾಮುಖ ಶೈವರ ಕ್ಷೇತ್ರವಾಗಿತ್ತು. ಅಗ್ರಹಾರ ಇಲ್ಲಿ ಇತ್ತು. ೧೯೬೭ರ ರಲ್ಲಿ ಬಸವೇಶ್ವರರ ಅಷ್ಟ ಶತಮಾನೋತ್ಸವ ಆಚರಿಸಿದಾಗ ಕೂಡಲ ಸಂಗಮ ಸ್ವಲ್ಪ ಪ್ರಮಾಣದಲ್ಲಿ ಜೀರ್ಣೋದ್ಧಾರವಾಯಿತು. ಇತ್ತೀಚೆಗೆ ಗುರುತು ಸಿಗಲಾರದಷ್ಟು ಈ ಕ್ಷೇತ್ರ ಬದಲಾವಣೆ ಹೊಂದಿದೆ. ಅಷ್ಟಶತಮಾನೋತ್ಸವ ಆಚರಿಸುವಾಗ ಬಸವಣ್ಣನ ಗುರುಜಾತವೇದ (ಈಶಾನ್ಯಗುರು) ಮುನಿಯ ಸ್ಥಾನ ಗುರುತಿಸಬೇಕಾಗಿತ್ತು. ಅಲ್ಲಿ ಯಾವದೋ ಒಂದು ಸ್ಥಾನವನ್ನು ಗುರುತಿಸಿದ್ದಾರೆ ಎಂಬ ಪ್ರತೀತಿ ಇದೆ.

ಕೂಡಲ ಸಂಗಮ ದೇವಸ್ಥಾನದಲ್ಲಿ ಮೊದಲು ಬ್ರಾಹ್ಮಣರು ಅರ್ಚಕರಾಗಿದ್ದರಂತೆ. ಸುಮಾರು ಒಂದು ಶತಮಾನದ ಈಚೆಗೆ ಜಂಗಮ ಹಾಗೂ ಕೆಳಜಾತಿಯವರು ಅರ್ಚಕರಾಗಿದ್ದಾರೆ. ಇಲ್ಲಿಯ ಅರ್ಚಕ ಕುಟುಂಬಗಳು ಕೊಟ್ಟೂರಿನಿಂದ ವಲಸೆ ಬಂದವರಂತೆ. ಇವರ ವಂಶಾವಳಿ ಇಲ್ಲಿಯ ಇತಿಹಾಸ ಪುನ: ರೂಪಿಸಲು ನೆರವು ನೀಡಬಹುದು. ಲಿಂಗಾಯತರ ಸಂಸ್ಕೃತಾನುಕರಣ ಹಾಗೂ ಆಧುನಿಕರಣ ಪ್ರಕ್ರಿಯೆಗೆ ಕೇವಲ ಒಂದು ಶತಮಾನದ ಇತಿಹಾಸವಿದೆ. ಬಸವಣ್ಣ ಏಕಕಾಲಕ್ಕೆ ಪುರಾಣದ ನಂದಿಯೂ ಆಗಿದ್ದಾನೆ. ಜೊತೆಗೆ ಜಾತಿರಹಿತ ಕಲ್ಯಾಣ ರಾಷ್ಟ್ರ ಕಟ್ಟುವ ಕನಸುಗಾರನಾಗಿದ್ದಾನೆ. ಲಿಂಗಾಯತರ ಸಾಮಾಜಿಕ ಇತಿಹಾಸದ ಹಿನ್ನಲೆಯಲ್ಲಿ ಬಸವಣ್ಣನ ಬದಲಾದ ಇತಿಹಾಸವನ್ನು ವಿವರಿಸಬಹುದಿತ್ತು.

'ಮುನಿಪ' ಎಂದರೆ ಆಂಧ್ರದಲ್ಲಿ ಹಿಂದುಳಿದ ಜಾತಿಯ ಮಠ. ಕರ್ನಾಟಕದಲ್ಲಿ 'ಮುನಿಪ' ಎಂದರೆ ಕಾರಕೂನ ಎಂಬರ್ಥ ಇದೆ. ಜಾತಿ ನಿರ್ಮೂಲನೆಗಾಗಿ ಜರುಗಿದ ಪ್ರತಿಲೋಮ ವಿವಾಹ ಕಲ್ಯಾಣ ಕ್ರಾಂತಿಗೆ ಬಹುಮುಖ್ಯ ಕಾರಣ ಎಂಬ ನಂಬಿಕೆಯಿದೆ. ಆದರೆ ಈ (ಅಂತರ್ಜಾತಿ) ವಿವಾಹ ಜರುಗಿಲ್ಲ ಎಂಬ ವಾದವು ಇದೆ. ಪುಟ ೬೫,೬೬ ರಲ್ಲಿ ವರ್ಣನೆಗೊಂಡ ಮರುಳಸಿದ್ಧನಿಗೂ, ಕೊಪ್ಪಳ ಜಿಲ್ಲೆಯಲ್ಲಿ ಜೀವಂತವಾಗಿರುವ ಪರಿಶಿಷ್ಟ ಜಾತಿಯ ಬಸವಿಪದ್ಧತಿಗೂ ಇರುವ ಸಂಬಂಧ ಗುರುತಿಸಬೇಕಾಗಿದೆ. ಬಾಲಬಸಪ್ಪ ಪದ್ಧತಿ ಇನ್ನೂ ಹೆಚ್ಚಿನ ವಿವರಣೆ ಅಪೇಕ್ಷಿಸುತ್ತದೆ. ಬ್ರಾಹ್ಮಣರು ಬಸವಣ್ಣನ ಹೆಸರನ್ನು ಅಂಕಿತ ನಾಮವಾಗಿ ಏಕೆ ಬಳಸುತ್ತಿಲ್ಲ ಎಂಬುದು ಇಂದಿಗೂ ಚಿದಂಬರ ರಹಸ್ಯ. ಕುವೆಂಪು, ಅಂಬೇಡ್ಕರ್ ಜನನದ ಬಗ್ಗೆ "ಕುತ್ಸಿತ ಮನೋಭಾವದ ಚಿಂತನೆ" ಇರುವಂತೆ ಬ್ರಾಹ್ಮಣರು ಬಸವಣ್ಣ ಹಾಗೂ ಲಿಂಗಾಯತರ ಬಗ್ಗೆ ಹೊಂದಿರುವ ಪೂರ್ವಾಗ್ರಹ ಪೀಡೆಗಳನ್ನು ದಾಖಲಿಸಬಹುದಿತ್ತು. ಮುದ್ರಾರಾಕ್ಷಸನ ತಲೆಗೆ ಕಟ್ಟಬಹುದಾದ ಕೆಲವು ದೋಷಗಳಿವೆ.

ನಿರಾಭರಣ ಎಂಬ ಶಬ್ದ ನಿರಾಭಾರಿಯಾಗಬೇಕು (ಪು:೫೦) ಅವಿಸಿಟ್ಟ ಎಂಬ ಶಬ್ದ ಅವಿತಿಟ್ಟ ಆಗಬೇಕು (ಪು-೬೧). ಪು-೭೪ ರಲ್ಲಿ ಶಿವಸಂ ಎಂಬ ಶಬ್ದ ಶಿವಸಂತಾನವಾಗಬೇಕಿತ್ತು. ಪು-೭೫ ರಲ್ಲಿ ಕಾಣ್ಮುಚ್ಚುವುದು ಎಂಬ ಶಬ್ದ ಕಣ್ಣ ಮುಚ್ಚುವ ಆಗಬೇಕಿತ್ತು. ತೂಕ ಬದ್ಧ ಮುನ್ನುಡಿ, ಹಿನ್ನುಡಿ ಹೊಸ ಚಿಂತನೆಗೆ ಮಾರ್ಗ ಹಾಕಿದೆ. ಪುಸ್ತಕ ಮುಟ್ಟುಗೋಲು ಹಾಕಿಕೊಳ್ಳುವ ಹುಂಬತನವನ್ನು ಸರಕಾರ ಮಾಡದೆ ಮುಕ್ತ ಚರ್ಚೆಗೆ ಅವಕಾಶ ಮಾಡಬೇಕು.

ಇಡೀ ಪುಸ್ತಕದ ಓದಿನಿಂದ ಬಸವಣ್ಣ ಮಾದಿಗ ಜಾತಿಯಲ್ಲಿ ಹುಟ್ಟಿದವನೆಂದು ಒಪ್ಪಲು ಮನಸ್ಸು ಸಿದ್ಧವಿಲ್ಲವಾದರೂ ಆತ ಮಾದಿಗರವನಿರಬಹುದೆಂಬ ಸಂಶಯವಂತೂ ಮೂಡುತ್ತದೆ. □

ಆನು ಕುಲ ಹೊರಗಿನವನು...

ಡಾ. ಬಂಜಗೆರೆ ಜಯಪ್ರಕಾಶ್‌ರವರ "ಆನುದೇವ ಹೊರಗಣವನು" ಕೃತಿಯ ಕುರಿತು ನಾಡಿನಾದ್ಯಂತ ವಿಭಿನ್ನ ರೀತಿಯ ಪ್ರತಿಕ್ರಿಯೆಗಳು ಬಂದಿವೆ. ಕೆಲವರು ಅವರ ಕೃತಿ ಒಂದು ಉತ್ತಮ ಸಂಶೋಧನೆ ಎಂದರೆ ಹಲವರು ಇದು ಒಂದು ಕುಹಕ, ಸತ್ಯಕ್ಕೆ ದೂರವಾದ ಸಂಶೋಧನೆ, ಹೆಸರು ಮಾಡಲು ಹೊರಟಿರುವವನ ಬರವಣಿಗೆ ಎಂಬುದಾಗಿ ಟೀಕಿಸಿದ್ದಾರೆ. ಅದರೆ ಒಬ್ಬ ಸಂಶೋಧಕನಾಗಿ ನನಗೆ ಈ ಕೃತಿಯ ಪ್ರಸ್ತುತತೆಯ ಬಗ್ಗೆ ತುಂಬ ಜನ ಮಾತನಾಡಿಲ್ಲ ಎಂದು ಕಂಡುಬರುತ್ತದೆ. ಪ್ರಸ್ತುತತೆ ಎಂದರೆ ಒಂದು ಸಂಶೋಧನೆ, ಆ ಒಂದು ಕಾಲಘಟ್ಟದ ಸಮಾಜಕ್ಕೆ ನೀಡುವ ಕೊಡುಗೆ ಏನು? ಮತ್ತು ಸಮಾಜ ಆ ಸಂಶೋಧನೆಯಿಂದ ಪಡೆದುಕೊಳ್ಳುವುದೇನು? ಎಂಬುದಾಗಿದೆ. ಸರಳವಾಗಿ ಒಂದು ಸಂಶೋಧನೆ ಪ್ರಸ್ತುತ ಇರುವ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಅಂಶಗಳ ಮೇಲೆ ಬೀರುವ ಪ್ರಭಾವವೇ ಆಗಿದೆ.

ಬಂಜಗೆರೆ ಜಯಪ್ರಕಾಶರವರ ಈ ಒಂದು ಕೃತಿ ಇತಿಹಾಸದ ಕಾಲದಲ್ಲಿ ಮುಚ್ಚಿಹೋದ ಕೆಲವು ಸತ್ಯಗಳನ್ನು (ವೈದಿಕರು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟ ಬಸವಣ್ಣನವರ ಜಾತಿಯ ಮೂಲ ಕುರಿತ ಸತ್ಯ) ಜಗತ್ತಿಗೆ ತೋರಿಸುವುದೇ ಆಗಿದೆ, ಅಂದರೆ ಬೌದ್ಧಿಕ ಪ್ರಪಂಚದ ಕೆಲವು ಅಸ್ಪಷ್ಟತೆಗಳನ್ನು ಸರಿಪಡಿಸುವುದು ಈ ಕೃತಿಯ ಮೂಲ ಉದ್ದೇಶವಾಗಿದೆ.

ಆದರೆ ಒಂದು ಸಂಶೋಧನೆಯ ಕೊಡುಗೆ ಎರಡು ರೀತಿಯಲ್ಲಿರುತ್ತದೆ. ಒಂದು, ಲೇಖಕರು ಮೇಲೆ ಹೇಳಿದಂತೆ ಇತಿಹಾಸದಿಂದ ಉದ್ದೇಶಪೂರ್ವಕವಾಗಿ ಮುಚ್ಚಿಡಲ್ಪಟ್ಟ ಕೆಲವು ವಾಸ್ತವಗಳನ್ನು, ಅಸ್ಪಷ್ಟತೆಗಳನ್ನು ಆಧಾರ ಸಹಿತವಾಗಿ ಜಗತ್ತಿಗೆ ಹೇಳುವುದಾಗಿದೆ (ಆದರೆ ಆಧಾರಗಳು ಅಸ್ಪಷ್ಟತೆಯಿಂದ ಕೂಡಿವೆ ಎಂಬ ಕೂಗೇ ಈ ಕೃತಿಗೆ ಸಂಬಂಧಿಸಿದಂತೆ ಅಧಿಕವಾಗಿವೆ). ನನ್ನ ಪ್ರಕಾರ ಇದೇ ಅಂತಿಮವಾಗಿದ್ದರೆ ಈ ಕೃತಿ ಇಷ್ಟೊಂದು ಚರ್ಚೆಗೆ ಒಳಪಡುವ ಅವಶ್ಯಕತೆ ಇತ್ತೇ? ಖಂಡಿತವಾಗಿಯೂ ಇಲ್ಲ.

ಇನ್ನೊಂದು ದೃಷ್ಟಿಯಿಂದ ಈ ಕೃತಿ ಮಹತ್ವ ಪಡೆದಿದೆ. ಅದೆಂದರೆ, ಪ್ರಸ್ತುತ ರಾಜಕೀಯ ಮತ್ತು ಸಮಾಜ ಈ ಕೃತಿಯಿಂದ ಏನನ್ನೊ ನಿರೀಕ್ಷಿಸುತ್ತಿದೆ, ಏನನ್ನೊ ಪಡೆದುಕೊಳ್ಳುವ ಮತ್ತು ಕಳೆದುಕೊಳ್ಳುವ ಧಾವಂತ ಸಮಾಜಕ್ಕಿದ್ದಂತಿದೆ. ಆದ್ದರಿಂದಲೆ ಈ ಕೃತಿ ಇಷ್ಟೊಂದು ಚರ್ಚೆಗೊಳಗಾಗುತ್ತದೆ ಎಂದಾಯಿತು ಅಲ್ಲವೇ. ಒಬ್ಬ ರಾಜ್ಯಶಾಸ್ತ್ರದ ವಿಧ್ಯಾರ್ಥಿಯಾದ ನಾನು ಇದನ್ನು, ಈ ಸಮಾಜದ ಧಾವಂತವನ್ನು ನನ್ನ ಅಧ್ಯಯನದ ಶಿಸ್ತಿನ ಬೆಳಕಿನಲ್ಲಿ ಗ್ರಹಿಸುವ ಮತ್ತು ವಿವರಿಸುವ ಪ್ರಯತ್ನಮಾಡುತ್ತೇನೆ. ಅದಕ್ಕೆ ಪೂರಕವಾಗಿ ಭಾರತದ ಜಾತಿ ಮತ್ತು ರಾಜಕಾರಣದ ಸಂಬಂಧವನ್ನು ನೋಡುವುದು ಇಲ್ಲಿ ಅಗತ್ಯವಾಗಿದೆ.

ಭಾರತಕ್ಕೆ ಪ್ರಜಾಪ್ರಭುತ್ವ ಮಾದರಿ ರಾಜಕೀಯ ವ್ಯವಸ್ಥೆ ಬಂದ

ಅಂಕಿತವನ್ನೇ ಬದಲಿಸಿ ಬಸವಣ್ಣನಿಗೆ ಅಪಮಾನ ಮಾಡಿದ ಮಾತೆ ಮಹಾದೇವಿ ಅವರಿಗೀಗ ಬಸವ ಮಾದಿಗರವನಿರಬಹುದೆಂಬ ಅನುಮಾನಿತ ಸತ್ಯವೇ ಅವಮಾನದಂತೆ ಕಂಡು ಬೀದಿಗಿಳಿದಿದ್ದಾರೆ

ಚಾರಿತ್ರಿಕ ಅಂಶಗಳು ಏನೇ ಇರಲಿ ನಮ್ಮ ರಾಜಕೀಯ ನಾಯಕರು ಮತ್ತು ಜಾತಿ ಗುಂಪುಗಳ ನಾಯಕರು ಬಸವಣ್ಣ ಒಬ್ಬ ಸಾಮಾಜಿಕ ಸುಧಾರಕ, ಜಾತಿಯನ್ನು ವಿನಾಶಮಾಡಲು ೧೨ನೇ ಶತಮಾನದಲ್ಲಿಯೇ ಪ್ರಯತ್ನಿಸಿ ಆ ಮೂಲಕ ಇಡೀ ಸಾಮಾಜಿಕ ವ್ಯವಸ್ಥೆಯನ್ನೆ ಬದಲಾಯಿಸಲು ಹೊರಟ ಮಹಾನ್ ವ್ಯಕ್ತಿ ಎಂದು ಭಾಷಣ ಮಾಡುತ್ತಾರೆ. ಆದರೆ ಇಂದು ಡಾ. ಬಂಜಗೆರೆ ಜಯಪ್ರಕಾಶ್ ರವರು ಬಸವಣ್ಣನವರನ್ನು ಮಾದಿಗ ಜಾತಿಯವನಿರಬಹುದೆ? ಎಂದು ತಿಳಿಸಿದಾಕ್ಷಣ ಏಕೆ ಆಶ್ಚರ್ಯಗೊಳ್ಳಬೇಕು? ಇದು ಸಮಾಜದ ನಿಜವಾದ ದ್ವಂದ್ವವೇ ಸರಿ. ಜಾತಿಯು ಸಾಮಾಜಿಕ ಪಿಡುಗು ಎಂದು ಪರಿಗಣಿಸಿ, ಅದರಿಂದ ತಾವೇ(ಬಸವಣ್ಣ) ಹೊರಬಂದು ಮಾತನಾಡಿದ್ದನೆನ್ನಲಾದ ವ್ಯಕ್ತಿಯ ಜಾತಿಯ ಕುರಿತು ಈ ಪರಿ ವಿವಾದ ನಡೆಯುತ್ತದೆ ಎನ್ನುವುದು ನಿಜವಾದ ವಿಪರ್ಯಾಸ.

ಕಿರಣ ಎಂ. ಗಾಜನೂರು

ನಂತರ ಪ್ರಾತಿನಿಧಿಕ ಪ್ರಜಾಪ್ರಭುತ್ವದ ಪರಿಕಲ್ಪನೆಯಲ್ಲಿ ಪ್ರಜೆಗಳೆ ನೇರವಾಗಿ ಪ್ರಭುತ್ವದ ಆಡಳಿತದಲ್ಲಿ ಭಾಗವಹಿಸಲು ಸಾಧ್ಯವಾಗದ ಮಟ್ಟಿಗೆ ಪ್ರಭುತ್ವದ ಗಾತ್ರ ಬೆಳೆದುದರಿಂದ ಪರೋಕ್ಷವಾಗಿ ಪ್ರತಿನಿಧಿಗಳ ಮೂಲಕ ಆಳುವ ವ್ಯವಸ್ಥೆ ಹುಟ್ಟುಹಾಕಲಾಯಿತು (ದೇಶ ಕಾಲ; ಕ್ಷೀಣಿಸುತ್ತಿರುವ ಆಯ್ಕೆಯ ಸ್ವಾತಂತ್ರ; ಪ್ರೋ ಜೆ.ಎಸ್. ಸದಾನಂದ; (ಪುಟ೧೧೬)

ಈ ಪ್ರಾತಿನಿಧಿಕ ವ್ಯವಸ್ಥೆ ಅತ್ಯಂತ ಪ್ರಮುಖವಾಗಿ ಪ್ರಭಾವ ಬೀರಿದ್ದು ಮತ್ತು ಬೀರುತ್ತಲಿರುವುದು ಜಾತಿಗಳ ಸಂಚಲನದ ಮೇಲೆ (ಒಟ್ಟುಗೂಡುವಿಕೆ Caste Mobilization). ಸರಳವಾಗಿ ಹೇಳುವುದಾದರೆ, ಪ್ರಾತಿನಿಧಿಕ ವ್ಯವಸ್ಥೆ ಅಳವಡಿಸಿಕೊಂಡ ನಂತರ ಪ್ರತಿಯೊಂದು ಜಾತಿಯು ತನ್ನ ಒಂದು ಗುಂಪನ್ನು ಗಟ್ಟಿಗೊಳಿಸಿಕೊಳ್ಳತೊಡಗಿತು. ಆ ಮೂಲಕ ರಾಜಕೀಯ ಅಧಿಕಾರ ಪಡೆದು ಲಾಭ ಪಡೆಯುವ ಉದ್ದೇಶ ಎಲ್ಲಾ ಜಾತಿಯ ನಾಯಕರುಗಳಿಗೆ ಮತ್ತು ರಾಜಕೀಯ ಮುಖಂಡರಿಗೆ ಸಾಮಾನ್ಯವಾಗಿತ್ತು (ಭಾರತದಂತಹ ಸಾಮಾಜಿಕ ವ್ಯವಸ್ಥೆ ಇರುವ ದೇಶದ ರಾಜಕೀಯಕ್ಕೆ ಅದು ಅನಿವಾರ್ಯವು ಆಗಿದ್ದಿತು) ಕರ್ನಾಟಕವು ಈ ಪರಿಸ್ಥಿತಿಯಿಂದ ಹೊರತಾಗಿರಲಿಲ್ಲ.

ಇಂತಹ ಸಂದರ್ಭದಲ್ಲಿ ತಮ್ಮ ಜಾತಿಯ ಜನರನ್ನು ಒಂದು ಗೂಡಿಸಲು ಆ ಜಾತಿಯ ಮುಖಂಡರಿಗೆ ಕೆಲವೊಂದು ಅಂಶಗಳನ್ನು ಅವರ ಜನಕ್ಕೆ ಮನವರಿಕೆ ಮಾಡುವ ಅಗತ್ಯತೆ ಇತ್ತು. ಉದಾಹರಣೆಗೆ ಏಕೆ ಒಂದಾಗಬೇಕು? ಅದರ ಅಗತ್ಯತೆ ಮತ್ತು ಪ್ರಯೋಜನವೇನು? ಇತ್ಯಾದಿ. ಆಗ ಅದಕ್ಕೆ ಪೂರಕವಾಗಿ ಜಾತಿಯ ಇತಿಹಾಸ ಸೃಷ್ಟಿಯಾಗತೊಡಗಿತು. ಜಾತಿಯನ್ನು ಪವಿತ್ರ, ಐತಿಹಾಸಿಕವಾಗಿ ಮಹತ್ವ ಪಡೆದ ಮಹನೀಯರು ಜನಿಸಿದ ಜಾತಿ ಎಂಬಿತ್ಯಾದಿ ಇತಿಹಾಸವನ್ನು ಹೆಣಿಯುವ ಕಾರ್ಯ ಪ್ರಾರಂಭವಾಯಿತು. (ಆಧಾರಗಳನ್ನು ನೀಡುವ ಮೂಲಕ ಅಂದರೆ ಜಾನಪದ ಕಥೆಗಳು. ಪುರಾಣಗಳು ಇವುಗಳಿಗೆ ಆಧಾರ ಒದಗಿಸಿದವು) ಹಲವಾರು ಕಥೆಗಳಿಗೆ ಮಹತ್ವ ಬರತೊಡಗಿತು, ಪುರಾಣಗಳು ಮಹತ್ವ ಪಡೆಯತೊಡಗಿದವು (ಜಾತಿಯ ಒಳಗೆ ಗುರುತಿಸಿಕೊಳ್ಳುವುದರ ಮೂಲಕ).

ಒಟ್ಟಾರೆ ಒಂದು ಜಾತಿಯು ಸಂಚಲನಕ್ಕೆ (Caste Mobilization) ಪೂರಕವಾಗಿ ಪ್ರತಿಯೊಂದು ಜಾತಿ ಇತರೆ ಜಾತಿಗಿಂತ ಪವಿತ್ರ (ಆಡು ಭಾಷೆಯಲ್ಲಿ) ಮತ್ತು ಉತ್ತಮ ಹಿನ್ನೆಲೆ ಹೊಂದಿದೆ ಎಂಬ ಬಗೆಯ ಇತಿಹಾಸ ಮತ್ತು ಜ್ಞಾನ ಸೃಷ್ಟಿಯಾಗತೊಡಗಿತು (ಇದರ ಅರ್ಥ ಜಾತಿಯ ಕುರಿತಾದ ಎಲ್ಲಾ ಕಥೆಗಳು, ಪುರಾಣಗಳು ಇದೇ ಕಾರಣಕ್ಕೆ ಸೃಷ್ಟಿಯಾದವು ಅಂತ ಅಲ್ಲ ಕೆಲವು ಸೃಷ್ಟಿಯಾದರೆ ಹಲವು ಇದ್ದಂತಹ ಕಥೆಗಳ ಸ್ವರೂಪವು ಜಾತಿಗೆ ಪೂರಕವಾಗಿ ಉತ್ಪ್ರೇಕ್ಷಿತವಾಗಿ (exaggeration) ನಿರೂಪಿಸಲ್ಪಟ್ಟವು. ಐತಿಹಾಸಿಕ ವ್ಯಕ್ತಿಗಳು ಇದಕ್ಕೆ ಹೊರತಾಗಿಲ್ಲ ಉದಾ; ಬಸವಣ್ಣ, ಕನಕದಾಸ ಮುಂತಾದವರು. ಈ ರೀತಿಯ ಜ್ಞಾನವೇ ಮುಂದೆ ಜಾತಿ ಸಂಘಗಳು, ಮಠಗಳ ಉಗಮಕ್ಕೆ, ಕಾರಣೀಭೂತವಾದವು. (ಇವು ಇಂದಿಗೂ 'ಏಕೆ ತಮ್ಮ ಜಾತಿ ಪ್ರಮುಖವಾಗಿದೆ', ಎಂಬ ಪ್ರಶ್ನೆಗೆ ಸಂಬಂಧಿಸಿದಂತೆ ಉತ್ತರವನ್ನು ನೀಡುತ್ತಲೇ ಇವೆ)

ಈ ರೀತಿಯ ಜ್ಞಾನದ ಆಧಾರದ ಮೇಲೆ ತಮ್ಮ ಒಂದು ಜಾತಿಯ ಜನರನ್ನು ಕ್ರೋಢೀಕರಿಸಿ ನಾಯಕತ್ವವನ್ನು (ಸಾಮಾಜಿಕ ಮತ್ತು ರಾಜಕೀಯ ನಾಯಕತ್ವವನ್ನೂ) ಹೊಂದಿದ ವ್ಯಕ್ತಿಗೆ ಮುಂದೊಂದು ದಿನ ತಾನು



ವಚನ ಯುಗದ ಕುರಿತು ಇನ್ನು ಗಹನವಾದ, ಹಿರಿದಾದ ಅರ್ಥ ಮತ್ತು ಆಶಯಗಳನ್ನು ಗುರುತಿಸುವ ಮಟ್ಟದ ಪ್ರಯತ್ನ ಆಧುನಿಕ ಚಿಂತಕರಿಂದ ನಡೆಯಬೇಕಾಗಿದೆ.

ಪಡೆದ ಜ್ಞಾನ ಸರಿಯಾದುದಲ್ಲ ಮತ್ತು ಆ ಜ್ಞಾನದ ಹುಟ್ಟಿಗೆ ಅಡಿಪಾಯವಾದ ತತ್ವಗಳು ಮತ್ತು ಅವುಗಳನ್ನು ನೀಡಿದ ವ್ಯಕ್ತಿ ನಿಮ್ಮ ಜಾತಿಗೆ ಸೇರಿಯೇ ಇಲ್ಲ ಎಂದು ಯಾವುದಾದರು ಸಂಶೋಧನೆ ನಿರೂಪಿಸಲು ಪ್ರಯತ್ನಿಸಿದರೆ, ಆ ನಾಯಕರುಗಳಿಗೆ ಇದು ನಿಜವಾಗಲು ಆತಂಕದ ಸಂಗತಿಯೇ ಸರಿ. ಏಕೆಂದರೆ ಅವರು ಇದುವರೆಗೂ ನಂಬಿಕೊಂಡಂತಹ ಮತ್ತು ಹಲವರನ್ನು ನಂಬಿಸಲು ಪ್ರಯತ್ನಿಸಿದ ಸಂಗತಿಯೇ ಸುಳ್ಳು ಎಂದಾದರೆ ಇದುವರೆಗೂ ಅವರ ಜಾತಿಯ ಸಂಚಲನಕ್ಕೆ (Mobilization) ಪೂರಕವಾದ ಮತ್ತು ನಾಯಕತ್ವದ ತಳಹದಿಯಾದ ಜ್ಞಾನವೇ ಒಂದು ತಪ್ಪು ಕಲ್ಪನೆ ಎಂದಾದರೆ ಆಗುವ ಪರಿಣಾಮವೇ ಈಗ "ಅನುದೇವ ಹೊರಗಣವನು" ಕೃತಿಯ ಬಗ್ಗೆ ನಡೆಯುತ್ತಿರುವ ವಿವಾದ.

ಈಗಿನ ಸಮಸ್ಯೆ ಕೂಡ ಇದೇ ಆಗಿದೆ. ಬಂಜಗೆರೆ ಜಯಪ್ರಕಾಶ್‌ರವರ "ಅನುದೇವ ಹೊರಗಣವನು" ಕೇವಲ ಒಂದು ಇತಿಹಾಸದಲ್ಲಿ ಮುಚ್ಚಿಹೋದ ಸತ್ಯ ಹುಡುಕುವ ಮತ್ತು ಅದರ ಅಸ್ಪಷ್ಟತೆಯನ್ನು ಸರಿಪಡಿಸುವ ಕೃತಿಯೇ ಆಗಿದಿದ್ದರೆ (ಲೇಖಕರ ಪ್ರಕಾರ ಅದೇ) ಈ ಮಟ್ಟದ ಪ್ರಭಾವ ಅದಕ್ಕೆ ಬರುತ್ತಿರಲಿಲ್ಲ ಆದರೆ ಇದು ಕರ್ನಾಟಕದ ಜಾತಿ ಮತ್ತು ರಾಜಕಾರಣದ ನಂಬಿಕೆಗಳಿಗೆ ಒಂದು ವಿಭಿನ್ನ ರೀತಿಯ ಪ್ರಭಾವ ಬೀರುವ ಅಂಶಗಳನ್ನು ತನ್ನೊಳಗೆ ಹೊಂದಿದೆ. ಸಾಮಾಜಿಕವಾಗಿ ವಿರುದ್ಧ ದಿಕ್ಕಿನಲ್ಲಿರುವ ಜಾತಿಗಳ ಪವಿತ್ರತೆಯ ಪ್ರಶ್ನೆಯಾಗಿದೆ. ಅವರ ಸಾಮಾಜಿಕ, ರಾಜಕೀಯ ಸಂಚಲನಕ್ಕೆ ಪೂರಕವಾಗಿ ಇರುವ ಸೈದ್ಧಾಂತಿಕ ಜ್ಞಾನದ ಪ್ರಶ್ನೆಯಾಗಿದೆ. ಇಡಿ ೧೨ನೇ ಶತಮಾನದಲ್ಲಿ ವಚನ ಚಳುವಳಿಯ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದ ಬಸವಣ್ಣನವರು ಯಾವ ಜಾತಿ ಎಂಬ ಪ್ರಶ್ನೆ ಏಕೆ ಇಲ್ಲಿ ಪ್ರಾಮುಖ್ಯತೆ ಪಡೆದಿದೆ? ಏಕೆಂದರೆ ಒಂದು ಜಾತಿಯ ಇತಿಹಾಸದ ಮೂಲ ಬೇರು, ಮೂಲ ತತ್ವ, ಅದರ ಪವಿತ್ರತೆಯ ಪ್ರತೀಕ ಮತ್ತು ಸಂಚಲನದ ಶಕ್ತಿಯಾದ (Caste Mobilization) ಬಸವಣ್ಣ ನಮ್ಮವನಲ್ಲವೇ? ಎಂಬ ಪ್ರಶ್ನೆ ಒಂದು ವರ್ಗದ ತಳಮಳವಾದರೆ ಅಂತಹ ಮಹಾನ್ ವ್ಯಕ್ತಿ ನಮ್ಮವನು ಎಂಬುದು ಮತ್ತೊಂದು ಗುಂಪಿನ ಹರ್ಷವಾಗಿದೆ, ಅದಕ್ಕೆ ವಾದ ಪ್ರತಿವಾದಗಳು ಈ ಪರಿಯಾಗಿ ನಡೆಯುತ್ತಲೆ ಇವೇ.

ಅದರೆ ವಾಸ್ತವದಲ್ಲಿ ಇದು ಪ್ರಶ್ನೆಯೇ ಅಲ್ಲ, ಏಕೆಂದರೆ ಬಸವಣ್ಣನವರು ಬ್ರಾಹ್ಮಣತ್ವವನ್ನು ಬಿಟ್ಟು, ಶೂದ್ರತ್ವವನ್ನು ತೂರೆದು ಶಿವ ಶರಣರ ಸಮಾಜವನ್ನು ಕಟ್ಟುವ ಕನಸನ್ನು ಕಂಡ ಮಹಾನ್ ವ್ಯಕ್ತಿ. ಅವರು ಎಂದಿಗೂ ಸಹ ಜಾತಿಯ ತಾರತಮ್ಯವನ್ನು ಅವರ ವಿಚಾರಧಾರೆಯ ಮೂಲವಾಗಿ ಬಳಸಿಕೊಳ್ಳಲೇ ಇಲ್ಲ.

ಚಾರಿತ್ರಿಕ ಅಂಶಗಳು ಏನೇ ಇರಲಿ ನಮ್ಮ ರಾಜಕೀಯ ನಾಯಕರು ಮತ್ತು ಜಾತಿ ಗುಂಪುಗಳ ನಾಯಕರು ಬಸವಣ್ಣ ಒಬ್ಬ ಸಾಮಾಜಿಕ ಸುಧಾರಕ, ಜಾತಿಯನ್ನು ವಿನಾಶಮಾಡಲು ೧೨ನೇ ಶತಮಾನದಲ್ಲಿಯೇ ಪ್ರಯತ್ನಿಸಿ ಆ ಮೂಲಕ ಇಡೀ ಸಾಮಾಜಿಕ ವ್ಯವಸ್ಥೆಯನ್ನೆ ಬದಲಾಯಿಸಲು ಹೊರಟ ಮಹಾನ್ ವ್ಯಕ್ತಿ ಎಂದು ಭಾಷಣ ಮಾಡುತ್ತಾರೆ. ಆದರೆ ಇಂದು ಡಾ. ಬಂಜಗೆರೆ ಜಯಪ್ರಕಾಶ್‌ರವರು ಬಸವಣ್ಣನವರನ್ನು ಮಾದಿಗ ಜಾತಿಯವನಿರಬಹುದೆ? ಎಂದು ತಿಳಿಸಿದಾಕ್ಷಣ ಏಕೆ ಆಶ್ಚರ್ಯಗೊಳ್ಳಬೇಕು? ಇದು ಸಮಾಜದ ನಿಜವಾದ ದ್ವಂದ್ವವೇ ಸರಿ. ಜಾತಿಯು ಸಾಮಾಜಿಕ ಪಿಡುಗು ಎಂದು ಪರಿಗಣಿಸಿ, ಅದರಿಂದ ತಾವೇ(ಬಸವಣ್ಣ) ಹೊರಬಂದು ಮಾತನಾಡಿದ್ದನೆನ್ನಲಾದ ವ್ಯಕ್ತಿಯ ಜಾತಿಯ ಕುರಿತು ಈ ಪರಿ ವಿವಾದ ನಡೆಯುತ್ತದೆ ಎನ್ನುವುದು ನಿಜವಾದ ವಿಪರ್ಯಾಸ.

ಇನ್ನು ಕೃತಿಯ ಬಗ್ಗೆ ಹೇಳುವುದಾದರೆ ಬಂಜಗೆರೆಯವರು ಇತಿಹಾಸದ ವಸ್ತುನಿಷ್ಠ ಸಮಸ್ಯೆಗಳನ್ನು ಚರ್ಚಿಸುತ್ತಾ ಬಸವಣ್ಣನವರ ಜಾತಿಯ ಮೂಲವನ್ನು ಪ್ರಶ್ನಿಸುತ್ತಾರೆ. ಆದರೆ ಇಷ್ಟೆಲ್ಲ ಅವರು ಮಾಡುವುದು ಅವನ ಮಾದಿಗ ಮೂಲದ ವಸ್ತುನಿಷ್ಠತೆಯನ್ನು ಸೂಚಿಸುವುದಕ್ಕಾಗಿ. ಅವರೇಕೆ ಹುಟ್ಟನ್ನು ಸಮಸ್ಯೀಕರಿಸುವುದು ಮುಖ್ಯ ಎಂದು ಭಾವಿಸುತ್ತಾರೆ. ಏಕೆಂದರೆ ಬಂಜಗೆರೆಯವರು ಬಸವಣ್ಣನವರ ಹುಟ್ಟು ಪ್ರಸ್ತುತ ಸಾಂಸ್ಕೃತಿಕ ರಾಜಕೀಯದ ಒಂದು ಅಗತ್ಯ ಎಂದು ಅವರು ತಿಳಿದಿದ್ದಾರೆ. ಹಾಗಾಗಿ ಅವರೇ ಪ್ರಶ್ನಿಸುವ ಇತಿಹಾಸದ ವಸ್ತುನಿಷ್ಠತೆಯ ಆಯುಧ'ವನ್ನು ಹಿಡಿದು ತಮ್ಮ ವಾದವನ್ನು ಹೆಣೆದಿರುವುದು ಕೃತಿಯುದ್ದಕ್ಕೂ ಕಂಡುಬರುತ್ತದೆ.

ರಾಜಕೀಯ ಅಗತ್ಯಕ್ಕಾಗಿ ಜಾತಿಯ ಜನರ ಗುಂಪನ್ನು ಕಟ್ಟುವ ತರಾತುರಿಯಲ್ಲಿ ಈ ನಾಯಕರಿಗೆ ಬಸವಣ್ಣನವರ ಆದರ್ಶಗಳು ಮುಖ್ಯವಾಗಿಲ್ಲ, ಬದಲಾಗಿ ತಮ್ಮ ಜಾತಿಯ ಶ್ರೇಷ್ಟತೆಯ ಇತಿಹಾಸಕ್ಕೆ ಪ್ರತೀಕವಾಗಿ ಮಾತ್ರ ಬೇಕಾಗಿರುವುದು ನಿಜವಾದ ದುರಂತವಾಗಿದೆ.

ಕೇವಲ ರಾಜಕಾರಣ ಮತ್ತು ಜಾತಿ ಇವೆರಡರ ಹೊಂದಾಣಿಕೆಯ ನಡುವೆ ಒಬ್ಬ ಮಹಾನ್ ವ್ಯಕ್ತಿಯ ಆದರ್ಶಗಳು ದೂರವಾಗಿ ಅವರು ಕೇವಲ ಜಾತಿಯ ಪ್ರತೀಕವಾಗಿ ಮಾತ್ರ ಬಳಸಲ್ಪಡದಿರಲಿ, ವಚನ ಯುಗದ ಕುರಿತು ಇನ್ನು ಗಹನವಾದ, ಹಿರಿದಾದ ಅರ್ಥ ಮತ್ತು ಆಶಯಗಳನ್ನು ಗುರುತಿಸುವ ಮಟ್ಟದ ಪ್ರಯತ್ನ ಆಧುನಿಕ ಚಿಂತಕರಿಂದ ನಡೆಯಲಿ ಎಂಬುದೆ ನಮ್ಮ ಅನಿಸಿಕೆ... □

ಬಸವಣ್ಣ ಮಾದಾರ!?

ಡಾ॥ ಕೆ.ಎಸ್. ಭಗವಾನ್

ಚಾರಿತ್ರಿಕ ಅಂಶಗಳು ಏನೇ ಇರಲಿ ನಮ್ಮ ರಾಜಕೀಯ ನಾಯಕರು ಮತ್ತು ಜಾತಿ ಗುಂಪುಗಳ ನಾಯಕರು ಬಸವಣ್ಣ ಒಬ್ಬ ಸಾಮಾಜಿಕ ಸುಧಾರಕ, ಜಾತಿಯನ್ನು ವಿನಾಶಮಾಡಲು ೧೨ನೇ ಶತಮಾನದಲ್ಲಿಯೇ ಪ್ರಯತ್ನಿಸಿ ಆ ಮೂಲಕ ಇಡೀ ಸಾಮಾಜಿಕ ವ್ಯವಸ್ಥೆಯನ್ನೆ ಬದಲಾಯಿಸಲು ಹೊರಟ ಮಹಾನ್ ವ್ಯಕ್ತಿ ಎಂದು ಭಾಷಣ ಮಾಡುತ್ತಾರೆ. ಆದರೆ ಇಂದು ಡಾ. ಬಂಜಗೆರೆ ಜಯಪ್ರಕಾಶ್‌ರವರು ಬಸವಣ್ಣನವರನ್ನು ಮಾದಿಗ ಜಾತಿಯವನಿರಬಹುದೆ? ಎಂದು ತಿಳಿಸಿದಾಕ್ಷಣ ಏಕೆ ಆಶ್ಚರ್ಯಗೊಳ್ಳಬೇಕು? ಇದು ಸಮಾಜದ ನಿಜವಾದ ದ್ವಂದ್ವವೇ ಸರಿ. ಜಾತಿಯು ಸಾಮಾಜಿಕ ಪಿಡುಗು ಎಂದು ಪರಿಗಣಿಸಿ, ಅದರಿಂದ ತಾವೇ (ಬಸವಣ್ಣ) ಹೊರಬಂದು ಮಾತನಾಡಿದ್ದನೆನ್ನಲಾದ ವ್ಯಕ್ತಿಯ ಜಾತಿಯ ಕುರಿತು ಈ ಪರಿ ವಿವಾದ ನಡೆಯುತ್ತದೆ ಎನ್ನುವುದು ನಿಜವಾದ ವಿಪರ್ಯಾಸ.

ಯಾವ ದೃಷ್ಟಿಯಿಂದ ನೋಡಿದರೂ ಜಾಗತಿಕ ಇತಿಹಾಸದಲ್ಲಿ ಒಬ್ಬ ದೊಡ್ಡ ವ್ಯಕ್ತಿಯಾಗಿ ನಿಲ್ಲಬಲ್ಲ ಬಸವಣ್ಣನ ಬಗ್ಗೆ ಚರ್ಚೆ ನಡೆಯುತ್ತಲೇ ಇದೆ. ಇದು ಆತನ ವ್ಯಕ್ತಿತ್ವದ ಗಾಢತೆ ಮತ್ತು ಪ್ರಸ್ತುತತೆಯನ್ನು ಪ್ರಕಟಿಸುವ ಅಂಶ. ಈಗ ಬಸವಣ್ಣನ ಜಾತಿಯನ್ನು ಕುರಿತು ವಿವಾದ ಎದ್ದಿದೆ. ಅವನ ತತ್ವಗಳನ್ನು ಆಚರಣೆಗೆ ತರುವುದಕ್ಕಿಂತ ಅವನ ಜಾತಿಯನ್ನು ಕುರಿತು ಚರ್ಚಿಸುವುದು ಸುಲಭ ಎನ್ನುವುದು ಸಿನಿಕತನವಾಗಬಹುದು. ಹಾಗೆಂದು ಆತನ ಕುಲದ ಬಗ್ಗೆ ಮಾತನಾಡಬಾರದು ಎಂದಲ್ಲ. ಏಕೆಂದರೆ ಈ ಹಿಂದೆಯೂ ಆತನ ವಂಶದ ವಿಚಾರವಾಗಿ ಚರ್ಚೆ ನಡೆದಿದೆ. ಆದ್ದರಿಂದ ಬಸವಣ್ಣ ಬ್ರಾಹ್ಮಣನೇ? ಮಾದಾರರವನೇ? ಎಂಬ ಪ್ರಶ್ನೆ ಪ್ರಸ್ತುತವಾಗಿದೆ. ಕೆಲವರು ಬಸವಣ್ಣನ ಜಾತಿಯನ್ನು ಎತ್ತಬಾರದು ಎನ್ನುತ್ತಾರೆ ಸರಿ. ಮೊದಲು ಯಾಕೆ ಎತ್ತಿದರು? ಅವನು ಶೈವ ಬ್ರಾಹ್ಮಣ ಎಂದು. ಹೇಳುವ ಅಗತ್ಯ ಏನಿತ್ತು? ಜಾತಿ ಬಿಟ್ಟವನಿಗೆ ಜಾತಿ ಎಲ್ಲಿ? ಬಸವಣ್ಣನದು ಮಾನವ ಜಾತಿ! ಅವನ ಧರ್ಮ ಮಾನವ ಧರ್ಮ.

ಈಗಿನ ವಿವಾದದ ಜೇನುಗೂಡಿಗೆ 'ಆನು ದೇವಾ ಹೊರಗಣವನು' (ಏಪ್ರಿಲ್ ೨೦೦೭ ಎಂಬ ಡಾ॥ ಬಂಜಗೆರೆ ಜಯಪ್ರಕಾಶ್ ಅವರ ಕೃತಿ ಕಾರಣ. ಜೇನು ಹುಳುಗಳು ಕಚ್ಚುತ್ತವೆಯೆ? ಜೇನುತುಪ್ಪ ಸಿಗುವುದೆ? ನೋಡಬೇಕು.

ಆವೇಶ, ಆಗ್ರಹ, ವ್ಯಗ್ರತೆ ಇಲ್ಲದೆ ಲೇಖಕ ತಮ್ಮ ಸಂಶೋಧನೆಯ ಫಲಿತಗಳನ್ನು ಈ ಕೃತಿಯಲ್ಲಿ ಮಂಡಿಸಿದ್ದಾರೆ. ನಾನು ಹೇಳಿದ್ದೆ ಸರಿ, ನನ್ನ ಹುಡುಕಾಟವೆ ಕೊನೆ ಎಂಬ ಧೋರಣೆ ಇಲ್ಲಿ ಇಲ್ಲ. ಬದಲಿಗೆ ಈ ಕೆಲವು ಅಂಶಗಳನ್ನು ನನಗೆ ಸರಿ ತೋರಿದಂತೆ ಹೇಳಿದ್ದೇನೆ! ಈ ಬರಹದ ಯಥಾರ್ಥತೆಯನ್ನು ಬಲ್ಲವರು ನಿರ್ಧರಿಸಬೇಕೆಂಬ ಪ್ರಾಮಾಣಿಕತೆ ಮತ್ತು ವಿನಯವಂತಿಕೆ ಇದೆ.

ಬ್ರಾಹ್ಮಣರನ್ನು ಮಾತ್ರ ಇತರರಿಂದ ಪ್ರತ್ಯೇಕಿಸುವ ನಿಶಿತ ಅಸ್ತ್ರ ಜನಿವಾರ. ಆದರೆ ಇದರ ಧಾರಣೆ ಅವರಿಗೆ ಮಾತ್ರ ಸೀಮಿತವಲ್ಲ. ದೇವಾಂಗ ನೇಕಾರ ಅಕ್ಕಸಾಲಿ ಕಮ್ಮಾರ ಮುಂತಾದ ಜಾತಿಗಳ ಪುರುಷರೂ ಜನಿವಾರ ಹಾಕಿಕೊಳ್ಳುತ್ತಾರೆಂದು ಹೇಳಿ, ಸಿಂಧ್ ಮಾದಿಗರ ಒಂದು ಪಂಗಡ ಯಜ್ಞೋಪವೀತ ತೊಡುವುದನ್ನು ಕೋಟಗಾನಹಳ್ಳಿ ರಾಮಯ್ಯ ಪತ್ತೆ ಹಚ್ಚಿರುವುದನ್ನು ಬಂಜಗೆರೆ ಉಲ್ಲೇಖಿಸುತ್ತಾರೆ (ಪು. ೩೮).

ಶಿಷ್ಯ ಯಾವ ಜಾತಿಯವನೇ ಆಗಿರಲಿ, ಅವನು ತನಗೆ ದೀಕ್ಷೆ ಕೊಟ್ಟ ಗುರುವಿನ ಜಾತಿಗೆ ಸೇರುವುದು ಅಧ್ಯಾತ್ಮ ಜೀವನದ ವಾಡಿಕೆ. ವಿದ್ಯಾಭ್ಯಾಸ ಪೂರೈಸಿದ ಮೇಲೆ ತನ್ನ ಬುದ್ಧಿವಂತಿಕೆಯಿಂದ ಬಿಜ್ಜಳನ ರಾಜ್ಯದಲ್ಲಿ ಬಸವಣ್ಣ ಕೆಲಸ ಪಡೆದಿರಲಿಕ್ಕೆ ಸಾಕು.

ಹೀಗೆ ಇನ್ನು ಕೆಲವು ಅನುಮಾನಗಳನ್ನು ಹೋಗಲಾಡಿಸಲು ವಿವರಣೆಗಳನ್ನು ಬಂಜಗೆರೆ ನೀಡಿದ್ದಾರೆ. ಆದರೆ ಬಸವಣ್ಣ ಮಾದರನಾಗಿದ್ದರೆ ಬ್ರಾಹ್ಮಣ ಬಲದೇವನ ಮಗಳು ಗಂಗಾಂಬಿಕೆಯನ್ನು ಮದುವೆಯಾಗಲು ಸಾಧ್ಯವೆ? ಇದನ್ನು ಅವರು ಎದುರಿಸಿಲ್ಲ. ಒಂದು ಪಕ್ಷ ಆಗಿದ್ದರೆ ಕಲ್ಯಾಣ ಕ್ರಾಂತಿಯ ನಡೆಯುತ್ತಿರಲಿಲ್ಲ. ಹರಳಯ್ಯರ

ಮಗ ಮಧುವರಸರ ಮಗಳು ಪ್ರತಿಲೋಮ ಮದುವೆಯಿಂದ ರಕ್ತದ ಕೋಡಿ ಹರಿಯುವುದಕ್ಕೆ ಅವಕಾಶ ಇರುತ್ತಿತ್ತೆ? ಬ್ರಾಹ್ಮಣರು ಅವತ್ತೇ ಆಗಲಿ, ಇವೊತ್ತೇ ಆಗಲಿ 'ಬಸವ' ಎಂಬ ಹೆಸರನ್ನು ಇಟ್ಟುಕೊಂಡಿರುವ ನಿದರ್ಶನ ಇಲ್ಲ. ಹಾಗೆಯೆ ಗಂಗಾಂಬಿಕೆ, ಮೂಡಲಾಂಬಿಕೆ, ಮುಂತಾದ ಹೆಸರುಗಳು ಅವರ ಮಹಿಳಾವರ್ಗದಲ್ಲಿ ಕಾಣದು. ಇವೆಲ್ಲ ಮೆರಗುಗೊಳಿಸಿದ ಹೆಸರುಗಳು.

ಬಸವಣ್ಣನ ಮೇಲೆ ಬರೆಯುವ ಸಂದರ್ಭದಲ್ಲಿ ಆತ ಬ್ರಾಹ್ಮಣ ಎನ್ನುವಾಗ ಆ ಶಬ್ದದ ಮುಂದೆ ಆವರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ನಾನು ಸಾಮಾನ್ಯವಾಗಿ ಇರಿಸಿದ್ದೇನೆ. ಏಕೆಂದರೆ ಬ್ರಾಹ್ಮಣ್ಯವನ್ನು ವೇದಗಳನ್ನು ಬಸವಣ್ಣ ಉಗ್ರವಾಗಿ ಖಂಡಿಸುತ್ತಾನೆ.

೧. ವೇದಕ್ಕೆ ಒರೆಯ ಕಟ್ಟುವೆ... (ಪು.೧೮೦)
೨. ಏನಯ್ಯ ಮಿತ್ರರು ನುಡಿದಂತೆ ನಡೆಯರು... (ಪು.೧೮೩)
೩. ವರ್ಣಾನಾಂ ಬ್ರಾಹ್ಮಣೋ ಗುರುಃ ಎಂಬುದು ಸಲಸಿ (ಪು.೧೫೦)
೪. ವಿಪ್ರರೂಪೇಣ ರಾಕ್ಷಸ... (ಪು. ೧೮೯)
೫. ಬ್ರಾಹ್ಮಣಾಂ ಗರ್ದಭಾಗಿ... (ಪು. ೧೮೭)
(ಬಸವಣ್ಣನವರ ವಚನ ಸಂಪುಟ ಸರ್ಕಾರದ ಪ್ರಕಟಣೆ (೧೯೯೩)

ಇವೇ ಮುಂತಾದ ವಚನಗಳಲ್ಲಿ ಅಡಗಿರುವ ವಿರೋಧ ಕ್ರೋಧ ತಿರಸ್ಕಾರಗಳನ್ನು ಗಮನಿಸಬೇಕು. ಇಷ್ಟು ತೀವ್ರವಾಗಿ ಬ್ರಾಹ್ಮಣನಾದವನು ತನ್ನ ಜನಾಂಗವನ್ನು ನಿಂದಿಸಲಾರ. ಬ್ರಾಹ್ಮಣಧರ್ಮದ ಸುಮಾರು ಎರಡು ಮುಕ್ಕಾಲು ಅಥವಾ ಮೂರು ಸಾವಿರ ವರ್ಷಗಳ ಇತಿಹಾಸದಲ್ಲಿ ಆ ಸಮಾಜದ ಯಾವ ಸದಸ್ಯನು ಇಷ್ಟು ತೀಕ್ಷ್ಣವಾಗಿ ತಮ್ಮವರನ್ನು ಟೀಕಿಸಿಲ್ಲ.

ಬಸವಣ್ಣ ನಿಜವಾಗಿಯೂ ಬ್ರಾಹ್ಮಣನಾಗಿದ್ದರೆ ಬ್ರಾಹ್ಮಣರೇಕೆ ಅವನ ಹೆಸರು ಹೇಳುವುದಿಲ್ಲ? ತಮ್ಮ ಮನೆಗಳಲ್ಲಿ ಆತನ ಚಿತ್ರಪಟ ಇಟ್ಟುಕೊಂಡಿಲ್ಲ? ಅವರು ಅವನನ್ನು ಒಪ್ಪಿಕೊಂಡಿಲ್ಲ, ಏಕೆ? ಅಂಬೇಡ್ಕರ್, ಪೆರಿಯಾರ್, ಕುವೆಂಪು ಮುಂತಾದವರೆಲ್ಲ ಬ್ರಾಹ್ಮಣ ಮತದ ಅಮಾನುಷತೆಯನ್ನು ಬಹಿರಂಗಪಡಿಸಿದಾಗ, ಬಸವಣ್ಣ ಬ್ರಾಹ್ಮಣನಾಗಿದ್ದರೆ ಬ್ರಾಹ್ಮಣರು ಅವನನ್ನು ತಮ್ಮ ಗುರಾಣಿಯಾಗಿ ಹಿಡಿದುಕೊಳ್ಳಬಹುದಿತ್ತಲ್ಲವೆ?

ದೇಹ ಶ್ರಮವನ್ನು ಬ್ರಾಹ್ಮಣರು ಮಾಡುವುದಿಲ್ಲ. ಅದಕ್ಕಾಗಿಯೆ ಬ್ರಾಹ್ಮಣ ಧರ್ಮ ಬಹುಜನ ಸಮುದಾಯವನ್ನು ಬೇರ್ಪಡಿಸಿದೆ. ಆದರೆ ಬಸವಣ್ಣ ಕಾಯಕವನ್ನು ಕಡ್ಡಾಯ ಮಾಡಿದ. ಎಲ್ಲರೂ ದುಡಿದಿದ್ದರಿಂದ ಉತ್ಪಾದನೆ ಹೆಚ್ಚಾಯಿತು–ಸಂಪತ್ತು ವೃದ್ಧಿಸಿತು. ಎಲ್ಲರೂ ದಾಸೋಹ ತತ್ವ ಅನುಸರಿಸಿದ್ದರಿಂದ ತಮ್ಮ ಸಂಸಾರ ನಿರ್ವಹಣೆಗೆ ಬೇಕಾದಷ್ಟು ಇಟ್ಟುಕೊಂಡು ಅಧಿಕವಾದುದನ್ನು ಸಮಾಜಕ್ಕೆ (ಸರ್ಕಾರಕ್ಕೆ) ನೀಡಿದರು. ಅದು ಸುಖೀರಾಜ್ಯ, (wel fare state) ಕಲ್ಯಾಣ ರಾಜ್ಯವಾಯಿತು.

ಇದನ್ನು ಸಹಿಸದ ಜನರು ಇದ್ದರು. ಅವರು ಸೋದರಿ ಸಂಸ್ಕೃತಿಯನ್ನು ವೈಭವೀಕರಿಸಿದ್ದರು. ಕಾಯಕ ಮಾಡದೆ ಉಣ್ಣುವ ಅಧಿಕಾರ ಇಲ್ಲ ಎಂದು ಬಸವಣ್ಣ ಮಾಡಿದ್ದಕ್ಕೆ ಅವರೆಲ್ಲ ಅವನ ಚಳವಳಿಯ ವಿರುದ್ಧ ಪಿತೂರಿ ನಡೆಸಿದರು. ಇದು ಇತಿಹಾಸ.

ಈ ಎಲ್ಲ ಕಾರಣಗಳಿಂದ ಬಸವಣ್ಣ ಬ್ರಾಹ್ಮಣನಲ್ಲ ಎಂಬ ತೀರ್ಮಾನಕ್ಕೆ ಅನಿವಾರ್ಯವಾಗಿ ಬರಬೇಕಾಗುತ್ತದೆ. ಬಸವಣ್ಣ ಮುವತ್ತಕ್ಕೆ ಹೆಚ್ಚು ಸಾರಿ ಮಾದಾರ ಚೆನ್ನಯ್ಯನನ್ನು ತನ್ನ ವಚನಗಳಲ್ಲಿ ಸ್ಮರಿಸುತ್ತಾರೆ:



ಅವಲೋಕನ

ದೇಹ ಶ್ರಮವನ್ನು ಬ್ರಾಹ್ಮಣರು ಮಾಡುವುದಿಲ್ಲ. ಅದಕ್ಕಾಗಿಯೆ ಬ್ರಾಹ್ಮಣ ಧರ್ಮ ಬಹುಜನ ಸಮುದಾಯವನ್ನು ಬೇರ್ಪಡಿಸಿದೆ. ಆದರೆ ಬಸವಣ್ಣ ಕಾಯಕವನ್ನು ಕಡ್ಡಾಯ ಮಾಡಿದ. ಎಲ್ಲರೂ ದುಡಿದಿದ್ದರಿಂದ ಉತ್ಪಾದನೆ ಹೆಚ್ಚಾಯಿತು–ಸಂಪತ್ತು ವೃದ್ಧಿಸಿತು.

೧. ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ. (ಪು. ೧೮೦)
೨. ಮಾದಾರ ಮಗ ನಾನಯ್ಯ. (ಪು. ೮೪)
೩. ಅಯ್ಯಗಳಯ್ಯ ನಮ್ಮ ಮಾದಾರ ಚನ್ನಯ್ಯ (ಪು. ೮೪)
೪. ನನ್ನ ನಿನ್ನಂತಹವರೆಲ್ಲಾ ಚನ್ನಯ್ಯನ ಮಕ್ಕಳು (ಪು. ೩೭೭)

ಬಸವಣ್ಣ ಇಷ್ಟೊಂದು ಅಭಿಮಾನ ಗೌರವ ಪ್ರೀತಿ ಹೆಮ್ಮೆಗಳಿಂದ ಬೇರೆ ಯಾರನ್ನೂ ಸ್ಮರಿಸುವುದಿಲ್ಲ. ಇದು ಎರೆಡರ್ಥದಲ್ಲಿಯೂ–ಉದರ ಸಂಜಾತ, ಹಾಗೂ ಕರಸಂಜಾತ–ನಿಜವಿರಬೇಕು.

ಈ ಸಂದರ್ಭದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ನಡೆದ ಒಂದು ಚೋದ್ಯವನ್ನು ದಾಖಲಿಸಬಹುದು. ಪ್ರಾಧ್ಯಾಪಕ ಟಿ.ಎಸ್. ವೆಂಕಣ್ಣಯ್ಯ ಅವರ ಮನೆಯಲ್ಲಿ ಅವರ ಬಂಧು 'ಪುಟ್ಟಪ್ಪ ಯಾವ ಜಾತಿ? ಒಕ್ಕಲಿಗನೇ? ಎಂದು ಕೇಳಿದರಂತೆ ಅದಕ್ಕೆ ವೆಂಕಣ್ಣಯ್ಯ, 'ಆತ ಬ್ರಾಹ್ಮಣ; ಹಾದಿನಾರಾಣಿ ಬ್ರಾಹ್ಮಣ' ಎಂದು ಉತ್ತರಿಸಿದರಂತೆ ಪ್ರೊ॥ ತ.ಸು. ಶಾಮರಾಯರು ಈ ಪ್ರಸಂಗವನ್ನು ನಮ್ಮ ಕೃತಿಯಲ್ಲಿ ಬರೆದಿದ್ದಾರೆ.

ಇಂಥ ಒಂದು ಸಂಗತಿ ಸಮಕಾಲೀನ ದಿನಗಳಲ್ಲಿ ನಡೆದಿರುವುದಾದರೆ ಸುಮಾರು ಒಂಬೈನೂರು ವರ್ಷಗಳಷ್ಟು ಹಿಂದೆ ಏಕೆ ನಡೆದಿರಬಾರದು? ಬಸವಣ್ಣನ ಚಿಂತನೆ, ಭಾವನೆ, ವರ್ತನೆ, ಆಚರಣೆ, ಸಾಧನೆ ಎಲ್ಲವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಅವನ ಎಲ್ಲಾ ಕ್ರಿಯೆಗಳೂ ದಮನಿತರ ಪರ ಇರುವುದರಿಂದ ಆತನನ್ನು ಮಾದಾರ ಎನ್ನುವುದೆ ಸಮಂಜಸ ಎನ್ನಿಸುತ್ತದೆ. ನೀಚವರ್ಗದಿಂದ ಉಚ್ಚವರ್ಗಕ್ಕೆ ಏರಿಸುವ ಪ್ರಕ್ರಿಯ ಭಾರತದಲ್ಲಿ ನಡೆದಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ಶೂದ್ರ ವರ್ಗದಲ್ಲಿ ಅಸಾಧಾರಣ ಗುಣಗಳ ಪ್ರತಿಭಾವಂತ ಜನಿಸಿದರೆ ಸಮಾಜದ ಪ್ರಭಾವಶಾಲಿ ಉನ್ನತ ಪಂಗಡಗಳು ಕೂಡಲೇ ಅವನ ಮೇಲೆ ಬಿರುದು ಗೌರವಗಳ ಮಳೆಗರೆದು ಆತನನ್ನು ತಮ್ಮ ವಲಯಕ್ಕೆ ಎತ್ತಿಕೊಳ್ಳುತ್ತವೆ. (ದ ಕಂಪ್ಲೀಟ್ ವರ್ಕ್ಸ್ ಸಂ ೪, ಪು. ೪–೬೯, ಕಲ್ಕತ್ತ ೧೯೬೬).

ಬಂಜಗೆರೆಯವರಿಗಾಗಲಿ, ನನಗಾಗಲಿ, ಮತ್ತೆ ಸಮನತೆಯ ಭಾವನೆಯುಳ್ಳ ಯಾರಿಗೆ ಆಗಲಿ ಬಸವಣ್ಣನನ್ನು ಜಾತಿಗೆ ಬಂಧಿಸಬೇಕೆಂಬ ಬುದ್ಧಿ ಇಲ್ಲ ಸಂಶೋಧನೆಯ ವಿಷಯ. ಅಷ್ಟೆ. ಅದನ್ನು ಹಾಗೇ ಪರಿಗಣಿಸಬೇಕು ಬಸವಣ್ಣ ಮಾದಾರ ಎಂದು ನಿರ್ಧಾರವಾದರೆ ರಿಕ್ತರಂತಿರುವ ಮಹಾಜನಾಂಗ ಸ್ವಾಭಿಮಾನ ಪೂರ್ಣವಾಗಿ ನಲಿಯಬಹುದು.

ಬಸವಣ್ಣನದು ನಿರ್ಜಾತೀಕರಣ ಚಳವಳಿ, ನಿರ್ಜಾತೀಕರಣದಿಂದ ಮಾನವೀಕರಣವಾಗುತ್ತದೆ. ನೆಟ್ಟಗೆ ಇರುವ ಶ್ರೇಣೀಕೃತ ವ್ಯವಸ್ಥೆ ಸಮತಟ್ಟಾಗುತ್ತದೆ. ಒಬ್ಬರ ಮೇಲೊಬ್ಬ ಅಥವಾ ಒಬ್ಬನ ಕೆಳಗೊಬ್ಬ ಇರುವ ಪದ್ಧತಿ ಹೋಗಿ ಒಬ್ಬರ ಪಕ್ಕ ಒಬ್ಬರು ಇರುವ ಸಮಾನತೆಯ ವ್ಯವಸ್ಥೆ ಸ್ಥಾಪನೆಯಾಗುತ್ತದೆ, ಕೂಡಿ ಬಾಳುವ ಬಾಂಧವ್ಯ ಬೆಳೆಯುತ್ತದೆ.

ಆದ್ದರಿಂದಲೇ ಬಸವಣ್ಣನ ವಚನಗಳಿಗೆ ಕೂಡಲ ಸಂಗಮದೇವ' ಎನ್ನುವ ಅಂಕಿತವಿದೆ. ಮಲಪ್ರಭಾ ಮತ್ತು ಕೃಷ್ಣಾ ನದಿಗಳು ಸೇರುವ ಸ್ಥಳಕ್ಕೆ ಕೂಡಲಸಂಗಮ ಎಂಬ ಹೆಸರು ಪ್ರಸಿದ್ಧವಾಗಿದೆ. ಈ ನದಿಗಳ ನೀರು ಜನರ ಮೈ ಮನಗಳನ್ನು ತೊಳೆದು ದಾಹ ತಣಿಸಿ, ತಂಪು ಮಾಡಿ, ಪ್ರಾಣಿ ಪಕ್ಷಿಗಳಿಗೆ ನೀರುಣಿಸಿ, ಬೆಳೆಗೆ ನೆರವಾಗಿ ಬದುಕನ್ನು ಉಳಿಸಿದೆ. ಈ ಅಂಕಿತವನ್ನು ಬಸವಣ್ಣ ತಮ್ಮ ವಚನಗಳಲ್ಲಿ ಅರ್ಥಪೂರ್ಣವಾಗಿ ಬಳಸಿದ್ದಾರೆನ್ನಿಸುತ್ತದೆ. ಕೂಡಲ ಎಂದರೆ ಒಗ್ಗಟ್ಟು, ಐಕ್ಯತೆ, ಸೇರಿಕೆ ಎಂದು ಅರ್ಥ. 'ಸಂಗಮ'ವೂ ಅದೇ ಅರ್ಥ ಕೊಡುತ್ತದೆ. ಆದ್ದರಿಂದ ಇದು ಅಧಿಕ ಪದ ಜೋಡಣೆಯಾಗಿ ತೋರಬಹುದು. ಆದರೆ ಅದರ ಆಶಯವನ್ನು ಅರ್ಥ ಮಾಡಿಕೊಂಡರೆ ಹಾಗೆ ಕಾಣುವುದಿಲ್ಲ.

ಈ ಎರಡು ಪದಗಳಲ್ಲಿ ಒಂದು ಕನ್ನಡ, ಇನ್ನೊಂದು ಸಂಸ್ಕೃತ. ಇವೆರಡು ಭಾಷೆಗಳು ಕ್ರಮವಾಗಿ ಕೆಳಜಾತಿ ಮತ್ತು ಮೇಲುಜಾತಿಗಳನ್ನು ಪ್ರತಿನಿಧಿಸಬಹುದು. ಆದ್ದರಿಂದ ಬಸವಣ್ಣ ಜನರಲ್ಲಿ ಭೇದ ಭಾವ ತೊಲಗಿ ವರ್ಗಗಳು ಮತ್ತು ಭಾಷೆಗಳು ಒಂದಾಗಬೇಕೆಂದು ತುಡಿದು ದುಡಿದ ಮಹಾನ್ ಕ್ರಾಂತಿಕಾರಿ ಜೀವಿ. ಅದನ್ನು ಒತ್ತಿ ಹೇಳುವ ಉದ್ದೇಶದಿಂದ ಅವರ ಅಂಕಿತದಲ್ಲಿ ದ್ವಿರುಕ್ತಿ ಬಂದಿದೆ. ಎನ್ನಬಹುದು. ಅಂಕಿತದಲ್ಲಿರುವ ಕೊನೆಯ 'ದೇವ ಎಂಬ ಪದ 'ದಿವ್' ಎನ್ನುವ ಧಾತುವಿನಿಂದ ಬಂದಿದೆ. 'ದಿವ್' ಎಂದರೆ ಬೆಳಕು. ಹಾಗಾಗಿ 'ಕೂಡಲ ಸಂಗಮ'ದ ಧ್ವನ್ಯಾರ್ಥ: 'ಭೇದ ಭಾವನೆಯ ಕೊಳೆ ತೊಳೆದು ಹೋಗಿ, ಜನ ಮತ್ತು ಭಾಷೆಗಳ ಸಮ್ಮಿಲದಿಂದ ಬೆಳಕು ಮೂಡಿ ಬಾಳು ಬೆಳಗಲಿ' ಎಂದಾಗುತ್ತದೆ. ಹೀಗೆ ಬಸವಣ್ಣ ಮಾನವೀಕರಣ ಮತ್ತು ಸಂಸ್ಕೃತೀಕರಣವನ್ನು ಒಟ್ಟಿಗೆ ಸಾಧಿಸುತ್ತಾರೆಂದು ನನ್ನ ನಮ್ರ ಅನಿಸಿಕೆ.

ಶರಣರು ಬಳಸುವ ಇಷ್ಟಲಿಂಗ ಅಥವಾ ಅಂಕಿತ ಅವರ ಆತ್ಮಶ್ರದ್ಧೆ, ಆತ್ಮಶಕ್ತಿ ಮತ್ತು ಆತ್ಮಸಾಕ್ಷಿಯ ಸಂಕೇತ. ಅವರ ನುಡಿ ಕನ್ನಡಿ; ವಚನ ಅವರ ಬಾಳಿನ ಪ್ರತಿಫಲನ; ಆದರ್ಶಾಚರಣೆಯ ತುಟ್ಟತುದಿ. □

'ಅನುದೇವಾ...' ಒಳಪ್ರಶ್ನೆಗಳು

(೧೭ನೇ ಪುಟದಿಂದ)

ವುದು. ಹೀಗಾಗಿ ಇದು ಹಠದಿಂದ ಪ್ರತಿಷ್ಠಾಪನೆ ಮಾಡುತ್ತಿರುವ ಪೂರ್ವನಿರ್ಧರಿತ ಸಿದ್ಧಾಂತವಲ್ಲ; ಬದಲಿಗೆ ಹಲವಾರು ಆಕರಗಳನ್ನು ವಿಶಿಷ್ಟವಾಗಿ ಓದುವ ಮೂಲಕ ತಾನು ಭಾವಿಸಿದ 'ಸತ್ಯ'ದತ್ತ ಚಿಂತಿಸಲು ಬೇಕಾದ ಸೂಚನೆಗಳನ್ನು ಒದಗಿಸುವ ಕೆಲಸ ವಿಶ್ವವಿದ್ಯಾಲಯಗಳ ವೃತ್ತಿಪರ ಸಂಶೋಧಕರಲ್ಲದ ಕಾರಣದಿಂದಲೇ ಅವರಿಗೆ ಈ ಬಗೆಯ ವೈಧಾನಿಕತೆಯನ್ನು ಅಳವಡಿಸಲು ಸಾಧ್ಯ ಆಗಿರಬಹುದು; ಅದರಲ್ಲೂ ಮರುಳಸಿದ್ಧ, ಬಾಲಬಸಪ್ಪ, ಮಾದೇಶ್ವರ ಕಾವ್ಯಗಳ ಸಾಂಸ್ಕೃತಿಕ ನಾಯಕರ ಹಿನ್ನೆಲೆ ಹಾಗೂ ಅವರನ್ನು ಕುರಿತ ಕಾವ್ಯಗಳ ಆಶಯಗಳ ಮೂಲಕ ಬಸವಣ್ಣನ ಹುಟ್ಟಿನ ಹಿನ್ನೆಲೆಗೆ ಹೋಗುವ ವಿಧಾನವು ಹೊಸತಾಗಿದೆ.

ಆದರೆ ಈ ಸಂಶೋಧನೆಯಲ್ಲಿ ಕೆಲವು ವೈಧಾನಿಕ ಹಾಗೂ ತಾತ್ವಿಕ ಸಮಸ್ಯೆಗಳಿವೆ. ಅವೆಂದರೆ–

೧. ನಮ್ರವಾಗಿಯೇ ಅವರು ಮಂಡಿಸುವ ವಾದದಲ್ಲಿ ಬಸವಣ್ಣನು ಮಾದಿಗ ಜಾತಿಯವನು ಇರಬಹುದು ಎಂಬ ತರ್ಕವಿದೆಯಾದರೂ, ಅದನ್ನು ಮಂಡಿಸುವಲ್ಲಿ ಅವರು ತೋರುವ ನಮ್ರತೆಯು ಅವರ ವಾದದ ದುರ್ಬಲ ಸಂಗತಿಗಳೂ ಆಗಿರುವುದು; ಯಾಕೆಂದರೆ ಅವರು ಕೊಡುವ ಸಾಕ್ಷ್ಯಗಳು ಎಲ್ಲವೂ ಒಂದೇ ದನಿಯಲ್ಲಿ ಮಿಡಿಯುವುದಿಲ್ಲ. ಸಹಕರಿಸುವುದಿಲ್ಲ. ಅದನ್ನು ಅವರು ಕಳಚಿದ ಕೊಂಡಿಗಳು ಎಂದು ಹೇಳಿದರೂ, ಆ ಕೊಂಡಿಗಳನ್ನು ಬೆಸೆಯಲು ಅವರು ಬಳಸುವ ಅನೇಕ ಆಕರಗಳು ಹಾಗೂ ಸಾಕ್ಷ್ಯಗಳು ಇದಕ್ಕೆ ಸಹಕರಿಸುವುದಿಲ್ಲ. ಹೀಗಾಗಿ ಇದು ಸಿನಾಪ್ಸಿಸ್ ರೂಪದಲ್ಲಿಯೇ ಇರುವ ಒಂದು ವಾದವಾಗಿ ಉಳಿಯುತ್ತದೆ; ೨.ಅವರು ತಮ್ಮ ವಾದಕ್ಕೆ ಬಳಸುವ ಪ್ರಾಚೀನ ಪಠ್ಯಗಳನ್ನು ಮೂಲದಲ್ಲಿ ಅವರೇ ಓದುವ ಬದಲು, ಅವನ್ನು ಓದಿ ಬೇರೆಬೇರೆ ವಿದ್ವಾಂಸರು ತಮ್ಮ ಉದ್ದೇಶಕ್ಕೆ ಬಳಸಿಕೊಂಡಿರುವ ಸಂಶೋಧನೆಗಳಿಂದ ತೆಗೆದುಕೊಂಡಿರುವುದು. ಮೂಲಕೃತಿಗಳನ್ನು ನೋಡಿದರೆ ಇನ್ನೂ ಬೇರೆಯಾದ ಬಗೆಯಲ್ಲಿ ವ್ಯಾಖ್ಯಾನ ಸಾಧ್ಯ; ಬಸವಣ್ಣನ ನಿಧನದ ಕೊಂಚ ಕಾಲದ ಅಂತರದಲ್ಲಿ ಸೃಷ್ಟಿಯಾದ ಹರಿಹರನ 'ಬಸವರಾಜದೇವರ ರಗಳೆ'ಯನ್ನು ಅವರು ಬಳಸಿದಂತಿಲ್ಲ. ೩. ಬಸವಣ್ಣನ ಹುಟ್ಟಿನ ಮೂಲದ ಪ್ರಶ್ನೆಯನ್ನು ಯಾಕೆ ಈ ಹೊತ್ತಲ್ಲಿ ಎತ್ತಲಾಗುತ್ತಿದೆ ಎಂದು ಸಹಜವಾಗಿಯೇ ಅನಿಸುತ್ತದೆ.

ಇದಕ್ಕೆ ಲೇಖಕರು ಕೊಡುವ ಕಾರಣವನ್ನು ಪೂರ್ತಿಯಾಗಿ ಒಪ್ಪುವುದು ಕಷ್ಟ. ನಮ್ಮ ಸಾಂಸ್ಕೃತಿಕ ಚರಿತ್ರೆಯನ್ನು ಪುನಾರೂಪಿಸುವ ಅಗತ್ಯ ಖಂಡಿತ ಇದೆ. ಆದರೆ ಇದಕ್ಕೆ ಈ ಪುನಾರೂಪಿತವಾದ ಚರಿತ್ರೆಯು ವರ್ತಮಾನದ ಸಮಾಜದ ಚಲನೆಯಲ್ಲಿ ಯಾವ ಬಗೆಯಲ್ಲಿ ಕ್ರಿಯಾಶೀಲವಾಗುತ್ತದೆ? ವರ್ತಮಾನದ ಬದುಕಿನ ಮೇಲೆ ಯಾವ ಬಗೆಯ ಪರಿಣಾಮಗಳನ್ನು ಬೀರುತ್ತದೆ? ಎಂಬ ನಂತರದ ಪ್ರಶ್ನೆಗಳನ್ನೂ ಜೋಡಿಸುವ ಅಗತ್ಯವಿದೆ. ಆಗ ಚಾರಿತ್ರಿಕವಾಗಿ ಬಸವಣ್ಣನು ಹುಟ್ಟಿನಿಂದ ದಲಿತನು ಎಂದಾದರೆ, ಅವನ ಜತೆಗೆ ದಲಿತ ಸಮುದಾಯಗಳು ಗುರುತಿಸಿಕೊಳ್ಳುತ್ತವೆಯೇ? ಲಿಂಗದೀಕ್ಷೆ ಪಡೆಯದ ದಲಿತರ ಆಹಾರ ಪದ್ಧತಿ,ದೈವಗಳು ಹಾಗೂ ಸಾಂಸ್ಕೃತಿಕ ಆಚರಣೆಗಳನ್ನು ತಿರಸ್ಕರಿಸುವ ಬಸವಣ್ಣನನ್ನು ಅವರು ಹೇಗೆ ಅನುಸಂಧಾನ ಮಾಡಬೇಕು? ಭೂಮಾಲಿಕ ಲಿಂಗಾಯತರು ಹಾಗೂ ಭೂರಹಿತ ದಲಿತರ ನಡುವೆ ಇರುವ ಸಾಮಾಜಿಕ ಆರ್ಥಿಕ ವೈರುಧ್ಯ ಹಾಗೂ ಸಂಘರ್ಷಗಳ ಸ್ವರೂಪವು ಬಸವಣ್ಣನು ದಲಿತರವನು ಎಂದು ಖಚಿತವಾದಲ್ಲಿ ಏನಾಗಬಹುದು?

ಈ ವಾದದಿಂದ ಬಸವಣ್ಣನನ್ನು ಏನಕೇನ ಕಾರಣದಿಂದ ಬದಿಗೆ ಸರಿಸಿ ವೈದಿಕ ಸಂಸ್ಕೃತ ವರ್ಣವಾದಿ ಹಿತಾಸಕ್ತಿಗಳಿರುವ ಪಂಚಾಚಾರ್ಯರ ಆಶಯಕ್ಕೆ ಬಲ ಬರುವುದೇ? ಈಗ ಎಡಗೈ ಬಲಗೈ ವ್ಯತ್ಯಾಸಗಳು, ದಲಿತ ಎಂಬ ರಾಜಕೀಯವಾಗಿ ಏಕೀಕೃತವಾಗಿದ್ದ ಪರಿಕಲ್ಪನೆಯಲ್ಲಿ ಬಿರುಕು ಮೂಡಿಸಿದ್ದು, ಅಂಬೇಡ್ಕರ್ ಹೊಲೆಯರಿಗೆ ಸಂಬಂಧ ಪಟ್ಟವರು ಎಂಬಂತೆ ಯೋಚಿಸುವ ಮಾದಿಗರು ಇದ್ದಾರೆ. ಹೀಗಿರುವಾಗ ಬಸವಣ್ಣನ ವಿಷಯ ಮಾದಿಗರಿಗೆ ಸಂಬಂಧಪಟ್ಟಿದ್ದು ಎಂದು ಹೊಲೆಯರು ಭಾವಿಸಿದರೆ ಏನು ಮಾಡಬೇಕು? ಉತ್ತರ ಪ್ರದೇಶದಲ್ಲಿ ಮಾಯಾವತಿ ಅವರು ದಲಿತ ಬ್ರಾಹ್ಮಣರ ಏಕತೆಯ ಸಮೀಕರಣ ಮಾಡಿ ಶಕ್ತಿರಾಜಕಾರಣದಲ್ಲಿ ಪಡೆದಿರುವ ಯಶಸ್ಸು, ಅಂಬೇಡ್ಕರರ ಚಿಂತನೆಗಳನ್ನು ಒಂದು ಬಗೆಯಲ್ಲಿ 'ಅಪ್ರಸ್ತುತ' ಮಾಡುವ ದಿಕ್ಕಲ್ಲಿ ಚಲಿಸಿಬಿಟ್ಟಿದೆ. ಇಂತಹ ಸನ್ನಿವೇಶದಲ್ಲಿ ದಲಿತರಿಗೆ ಅವರ ಆಹಾರ ದೈವ ಸಂಸ್ಕೃತಿಯನ್ನು ತ್ಯಜಿಸುವ ಶೈವೀಕರಣದ ಪರ್ಯಾಯವನ್ನಿಟ್ಟ ಬಸವಣ್ಣನನ್ನು ಸಾಂಸ್ಕೃತಿಕ ನಾಯಕನನ್ನಾಗಿ ಮಾಡಿಕೊಂಡು ದಲಿತರು ಸಮಕಾಲೀನವಾದ ಯಾವ ಚಲನೆಯನ್ನು ಪಡೆಯಲು ಸಾಧ್ಯ– ಇಂತಹ ಪ್ರಶ್ನೆಗಳನ್ನು ಕೃತಿ ಹುಟ್ಟಿಸುತ್ತದೆ. ಬಸವಣ್ಣನು ದಲಿತಮೂಲದವನು ಎಂಬ ವಾದವನ್ನು ಮಂಡನೆಯಾಗಿರುವ ಸನ್ನಿವೇಶದಲ್ಲೇ ಬೆಂಗಳೂರಿನಲ್ಲಿ ಸಾವಿರಾರು ದಲಿತರು ಬೌದ್ಧಧರ್ಮಕ್ಕೆ ಮತಾಂತರ ಆಗಿರುವ ವಿದ್ಯಮಾನವು ಈ ವಾದಕ್ಕೆ ವಿಚಿತ್ರವಾದ ಉತ್ತರವನ್ನು ಕೊಟ್ಟಂತಿದೆ.

ಮೇಲೆ ಎತ್ತಲಾದ ಈಯೆಲ್ಲ ಪ್ರಶ್ನೆಗಳಿಗೆ ಬಂಜಗೆರೆಯವರೇ ಉತ್ತರಿಸಬೇಕಿಲ್ಲ. ಹೊಸಹೊಸ ಸಾಂಸ್ಕೃತಿಕ ಪರ್ಯಾಯಗಳನ್ನು ಹುಡುಕುತ್ತಿರುವ ಎಲ್ಲರೂ ಕೂಡಿ ಚಿಂತನೆಮಾಡಬೇಕಾದ ಪ್ರಶ್ನೆಗಳಿವು. ಇವು ಎಲ್ಲ ದಮನಿತ ಸಮುದಾಯಗಳೂ ಆರೋಗ್ಯ ಸಮಾಜವನ್ನು ಕಟ್ಟಬೇಕಾದ ಪ್ರಶ್ನೆಗಳು. ಇಂತಹ ಕೆಲವು ಪ್ರಶ್ನೆಗಳನ್ನು 'ಅನುದೇವಾ' ಕೃತಿಯು ಹುಟ್ಟಿಹಾಕಿರುವ ಕಾರಣಕ್ಕೆ ಅದು ಮಹತ್ವದ್ದಾಗಿದೆ; ಅದಕ್ಕೆ ಬರುತ್ತಿರುವ ಪ್ರತಿಕ್ರಿಯೆಗಳು ಕೂಡ ನಮ್ಮ ಸಮಾಜದ ಸ್ವರೂಪದ ಬಗ್ಗೆ ಅರ್ಥಮಾಡಿಕೊಳ್ಳುವಲ್ಲಿ ನೆರವಾಗುತ್ತಿವೆ. ಆದಕಾರಣ, ಈ ಕೃತಿ ಎತ್ತಿರುವ ಅನುಮಾನಿತ ಸತ್ಯಗಳನ್ನು ಕುರಿತು ಸಂವಾದ ಮಾಡುವ ಅವಕಾಶವನ್ನು ಕಳೆದುಹಾಕುವಂತೆ ಆಗಬಾರದು. ಇಲ್ಲದಿದ್ದರೆ ದೊಡ್ಡ ಗಂಟಲಿನಲ್ಲಿ ಕೂಗುವವರು ಹೇಳುವುದೇ ನಿಜ ಎಂಬಂತೆ ಆಗಿಬಿಡುತ್ತದೆ. □

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಅಂಗವಿಕಲರಿಗೆ ಅವಕಾಶ ನೀಡಿ
ಅದ್ಭುತ ಸಾಧನೆ ನೋಡಿ.

ಅಂಗವಿಕಲತೆ ದೌರ್ಬಲ್ಯದ ಸಂಕೇತವಲ್ಲ. ಬದಲಾಗಿ ಅದು ಅಂಗವಿಕಲ ಬಂಧುಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸಿ ಸಾಧನೆಗೆ ಹೆಚ್ಚಿನ ಛಲ ಮೂಡಿಸುವುದು. ಅವರ ಗಮನಾರ್ಹ ಸಾಧನೆಗೆ ಪ್ರೇರಣೆಯಾಗಲೆಂದೇ ಪ್ರತಿವರ್ಷ ಡಿಸೆಂಬರ್ 3 ರಂದು ವಿಶ್ವಾದ್ಯಂತ ಅಂಗವಿಕಲರ ದಿನವನ್ನಾಗಿ ಆಚರಿಸಲಾಗುತ್ತಿದೆ.

ಅಂಗವಿಕಲರಿಗಾಗಿ ಅವಕಾಶಗಳು:

ರಾಜ್ಯ ಸರ್ಕಾರ ಅಂಗವಿಕಲರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು:-

* ಶ್ರವಣ ಮತ್ತು ದೃಷ್ಟಿ ದೋಷವುಳ್ಳವರಿಗಾಗಿ ವಿಶೇಷ ಶಾಲೆಗಳನ್ನು ನಡೆಸಲು ಉತ್ತೇಜನೆ.
* ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
* ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ
* ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವ್ಯ ಗ್ರಂಥಾಲಯದ ಅನುಕೂಲ
* "ಆಧಾರ" ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಅವಕಾಶ
* ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತ ದೂರವಾಣಿ ಬೂತ್ ಸೌಲಭ್ಯ
* ಸ್ವಯಂ ಉದ್ಯೋಗ ಅಥವಾ ಆದಾಯ ತರುವ ಉದ್ಯೋಗಗಳಿಗಾಗಿ ಸಾಲ ಸೌಕರ್ಯ
* ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮೆ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆಯ ನೀಡಿಕೆ
* ಅಂಗವಿಕಲರಿಗೆ ಶೇ. 5 ರಷ್ಟು ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ
* ಸಾಧನೆ ಸಲಕರಣೆಗಳ ಹಾಗೂ ತ್ರಿಚಕ್ರವಾಹನಗಳ ಉಚಿತ ಪೂರೈಕೆ
* ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್

ಕರ್ನಾಟಕ ವಾರ್ತೆ
Karnataka Information

ದಲಿತ ವೀರನಾರಿಯರು ಮತ್ತು ೧೮೫೭ರ ಮರುಕಥನಗಳು

ಮೂಲ: ಚಾರುಗುಪ್ತ
ಅನು: ಸತ್ಯಪ್ರಕಾಶ್ ಎಂ.ಆರ್

ಸಮಕಾಲೀನ ಜನಪ್ರಿಯ ಹಿಂದಿ ದಲಿತ ಸಾಹಿತ್ಯ, ದಲಿತ ರಾಜಕಾರಣ ಮತ್ತು ದಲಿತ ಅಸ್ಮಿತೆಯನ್ನು ಕುರಿತು ಆಳವಾದ ಹೊಳಹುಗಳನ್ನು ಒದಗಿಸುವ ನಿಟ್ಟಿನಲ್ಲಿ ವಿಮರ್ಶಾತ್ಮಕ ಆಕರವಾಗಿ ಮುಂಚೂಣಿಗೆ ಬಂದಿದೆ. ೧೮೫೭ರ ಸಂಘರ್ಷದ ಹಿನ್ನೆಲೆಯಲ್ಲಿ ದಲಿತ ಸಾಹಿತ್ಯ, ಮಹಿಳೆಯರನ್ನು ಯಾವ ದೃಷ್ಟಿಕೋನಗಳಲ್ಲಿ ನೋಡುತ್ತಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗುತ್ತದೆ. ೧೮೫೭ರ ದಂಗೆ ಕುರಿತ ಸಾಂಪ್ರದಾಯಿಕ ಮತ್ತು ಐತಿಹಾಸಿಕ ಬರಹಗಳನ್ನು ನಿಕಷಕ್ಕೆ ಒಡ್ಡುವುದಲ್ಲದೆ, ದಲಿತ ಮಹಿಳೆಯರ ಮುಖ್ಯವಾಹಿನಿಯ ಚಿತ್ರಣಗಳು ಹಾಗೂ ಸಂಬಂಧಿತ ದಲಿತ ಬರಹಗಳನ್ನು ಪರೀಕ್ಷೆಗೆ ಒಳಪಡಿಸಲಾಗುವುದು.

ಕಳೆದ ಮೂರು ದಶಕಗಳಲ್ಲಿ ಜನಪ್ರಿಯ ದಲಿತ ಸಾಹಿತ್ಯ, ಕರಪತ್ರಗಳು, ಕಿರುಪುಸ್ತಿಕೆಗಳ ರೂಪದಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತಿದ್ದು, ದಲಿತ ರಾಜಕಾರಣ ಹಾಗೂ ದಲಿತ ಅಸ್ಮಿತೆಯನ್ನು ಕುರಿತು ಆಳವಾದ ಹೊಳಹುಗಳನ್ನು ಒದಗಿಸುವ ನಿಟ್ಟಿನಲ್ಲಿ ಪ್ರಮುಖ ಆಕರಗಳಾಗಿ ಹೊರಹೊಮ್ಮಿವೆ. ಅಧಿಕಾರ ಕೇಂದ್ರಿತ ಜ್ಞಾನದ ಕಪಿಮುಷ್ಠಿಯಿಂದ ದಲಿತರು ತಮ್ಮನ್ನು ತಾವು ಬಿಡಿಸಿಕೊಳ್ಳುತ್ತಿದ್ದಾರೆ. ತಮ್ಮ ಚಿತ್ರಣಗಳು, ಕಥನಗಳು ಮತ್ತು ಅನುಭವಗಳು ತಮ್ಮ ಹಿಡಿತದಲ್ಲಿಯೇ ಇದೆ ಎಂಬ ನಂಬಿಕೆ ದಲಿತರಲ್ಲಿ ಮೂಡುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಸಾಹಿತ್ಯ ಹೊಸ ಆಶೆ ಮೂಡಿಸಿದೆ. ದಲಿತರು ತಮ್ಮ ಸಂಸ್ಕೃತಿಯನ್ನು ಅವನತಿಯಿಂದ ಹಾಗೂ ಏಕಪ್ರಕಾರದ ಚಿತ್ರಣಗಳಿಂದ ರಕ್ಷಿಸಿ ಹೊಸ ದಲಿತ ಸಂವೇದನೆಯೆಡೆಗೆ ಕೊಂಡೊಯ್ಯುತ್ತಿದ್ದಾರೆ. ದಲಿತರು ಈಗ "ಅನ್ಯ"ರಲ್ಲ. ಬದಲಿಗೆ ದಲಿತರೇ ಈಗ "ಆಯ್ಕೆ" ಮತ್ತು "ಅಸಮಾನತೆ"ಯ ಬಗ್ಗೆ ಗಂಭೀರವಾದ ಪ್ರಶ್ನೆಗಳನ್ನೆತ್ತಲಾರಂಭಿಸಿದ್ದಾರೆ.

ಬಹುತೇಕ ಇಂತಹ ಸಾಹಿತ್ಯವನ್ನು ಸಾವಿರಾರು ಕರಪತ್ರಗಳ ರೂಪದಲ್ಲಿ ಸಾಮೂಹಿಕವಾಗಿ ಹೊರತರಲಾಗುತ್ತಿದೆ. ಸಾರ್ವಜನಿಕ ರ್‍ಯಾಲಿಗಳಲ್ಲಿ, ಜನಸಮೂಹ ಸೇರುವಲ್ಲಿ, ದಲಿತರ ಸಮ್ಮೇಳನಗಳಲ್ಲಿ ಸಹಸ್ರ ಸಂಖ್ಯೆಯಲ್ಲಿ ಇವುಗಳನ್ನು ಮಾರಾಟ ಮಾಡಲಾಗುತ್ತಿದೆ. ದಲಿತ ಪ್ರಕಾಶಕರು ತಮ್ಮದೇ ಆದ ಈ ರೀತಿಯ ವಾಣಿಜ್ಯ ಜಾಲಗಳ ಮೂಲಕ ಬಹಳಷ್ಟು ದಲಿತರ ಮನೆ-ಮನಗಳಿಗೆ ಈ ಸಾಹಿತ್ಯವನ್ನು ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಸಾಹಿತ್ಯದ ಕರ್ತೃಗಳು ಬಹುತೇಕ ಹೊಸ ಬರಹಗಾರರು ಅಥವಾ ಹೆಚ್ಚು ಹೆಸರು ಮಾಡದಿರುವವರು. ಪ್ರಕಟಣೆಗೆ ಬಳಸಲಾಗುವ ಕರಪತ್ರಗಳ ಗುಣಮಟ್ಟ ತೀರ ಸಾಧಾರಣವಾಗಿದ್ದು ತಾಂತ್ರಿಕವಾಗಿ ಬಡವಾಗಿರುತ್ತವೆ. ಬಹಳಷ್ಟು ಸಂಪುಟಗಳಲ್ಲಿ ಹೊರಬರುವ ಈ ಸಾಹಿತ್ಯ ಎರಡು ರೂಪಾಯಿಯಿಂದ ಐವತ್ತು ರೂಪಾಯಿಗಳಷ್ಟು ಅಗ್ಗದ ಬೆಲೆಗೆ ದೊರಕುತ್ತವೆ. ವಿವಿಧ ಸಾಹಿತ್ಯ ಪ್ರಕಾರಗಳನ್ನು ಬಳಸಿ ತೀರ ಸಾಧಾರಣವಾದ, ಆಡುಮಾತಿನಂತಹ ಹಿಂದಿ ಭಾಷೆಯನ್ನು ಬರವಣಿಗೆಗೆ ಬಳಸಲಾಗುತ್ತದೆ. ಅಂಬೇಡ್ಕರರೇ ಬರೆದ ಅಥವಾ ಅವರನ್ನು ಕುರಿತ ಬರಹಗಳು, ದಲಿತರ ಸ್ಥಿತಿ-ಗತಿ, ದಲಿತರ ಮೇಲಿನ ದೌರ್ಜನ್ಯ, ಮೀಸಲಾತಿ, ಮತಾಂತರ, ದಲಿತರ ಸಾಹಿತ್ಯಕ ಬರಹಗಳು, ರಂಗಗೀತೆಗಳು, ನಾಟಕಗಳು ಎಲ್ಲವನ್ನೂ ಒಳಗೊಂಡ ಸಾಹಿತ್ಯ ಇಲ್ಲಿ ಲಭ್ಯ.

ಈ ಸಾಹಿತ್ಯದಲ್ಲಿ ಪ್ರಮುಖವಾಗಿ ಗಮನಕ್ಕೆ ಬರುವ ಅಂಶ, ರಾಷ್ಟ್ರೀಯವಾದಿ ಸಂಗ್ರಾಮದ ಚಿತ್ರಣಗಳು. ಭಾರತೀಯ ರಾಷ್ಟ್ರೀಯವಾದ ಮತ್ತು ವಸಾಹತುವಾದದ ನಡುವೆ ದಲಿತರದು ತ್ರಿಶಂಕುವಿನಂತಹ ಸಂಬಂಧ ಎಂಬ ವಾದ ಇಲ್ಲಿ ಮಂಡಿಸಲಾಗುತ್ತದೆ. ದಲಿತರು ಸಾಮಾನ್ಯವಾಗಿ ಬಲಿಷ್ಠ ಹಿಂದೂವಾದಕ್ಕೆ ವೈರುಧ್ಯವಾದ ಧೋರಣೆ ಹೊಂದಿದ್ದಾರೆ ಎಂದೂ ವಾದಿಸಲಾಗುತ್ತದೆ. ಬ್ರಿಟಿಷರು ಹಿಂದೂ ಸಮಾಜದ ದಬ್ಬಾಳಿಕೆಯಿಂದ ದಲಿತರನ್ನು ಮುಕ್ತಿಗೊಳಿಸಿದರು ಮತ್ತು ಉತ್ತಮ ಆಡಳಿತ ನೀಡಿದರು ಎಂದು ಕೆಲವು ದಲಿತ ಬುದ್ಧಿಜೀವಿಗಳು ವಾದಿಸುತ್ತಾರೆ. ೧೯೨೦ರಷ್ಟು ಹಿಂದೆಯೇ ಉತ್ತರ ಪ್ರದೇಶದಲ್ಲಿ ದಲಿತ ಚಳವಳಿಯ ಬಹಳಷ್ಟು ಕಾರ್ಯಕರ್ತರು ಇದೇ ರೀತಿಯ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ, ೧೯೨೦-೩೦ರ ಆದಿ-ಹಿಂದೂ ಚಳವಳಿ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮ ವಿರೋಧಿಯಾಗಿದ್ದು, ಬ್ರಿಟಿಷರ ಪರವಾಗಿತ್ತು. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಬದಲಾದ ರಾಜಕೀಯ ಸನ್ನಿವೇಶದಲ್ಲಿ ದಲಿತರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕಾರಾತ್ಮಕ ಪಾತ್ರ

ಅಧಿಕಾರ ಕೇಂದ್ರಿತ ಜ್ಞಾನದ ಕಪಿಮುಷ್ಠಿಯಿಂದ ದಲಿತರು ತಮ್ಮನ್ನು ತಾವು ಬಿಡಿಸಿಕೊಳ್ಳುತ್ತಿದ್ದಾರೆ. ತಮ್ಮ ಚಿತ್ರಣಗಳು, ಕಥನಗಳು ಮತ್ತು ಅನುಭವಗಳು ತಮ್ಮ ಹಿಡಿತದಲ್ಲಿಯೇ ಇದೆ ಎಂಬ ನಂಬಿಕೆ ದಲಿತರಲ್ಲಿ ಮೂಡುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಸಾಹಿತ್ಯ ಹೊಸ ಆಶೆ ಮೂಡಿಸಿದೆ. ದಲಿತರು ತಮ್ಮ ಸಂಸ್ಕೃತಿಯನ್ನು ಅವನತಿಯಿಂದ ಹಾಗೂ ಏಕಪ್ರಕಾರದ ಚಿತ್ರಣಗಳಿಂದ ರಕ್ಷಿಸಿ ಹೊಸ ದಲಿತ ಸಂವೇದನೆಯೆಡೆಗೆ ಕೊಂಡೊಯ್ಯುತ್ತಿದ್ದಾರೆ. ದಲಿತರು ಈಗ "ಅನ್ಯ"ರಲ್ಲ. ಬದಲಿಗೆ ದಲಿತರೇ ಈಗ "ಆಯ್ಕೆ" ಮತ್ತು "ಅಸಮಾನತೆ"ಯ ಬಗ್ಗೆ ಗಂಭೀರವಾದ ಪ್ರಶ್ನೆಗಳನ್ನೆತ್ತಲಾರಂಭಿಸಿದ್ದಾರೆ. ಬಹುತೇಕ ಇಂತಹ ಸಾಹಿತ್ಯವನ್ನು ಸಾವಿರಾರು ಕರಪತ್ರಗಳ ರೂಪದಲ್ಲಿ ಸಾಮೂಹಿಕವಾಗಿ ಹೊರತರಲಾಗುತ್ತಿದೆ. ಸಾರ್ವಜನಿಕ ರ್‍ಯಾಲಿಗಳಲ್ಲಿ, ಜನಸಮೂಹ ಸೇರುವಲ್ಲಿ, ದಲಿತರ ಸಮ್ಮೇಳನಗಳಲ್ಲಿ ಸಹಸ್ರ ಸಂಖ್ಯೆಯಲ್ಲಿ ಇವುಗಳನ್ನು ಮಾರಾಟ ಮಾಡಲಾಗುತ್ತಿದೆ.

ವಹಿಸಿದುದರ ಬಗ್ಗೆ ಪ್ರಮುಖವಾಗಿ ಪ್ರಚುರಪಡಿಸಬೇಕಾಯಿತು. ಇದು ದಲಿತ ರಾಜಕಾರಣಕ್ಕೂ ಅತ್ಯವಶ್ಯಕ. ಹೀಗಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ದಲಿತರ ಕೊಡುಗೆ ಮತ್ತು ಚಳವಳಿಯಲ್ಲಿ ದಲಿತರು ವಹಿಸಿದ ಪಾತ್ರ ಕುರಿತ, ಇದುವರೆಗೆ ಕಡೆಗಣಿಸಲಾದ ದಲಿತರ ಇತಿಹಾಸಗಳು ಹಲವಾರು ಸಂಪುಟಗಳಲ್ಲಿ ಹೊರಬಂದಿದೆ. ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ದಲಿತರ ಪಾತ್ರ ಕುರಿತ ಸಾಮಾಜಿಕ ಸಂರಚನೆಗಳನ್ನು ಈ ಒಂದು ಐತಿಹಾಸಿಕ ಘಟ್ಟದಲ್ಲಿ, ಬದಲಾಗುತ್ತಿರುವ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ದಲಿತರೇ ಮಾರ್ಪಾಟುಗೊಳಿಸುತ್ತಿದ್ದಾರೆ. ಇಲ್ಲಿ ಪ್ರಮುಖವಾದ ಅಂಶವೇನೆಂದರೆ ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ ದಲಿತರು ರಾಷ್ಟ್ರೀಯವಾದದ ಪರ ಅಥವಾ ವಿರೋಧಿ ಧೋರಣೆ ತಳೆಯುತ್ತಾರೆಯೇ ಎಂಬುದು. ದಲಿತರ ಪ್ರಣಾಳಿಕೆ ಮತ್ತು ವಾದ ಆ ಸಂದರ್ಭದ ಸಾಂಪ್ರದಾಯಿಕ ರಾಷ್ಟ್ರೀಯವಾದಿಗಳು ಮತ್ತು ಮುಖ್ಯವಾಹಿನಿಯ ಇತಿಹಾಸಕಾರರಿಗಿಂತ ಭಿನ್ನವಾಗಿದ್ದು, ಅವರುಗಳು ನೀಡಿರುವ ಚಿತ್ರಣಗಳನ್ನು ಪ್ರಶ್ನಿಸುವಂತಹ ರಚನೆಗಳಾಗಿರುತ್ತವೆ. ಭಾರತದ ಬಹುತೇಕ ವಿಶ್ವವಿದ್ಯಾನಿಲಯಗಳಲ್ಲಿ ಕಲಿಸಲಾಗುವ ಇತಿಹಾಸಕ್ಕಿಂತ ಭಿನ್ನವಾದ ಜ್ಞಾನವನ್ನು ದಲಿತರ ಇತಿಹಾಸದ ಮೂಲಕ ತಿಳಿದುಕೊಳ್ಳಬಹುದು.

ಸ್ವಾತಂತ್ರ್ಯ ಚಳವಳಿಯಲ್ಲಿ ದಲಿತರ ಪಾತ್ರ ಕುರಿತ ಪರ್ಯಾಯ ಕಥನಗಳು ಸತ್ಯ ಮತ್ತು ಸಮಗ್ರ ಚಿತ್ರಣಗಳಾಗಿ ಬಿಂಬಿಸಲ್ಪಡುತ್ತಿವೆ. ದೇಶದ ರಕ್ಷಣೆಗಾಗಿ ದಲಿತರ ತ್ಯಾಗ ಬಲಿದಾನಗಳ ಕಥನಗಳನ್ನು ಇವು ನೀಡುತ್ತವೆ. ಈ ಕಥನಗಳು ಪದೇ ಪದೇ ಕರಪತ್ರಗಳಲ್ಲಿ ಪ್ರಕಟಗೊಳ್ಳುತ್ತಲೇ ಇವೆ. ಆದರೆ ಇವು ಇನ್ನೂ ಮುಖ್ಯವಾಹಿನಿಯ ಇತಿಹಾಸವನ್ನು ಪ್ರವೇಶಿಸಲು ಸಾಧ್ಯವಾಗಿಲ್ಲ. ದಲಿತ ಲೇಖಕರು ಇಲ್ಲಿ ಪ್ರಸ್ತುತಪಡಿಸಲು ಯತ್ನಿಸುತ್ತಿರುವುದು ಸಮಗ್ರವಾದ ಮತ್ತು ಬಹುತೇಕ ಒಪ್ಪಿತವಾಗಬಹುದಾದ ಐತಿಹಾಸಿಕ ಸತ್ಯ. ಈ ಜನಪ್ರಿಯ ದಲಿತ ಸಾಹಿತ್ಯ ಒಂದು ಪ್ರತ್ಯೇಕವಾದ, ಅತೃಪ್ತ ದನಿಯನ್ನು ಯಜಮಾನ ಸಿದ್ಧಾಂತಗಳ ಅಬ್ಬರದ ಜತೆಗೂಡಿಸುತ್ತದಲ್ಲದೆ, ಅದಕ್ಕೆ ಸವಾಲನ್ನೊಡ್ಡುತ್ತದೆ. ಇದು ಯಜಮಾನಿಕೆಯ ಪ್ರತಿವಾದ. ಬಕ್ತಿನ್‌ನ 'ಡಯಾಲಾಜಿಕ್ಸ್' (ದ್ವಿಮುಖತ್ವ) ಮತ್ತು 'ಹೆಟೆರೋಗ್ಲಾಸಿಯಾ' (ಬಹುಮುಖತ್ವ) ಸಿದ್ಧಾಂತ, "ಬಲಿಷ್ಠವಾದ ಯಜಮಾನಿಕೆ", ಮತ್ತು "ಸಂಧಾನ"ದ ಓದಿಗೆ ಸವಾಲೆಸೆವ ಸ್ಟುವರ್ಟ್ ಹಾಲ್‌ನ "ವೈರುಧ್ಯ"ದ ಗ್ರಹಿಕೆಯ ಪರಿಕಲ್ಪನೆಯನ್ನು ಈ ಸಾಹಿತ್ಯ ನೆನಪಿಸುತ್ತದೆ.

೧೮೫೭ರ ಸ್ವಾತಂತ್ರ್ಯ ಚಳವಳಿ, ಸಾಂಪ್ರದಾಯಿಕ ಇತಿಹಾಸ ಮತ್ತು ದಲಿತರ ಮರುಕಥನಗಳು:

ಜನಪ್ರಿಯ ದಲಿತ ಇತಿಹಾಸದ ಕಥನಗಳಲ್ಲಿ ೧೮೫೭ರ ಹೋರಾಟ ಪ್ರಮುಖವಾಗಿ ಕಾಣಿಸಿಕೊಂಡಿದ್ದು, ಹಿಂದಿನ ಇತಿಹಾಸ, ಪುರಾಣ, ಸತ್ಯ ಮತ್ತು ಮರುಕಥನಗಳ ಮಿಶ್ರಣವಾದ, ಪ್ರತ್ಯೇಕವಾದ ವಿವರಣೆಗಳು ಹೊರಹೊಮ್ಮುತ್ತವೆ. ೧೮೫೭ರ ಚಳವಳಿ ಭಾರತೀಯ ಇತಿಹಾಸದಲ್ಲಿ ಅಚ್ಚಳಿಯದೆ ನೆನಪಿನಲ್ಲಿ ಉಳಿಯುವಂತಹ ಅಧ್ಯಾಯವೆಂದು ಪರಿಗಣಿಸಲ್ಪಟ್ಟಿದೆ.

ವಿದೇಶಿ ದಬ್ಬಾಳಿಕೆಯ ವಿರುದ್ಧ ನಡೆದ ಮೊಟ್ಟ ಮೊದಲ ಸ್ವಾತಂತ್ರ್ಯ ಚಳವಳಿ ಇದಾಗಿದೆ ಎಂದು ಹೇಳಬಹುದು. ದಲಿತರ ರಾಷ್ಟ್ರೀಯ ವಾದಿ ನಿಷ್ಠೆಯನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಜನಪ್ರಿಯ ದಲಿತ ಇತಿಹಾಸ

ಹಿಂದೂ ಮೇಲ್ಜಾತಿಯ ಜನರ ನೋವು ಮತ್ತು ಮಾಲಿನ್ಯದ ಭಯ ದಂಗೆಗೆ ಪ್ರಮುಖ ಕಾರಣ ಎಂಬ ಅಂಶ ಈ ಅವಧಿಯ ಬಹಳಷ್ಟು ಕಥನಗಳಲ್ಲಿ ಕಂಡುಬರುತ್ತದೆ. ಈ ವಿವರಣೆಗಳ ನಡುವೆ ದಲಿತರ ಇತಿಹಾಸ ಯಾವ ಸ್ಥಾನದಲ್ಲಿದೆ? ಸಾಗರಗಳನ್ನು ದಾಟುವುದು, ಗೋವು ಅಥವಾ ಹಂದಿ ಮಾಂಸವನ್ನು ತಿನ್ನುವುದು, ಇವುಗಳಿಗೆ ಸಂಬಂಧಿಸಿದ ಮೇಲ್ಜಾತಿ ಮತ್ತು ಮೇಲ್ವರ್ಗಗಳ ಶುದ್ಧ/ ಮಾಲಿನ್ಯದ ವಾದ ದಲಿತರಿಗೆ ಸಹ್ಯವೆನಿಸುವುದಿಲ್ಲ.

೧೮೫೭ರ ದಂಗೆಯನ್ನು ಸಂಪೂರ್ಣ ವಾಗಿ ರೂಪಾಂತರಗೊಳಿಸಿವೆ.

ದಲಿತರ ಕಥನಗಳ ಕಡೆಗೆ ಗಮನಹರಿಸುವ ಮುನ್ನ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಕುರಿತ ಸಾಂಪ್ರದಾಯಿಕ ಇತಿಹಾಸವನ್ನು ಮೊದಲಿಗೆ ಸಂಕ್ಷಿಪ್ತವಾಗಿ ಪರೀಕ್ಷಿಸೋಣ. ಇತಿಹಾಸಶಾಸ್ತ್ರದ ವಿವಿಧ ಸೆಲೆಗಳು ದಂಗೆ-ಜಾತಿ ಸಂಬಂಧದ ಸಂಗಮಸ್ಥಳದಲ್ಲಿ ಬಂದು ಸೇರುತ್ತವೆ. ಎಸ್. ಬಿ. ಚೌಧರಿ, ತಾರಾಚಂದ್ ಮತ್ತು ಆರ್. ಸಿ. ಮಜುಂದಾರ್‌ರಂತಹ ರಾಷ್ಟ್ರೀಯವಾದಿ ಇತಿಹಾಸಕಾರರ ಪ್ರಕಾರ ೧೮೫೭ರ ಸಾಮಾಜಿಕ ಸಂರಚನೆಗೆ ಸೇರಿದ ಆಳುವ ವರ್ಗ ಮತ್ತು ಸಮಾಜದ ಸಾಂಪ್ರದಾಯಿಕ ಎಲೀಟ್‌ಗಳು ದಂಗೆಯ "ಸ್ವಾಭಾವಿಕ ನಾಯಕರು" ಎಂದೆನಿಸಿಕೊಂಡರು.

ಸಾಂಪ್ರದಾಯಿಕ ಇತಿಹಾಸದಲ್ಲಿ ದಂಗೆಯನ್ನು ಮುಸ್ಲಿಂ ಮತ್ತು ಹಿಂದೂ ಅರಸರು, ಭೂಮಾಲೀಕರು, ಸೈನಿಕರು, ವಿದ್ವಾಂಸರು, ಧಾರ್ಮಿಕ ನಾಯಕರ ಚಳವಳಿ ಎಂದು ಎಲೀಟಿಸ್ಟ್ ಮಾದರಿಯಲ್ಲಿ ಗುರುತಿಸಲಾಗಿದೆ. ಎಡಪಂಥೀಯ ವಿದ್ವಾಂಸರು ಕೂಡ ಇದೇ ಮಾದರಿಗನುಸಾರವಾಗಿ ವಾದ ಮಂಡಿಸುತ್ತಾರೆ. ಎಡಪಂಥೀಯರು ಕೂಡ ದಂಗೆಯನ್ನು, ಮಧ್ಯಕಾಲೀನ ಯುಗದ ಉನ್ನತ ಜಾತಿ-ವರ್ಗಗಳು ಕಳೆದುಕೊಂಡ ತಮ್ಮ ಸ್ಥಾನಮಾನಗಳನ್ನು ಮರುಪಡೆಯುವ ಹಾಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೈಗೊಂಡ ಕಟ್ಟಕಡೆಯ ಪ್ರಯತ್ನವೆಂದು ನೋಡುತ್ತಾರೆ. ಥಾಮಸ್ ಆರ್. ಮೆಟ್‌ಕಾಫ್ ಕೂಡ ಇದು ಕೇವಲ ದಂಗೆ ಅಥವಾ ಸ್ವಾತಂತ್ರ್ಯ ಸಂಗ್ರಾಮವಲ್ಲ ಎನ್ನುತ್ತಾರೆ.

ಅವರ ಪ್ರಕಾರ ೧೮೫೭, "ಹೊಸ ವ್ಯವಸ್ಥೆಯಿಂದ ಅತ್ಯಧಿಕ ನಷ್ಟ ಅನುಭವಿಸಲಿರುವವರು ಬ್ರಿಟಿಷ್-ಪೂರ್ವ ಶ್ರೇಣೀಕರಣ ವ್ಯವಸ್ಥೆಯನ್ನು ಪುನರುತ್ಥಾನಗೊಳಿಸಲು ನಡೆಸಿದ ಸಾಂಪ್ರದಾಯಿಕ ಚಳವಳಿ". ಎರಿಕ್ ಸ್ಟೋಕ್ಸ್ ತನ್ನ ಪ್ರಮುಖವಾದ ಕೃತಿಯೊಂದರಲ್ಲಿ ದಂಗೆಗೆ ಅನುವು ಮಾಡಿಕೊಟ್ಟ ಸ್ಥಳೀಯ ಹಿನ್ನೆಲೆಯನ್ನು ಕಟ್ಟಿಕೊಡುವುದರ ಜತೆಗೆ ಮಾಂಸಲೇಪಿತ ಕೋವಿಗಳನ್ನು ಬಳಸುವುದರಿಂದ ಮೇಲ್ಜಾತಿಗಳ ಸ್ಥಾನಕ್ಕೆ ಕುತ್ತು ಬರುತ್ತದೆ ಎಂಬ ಆತಂಕ ದಂಗೆಗೆ ಕಾರಣವಾಯಿತು ಎಂದು ವಿವರಣೆ ನೀಡಿದ್ದಾನೆ. ಬೆಂಗಾಲ್ ಸೈನ್ಯದಲ್ಲಿ ಹೇಗೆ ಅಶ್ರಫ್ ಮುಸ್ಲಿಮರು, ಬ್ರಾಹ್ಮಣರು ಮತ್ತು ರಜಪೂತರು ಸಾರ್ವಭೌಮತ್ವವನ್ನು ಸಾಧಿಸಿದ್ದರು ಎಂದು ವಿವರಿಸಿರುವ ಸ್ಟೋಕ್ಸ್, ಇವರೆಲ್ಲರೂ ತಮ್ಮ ಸ್ಥಾನಕ್ಕೆ ಧಕ್ಕೆಯುಂಟಾಗುತ್ತದೆ ಎಂದು ಭೀತಿಯಲ್ಲಿದ್ದರು ಎಂದಿದ್ದಾನೆ.

ಹಿಂದೂ ಮೇಲ್ಜಾತಿಯ ಜನರ ನೋವು ಮತ್ತು ಮಾಲಿನ್ಯದ ಭಯ ದಂಗೆಗೆ ಪ್ರಮುಖ ಕಾರಣ ಎಂಬ ಅಂಶ ಈ ಅವಧಿಯ ಬಹಳಷ್ಟು ಕಥನಗಳಲ್ಲಿ ಕಂಡುಬರುತ್ತದೆ. ಈ ವಿವರಣೆಗಳ ನಡುವೆ ದಲಿತರ ಇತಿಹಾಸ ಯಾವ ಸ್ಥಾನದಲ್ಲಿದೆ? ಸಾಗರಗಳನ್ನು ದಾಟುವುದು, ಗೋವು ಅಥವಾ ಹಂದಿ ಮಾಂಸವನ್ನು ತಿನ್ನುವುದು, ಇವುಗಳಿಗೆ ಸಂಬಂಧಿಸಿದ ಮೇಲ್ಜಾತಿ ಮತ್ತು ಮೇಲ್ವರ್ಗಗಳ ಶುದ್ಧ/ ಮಾಲಿನ್ಯದ ವಾದ ದಲಿತರಿಗೆ ಸಹ್ಯವೆನಿಸುವುದಿಲ್ಲ. ಕೆಲವು ವಿದ್ವಾಂಸರು, ದಂಗೆಯಲ್ಲಿ ಕೆಳಜಾತಿಗಳು ನಿರ್ವಹಿಸಿದ ಪಾತ್ರಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಉದಾಹರಣೆಗೆ, ತಾಲೂಕ್‌ದಾರ್ ಮತ್ತು ಕೂಲಿಗಳ ಪರಸ್ಪರ ಅವಲಂಬನೆಯ ಕಾರಣದಿಂದ, ಇಬ್ಬರೂ ಐಕ್ಯವಾಗಿ ಹೋರಾಟ ನಡೆಸಬೇಕಾಯಿತು ಎಂದು ರುದ್ರಾಂಶು ಮುಖರ್ಜಿ ಹೇಳುತ್ತಾರೆ. ತೀರ ವೈರುಧ್ಯವಾದ ಎರಡು ಅಂಶಗಳಿಗೆ, ಅಂದರೆ ಉನ್ನತ ಮತ್ತು ಸಾಮಾನ್ಯ ಜನಸಮೂಹ, ಮುಖರ್ಜಿ ಈ ರೀತಿ ಸಂಬಂಧ ಕಲ್ಪಿಸುತ್ತಾರೆ. ಗೌತಮ್ ಭದ್ರ ಕೂಡ ದಂಗೆಯಲ್ಲಿ ಸಾಮಾನ್ಯರ ಪಾತ್ರಕ್ಕೆ ಒತ್ತು ಕೊಡುತ್ತಾರೆ. ಆದರೂ ಈ ವಿದ್ವಾಂಸರು ತಮ್ಮ ಉತ್ತಮ ಉದ್ದೇಶಗಳ ಹೊರತಾಗಿಯೂ ದಲಿತರು ಮತ್ತು ಮಹಿಳೆಯರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿಲ್ಲ. ಭದ್ರ ಅವರು ಹೇಳುವಂತೆ, "ಈ ಎಲ್ಲ ವಿವರಣೆಗಳಲ್ಲೂ, ಸಾಮಾನ್ಯರ ದಂಗೆಯನ್ನು, ವಿದೇಶಿಯರ ಆಳ್ವಿಕೆಯ ಸಂಕಷ್ಟದ ಸಮಯದಲ್ಲಿ "ಅನ್ಯ"ನ ಬಗೆಗಿನ ಗ್ರಹಿಕೆಯನ್ನು, ಮತ್ತು "ಅನ್ಯ"ನ ಪಾತ್ರವನ್ನು ಕಡೆಗಣಿಸಲಾಗಿದೆ".

ಉತ್ತರ ಭಾರತದಲ್ಲಿ ದಲಿತ ಚಳವಳಿ ಮತ್ತು ದಲಿತ ಸಾಹಿತ್ಯ ಮುಂಚೂಣಿಗೆ ಬರುತ್ತಿದ್ದಂತೆ, ೧೯೭೦ರಿಂದ ಈಚೆಗೆ ೧೮೫೭ರ ಇತಿಹಾಸವನ್ನು ಸಂಪೂರ್ಣವಾಗಿ ಪಲ್ಲಟಗೊಳಿಸಲಾಗಿದೆ. ಈ ಕುರಿತು ಹಲವಾರು ಇತಿಹಾಸಗಳನ್ನು ಮತ್ತೆ ಬರೆಯಲಾಗಿದೆ. ೧೮೫೭ ಕುರಿತು ಸಮಕಾಲೀನ ದಲಿತರ ಗ್ರಹಿಕೆ ಮತ್ತು ಬರಹಗಳು, ಸಾಂಪ್ರದಾಯಿಕ ವಿದ್ವಾಂಸರ ಐತಿಹಾಸಿಕ ಅಧ್ಯಯನ ಮತ್ತು ಸಂರಚಿತ "ಜನಪ್ರಿಯ" ಗ್ರಹಿಕೆಗಳಿಗಿಂತ ತೀರ ಭಿನ್ನವಾದುದು. ದಲಿತರ ಸಮೂಹ ಸ್ಮೃತಿಯಲ್ಲಿ ದಂಗೆಯ ಬಗ್ಗೆ ಇರುವ ಐತಿಹಾಸಿಕ ಪ್ರಜ್ಞೆಯನ್ನು ಇದು ಪ್ರತಿನಿಧಿಸುತ್ತದೆ.

೧೮೫೭ ಕುರಿತ ದಲಿತ ಇತಿಹಾಸದ ಬಗೆಗಿನ ಕರಪತ್ರಗಳು ಮತ್ತು ಪುಸ್ತಕಗಳು-ಇವುಗಳನ್ನು ವಸಾಹತುಶಾಹಿ ಭಾರತದ ಖಾಸಗಿ ದಲಿತ ಇತಿಹಾಸ ಎಂದೂ ಕರೆಯಬಹುದು-ಪುರಾಣಗಳು, ಸ್ಮೃತಿಗಳು ಮತ್ತು ಇತಿಹಾಸವನ್ನು ಒಳಗೊಂಡ ದಂಗೆಯ ವಿವರಣೆಯನ್ನು ದಲಿತ ನೆಲೆಗಟ್ಟಿನಲ್ಲಿ ನೀಡುತ್ತದೆ. ದಂಗೆಯನ್ನು ತಮ್ಮ ಸ್ವಾತಂತ್ರ್ಯ ಪರವಾದ ಹೋರಾಟವಾಗಿ ದಲಿತ ಲೇಖಕರು ನೋಡುವ ಯತ್ನದಲ್ಲಿದ್ದಾರೆ. ದಂಗೆ ದಲಿತರ ಪ್ರತಿರೋಧದ ಲಕ್ಷಣ ಪಡೆದುಕೊಂಡಿದೆ. ದಲಿತರ ಜನಪ್ರಿಯ ರಾಷ್ಟ್ರೀಯವಾದಿ ಪ್ರಜ್ಞೆಯಲ್ಲಿ, ದಲಿತ ನಾಯಕರು ೧೮೫೭ರ ಅಸಲಿ ವಾರಸುದಾರರೆಂದು ಪ್ರತಿನಿಧಿಸಲ್ಪಟ್ಟಿದ್ದಾರೆ. ದಲಿತ ನಾಯಕರು-ಕೆಲವರು ನಕಲಿ, ಕೆಲವರು ಉತ್ಪ್ರೇಕ್ಷಿತರು, ಕೆಲವರು 'ಅನ್ವೇಷಿಸಲ್ಪಟ್ಟವರು'- ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರ ನಾಯಕರಾಗಿದ್ದಾರೆ. ಈ ವಿವರಣೆಗಳಲ್ಲಿ, ಬ್ರಿಟಿಷರ

ವಿರುದ್ಧ ಹೋರಾಡಿದ ಬಹುತೇಕ ಸೈನಿಕರು ದಲಿತರೇ ಆಗಿದ್ದಾರೆ. ಬ್ರಿಟಿಷ್ ಪೂರ್ವ ಸಂದರ್ಭದಲ್ಲಿ ತಮ್ಮ ಸ್ಥಿತಿಗತಿ ಹೀನಾಯವಾಗಿದ್ದರಿಂದ, ದಲಿತರು ಹೆಚ್ಚಿನದೇನನ್ನು ಕಳೆದುಕೊಳ್ಳುವಂತಿಲ್ಲ ಎಂದು ಹೊಸ ದಲಿತ ಇತಿಹಾಸ ವಾದಿಸುತ್ತದೆ.

ಆದ್ದರಿಂದ ೧೮೫೭ರ ದಂಗೆಯಲ್ಲಿ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ದಲಿತರು. ಮೇಲ್ಜಾತಿ ಹಿಂದೂಗಳು ಮತ್ತು ಭಾರತೀಯ ಅರಸರು ತಮ್ಮ ಅಧಿಕಾರವನ್ನು ಪುನರ್ ಸ್ಥಾಪಿಸಲು ಮಾತ್ರ ಹೋರಾಡಿದರು. ಈ ಸಾಹಿತ್ಯದಲ್ಲಿ ಸಿಪಾಯಿಗಳು ಅಥವಾ ಮಾಂಸ ಲೇಪಿತ ಕೋವಿಗಳು ಹೆಚ್ಚಿನ ಪ್ರಾಶಸ್ತ್ಯ ಪಡೆಯದೆ, ವಿದೇಶೀ ದಬ್ಬಾಳಿಕೆಯಲ್ಲಿ ನರಳುತ್ತಿದ್ದ ದಲಿತರ ನೋವು ಹೆಚ್ಚು ಪ್ರಮುಖವಾಗಿ ಬಿಂಬಿತವಾಗಿದೆ. ೧೮೫೭ರ ದಂಗೆಯ ಬಗ್ಗೆ ಪ್ರಸಿದ್ಧ ದಲಿತ ಕವಿ ಬಿಹಾರಿ ಲಾಲ್ ಹರಿತ್ ಈ ರೀತಿ ಹೇಳಿದ್ದಾರೆ:

ನಾಯಿ, ಕುರ್ಮಿ, ಕಚ್ಚಿ/ ಬಾರ್ಬುಜೆ ಭಾತ್ ತುಮ್ಹಾರ್ ಲಾರೆ

ಲಾರೆ ಖಿಕ್ ರಬ್ ಮೋಚಿ ಧನಕ್/ ಸಬ್ ದಲಿತೋಂ ಕೆ ಪರಿವಾರ್ ಲಾರೆ

(ಕ್ಷೌರಿಕರು, ಅಗಸರು, ಕುರ್ಮಿಗಳು, ಮಾಲಿಗಳು, ಕುಂಬಾರರು, ಚಮ್ಮಾರರು ಹಾಗೂ ಇತರ ದಲಿತರು ಹೋರಾಡಿದರು.)

೧೮೫೭ರ ದಲಿತ ಕಥಾನಕಗಳನ್ನು ಇತಿಹಾಸಕಾರರಾಗಿ ಶಾಸ್ತ್ರೀಯವಾಗಿ ತರಬೇತಿ ಪಡೆಯದ ದಲಿತ ಲೇಖಕರೇ ಸಾಮಾನ್ಯ ಭಾಷೆಯಲ್ಲಿ ಬರೆದಿದ್ದಾರೆ. ಈ ಲೇಖಕರು ಒಂದು ವಿಭಿನ್ನವೇ ಆದ ಭಾವನಾತ್ಮಕ ಅಂಶಗಳಿಂದ ಪ್ರೇರಣೆ ಪಡೆದುಕೊಂಡಿರುವಂತಹವರು. ಇವರ ಬರಹಗಳು ದಲಿತ ರಾಜಕಾರಣದ ಆಂತರಿಕ ಆಯಾಮಗಳನ್ನು ವಿಷದಪಡಿಸುತ್ತವೆ. ಒಂದು ನಿರ್ದಿಷ್ಟವಾದ ಗುರಿಯೊಂದಿಗೆ ಇತಿಹಾಸ ರಚಿಸುತ್ತಿರುವ ಈ ಲೇಖಕರು ಹಿಂದಿನದಕ್ಕೆ ಹೊಸ ಆಯಾಮ ನೀಡುವುದರ ಜತೆಗೆ ಈ ಹೊಸ ಇತಿಹಾಸವನ್ನು ತಮ್ಮ ಭವಿಷ್ಯದ ದಾರಿದೀವಿಗೆಯಾಗಿ ಬಳಸುತ್ತಿದ್ದಾರೆ. ದಲಿತರಲ್ಲಿ ರಾಷ್ಟ್ರೀಯವಾದ, ದೇಶಪ್ರೇಮದ ಭಾವನೆ ಮೂಡಿಸುವುದು, ಹಾಗೂ ಆತ್ಮಗೌರವ ಹೆಚ್ಚಿಸುವುದು ಈ ರೀತಿಯ ಸ್ವಪ್ರೇರಿತ ಬರವಣಿಗೆಗಳ ಉದ್ದೇಶಗಳಲ್ಲಿ ಒಂದು.

ದಲಿತರಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುವ ಉದ್ದೇಶದಿಂದ ಇತಿಹಾಸಕ್ಕೆ ಮರುರೂಪ ಕೊಡಲಾಗುತ್ತಿದೆ. ಈ ಸಂದರ್ಭದ ಭಾವನೆಗಳನ್ನು, ಆಶಯಗಳನ್ನು ೧೮೫೭ರ ದಲಿತ ನಾಯಕರಲ್ಲಿ ಬಿತ್ತಲಾಗುತ್ತದೆ. ದಲಿತರು ತಮ್ಮ ಹಿಂದಿನ ನಾಯಕರ ಸಾಧನೆಗಳನ್ನು ಅನುಕರಿಸುವುದರ ಜತೆಗೆ, ಈಗ ತಮ್ಮ ಹಕ್ಕುಗಳಿಗೆ ಹೋರಾಡುವುದು ಎಂಬ ನೈತಿಕ ಪಾಠ ಇದರಲ್ಲಿ ಅಡಕವಾಗಿದೆ. ದಲಿತ ಸಾಹಿತ್ಯದಲ್ಲಿ ೧೮೫೭, ಸೀಜರ್‌ನ ಸ್ವರೂಪ ಪಡೆದುಕೊಂಡಿದೆ. ಮರಣ ಹೊಂದಿದ ಮೇಲೆ ಬದುಕಿದ್ದಾಗಿಂತಲೂ ಹೆಚ್ಚು ಬಲಿಷ್ಠ ಹಾಗೂ 'ಪರಿಣಾಮಕಾರಿ' ಎನಿಸಿಕೊಂಡ ಸೀಜರ್‌ನಂತೆ ಹೊಸ ದಲಿತ ಇತಿಹಾಸ ಪ್ರೇರಣೆ ನೀಡುವ ಯತ್ನದಲ್ಲಿದೆ. ಅಧಿಕಾರಕ್ಕೆ ಪ್ರತಿರೋಧ ಒಡ್ಡಿದ ಮಹತ್ವದ ಸಂಕೇತವಾಗಿ ಕೆಳವರ್ಗದ ಜನಪ್ರಿಯ ದಂಗೆ ಪರಿಗಣಿಸಲ್ಪಡುತ್ತಿದೆ. ಇದು ಸಂಘಟಿತ ದಲಿತರ ಕ್ರಿಯಾತ್ಮಕತೆ ಹಾಗೂ ಹೆಚ್ಚಿನ ಸಂಖ್ಯೆಯ ದಲಿತರ ತ್ಯಾಗವನ್ನು ಪ್ರತಿಬಿಂಬಿಸುತ್ತದೆ. ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂದರ್ಭಕ್ಕೆ ಅನುಗುಣವಾಗಿ ೧೮೫೭ರ ಇತಿಹಾಸಕ್ಕೆ ಹೊಸ ರೂಪ ನೀಡಲಾಗುತ್ತಿದೆ. ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಅತ್ಯವಶ್ಯಕವಾದ ಉತ್ತೇಜನಕಾರಿಯಾದ ಲಕ್ಷಣ ಇದಕ್ಕಿದೆ.

ದಲಿತರು ತಮ್ಮ ರಾಷ್ಟ್ರೀಯವಾದಿ ಬದ್ಧತೆಯನ್ನು ಸಾಬೀತುಪಡಿಸಲು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಾಗೂ ರಾಷ್ಟ್ರ ನಿರ್ಮಾಣ ಪೂರ್ವ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನ ಗುರುತಿಸಿಕೊಳ್ಳಲು ೧೮೫೭ ಪ್ರಮುಖ ಕಾಲಘಟ್ಟವಾಗಿದೆ. ರಾಷ್ಟ್ರೀಯವಾದಿ ಕಥನಗಳಲ್ಲಿ ತಮಗೆ ಸ್ಥಾನ ಕಲ್ಪಿಸಿಕೊಂಡು, ಅದನ್ನು ಶಾಸನಾತ್ಮಕಗೊಳಿಸಿಕೊಳ್ಳುವ ಮೂಲಕ ದಲಿತರು ಕೂಡ ವಿಶಾಲವಾದ ಸಮಾಜದ ಸಮ್ಮತಿ ಪಡೆಯಲು ಬಯಸಿದ್ದಾರೆ. ಆದರೆ, ಈ ಇತಿಹಾಸ ಹಳೆಯ ಘಟನೆಗಳ ಪುನರ್ರಚನೆಗಳು ಅಥವಾ ಉತ್ತೇಜನ 'ಕಾರಿ ಇತಿಹಾಸವಲ್ಲ. ದಂಗೆಯಲ್ಲಿ ಭಾಗವಹಿಸಿ ಹೋರಾಡಿದ ತೆರೆಮರೆಯ ನಾಯಕರು, ಇವರಲ್ಲಿ ಬಹುತೇಕ ಮಂದಿ ತಮ್ಮ ಬಗ್ಗೆ ಯಾವುದೇ ದಾಖಲೆಗಳನ್ನು ಬಿಡದೆ ಮಡಿದ ಅನಕ್ಷರಸ್ಥರು, ಇವರುಗಳನ್ನು ಗುರುತಿಸಬೇಕೆಂಬ ಇಚ್ಛೆ ಈ ಕಥನಗಳಲ್ಲಿದೆ. ಹೀಗಾಗಿ ಜಾನಪದ ಹಾಡುಗಳು, ಮೌಖಿಕ ಕಥನಗಳು ಮತ್ತು ಪುರಾಣಗಳು, ಈ ಐತಿಹಾಸಿಕ ಕಥನಗಳ ಅಡಿಪಾಯವಾಗಿದೆ.

೧೮೫೭ರ ದಲಿತ ಸಾಹಿತ್ಯದ ಭಾಷೆ ಮತ್ತು ಪದ ಪುಂಜ ಇತಿಹಾಸದ ದಲಿತೀಕರಣಕ್ಕೆ ಒತ್ತು ನೀಡುತ್ತದೆ. ಹಾಗೂ ದಂಗೆಯಲ್ಲಿ ಭಾಗವಹಿಸಿದ್ದ ದಲಿತ ನಾಯಕರ ಕಡೆ ಗಮನಹರಿಸುವಂತೆ ಒತ್ತಾಯ ಮಾಡುತ್ತದೆ. ಸತ್ಯ ವನ್ನು ಪ್ರತಿನಿಧಿಸುವುದಕ್ಕಾಗಿ ೧೮೫೭ನ್ನು ದಲಿತ ನೆಲೆಗಟ್ಟಿ ನಲ್ಲಿ ಮರು ಅನ್ವೇಷಣೆಗೆ, ಮರು ಓದಿಗೆ ಒಳಪಡಿಸಬೇಕೆಂಬುದು ದಲಿತರ ವಾದ. ಹಳೆಯದನ್ನು ಆವಿರ್ಭವಿಸಿ ಕೊಳ್ಳುವುದರ ಜತೆಗೆ, ದಂಗೆಯಲ್ಲಿ ಹೋರಾಡಿದ ದಲಿತರ ಬಗ್ಗೆ ಸಾಂಪ್ರದಾಯಿಕ ಇತಿಹಾಸಕಾರರ ಅಸ್ಪಷ್ಟ ವಿವರಗಳು ಮತ್ತು ಪಕ್ಷಪಾತಿ ಇತಿಹಾಸವನ್ನು ದಲಿತ ಲೇಖಕರು ಪ್ರಶ್ನಿಸುತ್ತಾರೆ. ದಂಗೆಯಲ್ಲಿ ಹೋರಾಡಿದ ದಲಿತರನ್ನು ಸಾಂಪ್ರ ದಾಯಿಕ ಇತಿಹಾಸದಲ್ಲಿ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ೧೮೫೭ರ ಸಾಂಪ್ರದಾಯಿಕ ಇತಿಹಾಸಕಾರರು ಆಂತರಿಕವಾಗಿ ಮೇಲ್ಜಾತಿಗಳ ಪರವಾಗಿದ್ದಾರೆ ಎಂಬುದು ದಲಿತ ಲೇಖಕರ ವಾದ ಸರಣಿ.

ಯತ್ರ ತತ್ರ ಸರ್ವತ್ರ ಮಿಲೇಗಿ, ಉನ್‌ಕಿ ಗಾಥಾ ಕಿ ಚರ್ಚಾ.

ಕಿಂತು ಉಪೇಕ್ಷಿತ್ ವೀರ್‌ವರೋಂಕಾ- ಕಭೀ ನಹೀ ಚಾಪ್ತಾ ಪರ್ಚಾ.

(ವ್ಯಾಖ್ಯಾರ್ಥ- ಇಲ್ಲಿ ಅಲ್ಲಿ, ಎಲ್ಲೆಲ್ಲೂ ಅವರ ಕಾರ್ಯಗಳ ಚರ್ಚೆ ನಡೆದಿದೆ. ಆದರೆ ಉಪೇಕ್ಷಿತ ದಲಿತ ವೀರರ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿಲ್ಲ.)

ಆದರೆ ಈ ಸಾಹಿತ್ಯ ೧೮೫೭ರ ಬಗೆಗಿನ ಮುಖ್ಯವಾಹಿನಿಯ, ಸಾಂಪ್ರದಾಯಿಕವಾದ ಮತ್ತು ಪವಿತ್ರವಾದ ಐತಿಹಾಸಿಕ ಕಥಾನಕಗಳ ಒಳಗೆ ಇನ್ನೂ ಪ್ರವೇಶಿಸಲಾಗಿಲ್ಲ. ಅದು ಶಾಲಾ ಪಠ್ಯಪುಸ್ತಕಗಳಾಗಿರಬಹುದು, ಪುನರ್ರಚಿತವಾದ ಪಠ್ಯವಿರಬಹುದು ಅಥವಾ ಸಂಶೋಧನಾತ್ಮಕ ಕೃತಿಗಳಿರಬಹುದು. "ಗುಣಮಟ್ಟ", ನಿಖರತೆ ಮತ್ತು ಐತಿಹಾಸಿಕ ದಾಖಲೆಗಳ ಕೊರತೆ ಇದಕ್ಕೆ ಕಾರಣ. ೧೮೫೭ರ ಬಗ್ಗೆ ಲಭ್ಯವಿರುವ ದಲಿತ ಸಾಹಿತ್ಯ ಭಾವನಾತ್ಮಕವಾಗಿ ಮತ್ತು ಉತ್ಸಾಹಭರಿತವಾಗಿದ್ದರೂ, ಇವನ್ನು "ಕೀಳು", "ರೋಚಕ", "ಉತ್ಪ್ರೇಕ್ಷೆ" ಮತ್ತು "ಸಾಧಾರಣ" ಸಾಹಿತ್ಯ ಎಂದು ಪರಿಗಣಿಸಬಹುದು. ೧೮೫೭ರ ದಲಿತ ವರ್ಷನ್‌ಗಳು ಅಧಿಕಾರ ಕೇಂದ್ರದ ಅಂದರೆ ವಿಶ್ವವಿದ್ಯಾನಿಲಯದ ವಿಭಾಗಗಳು, ಸಾಹಿತ್ಯಕ ಸಂಘಗಳು ಮತ್ತು ಪಠ್ಯಗಳಿಂದ ದೂರ ಉಳಿದಿದೆ. ೧೮೫೭ರ ಬಗೆಗಿನ ದಲಿತ ಸಾಹಿತ್ಯ ಒಂದು ವಿಭಿನ್ನವಾದ ಸಾರ್ವಜನಿಕ-ರಾಜಕೀಯ ಸ್ಥರದಲ್ಲಿದೆ ಮತ್ತು ಪ್ರತ್ಯೇಕವಾದ ಜ್ಞಾನಶಾಖೆಯನ್ನು ಪ್ರತಿನಿಧಿಸುತ್ತದೆ.

೧೮೫೭ರ ದಲಿತ ಸಾಹಿತ್ಯದ ಭಾಷೆ ಮತ್ತು ಪದ ಪುಂಜ ಇತಿಹಾಸದ ದಲಿತೀಕರಣಕ್ಕೆ ಒತ್ತು ನೀಡುತ್ತದೆ. ಹಾಗೂ ದಂಗೆಯಲ್ಲಿ ಭಾಗವಹಿಸಿದ್ದ ದಲಿತ ನಾಯಕರ ಕಡೆ ಗಮನಹರಿಸುವಂತೆ ಒತ್ತಾಯ ಮಾಡುತ್ತದೆ. ಸತ್ಯವನ್ನು ಪ್ರತಿನಿಧಿಸುವುದಕ್ಕಾಗಿ ೧೮೫೭ನ್ನು ದಲಿತ ನೆಲೆಗಟ್ಟಿನಲ್ಲಿ ಮರು ಅನ್ವೇಷಣೆಗೆ, ಮರು ಓದಿಗೆ ಒಳಪಡಿಸಬೇಕೆಂಬುದು ದಲಿತರ ವಾದ. ಹಳೆಯದನ್ನು ಆವಿರ್ಭವಿಸಿಕೊಳ್ಳುವುದರ ಜತೆಗೆ, ದಂಗೆಯಲ್ಲಿ ಹೋರಾಡಿದ ದಲಿತರ ಬಗ್ಗೆ ಸಾಂಪ್ರದಾಯಿಕ ಇತಿಹಾಸಕಾರರ ಅಸ್ಪಷ್ಟ ವಿವರಗಳು ಮತ್ತು ಪಕ್ಷಪಾತಿ ಇತಿಹಾಸವನ್ನು ದಲಿತ ಲೇಖಕರು ಪ್ರಶ್ನಿಸುತ್ತಾರೆ. ದಂಗೆಯಲ್ಲಿ ಹೋರಾಡಿದ ದಲಿತರನ್ನು ಸಾಂಪ್ರದಾಯಿಕ ಇತಿಹಾಸದಲ್ಲಿ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ೧೮೫೭ರ ಸಾಂಪ್ರದಾಯಿಕ ಇತಿಹಾಸಕಾರರು ಆಂತರಿಕವಾಗಿ ಮೇಲ್ಜಾತಿಗಳ ಪರವಾಗಿದ್ದಾರೆ ಎಂಬುದು ದಲಿತ ಲೇಖಕರ ವಾದ ಸರಣಿ.

೧೮೫೭ರ ದಲಿತ 'ವೀರನಾರಿಯರು'

ದಲಿತ ಮಹಿಳೆಯರು ಯಾವ ರೀತಿ ಪ್ರತಿನಿಧಿಸಲ್ಪಟ್ಟಿದ್ದಾರೆ ಎಂಬುದು ೧೮೫೭ ಕುರಿತ ಜನಪ್ರಿಯ ದಲಿತ ಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲೊಂದಾಗಿದೆ. ದಲಿತರಿಗೆ ರಾಜಕೀಯ ಮತ್ತು ಸಾಮಾಜಿಕ ನೆಲೆಗಟ್ಟು ಕಲ್ಪಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಚಳವಳಿಯ ವಿಮರ್ಶಾತ್ಮಕ ಭಾಗವಾಗಿ ಹಾಗೂ ದಲಿತ ಅಸ್ಮಿತೆಯ ರಚನೆಗೆ ಪೂರಕ ಸಂಕೇತವಾಗಿ 'ದಲಿತ ವೀರನಾರಿ'ಯರಿಗೆ ಮರುಜನ್ಮ ಕಲ್ಪಿಸಲಾಗುತ್ತಿದೆ. ಭಾರತದ ಇತಿಹಾಸದಲ್ಲಿ ದಲಿತ ವೀರನಾರಿಯರ ಕಥನಗಳ ಉದ್ದನೆಯ ಪಟ್ಟಿಯೇ ಇದೆ. ಈ ಮಹಿಳೆಯರಿಗೆ ವಿಶೇಷವಾಗಿ ರೋಚಕವಾದ ಪಾತ್ರ ನೀಡಲಾಗಿದೆ. ನಿಖರವಾಗಿ ಹೇಳುವುದಾದರೆ ೧೮೫೭ರಲ್ಲಿ ಶಸ್ತ್ರಸಜ್ಜಿತ ಹೋರಾಟ ನಡೆಸಿದವರಲ್ಲಿ ದಲಿತ ಮಹಿಳಾ

ನಾಯಕಿಯರ ಸಂಖ್ಯೆ, ಪುರುಷರಿಗಿಂತ ಹೆಚ್ಚಿದೆ. ಸಾರ್ವಜನಿಕರ ರಾಜಕೀಯ ಸ್ಮೃತಿಯನ್ನು ಬರಹಗಳು ಬಡಿದೆಬ್ಬಿಸುತ್ತವೆ. ೧೮೫೭ರ ದಂಗೆಯಲ್ಲಿ ಭಾಗವಹಿಸಿದ್ದರು ಎನ್ನಲಾದ ಕೋರಿ ಜಾತಿಯ ಝಲ್ಕಾರಿ ಬಾಯಿ, ಪಾಸಿ ಜಾತಿಯ ಉದಾ ದೇವಿ, ಲೋಧಿ ಜಾತಿಯ ಅವಂತಿ ಬಾಯಿ, ಭಂಗಿ ಜಾತಿಯ ಮಹಾಬಿರಿ ದೇವಿ ಮತ್ತು ಗುರ್ಜರಿ ಜಾತಿಯ ಆಶಾ ದೇವಿ ಅವರಂತಹ ಮಹಿಳೆಯರು, ಕೆಲವು ದಲಿತ ಜಾತಿಗಳಷ್ಟೇ ಅಲ್ಲದೆ ಒಟ್ಟಾರೆ ದಲಿತರ ಶೌರ್ಯದ ಸಂಕೇತಗಳಾಗಿದ್ದಾರೆ.

೧೮೫೭ಕ್ಕೆ ಸಂಬಂಧಿಸಿದಂತೆ ದಲಿತ ಮಹಿಳೆಯರನ್ನು ಕೆಲವು ಮಾದರಿಗಳಲ್ಲಿ ಪ್ರತಿನಿಧಿಸುವುದು, ಹಿಂದಿನದನ್ನು ನೆನಸುವ ರೀತಿ ಹಾಗೂ ಇಂತಹ ಹಳೆಯ ಸಂಬಂಧಗಳನ್ನು ಜನರು ತಮ್ಮ ಇಂದಿನ ಸಾಮಾಜಿಕ, ಹಾಗೂ ಕೌಟುಂಬಿಕ ಅಸ್ತಿತ್ವಕ್ಕೆ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಸೂಚಿಸುತ್ತದೆ. ಈ ಹಿಂದೆ ಹೇಳಿದಂತೆ, ನಮ್ಮ ಸ್ಮೃತಿಯ ನಡುವಿನ ಸಂಬಂಧ, ಪುರಾಣ ಮತ್ತು ಇತಿಹಾಸ, ಮೌಖಿಕ ಸಂಪ್ರದಾಯ ಮತ್ತು ಬರವಣಿಗೆ, ಪರಂಪರೆ ಮತ್ತು ದಾಖಲೆಗಳು, ಸ್ಟಿರಿಯೋಟೈಪ್‌ಗಳು ಮತ್ತು ಘಟಿಸಿದ ಇತಿಹಾಸ, ಇವುಗಳ ಸಂಬಂಧಗಳನ್ನು ಪುನರ್ವಿಮರ್ಶೆಗೊಳಪಡಿಸುತ್ತವೆ ಈ ಪ್ರಾತಿನಿಧಿಕ ಕಥನಗಳು. ೧೮೫೭ರ ದಲಿತ ವೀರನಾರಿಯರ ಇತಿಹಾಸವನ್ನು ಪ್ರಾತಿನಿಧಿತ್ವರ ಮಸೂರದ ಮೂಲಕ ನೋಡುವುದರಿಂದ, ಅದನ್ನು ಅರ್ಥೈಸಿಕೊಳ್ಳುವ ದಿಶೆಯಲ್ಲಿ ಹೊಸ ಆಯಾಮಗಳು ದೊರಕಿದಂತಾಗುತ್ತದೆ.

ಈ ರೀತಿಯ ಓದು, ಅಕೆಡೆಮಿಕ್ ಹಾಗೂ ಪ್ರಾದರ್ಶನಿಕ, ಶಬ್ದಾಡಂಬರ ಹಾಗೂ ಸತ್ಯದ ಆಯಾಮಗಳ ನಡುವಿನ ಸಂಘರ್ಷವನ್ನು ಹೊರಗೆಡವುತ್ತದೆ. ಪ್ರಾತಿನಿಧಿತ್ವಗಳು ಆಂತರಿಕವಾಗಿಯೇ ಸರ್ವೇಕ್ಷಣೆಯ ಪರಿಕರಗಳಾಗಿ, ದಬ್ಬಾಳಿಕೆ ಮತ್ತು ನಿಯಂತ್ರಣಶಕ್ತಿಯ ಸಾಧನಗಳಾಗಿ ಅಷ್ಟೇ ಅಲ್ಲದೆ, ಅಧಿಕಾರದ ಪರಿಣಾಮಗಳಾಗಿರುತ್ತವೆ ಎಂದು ಫೂಕಾಲ್ಟ್ ವಾದ ಮಂಡಿಸಿದ್ದಾನೆ. ಆದರೆ ನಾವು, ಸಿದ್ಧಾಂತದ ಬಲಿಷ್ಠ ಮಾದರಿಗಳಿಗೆ ಇಂಬು ಕೊಡುವುದನ್ನು ಹಾಗೂ ಒತ್ತಾಯ ಮಾಡುವ ಗುರಿಯನ್ನು ದಲಿತ ಮಹಿಳೆಯರ ಪ್ರಾತಿನಿಧಿತ್ವ ಹೊಂದಿದೆ ಎಂದು ವಾದ ಮಂಡಿಸುವುದಾದರೆ, ಆ ಸ್ಥಳವನ್ನು ಪ್ರತಿರೋಧಕ್ಕೆ ಬಳಸಲು ಹೇಗೆ ಸಾಧ್ಯ? ಪ್ರತಿರೋಧ ವ್ಯಕ್ತಪಡಿಸಲು ಪೂರಕವಾದ, ವೈವಿಧ್ಯವಾದ, ಮತ್ತು ಸಡಿಲವಾದ ಮಾದರಿಗಳನ್ನು ರೂಪಿಸುವ ಬೀಸು ಪ್ರಾತಿನಿಧಿತ್ವಕ್ಕೆ ಇದೆಯೇ? ಇದೆ. ಯಜಮಾನಿಕೆಗೆ ಸವಾಲೊಡ್ಡುವ ಪ್ರತಿ-ಚಿತ್ರಣಗಳು ಪ್ರಾತಿನಿಧಿತ್ವದ ಹರವಿನಿಂದಲೇ ಹುಟ್ಟಿ ಬರಬಹುದು.

ವಸಾಹತುಶಾಹಿ ಸಂದರ್ಭದಲ್ಲಿ ಮೇಲ್ಜಾತಿ, ಮಧ್ಯಮ ವರ್ಗದ ಮಹಿಳೆಯರ ಪ್ರಾತಿನಿಧಿತ್ವದ ಬಗ್ಗೆ ಭಾರತದಲ್ಲಿ ಬಹಳಷ್ಟು ಅಧ್ಯಯನಗಳು ನಡೆದಿವೆ. ದಲಿತ ಮಹಿಳೆಯರು ಕೂಡ "ಮಹಿಳೆಯರು" ಎಂಬ ವರ್ಗೀಕರಣದೊಳಗೆ ಬರುವುದರಿಂದ, ಅವರ ಪ್ರಾತಿನಿಧಿತ್ವದ ಅಧ್ಯಯನಗಳು ಪ್ರಮುಖ ಎನಿಸಿಕೊಂಡರೂ, ದಲಿತ ಮಹಿಳೆಯರ ಕುರಿತ ಪ್ರತ್ಯೇಕವಾದ ಅಧ್ಯಯನಗಳ ಅವಶ್ಯಕತೆ ಇಲ್ಲ ಎಂಬ ಆಂತರಿಕ ಧೋರಣೆ ಇವುಗಳಲ್ಲಿದೆ. ಹೀಗಾಗಿ, ವಸಾಹತುಶಾಹಿ ಸಂದರ್ಭದಲ್ಲಿ ದಲಿತ ಮಹಿಳೆಯರ ಚಿತ್ರಣ ಕುರಿತ ಸ್ತ್ರೀವಾದಿ ಸಂಶೋಧನಾತ್ಮಕ ಅಧ್ಯಯನಗಳ ಸಾಧ್ಯತೆಯನ್ನು ಕಡೆಗಣಿಸಲಾಗಿದೆ ಅಥವಾ ಮೂಲೆಗುಂಪು ಮಾಡಲಾಗಿದೆ.

ದಲಿತ ಮಹಿಳೆಯರ ಬಗೆಗಿನ ಅನೇಕ ಕಥನಗಳು ಈ ರೀತಿ ಇವೆ. ಕೋರಿ ಜಾತಿಗೆ ಸೇರಿದ ಝಲ್ಕಾರಿ ಬಾಯಿಯನ್ನು ೧೮೫೭ರ 'ಅಮರ ಹುತಾತ್ಮಳು' ಎಂದು ಬಿಂಬಿಸಲಾಗಿದೆ. ಝಲ್ಕಾರಿ ಬಾಯಿ ಮೂಲತಃ ಝಾನ್ಸಿ ಯವಳು. ಆಕೆಯ ಗಂಡ ಪೂರನ್ ಕೋರಿ, ರಾಜಾ ಗಂಗಾಧರ ರಾವ್ ಸೈನ್ಯದಲ್ಲಿ ಓರ್ವ ಸಾಧಾರಣ ಸೈನಿಕನಾಗಿದ್ದ. ಈ ಕಥನಗಳಲ್ಲಿ ಝಲ್ಕಾರಿ ಬಾಯಿಯನ್ನು, ಆಗಾಗ ಬಟ್ಟೆ ನೇಯ್ಗೆಯ ಸಾಂಪ್ರದಾಯಿಕ ಕೆಲಸದಲ್ಲಿ ಗಂಡನಿಗೆ ಸಹಾಯಕಳಾಗಿ, ಕೆಲವೊಮ್ಮೆ ಅರಮನೆಗೆ ಗಂಡನ ಜತೆ ತೆರಳುವ ಸಂಗಾತಿಯಾಗಿ, ಒಟ್ಟಾರೆ ಆದರ್ಶ ಮಹಿಳೆ ಯಾಗಿ ಬಿಂಬಿಸಲಾಗಿದೆ.

೧೮೫೭ರ ದಲಿತ ಸಾಹಿತ್ಯ ದಲಿತ ಮಹಿಳೆಯರ ಪ್ರತ್ಯೇಕ ಪ್ರಾತಿನಿಧಿತ್ವವನ್ನು ನಿಕಷಕ್ಕೆ ಒಡ್ಡಲು ಪ್ರಮುಖವಾದ ಕಾರಣವನ್ನು ಒದಗಿಸುತ್ತದೆ. ದಲಿತ ಸಾಹಿತ್ಯ ಲಿಂಗ ರಾಜಕಾರಣದ ಬಗ್ಗೆ ದಲಿತ ನೆಲೆಗಟ್ಟಿನ ಪ್ರಮುಖವಾದ ಹೊಳಹುಗಳನ್ನು ನೀಡುತ್ತದೆ. ಇದು ಅರ್ಥಗಳು ಸಂಘರ್ಷಿಸುವ ಸಂಗಮ ಸ್ಥಳ. ದಲಿತ ಅಸ್ಮಿತೆಯ ಸಾಂಕೇತಿಕ ಸಂರಚನೆಯಲ್ಲಿ ದಲಿತ ಮಹಿಳಾ ವೀರನಾರಿಯರಿಗೆ ಕೇಂದ್ರಸ್ಥಾನ ನೀಡುವುದರ ಜತೆಗೆ, ಈ ಸಾಹಿತ್ಯ, ಇಡೀ ಜಗತ್ತನ್ನು ತಲೆಕೆಳಕಾಗಿಸಿ ನೋಡುತ್ತದೆ ಹಾಗೂ ೧೮೫೭ರ ಅಕೆಡೆಮಿಕ್, ಪಠ್ಯ ಮತ್ತು ಐತಿಹಾಸಿಕ ಕಥನಗಳಿಗೆ ಸವಾಲೊಡ್ಡುತ್ತದೆ. ದಲಿತ ಮಹಿಳೆಯರ ಬಗೆಗಿನ ಸಾಂಪ್ರದಾಯಿಕ ಪಠ್ಯಗಳಿಗೆ ಒಡ್ಡಲಾದ ಪ್ರತಿರೋಧವನ್ನು ಯಾವ ರೀತಿ ಬರೆಯಲಾಗಿದೆ ಹಾಗೂ ವಿವಿಧ ಸಾಹಿತ್ಯಕ ಸಂದರ್ಭದಲ್ಲಿ ದಲಿತ ಸಮುದಾಯದೊಳಗಿನ ವಿವಿಧ ದಲಿತ ಸಮೂಹಗಳು ಹೇಗೆ ಬದುಕಿದ್ದವು ಎಂಬುದನ್ನು ದಲಿತ ಸಾಹಿತ್ಯ ತಿಳಿಸುತ್ತದೆ. ದಲಿತ ಮಹಿಳಾ ವೀರನಾರಿಯರು ಇಲ್ಲಿ ಕಣ್ಣಿಗೆ ಗೋಚರಿಸುವ ಕೇಂದ್ರ ಪಾತ್ರಗಳಾಗಿ, ಆಕರ್ಷಣೆಯ ಹಾಗೂ ಪ್ರಶಂಸೆಯ ವಸ್ತುಗಳಾಗಿ ಹೊರಹೊಮ್ಮಿದ್ದಾರೆ.

ಝಲ್ಕಾರಿ ಬಾಯಿ ಅವರ ನಿದರ್ಶನ ತೆಗೆದುಕೊಳ್ಳುವುದಾದರೆ, ಈಕೆಯ ಬಗ್ಗೆ ಅನೇಕ ಲೇಖಕರು ಬರೆದ ಕಥನಗಳು ಮತ್ತು ಸಾಂಸ್ಕೃತಿಕ ವಿವರಗಳು ಇತ್ತೀಚೆಗೆ ಹೆಚ್ಚಾಗಿ ಕಾಣಿಸಲಾರಂಭಿಸಿದೆ. ಇವುಗಳಲ್ಲಿ ವ್ಯಂಗ್ಯಚಿತ್ರಗಳು, ಕವನಗಳು, ನಾಟಕಗಳು, ಕಾದಂಬರಿಗಳು, ಆತ್ಮಕಥೆಗಳು, ನೌಟಂಕಿಗಳು (ನೃತ್ಯನಾಟಕ ಪ್ರಕಾರ), ಮ್ಯಾಗಜೀನ್‌ಗಳು, ಮತ್ತು ಸಂಸ್ಥೆಗಳು ಕೂಡ ಸೇರಿವೆ. ಕೆಲವು ಇಂತಹ ಪ್ರಕಾರಗಳನ್ನು ಇಲ್ಲಿ ಪಟ್ಟಿ ಮಾಡಬಹುದು: 'ಝಲ್ಕಾರಿ ಬಾಯಿ ಕಾಮಿಕ್‌ಗಳು', 'ಝಲ್ಕಾರಿ ಬಾಯಿ ಕಾವ್ಯ', 'ಝಾನ್ಸಿಯ ಹೆಣ್ಣುಹುಲಿ', 'ವೀರಾಂಗನೆ ಝಲ್ಕಾರಿ ಬಾಯಿ ಜೀವನ ಚರಿತ್ರೆ', ಮತ್ತು 'ವೀರಾಂಗನೆ ಝಲ್ಕಾರಿ ಬಾಯಿ ಮಹಾಕಾವ್ಯ' ಮುಂತಾದ ಕಾವ್ಯಗಳು; 'ವೀರಾಂಗನೆ ಝಲ್ಕಾರಿ ಬಾಯಿ', 'ಅಚೂತ್ ವೀರಾಂಗನೆ ನೌಟಂಕಿ' ಎಂಬಿತ್ಯಾದಿ ನಾಟಕಗಳು; 'ವೀರಾಂಗನೆ ಝಲ್ಕಾರಿ ಬಾಯಿ', 'ಅಚೂತ್ ವೀರಾಂಗನೆ' ಎಂಬಿತ್ಯಾದಿ ಕಾದಂಬರಿಗಳು-ಆತ್ಮ ಕಥನಗಳು': ಆಗ್ರಾದಿಂದ ಪ್ರಕಟಗೊಳ್ಳುವ "ಝಲ್ಕಾರಿ ಸಂದೇಶ್" ಎಂಬ ಮ್ಯಾಗಜೀನ್. ಇಷ್ಟೇ ಅಲ್ಲದೆ ಬಹಳಷ್ಟು ದಲಿತ ಮ್ಯಾಗಜೀನ್‌ಗಳು ಆಕೆಯ ಬಗ್ಗೆ ಲೇಖನಗಳನ್ನು ಪ್ರಕಟಿಸಿವೆ. ಇದೇ ರೀ ಉದಾ ದೇವಿ ಬಗ್ಗೆ ಕೂಡ ಕವನಗಳು, ನಾಟಕಗಳೂ, ಕಥೆಗಳು ಮತ್ತು ಮ್ಯಾಗಜೀನ್‌ಗಳನ್ನು ಅನೇಕ ಸಂದರ್ಭಗಳಲ್ಲಿ ಕಾಣಬಹುದು.

ದಲಿತ ಮಹಿಳೆಯರ ಬಗೆಗಿನ ಅನೇಕ ಕಥನಗಳು ಈ ರೀತಿ ಇವೆ. ಕೋರಿ ಜಾತಿಗೆ ಸೇರಿದ ಝಲ್ಕಾರಿ ಬಾಯಿಯನ್ನು ೧೮೫೭ರ 'ಅಮರ ಹುತಾತ್ಮಳು' ಎಂದು ಬಿಂಬಿಸಲಾಗಿದೆ. ಝಲ್ಕಾರಿ ಬಾಯಿ ಮೂಲತಃ ಝಾನ್ಸಿಯವಳು. ಆಕೆಯ ಗಂಡ ಪೂರನ್ ಕೋರಿ, ರಾಜಾ ಗಂಗಾಧರ ರಾವ್ ಸೈನ್ಯದಲ್ಲಿ ಓರ್ವ ಸಾಧಾರಣ ಸೈನಿಕನಾಗಿದ್ದ. ಈ ಕಥನಗಳಲ್ಲಿ ಝಲ್ಕಾರಿ ಬಾಯಿಯನ್ನು, ಆಗಾಗ ಬಟ್ಟೆ ನೇಯ್ಗೆಯ ಸಾಂಪ್ರದಾಯಿಕ ಕೆಲಸದಲ್ಲಿ ಗಂಡನಿಗೆ ಸಹಾಯಕಳಾಗಿ, ಕೆಲವೊಮ್ಮೆ ಅರಮನೆಗೆ ಗಂಡನ ಜತೆ ತೆರಳುವ ಸಂಗಾತಿಯಾಗಿ, ಒಟ್ಟಾರೆ ಆದರ್ಶ ಮಹಿಳೆಯಾಗಿ ಬಿಂಬಿಸಲಾಗಿದೆ.

ಬಾಲ್ಯದಿಂದ ಧೈರ್ಯಶಾಲಿಯಾಗಿದ್ದ ಝಲ್ಕಾರಿ ಬಾಯಿ, ನಂತರ ಗಂಡನಿಂದ ಬಿಲ್ವಿದ್ಯೆ, ಕುಸ್ತಿ, ಕುದುರೆ ಸವಾರಿ, ಗುಂಡು ಹಾರಿಸುವುದು, ಇವುಗಳ ತರಬೇತಿ ಪಡೆದಳು ಎನ್ನಲಾಗಿದೆ. ನಿಧಾನವಾಗಿ ಝಲ್ಕಾರಿ ಬಾಯಿ ಮತ್ತು ಝಾನ್ಸಿ ರಾಣಿ ಲಕ್ಷ್ಮಿಬಾಯಿ ಗೆಳತಿಯರಾಗುತ್ತಾರೆ. "ದುರ್ಗಾದಳ" ಎಂಬ ಮಹಿಳಾ ಸೈನ್ಯದ ತುಕಡಿಯನ್ನು ನಂತರ ಝಲ್ಕಾರಿ ಬಾಯಿಗೆ ವಹಿಸಲಾಗುವುದು. ೧೮೫೭ರಲ್ಲಿ ದಂಗೆ ಆರಂಭವಾದಾಗ, ಆಳುವ ಅರಸರು ತಮ್ಮ ರಾಜ್ಯಗಳನ್ನು ಉಳಿಸಿಕೊಳ್ಳುವ ಭರದಲ್ಲಿದ್ದರೇ ಹೊರತು ಅವರಿಗೆ ಇದು ಸ್ವಾತಂತ್ರ್ಯ ಸಂಗ್ರಾಮವಾಗಿರಲಿಲ್ಲ. ದಂಗೆಯನ್ನು ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಚಳವಳಿಯನ್ನಾಗಿ ಪರಿವರ್ತಿಸಿದವರು ದಲಿತರು. ಬ್ರಿಟಿಷರು ಝಾನ್ಸಿಯ ಕೋಟೆಗೆ ಮುತ್ತಿಗೆ ಹಾಕಿದಾಗ ಝಲ್ಕಾರಿ ಬಾಯಿ ಶೌರ್ಯದಿಂದ ಹೋರಾಟ ನಡೆಸಿದಳು. ಆಕೆ ರಾಣಿ ಲಕ್ಷ್ಮಿಬಾಯಿಯನ್ನು ಅರಮನೆಯಿಂದ ಪರಾರಿಯಾಗುವಂತೆ ಹೇಳಿ, ತಾನೇ ಲಕ್ಷ್ಮಿಬಾಯಿಯ ಮಾರುವೇಷದಲ್ಲಿದ್ದು, ದಾಂಟಿಯಾ ಬಾಗಿಲು ಮತ್ತು ಭಂಡಾರಿ ಬಾಗಿಲಿನಿಂದ, ಉನಾವೂ ಬಾಗಿಲವರೆಗೆ ಚಳವಳಿಯ ನಾಯಕತ್ವ ವಹಿಸಿದ್ದಳು.

ಬ್ರಿಟಿಷರ ವಿರುದ್ಧ ಹೋರಾಡುತ್ತ ಆಕೆಯ ಗಂಡ ಸಾವನ್ನಪ್ಪಿದನು. ಝಲ್ಕಾರಿ ಬಾಯಿಗೆ ಈ ವಿಷಯ ತಿಳಿದಾಗ ಆಕೆ "ಗಾಯಾಳುವಾದ ಹುಲಿ"ಯಂತಾದಳು. ಆಕೆ ಬಹಳಷ್ಟು ಬ್ರಿಟಿಷರನ್ನು ಕೊಂದಳು. ಬ್ರಿಟಿಷರು ಆಕೆಯ ನಿಜರೂಪ ತಿಳಿದುಕೊಳ್ಳುವವರೆಗೆ ದೀರ್ಘಕಾಲದವರೆಗೆ ಅವರಿಗೆ ಚಳ್ಳೆಹಣ್ಣು ತಿನ್ನಿಸಿದ್ದಳು. ಕೆಲವು ಮೂಲಗಳ ಪ್ರಕಾರ, ಇದ್ದಕ್ಕಿದ್ದಂತೆ ಬಹಳಷ್ಟು ಗುಂಡೇಟುಗಳು ತಗುಲಿ ಆಕೆ ಸಾವನ್ನಪ್ಪಿದಳು. ಇನ್ನೂ ಕೆಲವು ಮೂಲಗಳ ಪ್ರಕಾರ ಆಕೆಯನ್ನು ಬಿಡುಗಡೆಗೊಳಿಸಲಾಯಿತು. ನಂತರ ೧೮೯೦ರವರೆಗೆ ಜೀವಿಸಿದ್ದ ಆಕೆ ತನ್ನ ಕಾಲಮಾನದ ಮಹತ್ವದ ನಾಯಕಿ ಎನಿಸಿಕೊಂಡಿದ್ದಳು. (ಸೌಜನ್ಯ: 'ಈ.ಪಿ.ಡಬ್ಲ್ಯು')

(ಮುಂದುವರೆಯುವುದು)

ಮಂಟೇಸ್ವಾಮಿ ನೀಲಗಾರ ಪರಂಪರೆಯ ಆಧ್ಯಾತ್ಮಿಕ ದಂಗೆಯ ಸ್ವರೂಪ

ವಡ್ಡಗೆರೆ ನಾಗರಾಜಯ್ಯ

ಜ್ಞಾನ, ಸಂಪತ್ತು, ಅಧಿಕಾರ ಮತ್ತು ಉತ್ಪಾದನಾ ಸಾಧನಗಳನ್ನು ಸಮಾನವಾಗಿ ವಿಕೇಂದ್ರೀಕರಿಸುವ ತನ್ನ ಆಧ್ಯಾತ್ಮಿಕ ದಂಗೆಯನ್ನು ಯಶಸ್ವಿಯಾಗಿ ನಡೆಸಿ ಗುರುಕಾರುಣ್ಯಕ್ಕೆ ಒಳಗಾದ ತನ್ನ ಸಿಸು ಮಕ್ಕಳಿಗೆ ತನಗಿಂತಲೂ ಶ್ರೇಷ್ಠ ಪದವಿಯನ್ನು ನೀಡುವ ಮಂಟೇಸ್ವಾಮಿ ಕುರುಬನಕಟ್ಟೆಯ ದಲಿತರಾದ ನಿಂಗಯ್ಯ-ಚೆನ್ನಯ್ಯರಿಗೆ "ನಾನು ಮರೆಯ ದೇವ್ರ ಆಗ್ತೀನಿ, ನೀವು ಮೆರೆಯೋ ದೇವ್ರಾಗ್ರಿ" ಎಂದೂ, ಸಿದ್ಧಪ್ಪಾಜಿಗೆ "ಕುಂತಪಟ್ಟ ನನಗಿರಲಿ ಮೆರೆಯೋ ಪಟ್ಟ ನಿನಗಿರಲಿ ಕಂದಾ" ಎಂದೂ ವರವ ಕೊಡುತ್ತಾನೆ. ತನಗಿಂತಲೂ ತನ್ನ ಶಿಷ್ಯರಿಗೆ ಹೆಚ್ಚಿನ ಸ್ಥಾನ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಎಂಭತ್ತೆಂಟು ಸಿದ್ಧಮುಷಿಗಳಿಗೂ ಅತಿಮುದ್ದು ಘನನೀಲಿ ಅಂತೇಳಿ ಇವನ್ಗ (ಸಿದ್ಧಪ್ಪಾಜಿಗೆ) ಪೂಜ ಮಾಡ್ಕಳಿ" ಎಂದು ಶಿಷ್ಯರಿಗೆ ಗುರುವಚನ ಬೋಧೆ ನುಡಿಯುತ್ತಾನೆ.

(ಹಿಂದಿನ ಸಂಚಿಕೆಯಿಂದ)

ಮಹಿಳಾ ನಾಯಕತ್ವ ಕುರಿತು ಮಾತನಾಡುವ ಇವತ್ತಿನ ಜನ ಪರ ಸಂಘಟನೆಗಳಾದ ದ.ಸಂ.ಸ ಮತ್ತು ರೈತಸಂಘಗಳು ಇಲ್ಲಿ ತನಕ ಹೇಳಿಕೊಳ್ಳಬಲ್ಲ ಮಹಿಳಾ ನಾಯಕತ್ವವನ್ನು ರೂಪಿಸಲಾಗಿಲ್ಲ. ಅಂದಿನ ಕಾಲದಲ್ಲಿಯೇ ದೊಡ್ಡಮ್ಮತಾಯಿ, ಚೆನ್ನಾಜಮ್ಮ, ರಾಮವ್ವೆ ಮುಂತಾದ ಮಹಿಳಾ ನಾಯಕತ್ವವನ್ನು ರೂಪಿಸಿದ ಕೀರ್ತಿ ಮಂಟೇಸ್ವಾಮಿಗೆ ಸಲ್ಲುತ್ತದೆ.

ಮಂಟೇಸ್ವಾಮಿಯ ಗುರುಗಳಾದ ಕೊಡೇಕಲ್ ಬಸವಣ್ಣನ ವಂಶಸ್ಥನೇ ಆದ ವೀರಸಂಗಯ್ಯನು ಬರೆದಿರುವ 'ನಂದಿ ಆಗಮ ಲೀಲೆ, (೧೫೪೯) ರಾಚಪ್ಪಾಜಿಯು ಕೊಡೇಕಲ್ ಬಸವಣ್ಣನ ಹಿರಿಮಗನೆಂದು ತಿಳಿಸುತ್ತದೆ. ಈತನು ಉತ್ತರದ ಕೊಡೇಕಲ್ ಸಾಹಿತ್ಯದ ಹಿನ್ನೆಲೆಯಲ್ಲಿ 'ಗಿರಿಜಾ ಕಲ್ಯಾಣ', 'ಮಾಯಾ ಸಾಂಗತ್ಯ', 'ಪ್ರಭು ಲೀಲೆ', 'ಅಕ್ಕಮಹಾದೇವಿ', ಚರಿತ್ರೆ' ಮುಂತಾದ ೧೨ ಕಾವ್ಯಕರತಿಗಳನ್ನು ರಚಿಸಿದ ಪ್ರತಿಭಾಷಿತ ಕವಿಯಾಗಿ ಗುರುತಿಸಿಕೊಂಡಿದ್ದರೆ, ದಕ್ಷಿಣಕ್ಕೆ ಬಂದ ಮೇಲೆ ಯಾವ ಕಾವ್ಯವನ್ನು ರಚಿಸಿದೆ ಮಂಟೇಸ್ವಾಮಿಯ ಶಿಷ್ಯನಾಗಿ 'ಸಾಹಿತ್ಯಕ್ಕಿಂತಲೂ ಬದುಕು ದೊಡ್ಡದು' ಎಂಬ ಪಾಠವನ್ನು ಕಲಿತವನಾಗಿ ಕೆಳಜಾತಿಗಳನ್ನು ಸಂಘಟಿಸಿ ನೀಲಗಾರರ ಪರಂಪರೆಯನ್ನು ಕಟ್ಟಿದ ಒಬ್ಬ ಸಾಂಸ್ಕೃತಿಕ ನಾಯಕನಾಗಿ ಗುರುತಿಸಿಕೊಂಡಿದ್ದಾನೆ. ಹಾಗೆಯೇ ಕಾರುಗಳ್ಳಿ ಕಾಳಗದಲ್ಲಿ ಮಾರ ನಾಯಕನನ್ನು ಸೋಲಿಸಿ ಮೈಸೂರು ಒಡೆಯರ ಸಾಮ್ರಾಜ್ಯ ಸ್ಥಾಪನೆಗೂ ಕಾರಣವಾಗಿದ್ದಾನೆಂಬ ಸಂಗತಿಯು ನೀಲಗಾರರು ಹಾಡುವ 'ಕಾರುಗಳ್ಳಿ ಕಾಳಗದ ಕತೆ' ಪ್ರಸಂಗದಿಂದ ತಿಳಿದು ಬರುತ್ತದೆ.



'ಉತ್ತರ ದೇಶದ ಸಿದ್ಧ' ನೆಂಬ ಬಿರುದಿನೊಂದಿಗೆ ದಕ್ಷಿಣಕ್ಕೆ ಬಂದ ಬಳಿಕ ಸ್ವಯಂ ಕವಿಗಳಾಗಿದ್ದ ಮಂಟೇಸ್ವಾಮಿ ಮತ್ತು ಅವನ ಶಿಷ್ಯ ರಾಚಪ್ಪಯ್ಯ ಇಬ್ಬರೂ ದಕ್ಷಿಣದಲ್ಲಿ ತಮ್ಮನ್ನು ಸಾಹಿತ್ಯ ಸೃಷ್ಟಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದಕ್ಕಿಂತಲೂ ಮಿಗಿಲಾಗಿ ಕಾಡು ಕತ್ತಲೆಯಲ್ಲಿದ್ದ ಕೆಳಜಾತಿಗಳ ಕಾಯಕ ಜೀವಿಗಳನ್ನು ಒಕ್ಕಲು ಮಾಡಿಕೊಂಡು ಅವರನ್ನು ಬೇಸಾಯಕ್ಕಿಳಿಸುವ ಸಾಮಾಜಿಕ ಆಂದೋಲನಕಾರರಾಗಿ ಗುರುತಿಸಿಕೊಂಡರು.

ಕಾಯಕ ಜೀವಿಗಳ ಕಾಯಕತತ್ವ ಹುಟ್ಟಿದ್ದು ಕಲ್ಯಾಣದಲ್ಲಿ ನೀಲಗಾರರು ತಮ್ಮ ಸಾಂಸ್ಕೃತಿಕ ಚರಿತ್ರೆಯನ್ನು ಸಾರುವ 'ಧರೆಗೆ ದೊಡ್ಡವರು' ಕತೆಯನ್ನು ಪ್ರಾರಂಭಿಸುವುದೂ 'ಕಲ್ಯಾಣ ಪಟ್ಟಣ'ದ ಕಲ್ಪನೆಯಿಂದಲೇ. ೧೨ ನೆ ಶತಮಾನದ ಕಲ್ಯಾಣವು ೧೪-೧೫ನೇ ಶತಮಾನದಲ್ಲಿದ್ದ ಮಂಟೇಸ್ವಾಮಿಯ ಕತೆಯನ್ನು ನಿರೂಪಿಸುವ ಕಾಯಕ ಜೀವಿಗಳಾದ ನೀಲಗಾರರಿಗೆ ಯಾವೊತ್ತಿಗೂ ಭೌತಿಕವಾಗಿ ಒಂದು ಊರಿಲ್ಲ. ಬದಲಾಗಿ ಅದು ಕುಲೇಳು ಹದಿನೆಂಟು ಜಾತಿಗಳು ಒಂದಾಗಿ ದುಡಿದು ಒಂದಾಗಿ ಉಂಡು-ಉಸಿರಾಡುವ ಸಮಾನತೆ ಸಾಧಿಸುವ ಬಹುದೊಡ್ಡ ಆದರ್ಶದ ತವರು. ಆದುದರಿಂದಲೇ ನೀಲಗಾರರು ಮತ್ತು ದೇವಾಗುಡ್ಡರು ಮಂಟೇಸ್ವಾಮಿ ಕಾವ್ಯ ಮತ್ತು ಮಲೆ ಮಾದೇಶ್ವರನ ಕಾವ್ಯಗಳನ್ನು ಕಲ್ಯಾಣಪಟ್ಟಣದ ಕಲ್ಪನೆಯಿಂದಲೇ ಆರಂಭಿಸುತ್ತಾರೆ.

ಶ್ರಮಜೀವಿಗಳಿಗೆ ಸಂಪತ್ತಿನ ಸಮಾನ ಹಂಚಿಕೆಯೊಂದಿಗೆ ರಾಜಕೀಯಾಧಿಕಾರವನ್ನು ದಕ್ಕಿಸಿಕೊಟ್ಟಾಗ ಮಾತ್ರ ಸಾಮಾಜಿಕ ಸಮಾನತೆಯನ್ನು ಸಾಧಿಸಬಹುದೆಂದು ಅರಿತಿದ್ದ ಮಂಟೇಸ್ವಾಮಿಯು ತನ್ನ ಶಿಷ್ಯನಾದ ರಾಚಪ್ಪಾಜಿಯನ್ನು ಕಾರುಗಳ್ಳಿ ಕಾಳಗಕ್ಕೆ ಕಳುಹಿಸಿ ಮೈಸೂರು ಒಡೆಯರನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗುತ್ತಾನೆ. ಆದುದರಿಂದಲೇ ನೀಲಗಾರರು 'ದಳವಾಯಿ ರಾಚಪ್ಪ' ಎಂದು ಸುತ್ತಿಸುವುದನ್ನು ನೋಡಬಹುದು. ಕಾರುಗಳ್ಳಿ ಕಾಳಗದಲ್ಲಿ ಮಾರನಾಯಕನನ್ನು ಸೋಲಿಸಿ ಮೈಸೂರು ಒಡೆಯರ ಸಾಮ್ರಾಜ್ಯಸ್ಥಾಪನೆಗೆ ಕಾರಣವಾದ ಅವನ ರಾಜಕೀಯ ಪಾತ್ರವನ್ನು ನೆನಪಿಸಿಕೊಳ್ಳುವ ಸಲುವಾಗಿ ಇಂದಿಗೂ ಕಪ್ಪಡಿಯ ರಾಚಪ್ಪಾಜಿ ಪರಿಷೆಯಲ್ಲಿ 'ರಾಜವೈಭವದ ಮೆರವಣಿಗೆ'ಯ ಆ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ರಾಚಪ್ಪಜಿಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುವಂತೆ ಬೊಪ್ಪೇಗೌಡನಪುರದ ಮಂಟೇಸ್ವಾಮಿ ಸಂಸ್ಥಾನದ ಆಡಳಿತಾಧಿಕಾರಿಗಳು ರಾಜ ಉಡುಪುಗಳನ್ನು ತೊಟ್ಟು ಸೈನಿಕ ಪರಿವಾರವನ್ನು ಕಟ್ಟಿಕೊಂಡು ಭಾಗವಹಿಸುತ್ತಾರೆ. ಮೆರವಣಿಗೆ ಸಾಗುವ ಪರಿಭಾಷೆಯ ಜನರೆಲ್ಲಾ 'ದಳವಾಯಿ ರಾಚಪ್ಪನಿಗೆ ಜಯವಾಗಲಿ' ಎಂದು ಜಯಘೋಷ ಹಾಕುತ್ತಾರೆ. ರಾಚಪ್ಪಾ

ಜೆಯು ಸ್ವತಃ ಕವಿಯಾದುದರಿಂದ ಅಂದು ಆತನ ಕಾವ್ಯ ಕೃತಿಗಳ ಕಟ್ಟಗಳನ್ನು ಪೂಜಿಸುವುದನ್ನೂ ನೋಡಬಹುದು.

ಜ್ಞಾನ, ಸಂಪತ್ತು, ಅಧಿಕಾರ ಮತ್ತು ಉತ್ಪಾದನಾ ಸಾಧನಗಳನ್ನು ಸಮಾನವಾಗಿ ವಿಕೇಂದ್ರೀಕರಿಸುವ ತನ್ನ ಆಧ್ಯಾತ್ಮಿಕ ದಂಗೆಯನ್ನು ಯಶಸ್ವಿಯಾಗಿ ನಡೆಸಿ ಗುರುಕಾರುಣ್ಯಕ್ಕೆ ಒಳಗಾದ ತನ್ನ ಸಿಸುಮಕ್ಕಳಿಗೆ ತನಗಿಂತಲೂ ಶ್ರೇಷ್ಠ ಪದವಿಯನ್ನು ನೀಡುವ ಮಂಟೇಸ್ವಾಮಿ ಕುರುಬ ನಕಟ್ಟೆಯ ದಲಿತರಾದ ನಿಂಗಯ್ಯ-ಚೆನ್ನಯ್ಯರಿಗೆ "ನಾನು ಮರೆಯ ದೇವ್ರ ಆಗ್ತೀನಿ, ನೀವು ಮೆರೆಯೋ ದೇವ್ರಾಗ್ರಿ" ಎಂದೂ, ಸಿದ್ಧಪ್ಪಾಜಿಗೆ "ಕುಂತಪಟ್ಟ ನನಗಿರಲಿ ಮೆರೆಯೋ ಪಟ್ಟ ನಿನಗಿರಲಿ ಕಂದಾ" ಎಂದೂ ವರವ ಕೊಡುತ್ತಾನೆ. ತನಗಿಂತಲೂ ತನ್ನ ಶಿಷ್ಯರಿಗೆ ಹೆಚ್ಚಿನ ಸ್ಥಾನ ಕಲ್ಪಿಸಿಕೊಡುವ ನಿಟ್ಟಿನಲ್ಲಿ "ನನ್ನ ಸಿದ್ಧ ಋಷಿ ಅಂತಾ ಪೂಜ ಮಾಡ್ತಾ ಬಂದ್ರಿ, ಇಲ್ಲಿಂದೀಚಗಾ ರಸಸಿದ್ಧ, ಋಷಿಸಿದ್ಧ, ನೀಲಿಸಿದ್ಧ, ಗಳಿಗೆಸಿದ್ಧ, ಹುಚ್ಚಸಿದ್ಧ, ಬೆಪ್ಪಸಿದ್ಧ ಒಬ್ಬರಲ್ಲಾ ಇಬ್ಬರಲ್ಲಾ ಎಂಭತ್ತೆಂಟು ಸಿದ್ಧಋಷಿಗಳಿಗೂ ಅತಿಮುದ್ದು ಘನನೀಲಿ ಅಂತೇಳಿ ಇವನ್ಗ (ಸಿದ್ಧಪ್ಪಾಜಿಗೆ ಪೂಜ ಮಾಡ್ಕಳಿ" ಎಂದು ಶಿಷ್ಯರಿಗೆ ಗುರುವಚನ ಬೋಧೆ ನುಡಿಯುತ್ತಾನೆ. ಆದುದರಿಂದಲೇ ನೀಲಗಾರರು ಸಿದ್ಧಪ್ಪಾಜಿಯನ್ನು 'ಹೆಚ್ಚಿನ ಸಿದ್ಧಪ್ಪಾಜಿ', 'ಘನ ನೀಲಿ ಸಿದ್ಧಪ್ಪಾಜಿ' ಎಂದೆಲ್ಲಾ ಕೊಂಡಾಡುತ್ತಾರೆ. ಹಾಗೂ ನೀಲಗಾರರ ಪರಂಪರೆಯ ಎಲ್ಲಾ ಧಾರ್ಮಿಕ ಆಚರಣೆಗಳಲ್ಲಿ ದಲಿತ ಶರಣರಾದ ನಿಂಗಯ್ಯ-ಚೆನ್ನಯ್ಯರ ಕಂಡಾಯಗಳು ಮಾತ್ರ ಮೆರೆಯುತ್ತವೆ. ಈಗಲೂ ಯಾವುದೇ ಜಾತಿ ಸೋಂಕಿಲ್ಲದೆ ಎಲ್ಲರೂ ಈ ಕಂಡಾಯಗಳಿಗೆ ಭಕ್ತಿ ಭಾವಗಳಿಂದ ಪೂಜಿಸಿ ಗೌರವಾರ್ಪಣೆ ಮಾಡುತ್ತಾರೆ. ಕುರುಬನ ಕಟ್ಟೆಯಲ್ಲಿರುವ ಅವಳಿ ನಾಯಕರಾದ ನಿಂಗಯ್ಯ ಚೆನ್ನಯ್ಯರ ಗದ್ದುಗೆಗಳಿಗೂ ನೇಮದಿಂದ ನಡೆದುಕೊಳ್ಳುತ್ತಾರೆ.

ಜ್ಞಾನ, ಸಂಪತ್ತು, ಅಧಿಕಾರ ಮತ್ತು ಉತ್ಪಾದನಾ ಸಾಧನಗಳನ್ನು ಸಮಾನವಾಗಿ ವಿಕೇಂದ್ರೀಕರಿಸುವ ತನ್ನ ಆಧ್ಯಾತ್ಮಿಕ ದಂಗೆಯನ್ನು ಯಶಸ್ವಿಯಾಗಿ ನಡೆಸಿ ಗುರುಕಾರುಣ್ಯಕ್ಕೆ ಒಳಗಾದ ತನ್ನ ಸಿಸುಮಕ್ಕಳಿಗೆ ತನಗಿಂತಲೂ ಶ್ರೇಷ್ಠ ಪದವಿಯನ್ನು ನೀಡುವ ಮಂಟೇಸ್ವಾಮಿ ಕುರುಬ ನಕಟ್ಟೆಯ ದಲಿತರಾದ ನಿಂಗಯ್ಯ-ಚೆನ್ನಯ್ಯರಿಗೆ "ನಾನು ಮರೆಯ ದೇವ್ರ ಆಗ್ತೀನಿ, ನೀವು ಮೆರೆಯೋ ದೇವ್ರಾಗ್ರಿ" ಎಂದೂ, ಸಿದ್ಧಪ್ಪಾಜಿಗೆ "ಕುಂತಪಟ್ಟ ನನಗಿರಲಿ ಮೆರೆಯೋ ಪಟ್ಟ ನಿನಗಿರಲಿ ಕಂದಾ" ಎಂದೂ ವರವ ಕೊಡುತ್ತಾನೆ. ತನಗಿಂತಲೂ ತನ್ನ ಶಿಷ್ಯರಿಗೆ ಹೆಚ್ಚಿನ ಸ್ಥಾನ ಕಲ್ಪಿಸಿಕೊಡುವ ನಿಟ್ಟಿನಲ್ಲಿ "ನನ್ನ ಸಿದ್ಧ ಋಷಿ ಅಂತಾ ಪೂಜ ಮಾಡ್ತಾ ಬಂದ್ರಿ, ಇಲ್ಲಿಂದೀಚಗಾ ರಸಸಿದ್ಧ, ಋಷಿಸಿದ್ಧ, ನೀಲಿಸಿದ್ಧ, ಗಳಿಗೆಸಿದ್ಧ, ಹುಚ್ಚಸಿದ್ಧ, ಬೆಪ್ಪಸಿದ್ಧ ಒಬ್ಬರಲ್ಲಾ ಇಬ್ಬರಲ್ಲಾ ಎಂಭತ್ತೆಂಟು ಸಿದ್ಧಋಷಿಗಳಿಗೂ ಅತಿಮುದ್ದು ಘನನೀಲಿ ಅಂತೇಳಿ ಇವನ್ಗ (ಸಿದ್ಧಪ್ಪಾಜಿಗೆ ಪೂಜ ಮಾಡ್ಕಳಿ" ಎಂದು ಶಿಷ್ಯರಿಗೆ ಗುರುವಚನ ಬೋಧೆ ನುಡಿಯುತ್ತಾನೆ.

ಮಂಟೇಸ್ವಾಮಿ ತನಗಿಂತಲೂ ತನ್ನ ಸಿಸುಮಕ್ಕಳಿಗೆ ಹೆಚ್ಚಿನ ಪದವಿ ನೀಡಿ ಚೆನ್ನಜಮ್ಮ ರಾಚಪ್ಪಾಜಿ ಕಪ್ಪಡಿಯಲ್ಲಿಯೂ, ಸಿದ್ಧಪ್ಪಾಜಿ ಚಿಕ್ಕಲ್ಲೂರಿನಲ್ಲಿಯೂ, ನಿಂಗಯ್ಯ-ಚೆನ್ನಯ್ಯರು ಕುರುಬನಕಟ್ಟೆಯಲ್ಲಿಯೂ, ದೊಡ್ಡಮ್ಮ ತಾಯಿ ಮುಟ್ಟನಹಳ್ಳಿಯಲ್ಲಿಯೂ, ನೆಲೆಗೊಳ್ಳುವಂತೆ ಹೇಳಿ, ಅವರು ನೆಲೆಗೊಂಡ ಸ್ಥಳಗಳಲ್ಲಿ ಪರಿಷಗಳು ನಡೆಯುವಂತೆ 'ಚಪ್ಪೋಡು' ಬರೆಸುತ್ತಾನೆ. ಕಪ್ಪಡಿ ಕೈಲಾಸದಿಂದ ಬರು ವಂತಾ ಪರಿಷ ಮುಟ್ಟನಹಳ್ಳಿ ತೋಪಿನಲ್ಲಿ ಮುಟ್ಟು ಪೂಜೆ ಮೂಡಬೇಕೆಂದೂ ಚಿಕ್ಕಲ್ಲೂರು ಸಿದ್ಧಪ್ಪಾಜಿ ಪರಿಷೆಯಲ್ಲಿ ಚೆನ್ನಾಜಮ್ಮನ ಹೆಸರಿನಲ್ಲಿ ಚಂದ್ರಮಂಡಲ ಸೇವೆ ರಾಚ ಪ್ಪಾಜಿಯ ಹೆಸರಿನಲ್ಲಿ ದೊಡ್ಡವರ ಸೇವೆ, ಸಿದ್ಧಋಷಿಗಳ ಹೆಸರಿನಲ್ಲಿ ಸಿದ್ಧರಾಯನ ಸೇವೆ, ಮುತ್ತತ್ತಿರಾಯನ ಸೇವೆ ಗಳು ನಡೆಯಲೆಂದು 'ಗುರುವಚನ ವಾಕ್ಯ'ವನ್ನು ಬೋಧಿಸಿ ತಾನು ಬೊಪ್ಪೇಗೌಡನಪುರದಲ್ಲಿ ಜೀವ ಸಾಮಾಧಿಯಾಗುತ್ತಾನೆ. ಅದೇ ಪ್ರಕಾರ ಮಂಟೇಸ್ವಾಮಿಯ ಸಿಸುಮಕ್ಕಳ ಹೆಸರುಗಳಲ್ಲಿ ಪರಿಷಗಳು ನಡೆಯುತ್ತವೆ. ಅವರು ನೆಲೆಗೊಂಡ ತೋಪುಗಳಲ್ಲಿರುವ ಜೀವಸಮಾಧಿ ಗದ್ದುಗೆಗಳು ಇಂದು ಚಾರಿತ್ರಿಕ, ಸಾಂಸ್ಕೃತಿಕ ಮಹಿಮೆಯ ನೆಲೆಗಳಾಗಿ ಗುರುತಿಸಲ್ಪಟ್ಟಿವೆ. ಆದರೆ ಮಂಟೇಸ್ವಾಮಿಯ ಜೀವಸಮಾಧಿಯಾದ ಬೊಪ್ಪೇಗೌಡನಪುರದಲ್ಲಿ ಯಾವ ಪರಿಷೆಯೂ ನಡೆಯುವುದಿಲ್ಲ. ಹೀಗೆ ತಾನು ರೂಪಿಸಿದ ಹೊಸ ನೀಲಗಾರ ಚಳುವಳಿಯಲ್ಲಿ ದಲಿತರನ್ನು ಮತ್ತು ಮಹಿಳೆಯರನ್ನು ಹೋರಾಟದ ಮುಂಚೂಣಿ ನಾಯಕರನ್ನಾಗಿ ಪ್ರತಿಷ್ಠಾಪಿಸುವುದರ ಮೂಲಕ ಮಂಟೇಸ್ವಾಮಿಯು ವೈದಿಕ ಶ್ರೇಷ್ಠರು ಮಾತ್ರ ಸಾಮಾಜಿಕ ನಾಯಕತ್ವ ವಹಿಸಿಕೊಳ್ಳಲು ಯೋಗ್ಯರೆಂಬ ಅಹಮಿಕೆಯನ್ನು ನಾಶ ಮಾಡಿದ

* * *

ವೈದಿಕ ಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳು ಯಾವ ಯಾವ ವಸ್ತುಗಳನ್ನು ಅಶುದ್ಧವೆಂದು ತುಚ್ಛವೆಂದು ಕೀಳಾಗಿ ಕಾಣಲು ಒತ್ತಿ ಹೇಳುತ್ತಿತ್ತೋ ಅಂತಹ ನಿರಾಕರಿಸಿದ ವಸ್ತುಗಳಿಂದಲೇ ಒಂದು ಪರ್ಯಾಯ ಸಂಸ್ಕೃತಿಯನ್ನು ರೂಪಿಸಿಕೊಳ್ಳುವ ಲಕ್ಷಣವನ್ನು ಮಂಟೇಸ್ವಾಮಿಯ ನೀಲಗಾರ ಪರಂಪರೆ ತಿಳಿಸುತ್ತದೆ. ಮಂಟೇಸ್ವಾಮಿ ಕಲ್ಯಾಣ ಪಟ್ಟಣದಲ್ಲಿ ಮೊದಲು ಕಾಣಿಸಿಕೊಳ್ಳುವುದೇ "ಸತ್ತೆಮ್ಮೆ ಚಕ್ಕಳವಾ ಹೆಗಲಮೇಲ ಹೊತ್ಕಂಡು/ ಆರು ಖಂಡುಗ ಕಜ್ಜಿ ಕೀವು ರಸಕಿನ ಒಳಗ" ವಿಕಾರ ರೂಪದ ಕೊಳಕು ಜಂಗಮನಾಗಿ. ಭೂಮಿ ಹುಟ್ಟುವುದು ದೇವಗಣಗಳಿಗೂ ಹಿರಿಯವನಾದ, ಆದರೆ ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ತಳದಲ್ಲಿರುವ ಆದಿಜಾಂಬವನಿಂದ. "ನಾಳೆ ನರಮುಂಡಾ ಮಕ್ಕಳಗಾ ಆಕಾಸ ಆದಿ ಉದ್ಭವ ಮಾಡ್ಬಕು ಅಂತಾ" ಆದಿಜಾಂಬವನೇ ಆಕಾಶಕ್ಕೆ ಆದಿಯಾದ ಭೂಮಿಯಾಗುತ್ತಾನೆ. ಈ ಭೂಮಿಗೆ ಬೆಳಕು ಮಂಟೇಸ್ವಾಮಿಯ ಬೆವರಿನಿಂದಾದ ಜ್ಯೋತಿ. ದಲಿತನಿಂದ ಸೃಷ್ಟಿಯಾದ ಭೂಮಿಗೆ ದಲಿತನೇ ತನ್ನ ಬೆವರನ್ನು ಬೆಳಕು ಮಾಡಿ ನೀಡಿದನೆನ್ನುವ ಕಲ್ಪನೆ ಬೇರಾವ ಪುರಾಣಗಳಲ್ಲೂ ಕಾಣಸಿಗದು.

ಯಜ್ಞ-ಯಾಗ-ತಪಸ್ಸುಗಳಿಗೆ ಪರ್ಯಾಯವಾಗಿ ಕಾಯಸಿದ್ಧಿ ಮತ್ತು ಕಾಯಕಗಳ ಮೂಲಕ ಸ್ವಯಂ ವ್ಯಕ್ತಿ ಸಿದ್ಧಿಗಳಿಂದ ಆತ್ಮಜ್ಯೋತಿಯನ್ನು ಪ್ರಕಾಶಿಸಿಕೊಳ್ಳುವುದು. ದೇವಾನುದೇವತೆಗಳನ್ನು ಮಾರಿ ಮಾಸಣಿಯರನ್ನು ಮನುಷ್ಯನಿಗೆ ಅಧೀನಗೊಳಿಸುವುದು, ದಲಿತರು ಮತ್ತು ಮಹಿಳೆಯರಿಗೆ ಶಿಷ್ಯದೀಕ್ಷೆ ಹಾಗೂ ಶ್ರೇಷ್ಠಪಟ್ಟ ನೀಡುವುದು, ಬೊಪ್ಪೇಗೌಡನ ಕುರಿಕೊಟ್ಟಿಗೆಯನ್ನೇ ಉರಿಗದ್ದಿಗೆ ಮಾಡಿಕೊಳ್ಳುವುದು, ಮುಟ್ಟಿನ ಜಾಗದಲ್ಲಿ ಮಜ್ಜನ ಬಾವಿ ತೋಡಿಸುವುದು, ಬಸವಣ್ಣನ ದಾಸೋಹದ ಎಂಜಲೆಲೆ ಬೂದಿಯನ್ನೇ ತಿಲಕ (ಮಟ್ಟಕಪ್ಪು) ಧರಿಸುವುದು, ಕುರುಬನ ಅಥವಾ 'ಗೊಲ್ಲರಿ' ಕಾಯುವವನ ದೊಣ್ಣೆಯನ್ನು ನಂದಿಕಂಭವನ್ನಾಗಿ ಗೋಣಿಕೊಪ್ಪೆಯನ್ನು ಬೀರದೇವರ ಸತ್ತಿಗೆಯನ್ನಾಗಿ ನಿಲ್ಲಿಸುವುದು, ಸಾಂಪ್ರದಾಯಿಕ ವಾಸ್ತುಶಾಸ್ತ್ರಕ್ಕೆ ವಿರುದ್ಧವಾಗಿ ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗುವುದು (ಮಂಟೇಸ್ವಾಮಿ ಜೀವಸಾಮಾಧಿಯಾಗಿರುವ 'ಮಠಮನೆ'ಯ ಬಾಗಿಲು ಬಡಗ ದಿಕ್ಕಿಗಿದ್ದು ಬಡಗ ಬಾಗಿಲ ಮಠವೆಂದು ಹೆಸರಾಗಿದೆ), ದೇವರ ಗುಡಿ ಗೋಪುರಗಳಿಗೆ ಬದಲಾಗಿ ಶರಣರ ಜೀವಗದ್ದು ಗದ್ದುಗೆ, ಉರಿಗದ್ದಿಗೆಗಳನ್ನು ಉತ್ತರದಿಕ್ಕಿಗೆ ಬಾಗಿಲು ನಿಲ್ಲಿಸಿ (ಬಡಗ ಬಾಗಿಲು) ಮಠಮನೆ ಅಂತಾ ಕಟ್ಟುವುದು, ಮತ್ತು ಈ ಗದ್ದುಗೆಗಳಿಗೆ ಎಡ ಬಾಗಿಲ ಕಡೆಯಿಂದ ಪ್ರವೇಶಿಸುವುದು, ಅಮಾವಾಸ್ಯೆ ಪೌರ್ಣಿಮೆ ದಿನಗಳನ್ನೇ ಶುಭವೆನ್ನುವುದು, ಕತೆಕೊಟ್ಟಿಗೆಯ ಜಾಗದಲ್ಲಿ ಬೆಡಗಿನ ಚಂದ್ರಶಾಲೆ ಕಟ್ಟುವುದು, ತಿಪ್ಪೆಯ ಹತ್ತಿರಕ್ಕೆ ಕಲ್ಯಾಣದ ಬಸವಣ್ಣನನ್ನು ಕರೆಸಿಕೊಳ್ಳುವುದು, ಬಸವಣ್ಣನು ತಲೆಮೇಲೆ ಕೆರ (ಉರಿಚಮ್ಮಾಳಿಗೆ) ಹೊತ್ತು ನಿಲ್ಲುವುದು ಇನ್ನೂ ಮುಂತಾದ ಅವಮಾನ ಸೂಚಕವೂ ಅಶುಭವೂ ಆದ ವಸ್ತುಗಳು-ಆಚರಣೆಗಳು ಮಂಟೇಸ್ವಾಮಿಯ ಆಧ್ಯಾತ್ಮಿಕ ಅಗ್ನಿಯಲ್ಲಿ ದಹಿಸಿ ಹೊಸ ಅರ್ಥಗಳೊಡನೆ ಹುಟ್ಟಿ ಬರುತ್ತವೆ.

ವೈದಿಕ ಬ್ರಾಹ್ಮಣಶಾಹಿ ಮೀಮಾಂಸೆಯು ಸೃಷ್ಟಿಸಿದ ಶುದ್ಧ ಮತ್ತು ಅಶುದ್ಧವೆಂಬ ಕಲ್ಪನೆಗಳನ್ನು ನಾಶ ಮಾಡುವ ಮಂಟೇಸ್ವಾಮಿಯ ಆಧ್ಯಾತ್ಮಿಕ-ಅನುಭಾವಿಕ ಆಂದೋಲನವು ಎಷ್ಟೊಂದು ಕ್ರಾಂತಿಕಾರಕವಾಗಿತ್ತೆಂಬುದನ್ನು ಅರಿಯಲು ಅಶುದ್ಧ ಸೂತಕವೆಂದು ಹೇಳುವ "ಮುಟ್ಟು" ಕುರಿತು ಮುಟ್ಟನ್ನು ಪವಿತ್ರೀಕರಿಸಿರುವ ಮಂಟೇಸ್ವಾಮಿಯ ಮುಟ್ಟಿನ ವ್ಯಾಖ್ಯಾನವು ಸಾಂಪ್ರದಾಯಕ ಜಗತ್ತನ್ನು ಬೆಚ್ಚಿ ಬೀಳಿಸುವಂತಿದೆ. 'ಧರೆಗೆ ದೊಡ್ಡವರ ಕತೆ'ಯ ಮಡಿವಾಳ ಮಾಚಯ್ಯನ ಪ್ರಸಂಗದಲ್ಲಿ ಮುಟ್ಟಿನ ಬಟ್ಟೆ ಗುಡ್ಡೆ ಹಾಕಿದ್ದ 'ಕತ್ತಕೊಟ್ಗ' ಜಾಗವನ್ನೇ ಮಂಟೇಸ್ವಾಮಿ ದಾನ ಪಡೆದು ಅಲ್ಲಿಯೇ ತನ್ನ ಮಠಮನೆ ಕಟ್ಟಿಸಿಕೊಂಡು, ಅದೇ ಮುಟ್ಟಿನ ಜಾಗದಲ್ಲಿಯೇ ಮಜ್ಜನ ಬಾವಿ ತೋಡಿಸಿ, ಅಲ್ಲಿಯೇ ಜೀವ ಸಮಾಧಿಯನ್ನು ಕಟ್ಟಿಸಿಕೊಂಡು ಮುಟ್ಟಿನಿಂದ ಸೂತಕವಾದ ಜಾಗವನ್ನು ಪವಿತ್ರಗೊಳಿಸುತ್ತಾನೆ. ಮಡಿವಾಳ ಮಾಚಯ್ಯನು "ಇದು ಮುಟ್ಟಿನ ಜಾಗ, ಸೂತಕದ ಜಾಗ ಕೊಡುವುದಿಲ್ಲ" ಎಂದಾಗ ಮಂಟೇಸ್ವಾಮಿಯು "ಮಾತ್ ಮಾತಿಗೂ 'ಮುಟ್ಟು' ಅಂತಿದೀಯಲ್ಲಾ ಮುಟ್ಟಿಲ್ಲದ ಜಾಗ, ಎಂಜಲಿಲ್ಲದ ಸ್ಥಳ ಇವೆರಡೂ ಮೊದ್ಲು ಹೇಳಿ ಕೊಡು.

ತಾಮಿ ಹೊಟ್ಟ ಒಳಗ ನವರಾತ್ರಿ ಒಂಭತ್ತು ತಿಂಗ್ಳು ಮುಟ್ಟಕಟ್ಟ ಪೊಟ್ಟವಾಗ್ದೇ ಇದ್ರ ನೀಯಾಗ ಭೂಮಿಗೆ ಬಂದ್ಯೆ? ಆ ಮುಟ್ಟಾಳ ಮಾಡ್ಬಿಟ್ಟು ಈ ಭೂಲೋಕಕ್ಕೆ ಬಂದದ್ಕ ಎಲ್ಲಾ ಮುಟ್ಟಾಳ ನನ್ನ ಮಕ್ಕಳ್" ಎನ್ನುತ್ತಾನೆ. [ಧರೆಗೆ ದೊಡ್ಡವರ ಕತೆ, ಸಂ. ವೆಂಕಟೇಶ ಇಂದ್ವಾಡಿ, ಪುಟ ೧೧೧] ದೊಡ್ಡಮ್ಮ ತಾಯಿ ಗದ್ದುಗೆ ಮುಟ್ಟನ ಹಳ್ಳಿ ಯಲ್ಲಿದೆ. "ವಂಗ ತೋಪಿನೊಳಗೆ ಹೊರ ಸೂತ್ಗವಾಗಿ ತಿಂಗಳ ಮುಟ್ಟಾದಿ ಅಂತಾ ಕುಕ್ಕನ ಕೂತ್ಕಂಡ್ರ ಮುಟ್ಟ ನಹಳ್ಳಿ ಅಂತಾ" ಆಕೆ ಮುಟ್ಟಾದ ಸ್ಥಳವೇ 'ಮುಟ್ಟನಹಳ್ಳಿ ಎಂಬ ಹೆಸರು ಪಡೆಯಿತು ಎಂದು ನೀಲಗಾರರು ಹಾಡು ತ್ತಾರೆ. ಇದಕ್ಕಿಂತಲೂ ಮುಖ್ಯವಾಗಿ 'ಕಾವಿದೇವಾಂಗ ಉಡುವ ಸ್ವಾವ್ಗೋಳು' [ಅಂದರೆ ಕಾವಿತೊಡುವ ಧರ್ಮ ಗುರುಗಳು ಸಾಧು ಸನ್ಯಾಸಿಗಳೆಲ್ಲಾ] ಬೆಚ್ಚಿ ಬೀಳುವಂತೆ ಮಾಡುವ ಸಂಗತಿಯೆಂದರೆ ಮಂಟೇಸ್ವಾಮಿಯು ದೊಡ್ಡ ಮ್ಮತಾಯಿಯನ್ನು ಜೋಳಿಗೆಯಲ್ಲಿಟ್ಟು ಕೊಂಡಿದ್ದಾಗ ಆಕೆ ಅಲ್ಲಿಯೇ ಮುಟ್ಟಾದುದರಿಂದ ಸಾಧು ಸನ್ಯಾಸಿಗಳು ಶರ ಣರು ಧರಿಸುವ ಜೋಳಿಗೆ ವಸ್ತ್ರಗಳೆಲ್ಲಾ ಕೆಂಪು ಕಾಷಾಯ ವಸ್ತ್ರಗಳಾದವೆಂದು ನೀಲಗಾರರು ಮುಟ್ಟನ್ನು ಪವಿತ್ರೀಕರಿಸಿ ಹಾಡುತ್ತಾರೆ. ಮುಟ್ಟನಂಥ ಕೆಂಪನೆ ಕಾವಿ ಧರಿಸುವ ಮಂಟೇಸ್ವಾಮಿಗೆ ಮುಟ್ಟಿನ ಭೇದವಿಲ್ಲ. ಅವನು ಪರಂ ಜ್ಯೋತಿ. ಮುಟ್ಟುಚಟ್ಟಿನ ಬಟ್ಟೆ ತೊಳೆವ ಮಡಿವಾಳ ಮಾಚ ಯ್ಯನ ತೊಟ್ಟಿಯನ್ನು ಪವಿತ್ರ ಜಮಜ್ಜನ ಬಾವಿಯಾಗಿಸಿ ಮೀಯಣ ಮಾಡಿದವನು. ಹೀಗೆ ಪ್ರಧಾನ ಸಂಸ್ಕೃತಿಗಳು ಕಡೆಗಣಿಸಿದ ವಸ್ತುಗಳನ್ನೇ ಮಂಟೇಸ್ವಾಮಿ ಪರಂಪರೆಯ ನೀಲುಗಾರರು ತಮ್ಮ ಸಂಸ್ಕೃತಿಯ ಸಂಕೇತಗಳನ್ನಾಗಿ ಮಾರ್ಪಸಿಕೊಳ್ಳುತ್ತಾರೆ.

* * *

ಅತಿಮಾನುಷ ಕಲ್ಪನೆಯ ದೇವರುಗಳನ್ನಾಗಲೀ ಧಾರ್ಮಿಕ ಯಾಜಮಾನ್ಯವನ್ನಾಗಲೀ ಒಪ್ಪಿಕೊಳ್ಳದ ನೀಲ ಗಾರರು ದೇವರ-ದಿಂಡರಿಗಿಂತಲೂ ಹೆಚ್ಚಾಗಿ ಒಕ್ಕಲು ತನದ (ಕೃಷಿ) ಕಸುಬುಗಳನ್ನು ಕಲಿಸಿಕೊಟ್ಟು, ಆರ್ಥಿಕ ವಾಗಿ ಚೈತನ್ಯಗೊಳಿಸಿ ತಮ್ಮನ್ನು ಸಮಾಜದ ಮುಖ್ಯವಾಹಿ ನಿಗೆ ತಂದ ತಮ್ಮ ಸಾಂಸ್ಕೃತಿಕ ನಾಯಕರ ಕುರಿತು ದೇಶೀ ಜ್ಞಾನ ಸಮೃದ್ಧಿಯಿಂದ ಕೂಡಿದ ಅನುಭಾವಿಕ ಕಾವ್ಯಗಳನ್ನು ತಮ್ಮದೇ ತಳಸಂಸ್ಕೃತಿಯ ಸೃಜನಶೀಲ ಪಾತಳಿಯಲ್ಲಿ ಮನುಷ್ಯ ಸಂಬಂಧದ ಭಾವಬಳ್ಳಿಗಳನ್ನು ಬೆಸೆಯುವಂತೆ ರಚಿಸಿ ಕೀರ್ತಿಸುತ್ತಾರೆ. ಹೀಗೆ ತಮ್ಮ ನಾಯಕರನ್ನು ಕೀರ್ತಿಸಿ ಕೊಂಡಾಡಿದ ಮಾತ್ರಕ್ಕೆ ದೈವತ್ವವನ್ನು ಆರೋಪಿಸಿ ಅವರನ್ನು ದೇವರು ಮಾಡಿದ್ದಾರೆಂದು ಅನುಮಾನ ಪಡ ಬೇಕಾಗಿಲ್ಲ. ನೀಲಗಾರರಿಗೆ ತಮ್ಮ ನಾಯಕರು ಯಾವೊತ್ತೂ ದೇವಾಲಯಗಳ ಗರ್ಭಗುಡಿಯಲ್ಲಿ ಕಲ್ಲಾಗಿ ಕುಳಿತ ದೇವರುಗಳಲ್ಲ; ಬದಲಾಗಿ ಶುದ್ಧ ದೇಸೀ ನೆಲೆ ಯಲ್ಲಿ ಜೀವಿಸುವ ತಳಸಮುದಾಯಗಳ ಸಮಷ್ಟಿ ಬದುಕಿನ ಸಂಕೇತಗಳು; ತಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುವ ಮಹಾರೂಪಕಗಳು!

ನೀಲಗಾರರು ತಮ್ಮ ಸಾಂಸ್ಕೃತಿಕ ನಾಯಕರನ್ನು ಪ್ರತ್ಯಕ್ಷವಾಗಿ ಕಾಣದಿರಬಹುದು, ಅವರೊಂದಿಗೆ ಭೌತಿಕ ವಾಗಿ ಒಡನಾಡದಿರಬಹುದು. ಆದರೆ ಅವರ ಜೀವನದ ಕ್ರಮದಲ್ಲಿ, ದಿನ ನಿತ್ಯದ ಕ್ರಿಯೆಯಲ್ಲಿ, ನಂಬಿಕೆ-ನಡವಳಿಕೆ ಗಳಲಿ ತಮ್ಮ ನಾಯಕರನ್ನು ಜೀವದುಸಿರಿನಂತೆ ಅಳವಡಿಸಿ ಕೊಂಡಿದ್ದಾರೆ. ಆದುದರಿಂದಲೇ ಆದಿ ಜಾಂಬವನನ್ನು 'ಭೂಮಿ' ಎಂದು ಕರೆದುಕೊಂಡಿದ್ದಾರೆ, ಮಂಟೇಸ್ವಾಮಿ

ಅನೇಕ ಮುಸ್ಲಿಂ ಸಮುದಾಯಗಳು ಮಂಟೇಸ್ವಾಮಿಯ ಶಿಷ್ಯರಾಗಿದ್ದ ಶಿವನಸ ಮುದ್ರದ ಹಜರತ್ ಮುರ್ದಾನ ಗೈಬ್, ಚಿಕ್ಕಲ್ಲೂರು ಬಳಿಯ ಮೊಳಗನ ಕಟ್ಟೆಯ ಲ್ಲಿರುವ ಹಜರತ್ ಸೈಯದ್ ತುರಾಬ್ ಅಲಿ ಷಾಖಾದ್ರಿ ದರ್ಗಾಗಳಿಗೂ ನಡೆದು ಕೊಳ್ಳುವಷ್ಟೇ ನೇಮದಿಂದ ನೀಲಗಾ ರರ ಗದ್ದುಗೆಗಳಿಗೂ ನಡೆದುಕೊಳ್ಳುತ್ತಾರೆ. ನೀಲಗಾರರು ತಮ್ಮ ನಾಯಕರು ಸ್ವತಃ ಸೂಫಿ ಸಂತರಾಗಿದ್ದರೆಂದೇ ನಂಬುತ್ತಾರೆ. ಮಂಟೇಸ್ವಾಮಿಯನ್ನು 'ಉತ್ತರಕಾಂಡ ದಿಂದ ಉತ್ಪತ್ತಿ ಆಗಿದ್ದಕಾ ಉತ್ತರದೇಶದ ಸಿದ್ಧ ಅಂದ್ರು ಕತ್ತಲರಾಜ್ಯಕ್ಕೆ ಬೆಳಕು ತಂದದ್ದಕಾ ಜ್ಯೋತಿ ಲಿಂಗಯ್ಯ ಅಂದ್ರು, "ತುರುಕಾಣ್ಯದಲ್ಲಿ ಮುಸ್ಲುಮಾನರು ಹರೇ ಅಲ್ಲಾಂತ ಹಸ್ತ ತೋರ್ದ್ದಕ 'ಅಲ್ಲ', 'ಅಲ್ಲಮಪ್ರಭು' ಎಂದು ನಾಮಾಂಕಿತ ವಾದರು" ಎಂದು ಹಾಡುತ್ತಾರೆ. ಮುಸ್ಲಿಂರೂ ಸಹ ಮಂಟೇಸ್ವಾಮಿಯನ್ನು 'ಮೊಂಕ್ಷಾವಲಿ' ಎಂದು ಆರಾಧಿಸುತ್ತಾರೆ.

ಯನ್ನು ಬೆವರಿನಿಂದ ಬೆಳಕು ತಂದ 'ಜ್ಯೋತಿ' ಎಂದು ಕರೆದುಕೊಂಡಿದ್ದಾರೆ. ನೀಲಗಾರರದು ತಮ್ಮ ಸಾಂಸ್ಕೃತಿಕ ನಾಯಕರ ತತ್ವಗಳನ್ನು ಬಿತ್ತಿ ಬೆಳೆವ ಒಂದು ಕ್ರಿಯಾ ಪ್ರಪಂಚ. ಭೂಮಿ ಮತ್ತು ಬೆವರು (ಜ್ಯೋತಿ) ದುಡಿಮೆ ಯನ್ನು ಪ್ರತಿನಿಧಿಸುವ ಸಾಂಕೇತಿಕ ಪ್ರತಿಮೆಗಳು. ಕೆಳ ಜಾತಿಯ ಆದಿಜಾಂಬವನು ದೇವಗಣಕ್ಕಿಂತಲೂ ಹಿರಿಯ ವನಾಗಿ 'ಭೂಮಿ'ಯಾದರೆ , ಕಾಯಕದ ಸಂಕೇತವಾದ ಮಂಟೇಸ್ವಾಮಿಯ 'ಬೆವರು' ಜ್ಯೋತಿಯಾಗುತ್ತದೆ! ಕೃಷಿ ಭೂಮಿ, ಉಳುವ ಬಸವ, ಕಂಡಾಯ (ಆಯುಧ), ನೀರು, ಕಬ್ಬಿಣ, ನಾಗಬೆತ್ತ, ತಂಬೂರಿ, ಮುಂತಾದ ಸಲಕ ರಣೆಗಳೂ ಮಾತ್ರ ಇವರ ದೈವಗಳಾಗಿವೆ.

ಜೀವಸಮಾಧಿ ಹೊಂದಿದ ಮಂಟೇಸ್ವಾಮಿ ಈಗಲೂ ಜೀವಂತವಾಗಿದ್ದಾರೆ. ಆಗಾಗ ಗೋಚರವಾಗು ತ್ತಾನೆಂಬ ನಂಬಿಕೆಗಳು ನೀಲಗಾರರಲ್ಲಿ ಜನಜನಿತವಾಗಿರು ವುದರಿಂದ ಹಾಗೂ ವ್ಯಕ್ತಿ ಪೂಜೆಯನ್ನು ವಿರೋಧಿಸುವುದ ರಿಂದ ನೀಲಗಾರ ಸಂಪ್ರದಾಯದಲ್ಲಿ ಮೂರ್ತಿಪೂಜೆಗಳು ಇಲ್ಲ. ಗ್ರಂಥಪೂಜೆ ಮಾತ್ರ ಇದೆ. ಸಮಾಧಿಗದ್ದಿಗೆಗಳಿಗೆ ಯಾರೇ ಜಾತಿ ಮತ ಲಿಂಗ ಭೇದಗಳಿಲ್ಲದೆ ತಾವಾಗಿಯೇ 'ಸೆರ್ಗ' ಹೋಗಿ ಪೂಜೆ ಮಾಡಿಕೊಳ್ಳಬಹುದು. ನೇಮಕ ಗೊಂಡ ಪೂಜಾರಿ ಇಲ್ಲಿಲ್ಲ. ಈ ನೀಲಗಾರರ ಸಾಂಸ್ಕೃತಿಕ ನಾಯಕರ ಗದ್ದುಗೆಗಳ ಮೇಲೆ ಸೂಫಿ ಸಂತರ ದರ್ಗಾ ಗಳಲ್ಲಿರುವಂತೆ ಹಸಿರು ಮಸ್ಲಿನ್ ಬಟ್ಟೆ ಹೊದಿಸುವುದು, ಲೋಬಾನ ಉರಿಸುವುದು, ಹಸಿರು ನಿಶಾನೆ ಹಾರಿಸು ವುದು, ಹಸಿರು ಪೇಟ, ಹಸಿರು ಗಲೀಫ, ನವಿಲುಗರಿಯ ಗೊಂಡೆಗಳನ್ನು ತಮ್ಮ ಗುರುಪರಂಪರೆಯ ಪವಿತ್ರ ಸಂಕೇ ತಗಳಾಗಿ ಬಳಸುವುದನ್ನು ನೋಡಬಹುದು. ಇವೆಲ್ಲ ಮುಸ್ಲಿಂ ಸೂಫಿ ಸಂತರ ಲಕ್ಷಣಗಳೇ ಆಗಿವೆ.

ಅನೇಕ ಮುಸ್ಲಿಂ ಸಮುದಾಯಗಳು ಮಂಟೇ ಸ್ವಾಮಿಯ ಶಿಷ್ಯರಾಗಿದ್ದ ಶಿವನಸಮುದ್ರದ ಹಜರತ್ ಮುರ್ದಾನ ಗೈಬ್, ಚಿಕ್ಕಲ್ಲೂರು ಬಳಿಯ ಮೊಳಗನ ಕಟ್ಟೆ ಯಲ್ಲಿರುವ ಹಜರತ್ ಸೈಯದ್ ತುರಾಬ್ ಅಲಿ ಷಾಖಾದ್ರಿ ದರ್ಗಾಗಳಿಗೂ ನಡೆದುಕೊಳ್ಳುವಷ್ಟೇ ನೇಮದಿಂದ ನೀಲಗಾ ರರ ಗದ್ದುಗೆಗಳಿಗೂ ನಡೆದುಕೊಳ್ಳುತ್ತಾರೆ. ನೀಲಗಾರರು ತಮ್ಮ ನಾಯಕರು ಸ್ವತಃ ಸೂಫಿ ಸಂತರಾಗಿದ್ದರೆಂದೇ ನಂಬುತ್ತಾರೆ. ಮಂಟೇಸ್ವಾಮಿಯನ್ನು 'ಉತ್ತರಕಾಂಡದಿಂದ ಉತ್ಪತ್ತಿ ಆಗಿದ್ದಕಾ ಉತ್ತರದೇಶದ ಸಿದ್ಧ ಅಂದ್ರು ಕತ್ತಲರಾ ಜ್ಯಕ್ಕೆ ಬೆಳಕು ತಂದದ್ದಕಾ ಜ್ಯೋತಿ ಲಿಂಗಯ್ಯ ಅಂದ್ರು, "ತುರುಕಾಣ್ಯದಲ್ಲಿ ಮುಸ್ಲುಮಾನರು ಹರೇ ಅಲ್ಲಾಂತ ಹಸ್ತ ತೋರ್ದ್ದಕ 'ಅಲ್ಲ', 'ಅಲ್ಲಮಪ್ರಭು' ಎಂದು ನಾಮಾಂಕಿತ ವಾದರು" ಎಂದು ಹಾಡುತ್ತಾರೆ. ಮುಸ್ಲಿಂರೂ ಸಹ ಮಂಟೇಸ್ವಾಮಿಯನ್ನು 'ಮೊಂಕ್ಷಾವಲಿ' ಎಂದು ಆರಾಧಿಸು ತ್ತಾರೆ. ಮಂಟೇಸ್ವಾಮಿಯ ಗುರುಗಳಾದ ಕೊಡೇಕಲ್ ಬಸ ವಣ್ಣನು ಮಹಮದ್ ಪೈಗಂಬರ್‌ನ ಅವತಾರವೆಂಬ ನಂಬಿ ಕೆಯೂ ಜನಜನಿತವಾಗಿದೆ. ಬೊಪ್ಪೇಗೌಡನಪುರದ ಮಂಟೇಸ್ವಾಮಿ ಗದ್ದುಗೆ ಸಮೀಪವೇ ಅನಾಮಿಕ ಸೂಫಿ ಸಂತನೊಬ್ಬನ ದರ್ಗಾ ಇರುವುದು ಮಾತ್ರವಲ್ಲದೆ ಮಂಟೇ ಸ್ವಾಮಿ, ಸಿದ್ಧಪ್ಪಾಜಿ, ರಾಚಪ್ಪಾಜಿ ಮತ್ತು ಚೆನ್ನಾಜಮ್ಮರ ಗದ್ದುಗೆಗಳು ಸೂಫಿರಚನೆಯ ಮಾದರಿಯಲ್ಲಿಯೇ ಇರು ವುದು ಗಮನಾರ್ಹ ಸಂಗತಿ.

ಮಂಟೇಸ್ವಾಮಿಯ ಕಾಲ ಕರ್ನಾಟಕದಲ್ಲಿ ಸೂಫೀ ಗಳ ಸುವರ್ಣ ಕಾಲ. ಅವರು ಸಂಗೀತಕ್ಕೆ ವಿಶೇಷ ಪ್ರಾಧಾ ನ್ಯತೆ ಕೊಟ್ಟು ಸಂಗೀತದಿಂದ ಸಾಕ್ಷಾತ್ಕಾರ ಸಾಧ್ಯವೆಂದು ಸಾರಿದವರು. ನೀಲಗಾರ ಪರಂಪರೆಯ ಮೇಲೆ ಸೂಫಿಗಳ ಪ್ರಭಾವವಿರುವುದರಿಂದಲೇ ಸೂಫಿಸಂತ ಅಮೀರ್ ಖುಸ್ರೋ ಹುಟ್ಟು ಹಾಕಿದ 'ಖಾವ್ವಾಲಿ'ಗಳ ಮಾದರಿಯ ಲ್ಲಿಯೇ ನೀಲಾಗರ ತಂಡಗಳು ಮಂಟೇಸ್ವಾಮಿಯ ಕಥಾ ಕಾವ್ಯ ಹಾಡುವುದನ್ನು ನೋಡಬಹುದು. ಹಾಗಾಗಿಯೇ ನೀಲಗಾರ ಪರಂಪರೆ ಸೂಫೀಕರಣಗೊಂಡ ಪರಂಪರೆ. ಆ ಕಾಲದ ಗುರು-ಶಿಷ್ಯ ಪರಂಪರೆಯಲ್ಲಿ ಶೈವ ಅನುಭಾವಿ ಗಳು ಸೂಫಿಗಳು ಪರಸ್ಪರ ಬೆರೆತು ಹೋಗಿದ್ದಾರೆ. ಅವರ ಘನ ಮತ್ತು ವಿಶಾಲ ಆಶಯಗಳುಳ್ಳ ಚಳುವಳಿಗೆ ಪೂರಕ ವಾಗಿಯೇ ಸಾಹಿತ್ಯವೂ ಸಂರಚನೆಗೊಂಡಿರುವುದು ಸೂಫಿ, ನೀಲಗಾರ ಪರಂಪರೆಗಳ ವಿಶಿಷ್ಟ ಲಕ್ಷಣವಾಗಿದೆ.

ನೀಲಗಾರರ ಪ್ರಕಾರ ದೊಡ್ಡಮ್ಮತಾಯಿ ಚೆನ್ನಾಜಮ್ಮ ರಾಚಪ್ಪಾಜಿ, ಫಲಾರದಯ್ಯ, ಮುರ್ದಾನಗೈಬ್, ರಾಮವ್ವೆ ಮುಂತಾದವರು ಉತ್ತರ ದೇಶದಿಂದ ಬಂದ ಶರಣಶರಣೆ ಯರು. ಕತ್ತಲರಾಜ್ಯದಲ್ಲಿ ಸಿಸುಮಕ್ಕಳಾಗಿ ಪಡೆದದ್ದು ಕೆಂಪಾಚಾರಿ (ಸಿದ್ಧಪ್ಪಾಜಿ), ನಿಂಗಯ್ಯ ಚೆನ್ನಯ್ಯ ಹಾಗೂ ಹೊನ್ನಯ್ಯರನ್ನು ಮಾತ್ರ. ಆದರೆ 'ಕತ್ತಲರಾಜ್ಯ'ದಲ್ಲಿ ಮಾತ್ರ ನೀಲಗಾರ ಚಳುವಳಿ ರೂಪುಗೊಂಡು 'ಉತ್ತರದೇಸ'ದಲ್ಲಿ ಇಂಥ ಚಳುವಳಿ ಇಲ್ಲದಿರುವುದರಿಂದ ಉತ್ತರ ದಕ್ಷಿಣದ ಗುರುಶಿಷ್ಯ ಪರಂಪರೆಯನ್ನು ಬೆಸೆಯುವ ಕಾವ್ಯ ಕೀರ್ತಿನಾ ಪರಂಪರೆಯ ಕೊಂಡಿ ಕಳಚಿ ಹೋದಂತಾಗಿದೆ.

ನೀಲಗಾರ ಪರಂಪರೆಯ 'ಕತ್ತಲರಾಜ್ಯ'ದಲ್ಲಿ ನೂರಾರು ನೀಲಗಾರ ಮೇಳಗಳು ತಮ್ಮ ನಾಯಕರು ಜೀವಸಮಾಧಿ ಹೊಂದಿದ ದೊಡ್ಡಮ್ಮತಾಯಿ ಗದ್ದುಗೆ

(ಮುಟ್ಟನಹಳ್ಳಿ, ಮಳವಳ್ಳಿ ತಾಲ್ಲೂಕು), ರಾಚಪ್ಪಾಜಿ ಗದ್ದುಗೆ (ಕೆ.ಆರ್. ನಗರ ತಾಲ್ಲೂಕಿನ ಕಪ್ಪಡಿ) ಹಾಗೂ ಸಿದ್ಧಪ್ಪಾಜಿ ಗದ್ದುಗೆ (ಚಿಕ್ಕಲ್ಲುರು, ಕೊಳ್ಳೇಗಾಲ ತಾಲ್ಲೂಕು) ಮುಂತಾದ ಸ್ಥಳಗಳಲ್ಲಿರುವ ತೋಪುಗಳ ವಿಸ್ತಾರ ಪಾಸಲೆಯಲ್ಲಿ ಪರಿಷೆ ನೆರೆಯುತ್ತವೆ. ಸೂಫಿಸಂತರಂತೆ ಅಪ್ಪಟ ಅಮೀರ್ ಖುಸ್ರೋನ 'ಖವ್ವಾಲಿ' ಮಾದರಿಯಲ್ಲಿ ಮಂಟೇಸ್ವಾಮಿ ಮತ್ತು ಅವನ ಸಿಸುಮಕ್ಕಳನ್ನು ಕುರಿತು ಅನುಭಾವಿಕ ಪದಸಮೃದ್ಧಿಯ ಕಥಾ ಕಾವ್ಯಗಳನ್ನು ಹಾಡುತ್ತಾ ಇಡೀ ಜಾತ್ರೆಯನ್ನು ರಮ್ಯಾದ್ಭುತ ಲೋಕಕ್ಕೆ ಕರೆದೊಯ್ದು ಸಂಗೀ ತದ ಹಾಲು ಬೆಳದಿಂಗಳ ಹೊಳೆಯಲ್ಲಿ ಮೀಯಣ ಮಾಡಿಸುತ್ತವೆ. ಹೊಳೆದಂಡೆಯ ಏಕಾಂತದ ಕಾಡು ಕಣಿ ವೆಗಳಲ್ಲಿ ಬಿಡದಿಡೇರೆಗಳನ್ನು ಕಟ್ಟಿಕೊಂಡು ಅಲ್ಲಿಯೇ ಒಲೆ ಗುಂಡು ಹೂಡಿ ಹಿಟ್ಟು ಸೊಪ್ಪು ಬಾಡುಬಳ್ಳೆ ಬೇಯಿಸಿ (ಮಾಂಸದ ಅಡುಗೆಗೆ ಭಂಗಿ ಸೊಪ್ಪು ಸೇರಿಸಿ ಬೇಯಿಸಿ 'ಭಂಗಿ ಬಾಡು' ಅಂತಾ) ಹಂಚಿ ಉಣ್ಣುವ ಮೂಲಕ 'ಕುಲೇಳು ಹದಿ ನೆಂಟು ಜಾತಿಗಳು ಒಂದೇ' ಎಂದು ಸಾರುವ ಕಾಯಕ ಜೀವಿಗಳು ಸೇರುವ ನೀಲಗಾರರ ಸಂಗೀತ ಜಾತ್ರೆ ಯನ್ನಾಗಿಸುವುದು ತೀರಾ ಆಕರ್ಷಕ, ವಿಸ್ಮಯದ ಸಂಗತಿ.

ಆಧುನಿಕೋತ್ತರ ಸಂದರ್ಭದ ಪ್ರಮುಖ ಕ್ರಿಯೆ ಯಾದ ಜಾಗತೀಕರಣವು ಇಂದು ನಮ್ಮ ಸ್ಥಳೀಯ ಸಂಸ್ಕೃತಿಗಳ ಗುರುತುಗಳನ್ನು ಅಳಿಸಿ ಹಾಕಿ ಎಲ್ಲರನ್ನೂ ಬಹುರಾಷ್ಟ್ರೀಯ ಕಂಪನಿಗಳ ಸರಕು ಸಂಸ್ಕೃತಿಯ ಮೋಹಪಾಶಕ್ಕೆ ಸಿಲುಕಿಸಿ ಅಮೆರಿಕಾ ಪ್ರಣೀತ ಪಾಶ್ಚಿಮಾತ್ಯ ಸಂಸ್ಕೃತಿಯ ಏಕಸ್ವಾಮ್ಯವನ್ನು ಪ್ರತಿಷ್ಠಾಪಿಸುತ್ತದೆ ಎಂಬ ಅರ್ಥದ ರಾಜಕೀಯ ವ್ಯಾಖ್ಯಾನ ಮಾಡಲಾಗುತ್ತಿದೆ. ಆದರೆ ಅದೇ ಗಳಿಗೆಯಲ್ಲಿ ನಾಥಪಂಥ, ಸೂಫಿ, ಆರೂಢ, ಅವ ಧೂತ, ತತ್ವಪದಕಾರರು, ಅನುಭಾವಿಸಿದ್ಧರು, ಆಸಾದಿ ಗಳು, ಚೌಡಿಕೆಯರು, ಗೊರವರು, ಜಂಗಮರು ದೇವರ ಗುಡ್ಡರು, ನೀಲಗಾರರು ಮುಂತಾದ ಬಹುರೂಪಿ ಸಂಸ್ಕೃ ತಿಯ ಸಣ್ಣಸಣ್ಣ ತಳಸಮುದಾಯಗಳು ಕಟ್ಟಿಕೊಳ್ಳುವ ಸಂಸ್ಕೃತಿ ಆಧಾರಿತ ಚಳುವಳಿಗಳನ್ನು ಬಲಗೊಳಿಸುವ ಮೂಲಕ ಏಕ ಕಾಲದಲ್ಲಿ ಜಾಗತೀಕರಣದ ವಿರುದ್ಧ ಹೋರಾಡಲು ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳು ನಿರ್ಮಿ ಸಿರುವ ಆರ್ಥಿಕತೆ, ಜ್ಞಾನ ಮತ್ತು ಅಧಿಕಾರ ಸಂಬಂಧಿ ರಚನೆಗಳನ್ನು ಸ್ಫೋಟಿಸಲು ಬಳಸುವುದು ಸಾಧ್ಯವೆಂಬು ದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಎಲ್ಲಕ್ಕಿಂತ ಮಿಗಿಲಾಗಿ ಅವಮಾನವೀಯ ಜಾತಿ ವ್ಯವಸ್ಥೆ, ಉಳಿಗಮಾನ್ಯ ಶಕ್ತಿಗಳ ಕ್ರೌರ್ಯ, ಮುಂತಾದ ಸಾಮಾಜಿಕ ಅಸಮಾನತೆಗಳ ವಿರುದ್ಧ ಆಧ್ಯಾತ್ಮಿಕ ದಂಗೆ ಎದ್ದ ಸ್ವರೂಪವನ್ನು ವಿವರಿಸುವ ಮಂಟೇಸ್ವಾಮಿ ಕಾವ್ಯ ಮಧ್ಯಕಾಲೀನ ಕರ್ನಾಟಕದ ಚರಿತ್ರೆಯ ಕಥನವಾಗಿ ಮಾತ್ರ ಉಳಿಯದೆ, ಸಶಕ್ತವಾಗಿಯೂ ನಿರ್ಲಿಪ್ತವಾಗಿರುವ ಇಂದಿನ ದ.ಸಂ.ಸ–ರೈತ–ಮಹಿಳೆ ಹಾಗೂ ಪರಿಸರ ಚಳುವಳಿ ಮುಂತಾದ ಜನಪರ ಚಳುವಳಿಗಳ ಸ್ವರೂ ಪವನ್ನೂ ಪರಿಶೀಲನೆಗೊಳಪಡಿಸುತ್ತದೆ. ಆದುದರಿಂದ ಜಾಗತೀಕರಣ, ವಿಶ್ವ ಆರ್ಥಿಕತೆ, ಕೋಮುವಾದ, ಜಾತಿ ಸಂಘರ್ಷ, ಮತೀಯ ದ್ವೇಷ ಮುಂತಾದ ರಣಗಾಯಗಳಿಂದ ನರಳುತ್ತಿರುವ ನಮ್ಮ ಸಮಾಜಕ್ಕೆ 'ಹಿಂಸೆ'ಯಿಂದ ಹೊರತಾದ 'ಆಧ್ಯಾತ್ಮಕತೆ'ಯ ಮುಲಾಮು ಹಚ್ಚಲು ಮಂಟೇಸ್ವಾಮಿಯ ನೀಲಗಾರರ ಪರಂಪರೆಯ ತತ್ವಗಳನ್ನು ಧಾರಣೆ ಮಾಡಿಕೊಳ್ಳುವ ಹಂಬಲ ಮತ್ತು ದಾಹಗಳನ್ನು ನಾವು ಗಾಢವಾಗಿ ಉದ್ದೀಪಿಸಿಕೊಳ್ಳಬೇಕಾಗಿದೆ. (ಮುಗಿಯಿತು) □

ಧರ್ಮ





೧.
ಕೊಳೆಯುವುದು ಧರ್ಮ
ಕೊಚ್ಚೆ ನೀರಂತೆ
ನಿಂತಲ್ಲೆ ನಿಂತರೆ
ಕರುಣೆಯೊಳು ಬೆಳೆಯುವುದು
ನದಿಯಂತೆ ಹರಿದರೆ.

೨.
ಆ ಧರ್ಮದವನು ಹೇಳಿದ:
ನಿನ್ನನ್ನು ಕೊಲ್ಲುವೆ
ಈ ಧರ್ಮದವ ಉತ್ತರಿಸಿದ:
ನಾನು ನಿನ್ನನ್ನು ಕೊಲ್ಲುವೆ!
ಕೊನೆಗೆ ಇಬ್ಬರೂ ಸೇರಿ
ಧರ್ಮವನೇ ಕೊಂದರು.

೩.
ಒಂದು ಧರ್ಮ ಹೇಳಿತು:
ಸತ್ತವನನು ಸುಡಬೇಕು
ಇನ್ನೊಂದು ಹೇಳಿತು.
ಸತ್ತವನನು ಹೂಳ ಬೇಕು
ಯಾವ ಧರ್ಮವೂ ಹೇಳಲಿಲ್ಲ
ಯಾವ ಧರ್ಮವೂ ಹೇಳಲಿಲ್ಲ..
ಬದುಕಿರುವ ಮನುಷ್ಯನನು ಪ್ರೀತಿಸ ಬೇಕು!

೪.
ಧರ್ಮ ಕಾಯುವುದಂತೆ
ನನಗೆ ಗೊತ್ತಿರುವಂತೆ ಅದು ಎಂದೂ
ಮನುಷ್ಯರ ಕಾಯ್ದದ್ದು ಕಾಣೆ!

ಕು.ಸ. ಮಧುಸೂದನ್

ಕೆಡಿಸ್ತಾಪ

ವೈ. ಗ. ಜಗದೀಶ್

ಹಾಲವಾಣ ಮರದ ಮೇಲೆ ಕುಳಿತು ಲಲ್ಲೆಗರೆಯುತ್ತ ಮುದ್ದಾಟವಾಡುತ್ತಿದ್ದ ಕೆಂಪು-ಹಳದಿ ಬಣ್ಣದ ಲವ್‌ಬರ್ಡ್‌ಗಳ ಜೂಟಾಟವನ್ನು ಒಬ್ಬರಿಗೊಬ್ಬರು ತೋರಿಸುತ್ತಾ ಕಾಫಿ ಹಣ್ಣು ಬಿಡಿಸುವುದನ್ನೆ ಮರೆತಿದ್ದ ಹೆಂಗಸರ ಕಿವಿಗೆ ಟಕ ಟಕ ಟಕವೆನ್ನುವ ಕುದುರೆಯ ಖುರಪುಟದ ಸದ್ದು ಕೇಳಿಸಿದ್ದೇ ತಡ ಸಿಡಿಲುಬಡಿದಂತೆ ಎಚ್ಚರಗೊಂಡರು. ಖುಷಿ, ಸಂಭ್ರಮ ಮರೆಯಾಗಿ ಗಂಭೀರತೆ ನೆಲೆಗೊಂಡಿತು. ಮಾತಿಗೆ ಕಡಿವಾಣ ಬಿದ್ದಿತು. ಪಿಸುಮಾತು ಮೊದಲಾಯಿತು.

ಧಣೇರ್‍ರು ಬಂದ್ರು ಕಣೆ ಎಂದು ಅಕ್ಕು ಹೇಳಿದಾಗ, ಅಂದು ಯಾನ್ ತೂಪೆ ಎಂದು ತುಳುವಿನಲ್ಲೇ ಉತ್ತರಿಸಿದಳು ಚಂದು. ಮಾತಿನ್ನು ಮುಗಿದಿರಲಿಲ್ಲ. ಅಷ್ಟರಲ್ಲೇ ಮಾಲೀಶ್‌ನಿಂದ ಮಿರಮರನೆ ಮಿಂಚುತ್ತಿದ್ದ 'ನೀಲ'ತನ್ನೊಡೆಯ ಕೃಷ್ಣದೇವರಾಯನನ್ನು ಹೆಗಲಿಗೇರಿಸಿಕೊಂಡು ಬಂದು ನಿಂತಿತ್ತು. ಜತೆಗಿದ್ದ ಮತ್ತೊಂದು ಕುದುರೆಯ ಮೇಲೆ ಕೂತಿದ್ದ ಕಾಡಾಶಾಸ್ತ್ರಿ ಎಲ್ಲ್ ಹೋದ್ನೋ ಭೋಜ ಮೇಸ್ತ್ರಿ, ಧಣೇರು ಬಂದಾಗ ಇರಬೇಕ್ ಅಂತ್ ಗೊತ್ತಿರಬೇಡ' ಎಂದು ಸುಮ್ಮನೇ ರೇಗಿದ. ಅವನ ಕುದುರೆಯ ಕಾಲಿಗೆ ಕೆಪ್ಪ (ದೊಡ್ಡ ನೊಣ) ಕಚ್ಚಿದ್ದರಿಂದ ಅದು ನಿಂತಲ್ಲೇ ಒದ್ದಾಡಿದ್ದರಿಂದಾಗಿ ಬೀಳುವಂತಾದ ಕಾಡಾಶಾಸ್ತ್ರಿ, ಅದರ ಲಗಾಮು ಹಿಡಿದು ಸುಧಾರಿಸಿಕೊಳ್ಳವಷ್ಟರಲ್ಲೇ ನೀಲ ಮುಂಚಲಿಸಿದ್ದ. ಅದರ ಬಾಲವೂ ಹಿಂದೆ ಹೋಗಿತ್ತು.

'ದೊಡ್ಡಾನೆ' ಎಸ್ಟೇಟ್ ಕೃಷ್ಣದೇವರಾಯನ ಪಾರುಪತ್ಯೆಯ ಪ್ರದೇಶ. ಇಡೀ ಗುಡ್ಡವನ್ನೇ ಆಕ್ರಮಿಸಿಕೊಂಡು, ಸರ್ವೆಯರ್‌ಗಳ ಚೈನ್ ಅಳತೆಗೂ ನಿಲುಕದಂತಿದ್ದ ಈ ಕಾಫಿ ತೋಟ ಸುತ್ತಲಿನ ತಗ್ಗು ಪ್ರದೇಶದ ದಿಣ್ಣೆಯಂತಿತ್ತು. ಒಂದು ಮಗ್ಗುಲಿಗೆ ಗದ್ದೆಯ ಕೊಗು ಇದ್ದರೆ, ಮತ್ತೊಂದು ಬಗಲಿಗೆ ಗಗನ ಮುಟ್ಟುವಷ್ಟು ಎತ್ತರಕ್ಕೆ ಬೆಳೆದಿದ್ದ ಅಡಿಕೆ ತೋಟವಿತ್ತು. ಕೋಗಿನ ಮೂಲೆ ತುದಿಯನ್ನು ನೋಡಬೇಕಾದರೆ ಆಧುನಿಕ ಕಾಲದ ದುರ್ಬೀನು ಸಾಕಾಗುತ್ತಿರಲಿಲ್ಲ.

ಗುಡ್ಡದ ನೆತ್ತಿಯ ಮೇಲಿನ ಜುಟ್ಟಿನಂತೆ ಬ್ರಿಟೀಷರ ಕಾಲದಲ್ಲಿ ಕಟ್ಟಿದ ಭವ್ಯ ಬಂಗಲೆಯೊಂದಿತ್ತು. ಅದೇ ಕೃಷ್ಣದೇವರಾಯನ ಅರಮನೆ. ಕುದುರೆಗೆ ಮಾಲೀಶ್ ಮಾಡಲು ಇಬ್ಬರು ಆಳುಗಳಿದ್ದರೆ, ಹುಲಿಯಂತಿದ್ದ ನಾಯಿಗಳ ಉಪಚಾರಕ್ಕೆ ಮೂರುಮಂದಿಯಿದ್ದರು, ಸಿಂಧಿ ಹಸುಗಳೇ ತುಂಬಿದ್ದ ಕೊಟ್ಟಿಗೆ ಕೆಲಸಕ್ಕೆ, ಧಣೇರ್‍ರ ಕಾಲೊತ್ತುವುದಕ್ಕೆ, ಅಡಿಗೆ ಮಾಡಾಕೆ, ಇತ್ತೀಚೆಗಷ್ಟೇ ಬದಲಿಸಿಕೊಂಡು ಬಂದಿದ್ದ ಹುಂಡೈ ಕಾರು ಒರೆಸುವುದಕ್ಕೆ ಹೀಗೆ ಅದಕ್ಕೆ ಇದಕ್ಕೆ ಅಂತ ಅರವತ್ತು ಎಪ್ಪತ್ತು ಮಂದಿ ನಿತ್ಯ ಊಟಕ್ಕೆ ಇರುತ್ತಿದ್ದರು. ಲಕ್ಷ್ಮೀಯಂತೂ ಮನೇಲಿ ಕಾಲು ಮುರುಕೊಂಡು ಬಿದ್ದಿದ್ದಳು.

ಹೊರಗಡೆ ಹೋಗಲು ಕಾರನ್ನೇ ಬಳಸುತ್ತಿದ್ದ ಕೃಷ್ಣದೇವರಾಯ ಕಾಫಿತೋಟದ ಇರ್ಕಲು ರಸ್ತೆಯಲ್ಲಿ ಓಡಾಡಲು ಕುದುರೆಯನ್ನು ಬಳಸುತ್ತಿದ್ದ. ಅದು ಅಂತಿಂಥ ಕುದುರೆಯಲ್ಲ. ರಾಜಾಸ್ತಾನ್‌ನಿಂದ ತರಿಸಿದ ಒಳ್ಳೆ ಜಾತೀಯ ಕುದುರೆ. ಕಂದು ಬಣ್ಣದ ಕುದುರೆಗೆ ಶೋಭೆ ತರುವ ರೀತಿಯಲ್ಲಿ ಹಣೆಯ ಮೇಲೆ ಬಿಳಿ ಬಣ್ಣದ ಅಗಲದ ಮಚ್ಚೆಯೊಂದಿತ್ತು. ಅಂತದ್ದೇ ಕುದುರೆ ಬೇಕೆಂದು ಹತ್ತು ಸಾವಿರ ಜಾಸ್ತಿಕೊಟ್ಟು ತರಿಸಿದ ಕುದುರೆ ಅದಾಗಿತ್ತು.



ಹುಟ್ಟಿದ್ದು ಸಾತ್ವಿಕ ಬ್ರಾಹ್ಮಣ ಕುಟುಂಬದಲ್ಲಾದರೂ ಆತನೊಳಗಿನ ಕ್ರೌರ್ಯ ಪಶುಗಳನ್ನೂ ಮೀರಿಸುವಂತಿತ್ತು. ಹರೆಯದಲ್ಲಿ ಶಂಕ್ರಮ್ಮ ಎಂಬ ಸುಂದರಿಯನ್ನು ಮದುವೆಯಾಗಿದ್ದ ಕೇಡಿರಾಯ, ಶೂದ್ರ ಹೆಂಗಸರ ಮೈರುಚಿ ಹತ್ತಿದ ಮೆಲೆ ಶಾಸ್ತ್ರೋಕ್ತವಾಗಿ ಸಪ್ತಪದಿ ತುಳಿದು ಕಟ್ಟಿಕೊಂಡಿದ್ದ ಶಂಕ್ರಮ್ಮನನ್ನು ಕಡೆಗಣಿಸತೊಡಗಿದ್ದ. ಕಾಶಿಯಾತ್ರೆಗೆ ಹೆಡತಿಯನ್ನು ಪುಸಲಾಯಿಸಿ ಕರೆದೊಯ್ದ ಕೇಡಿರಾಯ, ಕನ್ನಡವನ್ನು ನೆಟ್ಟಗೆ ಮಾತಾಡದಿದ್ದ ಶಂಕ್ರಮ್ಮನನ್ನು ಕಾಶಿಯಲ್ಲೇ ಬಿಟ್ಟು ವಾಪಾಸ್ ಆಗಿದ್ದ.

ಲೆಕ್ಕಕ್ಕೆ ಸಿಗದಷ್ಟು ಇದ್ದ ಗದ್ದೆ, ತೋಟ, ಕಾಫಿಎಸ್ಟೇಟ್‌ಗಳಲ್ಲಿ ಕೆಲಸ ಮಾಡುವ ಕೂಲಿಗಳಿಗಾಗಿ ಸಾಲಿಗೆ ಲೈನ್ ಮನೆಗಳನ್ನು ಕಟ್ಟಲಾಗಿತ್ತು. ನಾಯಿ ಬಂಗ್ಲೆಯ ಅರ್ಧದಷ್ಟಿದ್ದ ಲೈನ್‌ಮನೆಗಳಲ್ಲಿ ಬೇಕೆಂತಲೇ ಕಿಟಕಿಯನ್ನು ಕೂರಿಸಿರಲಿಲ್ಲ. ಮನೆಗೆ ಹೊಂದಿಕೊಂಡು ಬಚ್ಚಲು ಇರಲಿಲ್ಲ. ಒಳಗೆ ಗವ್‌ಗತ್ತಲೆ. ಹೊರಗೆ ಹೋದರೆ ಬೆಳ್ಳಂಬೆಳಕು. ಸೋಗೆ ಗರಿ ತಂದು ಮರೆ ಮಾಡಿಕೊಂಡು ಬಚ್ಚಲು ನಿರ್ಮಾಣ ಮಾಡಿಕೊಂಡಿದ್ದರು ಕೆಲವರು. ಕೆಲವರು ಕತ್ತಲನ್ನೇ ಬಚ್ಚಲು ಮಾಡಿಕೊಂಡಿದ್ದರು. ತಿಂಗಳಿಗಿಷ್ಟು ಅಂತ ಕೊಡುತ್ತಿದ್ದ ಸೀಮೆಣ್ಣೆಯಲ್ಲಿಯೇ ರಾತ್ರಿ ಕಳೆಯಬೇಕು. ನೆಂಟರು ಯಾರಾದರೂ ಬಂದರೆ ತಿಂಗಳ ಕೊನೆಯಲ್ಲಿ ಸೀಮೆಣ್ಣೆ ಖರ್ಚಾಗಿ ಒಲೆ ಬೆಂಕಿಯ ಬೆಳಕಲ್ಲಿಯೇ ರಾತ್ರಿ ಕಳೆಯಬೇಕು.

ಇಂತಿಪ್ಪ ಕಾರಣಗಳಿಗಾಗಿ ಹೊರಜಗತ್ತು ಕೃಷ್ಣದೇವರಾಯರನ್ನು ಧಣೇರ್ರು ಎಂದು ಗೌರವಿಸುತ್ತಾ, ಶ್ರೀಮಂತಿಕೆಗೆ ತಲೆಬಾಗುತ್ತಿದ್ದರೆ, ಈತನ ಪಾರುಪತ್ಯೆ ಪ್ರದೇಶದ ಮಂದಿ ಕೇಡಿರಾಯ ಎಂದೇ ಗೌರವಿಸುತ್ತಿದ್ದರು. ಜರಾಸಂಧನೆಂದೇ ಅಡ್ಡ ಹೆಸರಿನಿಂದ ಕರೆಸಿಕೊಳ್ಳುತ್ತಿದ್ದ ಕಾಡಾಶಾಸ್ತ್ರೀ ಕೇಡಿರಾಯನಿಗೆ ದುಷ್ಟ ಮಂತಿಯಂತಿದ್ದ. ಇಬ್ರು ಒಟ್ಟಿಗೆ ಹೊರಟರೆಂದರೆ ದುರ್ಯೋಧನ, ಶಕುನಿ ಹೊರಟರು ನೋಡು ಎಂದು ಜನ ಮನಸಲ್ಲೇ ಅಂದುಕೊಳ್ಳುತ್ತಿದ್ದರು.

ಹುಟ್ಟಿದ್ದು ಸಾತ್ವಿಕ ಬ್ರಾಹ್ಮಣ ಕುಟುಂಬದಲ್ಲಾದರೂ ಆತನೊಳಗಿನ ಕ್ರೌರ್ಯ ಪಶುಗಳನ್ನೂ ಮೀರಿಸುವಂತಿತ್ತು. ಹರೆಯದಲ್ಲಿ ಶಂಕ್ರಮ್ಮ ಎಂಬ ಸುಂದರಿಯನ್ನು ಮದುವೆಯಾಗಿದ್ದ ಕೇಡಿರಾಯ, ಶೂದ್ರ ಹೆಂಗಸರ ಮೈರುಚಿ ಹತ್ತಿದ ಮೆಲೆ ಶಾಸ್ತ್ರೋಕ್ತವಾಗಿ ಸಪ್ತಪದಿ ತುಳಿದು ಕಟ್ಟಿಕೊಂಡಿದ್ದ ಶಂಕ್ರಮ್ಮನನ್ನು ಕಡೆಗಣಿಸತೊಡಗಿದ್ದ. ಕಾಶಿಯಾತ್ರೆಗೆ ಹೆಂಡತಿಯನ್ನು ಪುಸಲಾಯಿಸಿ ಕರೆದೊಯ್ದ ಕೇಡಿರಾಯ, ಕನ್ನಡವನ್ನು ನೆಟ್ಟಗೆ ಮಾತಾಡದಿದ್ದ ಶಂಕ್ರಮ್ಮನನ್ನು ಕಾಶಿಯಲ್ಲೇ ಬಿಟ್ಟು ವಾಪಾಸ್ ಆಗಿದ್ದ.

ಕಾಶಿಗೆ ಹೋದಾಗ ತನಗೆ ಅತೀ ಪ್ರೀತಿಪಾತ್ರವಾದದ್ದನ್ನು ಬಿಟ್ಟು ಬರಬೇಕೆಂಬ ಸಂಪ್ರದಾಯವನ್ನು ಚಾಚೂ ತಪ್ಪದೇ ನಡೆಸಿಕೊಂಡ ಕೇರಿರಾಯ, 'ಶಂಕ್ರಮ್ಮ ಗಂಗೆಯಲ್ಲಿ ಸ್ನಾನಮಾಡುವಾಗ ಪ್ರವಾಹವೊಂದು ಆಕೆಯನ್ನು ಕೊಚ್ಚಿಕೊಂಡು ಹೋಯಿತು. ಅಲ್ಲೇ ಪಿಂಡಹಾಕಿ ಬಂದುಬಿಟ್ಟೆ, ಅವಳ ಋಣ ಅಷ್ಟೇ' ಎಂದು ಮಗ ಶ್ಯಾಮಭಟ್ಟನನ್ನು ಸಂತೈಸಿದ್ದ.

ಕೈ ಎತ್ತಿ ದಾನಮಾಡಿ ಮಾತ್ರ ರೂಢಿಯಿದ್ದ ಶಂಕ್ರಮ್ಮ ಕಾಶಿಯಲ್ಲಿ ಭಾಷೆ ಬಾರದೆ, ಗುರ್ತು ಪರಿಚಯಸ್ಥರು ಇಲ್ಲದೇ ಇದ್ದಾಗ, ಉದರಂಭರಣಕ್ಕೆ ಕೈಚಾಚುವುದನ್ನು ರೂಢಿಮಾಡಿಕೊಂಡರು. ಗಂಗಾ ನದಿಗೆ ಹಾಕುತ್ತಿದ್ದ ಪಿಂಡದ ಉಂಡೆಗಳನ್ನು ಆರಿಸಿ, ಅದರಲ್ಲಿದ್ದ ಎಳ್ಳನ್ನು ತೆಗೆದು ತಿನ್ನುತ್ತಿದ್ದ ಶಂಕ್ರಮ್ಮ, ಅದೂ ಸಿಗದಿದ್ದಾಗ ದೇಹಮಾರುವುದಕ್ಕೆ ಮುಂದಾಗಿದ್ದರು. ಶಂಕ್ರಮ್ಮನನ್ನು ಕಾಶಿಗೆ ಸೇರಿಸಿದ ಆರೇಳು ವರ್ಷದ ತರುವಾಯ ಕಾಸಿಗೆ ಹೋಗಿದ್ದ ಮುಂಡಗೋಡು ಪಾಪಣ್ಣಭಟ್ಟರು ಶಂಕ್ರಮ್ಮನನ್ನು ಅಂತಹ ಜಾಗವೊಂದರಲ್ಲಿ ಕಂಡದ್ದಾಗಿ ಹೇಳಿದಾಗಲೇ ಕೇಡಿರಾಯನ ಕಾಶೀಯಾತ್ರೆಯ ಕತೆ ಮಲೆನಾಡಂಬ ತಣ್ಣಗಿನ ಜಗತ್ತಿಗೆ ಪರಿಚಯವಾದದ್ದು.

ಅರಮನೆಯಂತಿದ್ದ ಬಂಗ್ಲೆಯಲ್ಲಿ ಹಸುಗರುವಿನಂತೆ ಮುದ್ದುಮುದ್ದಾಗಿ ಓಡಾಡಿಕೊಂಡಿದ್ದ ಶ್ಯಾಮಭಟ್ಟನ ಮಡದಿ ಪಣಿಯಮ್ಮ ಕೇಡಿರಾಯ ಮನೆಯ ಒಂದೇ ಒಂದು ಹೆಣ್ಣು ಜೀವವಾಗಿತ್ತು. ಹೆಣ್ಣಿನ ದುರ್ಬಲತೆಯನ್ನು ತಿಳಿದ, ಆಯಕ್ಕೆ ಗಾಳ ಹಾಕುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ಕೇಡಿರಾಯ ಸೊಸೆಯೆಂಬುದನ್ನು ಮರೆತು ಪಣಿಯಮ್ಮನನ್ನು ಮೋಹಿಸಲು ಶುರುಮಾಡಿದ್ದ. ಬಂಗಾರ, ಹಣ, ಅದಕ್ಕೆ ಬಗ್ಗದಿದ್ದಾಗ ತನ್ನ ಪೊಗರು ತೋರಿಸಿ ಪಣಿಯಮ್ಮನನ್ನು ಬಲೆಗೆ ಕೆಡವಿಕೊಂಡು ಕೇಡಿರಾಯ, ತನ್ನ ಸರಸ ಕೇಳಿಗೆ ಇದ್ದ ಒಂದೇ ಒಂದು ಅಡ್ಡಗೋಡೆಯನ್ನು ನಿವಾರಿಸಿಕೊಂಡ ಬಗ್ಗೆ ಈಗಲೂ ಬಂಗ್ಲೆಯ ಗೋಡೆಗಳು ನಡುಗುವ ದನಿಯಲ್ಲಿ ಅಳುಕಿನಿಂದ ಬಿಕ್ಕಳಿಸುತ್ತವೆ.

ಅಪುತ್ರಸ್ಯ ಗತಿರ್ನಾಸ್ತಿ ಎಂಬ ಬ್ರಾಹ್ಮಣ್ಯದ ನಂಬಿಕೆಯನ್ನು ನಿರಾಕರಿಸಿದ ಕೇಡಿರಾಯ ಪಿಂಡಹಾಕಲು ಇದ್ದ ಒಬ್ಬನೇ ಮಗ ಶ್ಯಾಮಭಟ್ಟ ಅದೊಂದು ಸಂಜೆ ದೇವರಕೋಣೆಯಲ್ಲಿ ಸಂಧ್ಯಾವನೆ ಮಾಡುತ್ತಾ ಕುಳಿತಿದ್ದಾಗ, ಕೂರುವ ಮಣೆಯಿಂದಲೇ ಆತನ ತಲೆಗೆ ಹೊಡೆದು ಸಾಯಿಸಿಬಿಟ್ಟ. ತನ್ನ ಗಂಡನನ್ನು ಮಾವನೇ ಕೊಂದನೆಂದು ಗೊತ್ತಾದರೂ ತುಟಿಪಿಟಕ್ಕನ್ನದ ಜಕಪಣಿಯಮ್ಮ, ಅಳುವನ್ನು ತನ್ನ ಒಡಲೊಳಗೆ ತಳ್ಳಿಬಿಟ್ಟಳು. ಅದೇ ಕಡೆ, ತನ್ನ ನೆಂಟರಿಷ್ಟರಾಗಲಿ, ಬಂಧುಬಳಗವಾಗಲಿ ಯಾವುದೇ ಹೆಣ್ಣು ಜೀವವನ್ನು ತನ್ನ ಅರಮನೆಯ ಭಾಗವಾಗಿ ಹೋಗಿಬಿಟ್ಟರು. ಮಗ ಶ್ಯಾಮಭಟ್ಟನ ಸಾವನ್ನು ಹಾರ್ಟ್ ಅಟ್ಯಾಕ್ ಎಂದು ಹೇಳಿದ ಕೇಡಿರಾಯ, ಎರಡು ದಿನ ಗೋಳುತೋಡಿಕೊಂಡು ತಾನೇ ಮುಂದೆ ನಿಂತು ವೈಕುಂಠ ಸಮಾರಾಧನೆ ಮಾಡಿಸಿದ.

ಮೂರು ತಲೆಮಾರು ಮಲಗಿ ತಿಂದರೂ ಮಿಗುವಷ್ಟಿದ್ದ ಆಸ್ತಿಯನ್ನು ನೋಡಿಕೊಳ್ಳಲು ಕೈಲಾಸ ಪುರದ ಹಿರಿಯಣ್ಣಶಾಸ್ತ್ರಿಗಳ ಮಗ ಕೃಷ್ಣಮೂರ್ತಿಯನ್ನು ದತ್ತು ತೆಗೆದುಕೊಂಡ ಕೇಡಿರಾಯ ಆತ ಮತ್ತೊಂದು ತನ್ನ ಹೆತ್ತ ತಾಯಿಯನ್ನು ನೋಡಕೂಡದಂತೆ ಕಟ್ಟಪ್ಪಣೆ ವಿಧಿಸಿದ. ಮನೆಯಲ್ಲಿದ್ದ ಗಂಜಿತಿಳಿಯಲ್ಲೇ ಜೀವ ಉಳಿಸಿಕೊಂಡಿದ್ದ ಕಿಟ್ಟಿ ಮಾಣಿ ಆನಂತರ ಕೃಷ್ಣರಾಯನಾಗಿ ಬೆಳೆದಿದ್ದು ಮತ್ತೊಂದು ಕತೆ.

ಕೇಡಿರಾಯನ ಆಂತರಿಕ ಜಗತ್ತು ಇಂತಹ ವಿಕೃತಿಗಳಿಂದಲೇ ಕಡೆದ ಶಿಲ್ಪದಂತಿದ್ದರು, ಆಳು ಕಾಳುಗಳ ಬದುಕೇನೂ ಪ್ರಾಣೀಗಳಿಗಿಂತ ಉತ್ತಮವಾಗಿರಲಿಲ್ಲ. ಸಂಬಂಧಿಕರು, ಪರಿಚಯಸ್ಥರು ಲೈನ್‌ಮನೆಯಲ್ಲಿನ ಕೂಲಿಗಳನ್ನು ನೋಡಲು ಬರಬೇಕಾದರೆ ಮೊದಲೇ ರೈಟರ್‌ನ ಅನುಮತಿ ಪಡೆಯಬೇಕಿತ್ತು.

ತೋಟದ ತುಂಬಾ ಇದ್ದ ಕಿತ್ತಳೆ ಗಿಡದಿಂದ ಹಣ್ಣುಬಿದ್ದು ಹೋಗುತ್ತಿರುವುದನ್ನು ಕೂಕ್ರ ಪೂಜಾರಿ ತನ್ನ ಕುರ್ದೆಗಳು ಆಸೆ ಮಾಡ್ತಾವೇ ಎಂದು ಹಣ್ಣನ್ನು ಕೊಯ್ದುಕೊಂಡು ಹೋಗಿದ್ದ. ಇದ್ದು ಗೊತ್ತಾದ ಕೇಡಿರಾಯ, ಬಂಗಲೆಯ ಕೊಟ್ಟಿಗೆಗೆ ಹೊಂದಿಕೊಂಡಂತಿದ್ದ ಹುಲಿಯಂತಿದ್ದ ನಾಯಿಗಳ ಬಂಗ್ಲೆಗೆ ಕೂಕ್ರನನ್ನ ತಳ್ಳಿಸಿದ್ದ. ಅಂಗಲಾಚಿದರೂ ಬಿಡದೇ ನಾಯಿಗೆ ಬಾಯಿಗೆ ಬಿದ್ದ ಕೂಕ್ರನನ್ನು ಕಂಡಕಂಡಲ್ಲಿ ನಾಯಿಗಳು ಕಚ್ಚಿದ್ದವು. ಮೈಯ ಗಾಯ ವಾಸಿಯಾಗಬೇಕಾದರೆ ಮೂರುತಿಂಗಳು ಬೇಕಾಗಿತ್ತು.

ಗಟ್ಟದ ಕೆಳಗಿನಿಂದ ಬಂದಿದ್ದ ಕಿಟ್ಟಶೆಟ್ಟಿ, ಆನೆಗುಡ್ಡೆ ಗಣಪತಿಗೆ ಅಡಿಕೆ ಸಿಂಗಾರ ಒಪ್ಪಿಸಿದರೆ ತನ್ನ ಬಯ್ಕೆ ಈಡೇರುತ್ತೇ ಎಂದು ಒಂದೇ ಒಂದು ಅಡಿಕೆ ಸಿಂಗಾರ ಕೊಯ್ದಿದ್ದನ್ನು ಕಾಡಾಶಾಸ್ತ್ರಿಯ ಮೂಲಕ ತಿಳಿದುಕೊಂಡ ಕೇಡಿರಾಯ ಆತನಿಗೆ ಕೊಟ್ಟ ಶಿಕ್ಷೆ ಬ್ರಿಟಿಷರ ಕಾಲವನ್ನು ನೆನಪಿಗೆ ತರುವಂತಿತ್ತು. ದೊಡ್ಡಾನೆ ಎಸ್ಟೇಟನಿಂದ ಆರೇಳು ಮೈಲಿ ದೂರದಲ್ಲಿದ್ದ ಸಸಿತೋಟ ಎಸ್ಟೇಟ್‌ನ ಮೂರ್ತಿರಾಯರ ಮನೆಗೆ ಐದು ಸಾರಿ

ಅಪುತ್ರಸ್ಯ ಗತಿರ್ನಾಸ್ತಿ ಎಂಬ ಬ್ರಾಹ್ಮಣ್ಯದ ನಂಬಿಕೆಯನ್ನು ನಿರಾಕರಿಸಿದ ಕೇಡಿರಾಯ ಪಿಂಡಹಾಕಲು ಇದ್ದ ಇಬ್ಬನೇ ಮಗ ಶ್ಯಾಮಭಟ್ಟ ಅದೊಂದು ಸಂಜೆ ದೇವರಕೋಣೆಯಲ್ಲಿ ಸಂಧ್ಯಾವನೆ ಮಾಡುತ್ತಾ ಕುಳಿತಿದ್ದಾಗ, ಕೂರುವ ಮಣೆಯಿಂದಲೇ ಆತನ ತಲೆಗೆ ಹೊಡೆದು ಸಾಯಿಸಿಬಿಟ್ಟ. ತನ್ನ ಗಂಡನನ್ನು ಮಾವನೇ ಕೊಂದನೆಂದು ಗೊತ್ತಾದರೂ ತುಟಿಪಿಟಕ್ಕನ್ನದ ಜಕಪಣೆಯಮ್ಮ, ಅಳುವನ್ನು ತನ್ನ ಒಡಲೊಳಗೆ ತಳ್ಳಿಬಿಟ್ಟಳು. ಅದೇ ಕಡೆ, ತನ್ನ ನೆಂಟರಿಷ್ಟರಾಗಲಿ, ಬಂಧುಬಳಗವಾಗಲಿ ಯಾವುದೇ ಹೆಣ್ಣು ಜೀವವನ್ನು ತನ್ನ ಅರಮನೆಯ ಭಾಗವಾಗಿ ಹೋಗಿಬಿಟ್ಟರು. ಮಗ ಶ್ಯಾಮಭಟ್ಟನ ಸಾವನ್ನು ಹಾರ್ಟ್ ಅಟ್ಯಾಕ್ ಎಂದು ಹೇಳಿದ ಕೇಡಿರಾಯ, ಎರಡು ದಿನ ಗೋಳುತೋಡಿಕೊಂಡು ತಾನೇ ಮುಂದೆ ನಿಂತು ವೈಕುಂಠ ಸಮಾರಾಧನೆ ಮಾಡಿಸಿದ.

ಓಡಾಡುವಂತೆ ಅಪ್ಪಣೆ ಮಾಡಿದ್ದ. ತನ್ನ ಮನೆಯಿಂದ ಎರಡು ಮಣ ಅಕ್ಕಿ ಹೊತ್ತುಕೊಂಡು ಅವರಮನೆಗೆ ಹೋಗಬೇಕು, ಅವರ ಮನೆಯಿಂದ ಎರಡು ಮಣ ಕಾಫಿಬೀಜ ಹೊತ್ತುಕೊಂಡು ಬರಬೇಕು ಎಂಬುದು ಈ ಶಿಕ್ಷೆಯ ಷರತ್ತಾಗಿತ್ತು. ದೊಡ್ಡಾನೆ ಗುಡ್ಡದ ನೆತ್ತಿಯಿಂದ, ಸಸಿತೋಟದ ಗುಡ್ಡದ ನೆತ್ತಿಯ ಮೇಲಿದ್ದ ಮೂರ್ತಿರಾಯರ ಮನೆಗೆ ಬರಿಗೈಲಿ ಒಂದು ಸಾರಿ ಹೋಗಿ ಬರುವುದೇ ಕಷ್ಟದ ಸಂಗತಿಯಾಗಿರುವಾಗ ಐದು ಸಾರಿ ಅಕ್ಕಿ ಹೊತ್ತುಕೊಂಡು ಓಡಾಡಿದ ಕಿಟ್ಟಿಶೆಟ್ಟಿ ಐದನೇ ಬಾರಿ ವಾಪಾಸ್ ಬರಲೇ ಇಲ್ಲ. ದಾರಿಯಲ್ಲಿ ಸಿಗುತ್ತಿದ್ದ ಕೆಂಪಳ್ಳದಲ್ಲಿ ನೀರುಕುಡಿಯಲು ಬಗ್ಗಿದ ಕಿಟ್ಟಿಶೆಟ್ಟಿ ನೀರೆತ್ತಲು ಬೊಗಸೆ ಮಾಡಿದ್ದ ಕೈಯನ್ನು ಹಾಗೆಯೇ ಇಟ್ಟುಕೊಂಡು ನೀರಿಗೆ ಬಿದ್ದು ಬಿಟ್ಟಿದ್ದ. ಎರಡು ಪುಟ್ಟಮಕ್ಕಳನ್ನು ಎದೆಗವಚಿಕೊಂಡು ಶೆಟ್ಟಿಯ ಹೆಂಡತಿ ರುಕ್ಮಿಣಿ ಕೇಡಿರಾಯನಿಗೆ ಹಿಡಿಶಾಪ ಹಾಕುತ್ತಲೇ ಸೋಮೇಶ್ವರ ಬಳಿಯ ತನ್ನ ತವರಿಗೆ ನಡೆದುಬಿಟ್ಟಿದ್ದಳು.

ಕೇಡಿರಾಯ-ಕಾಡಾಶಾಸ್ತ್ರಿ ಹೊರಟರೆಂದರೆ ಯಾವುದಾದರೂ ಹೆಣ್ಣಮಿಕ ಬಲೆಗೆ ಬಿತ್ತೆಂದೇ ಅರ್ಥ. ಕಾರ್ತೀಕ ಮಾಸ ಕಳೆದು ಮತ್ತೊಂದು ಅಮವಾಸ್ಯೆ ಹತ್ತಿರ ಬಂದಿರಬೇಕು. ಹನಿದಿದ್ದ ಮಳೆಗೆ ಕಾಫಿ ಹೂ ಅರಳಿ ತೋಟಕ್ಕೆ ಸುವಾಸನೆಯ ಮಾದಕತೆ ತಂದಿತ್ತು. ಘಮಘಮಿಸುವ ವಾಸನೆಯ ಬೆನ್ನುಹತ್ತಿದ್ದ ಕಾಡು ಮೂಲ್ಯನ ಮಗಳು ಗುಲಾಬಿ ಕಲ್ಲು ಸಂಪಿಗೆ ಹಣ್ಣು ಹುಡುಕುತ್ತಾ ತನ್ನ ತಮ್ಮ ಶೇಷಪ್ಪನೊಂದಿಗೆ ಅಲೆಯುತ್ತಿದ್ದಳು. ಕಾಫಿಗಿಡದ ಮೇಲೆ ಬಳಕುತ್ತಾ ಸಾಗಿದ್ದ ಹಸಿರು ಹಾವನ್ನು ಹಿಡಿದ ಶೇಷಪ್ಪ ಅದನ್ನು ಗಿರಗಟ್ಲೆಯಂತೆ ತಿರುಗಿಸುತ್ತಾ ಅಕ್ಕನ ಮೇಲೆ ಹಾಕ್ತೆ ಅಂತ ಹೆದರಿಸುತ್ತಿದ್ದ.

ಕುದುರೆ ಮೇಲೆ ಬಂದ ಕೇಡಿರಾಯನ ಕಣ್ಣಿಗೆ ಗುಲಾಬಿ ಬಿದ್ದದ್ದೇ ತಡ ರಟ್ಟೆ ಹಿಡಿದೆಳೆದು ಎತ್ತಿ ಕುದುರೆ ಮೇಲೆ ಹಾಕಿಕೊಂಡ. ಅಕ್ಕಕ್ಕಾ ಎಂದು ಶೇಷ ಕೂಗುತ್ತಿದ್ದಂತೆ ಕುದುರೆ ಬಿರಬಿರನೇ ಕಾಫಿಗಿಡ ಮಧ್ಯೆ ಮರೆಯಾಗಿತ್ತು. ಎರಡು ದಿನದ ನಂತರ ಪಕಳೆ ಕೆದರಿದ ಗುಲಾಬಿ ಕೆಂಪಳ್ಳದ ಹೆಣವಾಗಿ ಮೇಲೆದ್ದಾಗಲೇ ಕೇಡಿರಾಯನ ಕೃತ್ಯ ಬಯಲಾಗಿತ್ತು.

ಈ ಘಟನೆ ನಡೆದು ಎಂಟೋ ಹತ್ತೋ ದಿನ ಆಗಿರಬೇಕು. ಬಾಯಿತುಂಬಾ ಎಲೆ ಅಡಿಕೆ ಹಾಕಿಕೊಂಡು, ಹೊಗೆಸೊಪ್ಪನ್ನು ಸುಣ್ಣ ಹಚ್ಚಿ ನೀವುತ್ತಾ ಈಸಿಚೇರ್ ಮೇಲೆ ಕೇಡಿರಾಯ ಕುಳಿತಿದ್ದ. ಏದುಸಿರು ಬಿಡುತ್ತಾ ಬಂದ ಪೋಲೀಸು ಜೀಪು ಅಡಿಕೆ ಚಪ್ಪರ ಹಾಕಿದ್ದ ಅಂಗಳಕ್ಕೆ ಬಂದು ನಿಂತಿತು. ಎದೆಯಲ್ಲಿ ಕ್ಷಣ ಚಳಕ್ ಎಂದರೂ ಅಂಜಿಕೆ ತೋರದ ಕೇಡಿರಾಯ, 'ಕಾಡಾಶಾಸ್ತ್ರಿ, ಯಾರೋ ಅದು ಏನೂಂತ ಕೇಳು' ಎಂದು ಮೀಸೆ ತಿರುವಿಕೊಂಡ.

ಅಷ್ಟರಲ್ಲಾಗಲೇ ಸೂರಂಕಲು ದಾಟಿ ಮೆಟ್ಟಿಲೇರುತ್ತಿದ್ದ ಸಬ್ಇನ್ಸ್‌ಪೆಕ್ಟರ್‌ನಂತ ಕಾಣುತ್ತಿದ್ದ ಅಸಾಮಿಯೊಂದು, ಕೇಡಿರಾಯನಿಗೊಂದು ಸೆಲ್ಯೂಟ್ ಹೊಡೆದು, 'ನಾನು ಜಯಪುರ ಠಾಣೆ ಎಸ್ಸೈ. ದಶರಥಸಿಂಗ್ ಅಂತ. ಇತ್ತೀಚೆಗೆ ನಿಮ್ಮ ಎಸ್ಟೇಟ್ ಸುತ್ತಮುತ್ತ ನಕ್ಸಲೈಟರು ಓಡಾಡುತ್ತಿರುವುದು ನಿಮ್ಮ ಗಮನಕ್ಕೆ ಬಂದಿರಬೇಕು. ಆ ಲೌಡಿಮಕ್ಕಳನ್ನು ಹೊಡೆದು ಹಾಕ್ಲು ನಮಗೆ ಆರ್ಡರ್ ಇದೆ. ನಿಮಗೇನಾದ್ರೂ ಸುಳಿವು ಸಿಕ್ಕಿದ್ರೆ ನಮಗೊಂದು ಪೋನ್ ಮಾಡಿ ಸಾರ್' ಎಂದು ನಿಂತ.

ಏಯ್, ಅವರಿಗೆ ಕಾಫಿ ಕೊಡೋ ಎಂದು ಆಳಿಗೆ ಕೂಗಿ ಹೇಳಿದ ಕೇಡಿರಾಯ, 'ಕೂತ್ಕಳಿ. ನಮ್ ಎಸ್ಟೇಟಿನ ಕಡೆ ಅವರೆಲ್ಲಾ ಬರೋಲ್ಲರಿ. ನಾವು ಒಳಕ್ಕೂ ಬಿಟ್ಕೋಳ್ಲಲ. ಹಾಗೊಂದು ವೇಳೆ ಬಂದ್ರೆ ಹೇಗೋ ನೀವಿದ್ದಿರಲ್ಲ. ನಮ್ಮ ಹತ್ರವೂ ಬಂದೂಕದ' ಎಂದು ಗೋಡೆಗೆ ನೇಡೆಗೆ ನೇತುಹಾಕಿದ್ದ ಡಬ್ಬಲ್ ಬ್ಯಾರಲ್‌ಗನ್ ತೋರಿಸಿದ. ಕಾಫಿ ಕುಡಿದ ಸಬ್ ಇನ್ಸ್‌ಪೆಕ್ಟರ್ ಊರು, ಮನೆ ವಿಚಾರಿಸಿದ ಕೇಡಿರಾಯ ಅವರಿಗೆ ಒಂದೆರೆಡು ಬಾಳೆಗೊನೆ, ಅಡಿಕೆ, ಕಾಫಿಬೀಜ ಎಲ್ಲಾ ಕೂಟ್ ಕಳ್‌ಸೋಕೆ ವ್ಯವಸ್ಥೆ ಮಾಡು ಎಂದು ಕಾಡಾಶಾಸ್ತ್ರಿಗೆ ಹೇಳಿದ.

ಖಾತೆಗೆ ನಿಲುಕದಷ್ಟೂ ಜಮೀನಿದ್ದರೂ ಕೇಡಿರಾಯನ ಜಮೀನಿನ ಮಧ್ಯದಲ್ಲಿ ಒಂದಿಷ್ಟು ತರಿ ಜಮೀನು ಹೊಂದಿದ್ದ ಪುಟ್ಟೇಗೌಡ ತಲೆನೋವಾಗಿದ್ದ. ಅಂಡಿನ ಕುರದಂತೆ ಬಿಡದೇ ಕಾಡುತ್ತಿದ್ದ. ಸುತ್ತಲ ಜಮೀನೆಲ್ಲವೂ ಕೇಡಿರಾಯನಿಗೆ ಸೇರಿದ್ರು, ಸರಕಲು ನೀರನ್ನು ಕೋಗಿಗೆ ಹಾಯಿಸುವ ಸರಕಲು ಪಕ್ಕದ ಗದ್ದೆ ಮಾತ್ರ ಪುಟ್ಟೇಗೌಡನ ಖಾತೆಯಲ್ಲೇ ಇತ್ತು. ಪುಟ್ಟೇಗೌಡನ ಅಪ್ಪ ಕೇಡಿರಾಯನ ಮನೇಲಿ ಗೇಣಿದಾರನಾಗಿದ್ದು, ಅರಸು ಭೂಸುಧಾರಣೆ ತಂದಾಗ, ಡಿಕ್ಲರೇಶನ್ ಹಾಕಿದ್ದರಿಂದ ಜಮೀನು ಮಂಜೂರಾಗಿತ್ತು. ಗೇಣಿ ಮಾಡುತ್ತಿದ್ದ ದೊಡ್ಡ ಒಂದೆರೆಡು ದೊಡ್ಡ ಹಾಳಿ, ನಾಲ್ಕೈದು ಸಣ್ಣ ಗಣ್ಣ, ಒಂದಿಷ್ಟು ಮಕ್ಕಿಗದ್ದೆ ಪುಟ್ಟೇಗೌಡನ ತಂದೆ ಸುಬ್ಬೇಗೌಡರ ಹೆಸರಿಗೆ ಖಾತೆಯಾಗಿದ್ದರೂ ಕೇಡಿರಾಯ ಅರ್ಧದಷ್ಟನ್ನು ಮಾತ್ರ ಬಿಟ್ಟುಕೊಟ್ಟಿದ್ದ. ಪುಟ್ಟೇಗೌಡನಿಂದ ಹೇಗಾದ್ರೂ ಮಾಡಿ ಆ ಜಮೀನು ಬಿಡಿಸ್ಕೋಬೇಕು ಅಂತ ಕೇಡಿರಾಯ ಹಲವು ಹಿಕ್ಮತ್ತು ನಡೆಸಿದ್ದ.

ಅಗಡಿಗೆ ಬೀಜದ ಭತ್ತ ಚೆಲ್ಲಿದಾಗ ರಾತ್ರೋರಾತ್ರಿ ಅಂಚುಕಡಿದು ಬೀಜ ತೊಳೆದು ಹಳ್ಳಕ್ಕೆ ಸೇರುವಂತೆ ಮಾಡುವುದು, ಪಿಎಲ್‌ಡಿ ಬ್ಯಾಂಕಲ್ಲಿ ಸಾಲಮಾಡಿ ಯೂರಿಯಾ ಗೊಬ್ಬರ ತಂದು ಹಾಕಿದಗ, ಗದ್ದೆ ಕಡಿ ಒಡೆದು ನೀರನ್ನು ತಮ್ಮ ಗದ್ದೆಗೆ ಬಿಟ್ಟು ಗದ್ದೆ ಒಳಗುವಂತೆ ಮಾಡುವುದು. ನೆಟ್ಟಿಗೆ ಅಂತ ಸಸಿಕಟ್ಟನ್ನು ಗದ್ದೆ ಅಂಚಲ್ಲಿ ಕುಪ್ಪೆ ಹಾಕಿಟ್ಟರೆ ಬೆಳಗಗುವಷ್ಟರಲ್ಲಿ ಅದನ್ನು ಹಳ್ಳಕ್ಕೆ ಎಸೆಯುವುದು. ಹೀಗೆ ತಾಪತ್ರಯ ಕೊಡುತ್ತಲೇ ಇದ್ದರು.

ಇಷ್ಟೆಲ್ಲಾ ದ್ವೇಷ ಕಟ್ಟಿಕೊಂಡು ಉಳುಮೆ ಮಾಡಿದರೂ ಸಿಗುತ್ತಿದ್ದ ಒಂದು ಇಪ್ಪತ್ತು ಖಂಡಗ ಭತ್ತ. ಅದನ್ನು ಮಿಲ್ ಮಾಡಿಸೋಕೆ ಕುಂಚೇಬೈಲ್‌ವರೆಗೆ ತಲೆ ಮೇಲೆ ಹೊತ್ತುಕೊಂಡು ಹೋಗಬೇಕಿತ್ತು. ಅಷ್ಟೆಲ್ಲ ತ್ರಾಸಪಟ್ರೆ ವರ್ಷಪೂರ್ತಿ ಉಣ್ಣುವ ಗಂಜಿಗೆ ಭತ್ತ ಸಾಕಾಗುತ್ತಿರಲಿಲ್ಲ. ಹೊಸಭತ್ತ ಬರೋ ಹೊತ್ತಿಗಾಗಲೇ ಮನೆ ಪಣ್ತ ಖಾಲಿಯಾಗಿ ಕೂಲಿಗೆ ಹೋಗಬೇಕಾಗಿತ್ತು.



ಸ್ವತಂತ್ರ ದಿನಾಚರಣೆಯಂದು ಗದ್ದೆ ನೆಟ್ಟಿಗೆ ರೆಡಿಮಾಡ್ತಿರಬೇಕಾದ್ರೆ ಆಳುಗಳೊಂದಿಗೆ ಗದ್ದೆಗೆ ಬಂದ ಕಾಡಾಶಾಸ್ತ್ರಿ 'ಗೌಡ, ಈ ವರ್ಷನಾದ್ರೂ ಬಿಟ್ಟುಕೊಡೋ, ಏನೂಂತ ದುಡಿತಿಯಾ. ಸಾವ್‌ಕಾರ್ ಮಲ್ಲೇ ಇದ್ದುಬಿಡು. ಅದೊಂಚೂರು ಜಮೀನು ಇಟ್ಕಂಡು ಏನ್ ಮಾಡ್ತಿಯಾ. ಇಲ್ಲಾಂದ್ರೆ ಗೊತ್ತಲ' ಎಂದಿದ್ದ. ಸಣಕಲಾಗಿದ್ದ ಪುಟ್ಟೇಗೌಡನನ್ನು ತಿನ್ನುವ ರೀತಿಯಲ್ಲಿ ಆಳುಗಳು ಕೆಕ್ಕರಿಸಿದ್ದರು.

ಅದೇ ಚಿಂತೆಯಲ್ಲಿ ಮನೆ ಕಡೆಬಂದ ಪುಟ್ಟೇಗೌಡ ಮುರುವಿನ ಒಲೆಗೆ ಹಾಕಿದ್ದ ಬೆಂಕಿಯ ಶಾಖಕ್ಕೆ ಕಂಬಳಿಯನ್ನು ಒಣಹಾಕಿದ. ಹೆಂಡತಿ ಜಾನಕಮ್ಮ ಗದ್ದೆಯಲ್ಲಿ ಮುರುಕೊಂಡು ಬಂದಿದ್ದ ಏಡಿಸಾರು, ಪನ್ನೀರಲು ಮರದಿಂದ ಉದುರಿಸಿಕೊಂಡು ಬಂದಿದ್ದ ಚಿಕಳಿ ಇರುವೆ ಚಟ್ನಿ ಮಾಡಿದ್ದರೂ ಊಟ ಮಾಡುವ ಮನಸ್ಸಾಗಲಿಲ್ಲ. ತಾನು ಮಾಡದಿದ್ದರೆ ಮಕ್ಕಳು ಊಟ ಮಾಡೋಲ್ಲ ಎಂದು ಏಡಿ ಸಾರು ಬಾಯಿಗೆ ಅನಿಸಿಕೊಂಡು, ಒಂದೆರೆಡು ತುತ್ತು ಗಂಜಿ ತಿಂದು ಅಡ್ಡಾಗಿದ್ದ.

ಜೀರುಂಡೆಯ ಡ್ರೊಯ್, ಡ್ರೊಯ್. ಕಪ್ಪೆಯ ಕ್ವೊಟರ್ ಶಬ್ದದ ಲಯಬದ್ಧತೆಗೆ ಅಲ್ಲೇ ಗೌಡರಿಗೆ ಕಣ್ಣು ಹತ್ತಿಸಿತ್ತು. ಅಷ್ಟರಲ್ಲೇ ಯಾರೋ ಬಾಗಿಲು ಬಡಿದು ಅಣ್ಣಾ, ಅಣ್ಣಾ ಎಂದು ಕೂಗಿದಂತಾಯಿತು. ಯಾರದು ಎಂದು ಕೂಗಿದ ಪುಟ್ಟೇಗೌಡ ಪಕ್ಕದಲ್ಲೇ ಇಟ್ಟುಕೊಂಡು ಮಲಗುತ್ತಿದ್ದ ಕತ್ತಿ ಹಾಗೂ ಬ್ಯಾಟರಿ ಮುಟ್ಟಿ ನೋಡಿದ. ಅವರೆಡೂ ತಮ್ಮ ಪಾಡಿಗೆ ತಾವು ಅಲ್ಲೇ ಮಲಗಿದ್ದವು ಆಮೇಲೆ ಅಣ್ಣಾ, ಅಣ್ಣಾ ಎಂಬ ಹೆಣ್ಣುದನಿ ಕೇಳಿತು. ಇದ್ಯಾರಪ್ಪ ಇಷ್ಟು ಅಪರ ರಾತ್ರೀಲಿ ಈ ಒಂಟಿಮನೆ ಹುಡಕ್ಕಂಡು ಬಂದೋರು ಎಂದು ಪ್ರಶ್ನೆ ಮೂಡಿದರೂ, ಕೇಡಿರಾಯನ ಆಳುಗಳಲ್ಲ ಎಂದು ಸಮಾಧಾನ ತಂದುಕೊಮಡು ಶೆಲ್ಲು ವೀಕಾಗಿ ಅಗಾಗ ಹತ್ತಿ ಆರುತ್ತಿದ್ದ ಕುರುಡು ಬ್ಯಾಟರಿಯನ್ನು ಮುಂದು ಮಾಡಿ ಬಾಗಿಲನ್ನು ಎಳೆದ. ಬ್ಯಾಟರಿ ಬಿಟ್ಟು ಯಾರು ಎಂದು.

ಐದಾರು ಮಂದಿಯ ತಂಡ ಎದುರಿಗೆ ನಿಂತಿತ್ತು. ಎಲ್ಲರೂ ಏಕಕಾಲದಲ್ಲಿ ಅಣ್ಣಾ ನಮಸ್ಕಾರ ಎಂದರು. ರೂಢಿಯಿರದಿದ್ದ ಗೌಡ ಎನು ಹೇಳಬೇಕೆಂದು ತೋಚದೆ ಕಕ್ಕಾಬಿಕ್ಕಿಯಾದ. ಯಾರ್ ಬೇಕು ಎಂದು ಪ್ರಶ್ನಿಸಿದ ಅಷ್ಟರಲ್ಲೇ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿ ಅಣ್ಣಾ ಒಳೋಬರಬಹುದಾ ಎಂದಿತು. ಹೊರಗಡೆ ಬಾಳಾ ಚಳಿ ಇರುವುದನ್ನು ಗಮನಿಸಿದ ಗೌಡ, ಬನ್ನಿ, ಬನ್ನಿ ನಾನು ಮರ್ತೆ ಬಿಟ್ಟೆ ಮಾರ್ರೆ ಎಂದು ಒಳಕರೆದು, ಕಂಬಳಿಯನ್ನು ನೆಲದ ಮೇಲೆ ಹಾಸಿ ಕುತ್ಕಳ್ಳಿ ಎಂದ.

ಹೊರಲಾರದ ಬ್ಯಾಗು, ಹೆಗಲ ಮೇಲೆ ನಾಡಕೋವಿ, ಕೈಯಲ್ಲೊಂದು ಬ್ಯಾಟರಿ ಹಿಡಿದಿದ್ದ ಗುಂಪು ಒಳಬಂದು ಕೂತಿತು.

ಹುಡುಗರಂತೆ ಕ್ರಾಪು ಮಾಡಿಕೊಂಡು, ಪ್ಯಾಂಟುಶರ್ಟು ಹಾಕಿಕೊಂಡಿದ್ದ ಸುಮಾರು ೩೦ ದಾಟಿದ ಯುವತಿಯೊಬ್ಬಳು ಮಾತಿಗೆ ಶುರುಮಾಡಿದಳು. 'ನಾನು ರಾಜೇಶ್ವರಿ ಅಂತ, ಸಂಘದವರು. ಗಿರಿಜನರನ್ನು ಒಕ್ಕಲೆಬ್ಬಿಸುವ ಸರ್ಕಾರದ ತೀರ್ಮಾನದ ವಿರುದ್ಧ ಜನರನ್ನು ಸಂಘಟಿಸುತ್ತಾ ಇದ್ದೀವಿ. ನಿಮ್ಗೆ ಕೇಡಿರಾಯ ಕಿರುಕುಳ ನೀಡುತ್ತಿದ್ದಾನೆ. ಅಂತ ಅಡಗಂದೂರಿನ ನರಸಿಂಹಯ್ಯ ಹೇಳಿದರು. ಅದನ್ನು ವಿಚಾರಿಸಿಕೊಂಡು ಹೋಗೋಣ ಅಂತ ಬಂದಿದ್ದೇವೆ' ಎಂದು ಸುಮ್ಮನಾದಳು.

ಹುಡುಗರಂತೆ ಕ್ರಾಪು ಮಾಡಿಕೊಂಡು, ಪ್ಯಾಂಟುಶರ್ಟು ಹಾಕಿಕೊಂಡಿದ್ದ ಸುಮಾರು ೩೦ ದಾಟಿದ ಯುವತಿಯೊಬ್ಬಳು ಮಾತಿಗೆ ಶುರುಮಾಡಿದಳು. 'ನಾನು ರಾಜೇಶ್ವರಿ ಅಂತ, ಸಂಘದವರು. ಗಿರಿಜನರನ್ನು ಒಕ್ಕಲೆಬ್ಬಿಸುವ ಸರ್ಕಾರದ ತೀರ್ಮಾನದ ವಿರುದ್ಧ ಜನರನ್ನು ಸಂಘಟಿಸುತ್ತಾ ಇದ್ದೀವಿ. ನಿಮ್ಗೆ ಕೇಡಿರಾಯ ಕಿರುಕುಳ ನೀಡುತ್ತಿದ್ದಾನೆ. ಅಂತ ಅಡಗಂದೂರಿನ ನರಸಿಂಹಯ್ಯ ಹೇಳಿದರು. ಅದನ್ನು ವಿಚಾರಿಸಿಕೊಂಡು ಹೋಗೋಣ ಅಂತ ಬಂದಿದ್ದೇವೆ' ಎಂದು ಸುಮ್ಮನಾದಳು.

ಎಲ್ಲರೂ ಒಟ್ಟಾಗಿ ಹೋರಾಡಿದ್ರೆ ಎಲ್ಲಾ ಸಮಸ್ಯೆಗೂ ಪರಿಹಾರವಿದೆ. ಸರ್ಕಾರ ಕೋರ್ಟ್ ನಂಬಿಕೊಡ್ರೆ ಏನೂ ಆಗಲ್ಲ. ನೀವು ಯಾರಿಗೂ ಹದರ್‍ಬೋದು ಬ್ಯಾಡ ಎಂದು ಮತ್ತೊಂದು ಧ್ವನಿ ಉಸುರಿತು.

ಯಾವ್ದೋ ಹೊಸ ದಿನಿಯನ್ನು ಅಪರಾತ್ರೀಲಿ ಕೇಳಿದ ಪುಟ್ಟೇಗೌಡನ ಹೆಂಡತಿ ಜಾನಕಮ್ಮ, ಅವರ ಮಗ ನಾಗಪ್ಪ, ಮಗಳು ಸಂಪಿಗೆ ಎದ್ದುಕೂತರು. ಲಾಟೀನ್ ಬೆಳಕಲ್ಲಿ ಸರಿಯಾಗಿ ಕಾಣದೇ ಇದ್ದ ಮುಖಗಳಿಂದ ಮಾತುಗಳು ಓತಪ್ರೋತವಾಗಿ ಹರಿದುಬರುತ್ತಿದ್ದವು. ಅಷ್ಟೊತ್ತಲ್ಲಿ ಊಟ ಮಾಡ್ತೀರಾ ಎಂದು ಕೇಳುವುದು ಸರಿಯಾಗೋಲ್ಲ ಎಂದುಕೊಂಡು, ಮೆತ್ತಗೆ ಅಡಿಗೆ ಮನೆ ಸೇರಿ ಒಲೆ ಹಚ್ಚಿದರು. ಬೆಳಿಗ್ಗೆ ಕಾಪಿಗೆ ಅಂತ ಇಟ್ಕಂಡಿದ್ದ ಹಾಲಿನಲ್ಲೇ ಬೆಲ್ಲದ ಕಾಪಿ ಮಾಡಲು ಮುಂದಾದರು. ಅವರ ಒಳಸೇರಿದ್ದನ್ನು ಕಂಡ ಗುಂಪಿನಲ್ಲಿದ್ದ ಇಬ್ಬರು ಹೆಣ್ಣು ಮಕ್ಕಳು ಒಳಸೇರಿ ಉಭಯ ಕುಶಲೋಪರಿ ವಿಚಾರಿಸಿದರು. ತವರುಮನೆ, ಮಕ್ಕಳು, ಸೋದರರು, ನಾದಿನಿಯರು, ಗದ್ದೆ ಕೆಲಸ, ಸಾರ ಎಂತದು ಎಲ್ಲವನ್ನೂ ಕೇಳಿದರು. ಆತ್ಮೀಯರಂತೆ ಕಷ್ಟ ಸುಖ ವಿಚಾರಿಸಿದರು.ಮಗಳು ಸಂಪಿಗೆಯನ್ನು ಎತ್ತಿಕೊಂಡು ಮುದ್ದಾಡಿದರು. ಕಾಪಿ ಬೆಂದಿದ್ದರಿಂದ ಹೊರಬಂದ ಜಾನಕಮ್ಮ ಎಲ್ಲರಿಗೂ ಕಾಪಿ ನೀಡಿ ಗೋಡೆಯನ್ನು ಬೆನ್ನಾಗಿಸಿಕೊಂಡರು.

ಸಂಘದ ತಂಡ ಪುಟ್ಟೇಗೌಡರಿಂದ ಎಲ್ಲ ಮಾಹಿತಿ ಪಡೆಯಿತು. ಊರಿನ ಜಮೀನು ಕಾಣಿ, ಕೇಡಿರಾಯನ ಕಿರುಕುಳ, ಅಕ್ರಮಗಳು, ಕೂಲಿಕಾರರಿಗೆ ಕೊಡುವ ತೊಂದರೆ ಎಲ್ಲವನ್ನೂ ಇಡೀ ತಂಡದ ಸದಸ್ಯರು ಕೇಳಿಸಿಕೊಂಡರೆ, ಒಬ್ಬಾಕೆ ಅದನ್ನು ಬರೆದುಕೊಳ್ಳುತ್ತಿದ್ದಳು. ಹೊತ್ತು ಮೂಡುವ ಮೊದಲು ಮನೆಬಿಡಬೇಕೆಂಬ ತರಾತುರಿಯಲ್ಲಿದ್ದ ಸಂಘದ ಸದಸ್ಯರು ತಾವಿನ್ನು ಬರುತ್ತೇವೆ ಎಂದು ಹೊರಟರು. ಎಲ್ಲರನ್ನೂ ಒಟ್ಗೆ ಸೇರಿಸಿ ಮೀಟಿಂಗ್ ಮಾಡೋಣ. ಕೇಡಿರಾಯನ ಬೆದರಿಕೆಗೆ ಎದೆಗುಂದಬೇಡಿ. ಎಂದು ಹೇಳಿ ಹೊಸಿಲು ದಾಟಿದರು.

ಬಿಂದುಂಬಿಗಳು ಮರವನ್ನು ಪಳಪಳನೆ ಸಿಂಗರಿಸಿದ ಬೆಳಕಲ್ಲೇ, ಮುಷ್ಟಿಯನ್ನು ಎತ್ತಿಹಿಡಿದ ಸಂಘದ ಸದಸ್ಯರು 'ಲಾಲ್ ಸಲಾಮ್' ಎಂದರು. ಬಾಗಿಲಿಗೆ ಬಂದು ನಿಂತಿದ್ದ ಸಂಪಿಗೆ ಸಂಘದವರನ್ನು ಅನುಕರಿಸಿ ಲಾಲ್ ಸಲಾಮ್ ಎಂದಳು.

ಅದೇ ರೀತಿ ಕೇಡಿರಾಯನ ಎಸ್ಟೇಟಿನ ಲೈನ್ ಮನೆಗೂ ಭೇಟಿ ನೀಡಿದ ಸಂಘದ ಸದಸ್ಯರು ರಾಯನ ಪೀಡನೆಗೆ ಒಳಗಾದ ಹವರನ್ನು ಭೇಟಿ ಮಾಡಿದರು. ಅಂದು ರಾತ್ರಿಯಾಗುವವರೆಗೂ ಲೈನ್‌ನಲ್ಲಿದ್ದ ಚೀಂಕ್ರನ ಮನೆಯಲ್ಲಿಯೇ ಮಲಗಿ ವಿಶ್ರಾಂತಿ ಪಡೆದರು. ಧಣೇರ್‍ರಿಂದ ತೊಂದರೆಗೊಳಗಾದ ಎಲ್ಲಾ ಮಂದಿಯನ್ನು ಸಂಘದಲ್ಲಿದ್ದ ಆರು ಮಂದಿಯಲ್ಲಿ ಇಬ್ಬರಿಬ್ಬರು ತಂಡ ಮಾಡಿಕೊಂಡು ಭೇಟಿ ಮಾಡಿದರು.

ಹೋರಾಟದ ಅಗತ್ಯತೆ, ಜಮೀನ್ದಾರರ ದರ್ಪ, ಸರ್ಕಾರದ ಮೋಸ, ಚುನಾವಣೆಯೆಂಬ ನಾಟಕ ಎಲ್ಲವನ್ನೂ ಅವರವರ ಭಾಷೆಯಲ್ಲಿಯೇ ವಿವರಿಸಿದರು. ಅವರಿವರ ಮನೆಯ ಅಡಿಗೆ ಸೇರಿಸಿ ಊಟ ಮಾಡಿದರು.

ಕೇಡಿರಾಯನ ಉಪಟಳವನ್ನು ಹಲ್ಲು ಕಚ್ಚಿಕೊಂಡು ಸಹಿಸಿ ಸಾಕಾಗಿದ್ದ ಲೈನ್‌ನಲ್ಲಿ ಮಡುಗಟ್ಟಿದ್ದ ಆಕ್ರೋಶ, ಹೆಪ್ಪುಗಟ್ಟಿದ್ದ ಸಿಟ್ಟು ಹೊರಹಾಕಲು ಅವಕಾಶವೊಂದು ಒದಗಿಬಂದಿತ್ತು. ಹಾಗಾಗಿಯೇ ಅಂದು ಭಗವತಿ ಕಾಡಿನಲ್ಲಿ ಸಂಘದವರು ಹಮ್ಮಿಕೊಂಡ ಬಹಿರಂಗ ಸಭೆಗೆ ಅಂದು ಸಂತೆಯ ರಜೆಯಿದ್ದುದರಿಂದ ಬಹಳ ಮಂದಿಯೇ ಸೇರಿದ್ದರು. ಎಸ್ಟೇಟ್ ಕೂಲಿಕಾರ್ಮಿಕರ–ಸಣ್ಣ ರೈತರ ಸಂಘದ ಕೆಂಪುಬ್ಯಾನರ್ ರಾರಾಜಿಸಿತ್ತು. ಅಲ್ಲಲ್ಲಿ ಕೆಂಬಾವುಟಗಳು ಹಾರಾಡುತ್ತಿದ್ದವು. ಇತ್ತೀಚೆಗಷ್ಟೇ ಸಂಘದ ಸಂಪರ್ಕಕ್ಕೆ ಬಂದಿದ್ದ ಕೆಲವು ಸ್ಥಳೀಯ ಹುಡುಗರು 'ಓ ಅರುಣ ಪತಾಕೆಯೇ ಸ್ವೀಕರಿಸು ರೆಡ್ ಸೆಲ್ಯೂಟ್, ಶೋಷಿತರ ಚೇತನವೇ ಸವೀಕರಿಸಿ ರೆಡ್ ಸೆಲ್ಯೂಟ್' ಹಾಡಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅರುಣ್, ಮಲೆನಾಡಿನ ಪರಿಸ್ಥಿತಿ, ಕಾಫಿ ಎಸ್ಟೇಟಿನ ಕಾರ್ಮಿಕರ ಬವಣೆ, ಜಮೀನ್ದಾರರಿಗೆ ಸಿಗುವ ಲಾಭ, ಕಾಫಿಯ ಮಾರುಕಟ್ಟೆ, ಸ್ಥಳೀಯ ದೌರ್ಜನ್ಯದ ಪರಿಸ್ಥಿತಿ ವಿವರಿಸಿದ, 'ಬಿಹಾರದ ಜೆಹನಾಬಾದ್ ಜಿಲ್ಲೆಯ ಮನತುವಿನಲ್ಲಿದ್ದ ರಘುವಂಶ ಬಿಸ್ವಾಸ್ ಎಂಬ ನರಭಕ್ಷಕ ಜಮೀನ್ದಾರ್ ಕಾರ್ಮಿಕರನ್ನು ಹುರಿದು ತಿನ್ನುತ್ತಿದ್ದ. ಮೊಸಳೆಗಳನ್ನು ಮನೆಯ ಆವರಣದ ಬಾವಿಯಲ್ಲಿ ಸಾಕಿದ್ದ ಬಿಸ್ವಾಸ್ ತನ್ನ ಮಾತುಕೇಳಿದ ಜನರನ್ನು ಬಾವಿಗೆ ಎಸೆದು, ಮೊಸಳೆ ಕಿತ್ತುತಿನ್ನುವುದನ್ನು ನೋಡಿ ಸಂತೋಷಪಡುತ್ತಿದ್ದ, ಸುತ್ತಲ ನೂರು ಹಳ್ಳಿಗಳು ಅವನ ಆಳ್ವಿಕೆಗೆ ಒಳಪಟ್ಟಿದ್ದವು. ಯಾರೂ ತಲೆ ಎತ್ತಿ ಓಡಾಡುವ ಪರಿಸ್ಥಿತಿಯಿರಲಿಲ್ಲ. ಕೂಲಿಯಂತೂ ಕೇಳುವಂತಿರಲಿಲ್ಲ. ಅಂತಹ ಪ್ರದೇಶ ಹುಟ್ಟಿಕೊಂಡ ಸಂಘ ಅವನ ವಿರುದ್ಧ ಹೋರಾಟ ರೂಪಿಸಿತು. ಬಂಡೆದ್ದ ಕೂಲಿಕಾರ್ಮಿಕರು ರಾತ್ರೋರಾತ್ರಿ ಅವನ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ಧ್ವಂಸ ಮಾಡಿದರು. ಭೂಮಾಲೀಕತೆಯ ಸಂಕೇತದಂತಿದ್ದ ಕೋಟೆಯನ್ನು ಕೆಡವಿ ಅದನ್ನು ಹತ್ತಿ ಕುಣಿದಾಡಿದರು. ಸಿಂಹಾಸನದಂತೆ ಚೇರ್‌ನ ಮೇಲೆ ನಿಂತು ಉಚ್ಚೆಹೊಯ್ದರು. ಮೊಸಳೆಯನ್ನು ಸಾಹಿಸಿದರು. ಭೂಮಾಲೀಕ ಬಿಸ್ವಾಸ್ ಪೇಟೆಗೆ ಓಡಿಹೋದ. ಅವನ ಜಮೀನು ಹಂಚಿಕೊಂಡ ಕೂಲಿಕಾರ್ಮಿಕರು ಎಲ್ಲರೂ ರೈತರಾದರು. ಇದೇ ರೀತಿ ಹೋರಾಡಿದರೆ ಇಲ್ಲೂ ಗೆಲುವು ಸಾಧ್ಯ, ಕ್ರಾಂತಿ ಚಿರಾಯುವಾಗಲಿ' ಎಂದು ಮಾತು ನಿಲ್ಲಿಸಿದ.

ಆನಂತರ ಸಂಘದ ಸದಸ್ಯರು ಹಾಡಿದ ಹಾಡಿಗೆ ಎಲ್ಲರೂ ಧ್ವನಿ ಸೇರಿದರು.

ಗುಡ್ಡಕ್ಕೆ ಬೆಂಕಿ ಹಚ್ಚೀದಿ ಗುಡುಗ ಸಿಡಿಲ ಎಬ್ಬಿಸಿದಿ
ಕೇಡಿರಾಯ ಓಡಬ್ಯಾಡ ನಿಲ್ಲೋ ನಿಲ್ಲು...

ಸಭೆಯಲ್ಲಿ ಎಲ್ಲರೂ ಮಾತನಾಡಬಹುದೆಂದು ಸಂಘದವರು ಕೋರಿದರು. ಆದರೆ ಹೊರಗಿನ ಜನರೊಂದಿಗೆ ಮಾತಾಡಿಯೇ ಗೊತ್ತಿಲ್ಲದ ಲೈನ್‌ನ ಜನ ಮಾತಾಡಲೇ ಇಲ್ಲ. ಪುಟ್ಟೇಗೌಡ, ಚೀಂಕ್ರ, ಚಂದು ಮಾತಾಡಿದರು. ಕಡೆಗೆ ಕೇಡಿರಾಯನನ್ನು ಪ್ರಜಾಪಂಚಾಯ್ತಿಗೆ ಕರೆಸಿ ವಿಚಾರಣೆ ಮಾಡುವುದೆಂದು ಸಭೆ ನಿರ್ಣಯಿಸಿತು.

ಅಂದೇ ರಾತ್ರಿ ಕೇಡಿರಾಯನ ಮನೆಯ ಕದತಟ್ಟಿದ ಸಂಘದ ಸದಸ್ಯರು, ಆತನಿಗೆ ಎರಡು ತಪರಾಕಿ ನೀಡಿದರು. ಏನು ಎಂತ ಎಂದು ಕೇಳುವಷ್ಟರಲ್ಲಿ ನಿನ್ನ ಕೇಡಿತನಗಳು ನಮಗೆ ಗೊತ್ತಿವೆ. ಎಲ್ಲಾ ಕರಪತ್ರ ಹಾಕುತ್ತೇವೆ. ನಾವು ಕರೆದಾಗ ಪ್ರಜಾಕೋರ್ಟ್‌ಗೆ ಬರಬೇಕು, ನಾವು ನ್ಯಾಯ ಮಾಡುತ್ತೇವೆ ಎಂದು ವಿಚಾರಿಸಿದರು. ಗೌಡರ ಗೋಡೆಯಲ್ಲಿ ನೇತಾಡುತ್ತಿದ್ದ ಡಬ್ಬಲ್ ಬ್ಯಾರಲ್ ಗನ್ ಸುಮ್ಮನೆ ನಗುತ್ತಿತ್ತು. ಅದನ್ನು ಎತ್ತಿಕೊಂಡ ಸಂಘದವರು ಮರುಮಾತಾಡದೇ ಕತ್ತಲಲ್ಲಿ ಲೀನವಾದರು. ಅಂದು ಚಳಿಜ್ವರ ಬಂದು ಶಿವಮೊಗ್ಗದ ಆಸ್ಪತ್ರೆಗೆ ಸೇರಿದ ಕೇಡಿರಾಯ ಮತ್ತೆ ಎಸ್ಟೇಟ್ ಕಡೆ ತಲೆಹಾಕಿಯೂ ಮಲಗಲಿಲ್ಲ. ಶಿವಮೊಗ್ಗದಿಂದಲೇ ಜಮೀನ್ದಾರಿಕೆ ನಡೆಸುತ್ತಿದ್ದ.

ಪಣಿಯಮ್ಮ ತೀರಿಕೊಂಡಾಗ ಪೊಲೀಸರ ಬೆಂಗಾವಲಿನಲ್ಲಿ ಎಸ್ಟೇಟ್‌ಗೆ ಧಾವಿಸಿದ್ದ ಕೇಡಿರಾಯ ಆಕೆಯ ಸಂಸ್ಕಾರ ನೆರವೇರಿಸುವವರೆಗೆ ಇದ್ದ. ದಮ್ಮು ಜಾಸ್ತಿಯಾದಾಗ ಶಿವಮೊಗ್ಗಕ್ಕೆ ಹೋಗಲು ಕಾರಿನಲ್ಲಿಯೇ ಹೊರಟ. ಗುಲಾಬಿಯ ತಮ್ಮ ಶೇಷ ತನ್ನ ಸರೀಕರೊಂದಿಗೆ ಸೇರಿಕೊಂಡು ಕಾರುಹೋಗುವ ದಾರಿಯಲ್ಲಿ ನಿಂತು ಗುಡ್ಡಕ್ಕೆ ಬೆಂಕಿ ಹಚ್ಚೀದಿ ಗುಡುಗ ಸಿಡಿಲ ಎಬ್ಬಿಸಿದಿ, ಕೇಡಿರಾಯ ಓಡಬ್ಯಾಡ ನಿಲ್ಲೋ ನಿಲ್ಲು' ಎಂದು ಹಾಡುತ್ತಿದ್ದ.

ದುರಸ್ತಿ ಕಾಣದ ಕಲ್ಲು ಗೂಟರು ರಸ್ತೆಯಲ್ಲಿ ನಿಧಾನವಾಗಿ ಚಲಿಸುತ್ತಿದ್ದ ಕಾರಿನ ಕಿಟಕಿಯಿಂದ, ಕೆಪ್ಪಾಗಿದ್ದ ಕೇಡಿರಾಯನ ಕಿವಿಗೂ ಆ ಹಾಡಿನ ಧ್ವನಿ ಅಪ್ಪಳಿಸುತ್ತಿತ್ತು. ಕಾರು ಮುಂದಕ್ಕೆ ಚಲಿಸುತ್ತಿದ್ದಂತೆ ಕಾಫಿಗಿಡ, ಅಡಿಕೆ, ಕಿತ್ತಾಳೆ, ಹಾಲವಾಣ, ಸಿಲ್ವರ್ ಮರಕ್ಕೆ ಹಬ್ಬಿದ್ದ ಮೆಣಸಿನ ಬಳ್ಳಿಗಳೂ ಅದೇ ಹಾಡನ್ನು ಅನುರಣನ ಮಾಡುತ್ತಿರುವಂತೆ ಕೇಳಿಸಿತು. ಕೇಡಿರಾಯ ಎರಡೂ ಕೈಯಿಂದ ಕಿವಿಯನ್ನು ಮುಚ್ಚಿಕೊಂಡ. □

ಕಟ್ಟುಪಾಡುಗಳಿಂದ ಮುಕ್ತಿ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಬ್ರಾಹ್ಮಣ ನಿರೂಪಿತ ಚರಿತ್ರೆಯಿಂದಾಗಿ ದಲಿತರು ವರ್ಣವ್ಯವಸ್ಥೆಯ ಗ್ರಾಮ ಸಮಾಜದ ಅಂಚಿನಲ್ಲಿ ಪ್ರತ್ಯೇಕವಾಗಿ ಬದುಕುತ್ತಿದ್ದಾರೆ. ಎಲ್ಲಿಯವರೆಗೆ ಹೀಗೆ ಜೀವಿಸುವುದು?

ಬ್ರಾಹ್ಮಣ್ಯ ಲಿಖಿತ ಮೌಲ್ಯ ವ್ಯವಸ್ಥೆಯಿಂದ ಶಾಪಗ್ರಸ್ತರಾಗಿರುವ ದಲಿತರೊಡನೆ ವಿವಾಹದ ಮಾತುಬಿಡಿ, ಸಹಭೋಜನವನ್ನು ಸಹ ಯಾರೂ ಮಾಡುವಂತಿಲ್ಲ. ಇಂಥ ಮೌಲ್ಯವ್ಯವಸ್ಥೆ ಎಲ್ಲೀ ತನಕ?

ಬ್ರಾಹ್ಮಣ ನಿರ್ದೇಶಿತ ರಾಜಕೀಯ ವ್ಯವಸ್ಥೆಯಲ್ಲಿ ಛಿದ್ರಗೊಂಡಿರುವ ದಲಿತರು ಸಮಾಜದಲ್ಲಿ ನಾಯಕತ್ವವನ್ನು ವಹಿಸುವಂತಿಲ್ಲ. ಇಂಥ ವ್ಯವಸ್ಥೆ ಎಲ್ಲೀ ತನಕ ಇರಬೇಕು?

ಅಮೆರಿಕಾದ ವರ್ಣಬೇಧ ಗಲಭೆಯ ಕುರಿತು ನೀಡಿರುವ ಕೆರ್ನರ್ ಸಮಿತಿಯ ವರದಿಯ ಪರಿಭಾಷೆಯನ್ನು ಬಳಸಿ ಹೇಳುವುದಾದರೆ ದಲಿತರೆಂದರೆ 'ಪ್ರತ್ಯೇಕ ಮತ್ತು ಅಸಮಾನರು'. ಹೀಗೆ ದಲಿತರು ಎಲ್ಲಿಯವರೆಗೆ ಸಾಗುವುದು?

ಈ ಎಲ್ಲಾ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧಗಳು ಅಥವಾ ಒತ್ತಡಗಳ ನಡುವೆಯೂ ಸ್ವತಃ ಬ್ರಾಹ್ಮಣನೇ ದಲಿತನೆಡೆಗೆ ಸಾಗುವುದೆಂದರೆ?

ಈ ಎಲ್ಲಾ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧಗಳು ಅಥವಾ ಒತ್ತಡಗಳ ನಡುವೆಯೂ ಸ್ವತಃ ಬ್ರಾಹ್ಮಣನೇ ದಲಿತನ ನಾಯಕತ್ವವನ್ನು ಒಪ್ಪಿಕೊಳ್ಳುವುದೆಂದರೆ?

ಈ ಎಲ್ಲಾ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧಗಳು ಅಥವಾ ಒತ್ತಡಗಳ ನಡುವೆಯೂ ಸ್ವತಃ ಬ್ರಾಹ್ಮಣನೇ ದಲಿತನೆಡೆಗೆ ಸಾಗಿ ಗೌರವದಿಂದ ಆತನ ಪಾದಕ್ಕೆರಗುವುದೆಂದರೆ?

ಈ ಎಲ್ಲಾ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧಗಳು ಅಥವಾ ಒತ್ತಡಗಳ ನಡುವೆಯೂ ಸ್ವತಃ ಬ್ರಾಹ್ಮಣನೇ ದಲಿತನ ಬಗ್ಗೆ ಹೊಗಳು ಭಟ್ಟನಾದರೆ?

ಉತ್ತರ ಪ್ರದೇಶದಲ್ಲಿ ಇತ್ತೀಚೆಗಷ್ಟೆ ಮುಗಿದ ಚುನಾವಣೆ ನಂತರ ಈ ಎಲ್ಲಾ ಸಂಗತಿಗಳು ನಡೆದಿವೆ ಎಂದರೆ ನಂಬಲಾದೀತೆ. ಎಲ್ಲಾ ಬ್ರಾಹ್ಮಣರು ಆ ರೀತಿ ಮಾಡುತ್ತಿರುವರೇ ಎಂದು ಯಾರಾದರೂ ಕೇಳಬಹುದಲ್ಲವೇ? ಖಂಡಿತವಾಗಿಯೂ ಇಲ್ಲ. ಹೀಗಿದ್ದರೂ ಅವರಲ್ಲಿ ಒಂದು ಘಟಕವಾದರೂ ಮಾಡುತ್ತಿದೆಯಂದರೆ ಅದೊಂದು ಭಾರತದಲ್ಲಿ ನಡೆಯುತ್ತಿರುವ ಬಹು ದೊಡ್ಡ ಸಾಮಾಜಿಕ ಬದಲಾವಣೆಯೇ ಸರಿ.

ಹಾಗಾದರೆ, ಗ್ರಾಮೀಣ ಪ್ರದೇಶದಲ್ಲಿರುವ ಬ್ರಾಹ್ಮಣನೊಬ್ಬ ದಲಿತನೋರ್ವನ ಕುಟುಂಬವೊಂದರಲ್ಲಿ ಭೋಜನ ಮಾಡಿದಾಗ ಆತನ ಕುಟುಂಬದ ಗೌರವ ಹೆಚ್ಚಾಗುತ್ತದೆಯೇ ಅಥವಾ ಕಮ್ಮಿಯಾಗುತ್ತದೆಯೇ?

ಆ ಗ್ರಾಮದಲ್ಲಿರುವ ಬ್ರಾಹ್ಮಣೇತರರು ಆ ಬ್ರಾಹ್ಮಣರು ಹೋಗುವ ಕುಟುಂಬವನ್ನು ಬಹಿಷ್ಕರಿಸುವರೇ? ಅಥವಾ ಅವರನ್ನೊಮ್ಮೆ ಆಹ್ವಾನಿಸಿದಲ್ಲಿ ಆ ದಲಿತ ಕುಟುಂಬದೊಡನೆ ಸಹ ಭೋಜನ ಮಾಡುವರೇ? ಇದಕ್ಕೆ ಉತ್ತರಿಸಲು ಸಮಾಜಶಾಸ್ತ್ರಜ್ಞರಾಗಿರಬೇಕಾಗಿಲ್ಲ.

ನಾವು ಗಮನಿಸಬೇಕಾದ ಸಂಗತಿಯೊಂದಿದೆ–ಅಂಥ ರೀತಿಯ ಸಾಮಾಜಿಕ ಸನ್ನಿವೇಶವನ್ನು ಕ್ರಾಂತಿ ಅಥವಾ ಪ್ರತಿಕ್ರಾಂತಿ ಎಂದು ಪರಿಭಾವಿಸಬಹುದೇ?

ಬ್ರಾಹ್ಮಣರ ವಿರುದ್ಧ ಕಾರಿರುವ ಎಲ್ಲಾ ದ್ವೇಷವನ್ನು ಅರಗಿಸಿಕೊಳ್ಳುವುದರ ಹೊರತು ಪಡಿಸಿಯೂ ಹಾಗೂ ಅವರದ್ದೇ ಆದ ಸಾಮಾಜಿಕ ಕಟ್ಟುಪಾಡುಗಳ ಹೊರತಾಗಿಯೂ ಅವರು ಸಮಾಜದಲ್ಲಿ ಒಂದು ಸಕಾರಾತ್ಮಕ ಕೇಂದ್ರಬಿಂದುವಾಗಿಯೇ ಉಳಿಯುತ್ತಾರೆ. ಈ ಬ್ರಾಹ್ಮಣ ಶಕ್ತಿಯನ್ನು ದಲಿತರಿಗಿಂತಲೂ ಹೆಚ್ಚಾಗಿ ಬುದ್ಧಿಹೀನರಂತಿರುವ ಶೂದ್ರರು ಅರ್ಥಮಾಡಿಕೊಂಡಿದ್ದಾರೆ.

ಬ್ರಾಹ್ಮಣೇತರ ಚಳುವಳಿಗೆ ಹೆಸರಾಗಿರುವ ನಾಡಿನಲ್ಲಿ ಬ್ರಾಹ್ಮಣರ ನೇತೃತ್ವದಲ್ಲಿದ್ದ ದೇವಸ್ಥಾನಗಳೆಲ್ಲವೂ ಗೃಹಕೈಗಾರಿಕಾ ಕೊಠಡಿಗಳಾಗಿ ಪರಿವರ್ತನೆಯಾಗಿವೆ. ಅಲ್ಲಿನ ಭಕ್ತಾದಿಗಳೆಲ್ಲರೂ ಸಹ ಬ್ರಾಹ್ಮಣರ ವಿರುದ್ಧ ಹೋರಾಟಮಾಡಿದವರೇ ಆಗಿದ್ದಾರೆ. ಶೂದ್ರ/ಒಬಿಸಿ ಪ್ರತಿರೋಧದ ಸಂಕೇತವಾಗಿರುವ ಕರುಣಾನಿಧಿ ಮನೆಗೆ ಶಂಕರಾಚಾರ್ಯ ಭೇಟಿ ನೀಡಿದಾಗ, ಮನೆಯವರೆಲ್ಲಾ ಆತನ ಕಾಲಿಗೆ ಸಾಷ್ಟಾಂಗಬೀಳುತ್ತಾರೆ.

ಅದೇ ರೀತಿಯಲ್ಲಿ ಉತ್ತರಭಾರತದಲ್ಲೂ ಬ್ರಾಹ್ಮಣರಿಗಿಂತಲೂ ಹೆಚ್ಚಾಗಿ, ಶೂದ್ರ/ಒಬಿಸಿ ಪ್ರತಿರೋಧದ ಸಂಕೇತವಾಗಿರುವ ಲಾಲು ಯಾದವ್ ಹಾಗೂ ಮುಲಾಯಂಸಿಂಗ್ ಬ್ರಾಹ್ಮಣನ ಕಾಲಿಗೆರಗುವ ಸ್ನೇಹಿತರಾಗಿದ್ದಾರೆ. ಅಲ್ಲದೆ ಮುಸ್ಲಿಂ ಮೌಲ್ವಿಗಳು ಮತ್ತು ಕ್ರೈಸ್ತ ಪಾದ್ರಿಗಳು ಸಹ ಬ್ರಾಹ್ಮಣರನ್ನು ಗೌರವದಿಂದ ಕಾಣುತ್ತಾರೆ.

ಯಾವಾಗ ಸಾಮಾಜಿಕ ಮಾನ್ಯತೆಯ ಪ್ರಶ್ನೆ ಬರುತ್ತದೋ ಆಗ ಎಲ್ಲಾ ಜಾತಿಯವರು ಮತ್ತು ಧಾರ್ಮಿಕ ಪಂಗಡಗಳು ಬ್ರಾಹ್ಮಣರ ಆಶೀರ್ವಾದ ಬೇಡುತ್ತಾರೆ. ಹೀಗಿರುವಾಗ ಬ್ರಾಹ್ಮಣರ ವಿರುದ್ಧ ಅವರು ಹೋರಾಡುವಂತೆ ಪ್ರಚೋದನೆ ನೀಡುತ್ತಿದ್ದಾರಲ್ಲವೇ.

ಇಂದು ಬ್ರಾಹ್ಮಣರು ಮಾಯಾವತಿಯ ಪಾದಮುಟ್ಟಿ ನಮಸ್ಕರಿಸುತ್ತಿದ್ದಾರೆ. ಸಾಂಸ್ಕೃತಿಕವಾಗಿ ಆಘಾತಕ್ಕೊಳಗಾಗಿರುವ ಎಲೀಟ್ ಬ್ರಾಹ್ಮಣರು, ಮಾಯಾವತಿ ಈ ಹೊಸ ಮಾದರಿಯ ಬ್ರಾಹ್ಮಣ್ಯವನ್ನು ಆಚರಿಸುತ್ತಿದ್ದಾಳೆಂದು ದೂರುತ್ತಿದ್ದಾರೆ.

ಪಾದಮುಟ್ಟಿ ನಮಸ್ಕರಿಸುವುದೆಂದರೆ ಅದೊಂದು ಕೆಟ್ಟ ರೀತಿಯ ಗೌರವದ ಸಂಕೇತವೇ ಸರಿ. ಈ ಹಿಂದೆ ಅಂಥ ಗೌರವವನ್ನು ಬ್ರಾಹ್ಮಣರು ಅಥವಾ ದ್ವಿಜರಾದವರು ಮಾತ್ರ ಪಡೆಯುತ್ತಿದ್ದರು. ಆದರೀಗ ಅದೇ ಗೌರವದ ಮಾದರಿ ಇದೆಯಾದರೂ ಅಲ್ಲಿ ಅಂಥ ಗೌರವಪಡೆಯುವ ವ್ಯಕ್ತಿಗಳು ಮಾತ್ರ ಬದಲಾಗಿದ್ದಾರೆ.

ಈಗ ಬ್ರಾಹ್ಮಣರು ದಲಿತರ ಪಾದಕ್ಕೆರಗುತ್ತಿದ್ದಾರೆ. ಈ ಬದಲಾದ ಸಾಮಾಜಿಕ ಸನ್ನಿವೇಶ ಬ್ರಾಹ್ಮಣ್ಯದ ಮುಂದುವರೆದ ರೂಪವೇ ಅಥವಾ ಬ್ರಾಹ್ಮಣ್ಯಕ್ಕೆ ಪ್ರತಿಯಾದ ಬಂಡಾಯವೇ? ಬ್ರಾಹ್ಮಣರಿಂದ ಪಾದ ಮುಟ್ಟಿಸಿಕೊಂಡ ದಲಿತರ ಘನತೆ ಹಾಳಾಗುವುದೇ?

ಅಥವಾ ಆತ ಒಬ್ಬ ಪ್ರಸಿದ್ಧ ವ್ಯಕ್ತಿಯಾಗಿ ಹೊರಹೊಮ್ಮುತ್ತಾನೆಯೇ? ಯುಗಗಳಿಂದಲೂ ದಲಿತರು ಸಾಮಾಜಿಕ ಕಟ್ಟುಪಾಡುಗಳಿಗೆ ಬಲಿಯಾಗಿದ್ದಾರೆ. ಆದ್ದರಿಂದ

ಇಂದು ಬ್ರಾಹ್ಮಣರು ಮಾಯಾವತಿಯ ಪಾದ ಮುಟ್ಟಿ ನಮಸ್ಕರಿಸುತ್ತಿದ್ದಾರೆ. ಸಾಂಸ್ಕೃತಿಕವಾಗಿ ಆಘಾತಕ್ಕೊಳಗಾಗಿರುವ ಎಲೀಟ್ ಬ್ರಾಹ್ಮಣರು, ಮಾಯಾವತಿ ಈ ಹೊಸ ಮಾದರಿಯ ಬ್ರಾಹ್ಮಣ್ಯವನ್ನು ಆಚರಿಸುತ್ತಿದ್ದಾರೆಂದು ದೂರುತ್ತಿದ್ದಾರೆ. ಪಾದಮುಟ್ಟಿ ನಮಸ್ಕರಿಸುವುದೆಂದರೆ ಅದೊಂದು ಕೆಟ್ಟ ರೀತಿಯ ಗೌರವದ ಸಂಕೇತವೇ ಸರಿ. ಈ ಹಿಂದೆ ಅಂಥ ಗೌರವವನ್ನು ಬ್ರಾಹ್ಮಣರು ಅಥವಾ ದ್ವಿಜರಾದವರು ಮಾತ್ರ ಪಡೆಯುತ್ತಿದ್ದರು. ಆದರೀಗ ಅದೇ ಗೌರವದ ಮಾದರಿ ಇದೆಯಾದರೂ ಅಲ್ಲಿ ಅಂಥ ಗೌರವ ಪಡೆಯುವ ವ್ಯಕ್ತಿಗಳು ಮಾತ್ರ ಬದಲಾಗಿದ್ದಾರೆ. ಈಗ ಬ್ರಾಹ್ಮಣರು ದಲಿತರ ಪಾದಕ್ಕೆರಗುತ್ತಿದ್ದಾರೆ. ಈ ಬದಲಾದ ಸಾಮಾಜಿಕ ಸನ್ನಿವೇಶ ಬ್ರಾಹ್ಮಣ್ಯದ ಮುಂದುವರೆದ ರೂಪವೇ ಅಥವಾ ಬ್ರಾಹ್ಮಣ್ಯಕ್ಕೆ ಪ್ರತಿಯಾದ ಬಂಡಾಯವೇ? ಬ್ರಾಹ್ಮಣರಿಂದ ಪಾದ ಮುಟ್ಟಿಸಿಕೊಂಡ ದಲಿತರ ಘನತೆ ಹೆಚ್ಚಾಗುವುದೇ?

ಅನು : ಡೊಮಿನಿಕ್. ಡಿ

ಬ್ರಾಹ್ಮಣರು ದಲಿತರ ಮನೆಗಳಲ್ಲಿ ಸಹಭೋಜನ ಮಾಡುವ ಮೂಲಕವೇ ಅವರಿಂದಲೇ ರೂಪುಗೊಂಡ ಈ ಸಾಮಾಜಿಕ ಕಟ್ಟುಪಾಡುಗಳು ಮುಕ್ತಿ ಕಾಣಬೇಕಾಗಿವೆ.

ಸುಧಾರಕರು ಬಂದರು. ಸುಧಾರಕರು ಹೋದರು. ಆದರೆ ಸಾಮಾಜಿಕ ಕಟ್ಟುಪಾಡುಗಳು ಮಾತ್ರ ದಲಿತರ ವಿರುದ್ಧವೇ ನಿಂತುಬಿಟ್ಟಿವೆ.

ದಲಿತ–ಬ್ರಾಹ್ಮಣ ಸಿದ್ಧಾಂತದ ಮೂಲಕ ಮಾಯಾವತಿಯು ಆ ಗೋಪೂಜಾ ಭೂಮಿಯಲ್ಲಿ ಹೊಸ ಸುಧಾರಣೆಯನ್ನು ಆರಂಭಿಸಿದ್ದಾಳೆ. ಬ್ರಾಹ್ಮಣರು ಆ ಸುಧಾರಣೆಯನ್ನು ಒಪ್ಪಿಕೊಂಡಿದ್ದು, ಉಳಿದವರೂ ಸಹ ಅದೇ ಮಾರ್ಗದಲ್ಲಿ ನಡೆಯುತ್ತಾರೆ.

ಹೀಗೆಂದಾಕ್ಷಣ ಆ ಗೋಭೂಮಿಯಲ್ಲಿ ಮಾದರಿ ಸಾಮಾಜಿಕ ಪ್ರಜಾಪ್ರಭುತ್ವ ಸ್ಥಾಪನೆಗೊಂಡಿತೆಂದು ಭಾವಿಸಬೇಕಾಗಿಲ್ಲ. ಆದರೆ ಘನೀಕೃತ ಮಂಜುಗೆಡ್ಡೆ ಕರಗಲಾರಂಭಿಸಿದೆ.

ಹೊಸ ಮತಪೆಟ್ಟಿಗೆಗಳನ್ನು ಸೆರೆಹಿಡಿಯುವುದು



ಅತಂತ್ರ ಸ್ಥಿತಿಯ ಫಲಿತಾಂಶ ಉ.ಪ್ರ. ವಿಧಾನಸಭಾ ಚುನಾವಣೆಯಲ್ಲಿ ಆಗುತ್ತದೆಯೆಂದು ಏಳು ಸುದ್ದಿ ಮಾಧ್ಯಮಗಳು ಪ್ರಚಾರ ಮಾಡಿದರೂ ಸಹ ಬಿಎಸ್‌ಪಿಯು ಬಹುತವನ್ನು ಪಡೆಯುವ ಮೂಲಕ ಎಲ್ಲಾ ಚುನಾವಣಾ ಪೂರ್ವ ಸಮೀಕ್ಷೆಗಳನ್ನು ತಲೆಕೆಳಗಾಗಿಸಿತು.

ಮುಕ್ತ ಮತ್ತು ನ್ಯಾಯಯುತವಾದ ಮತದಾನದ ಬಗ್ಗೆ ಚುನಾವಣಾ ಸಮಿತಿಯು ಸಾಕಷ್ಟು ಮುತುವರ್ಜಿ ವಹಿಸಿದಾಗಿಯೂ ಉ.ಪ್ರದ ಉದ್ದಗಲಕ್ಕೂ ಹೊಸ ಪಡೆಯೊಂದು ಮತಪೆಟ್ಟಿಗೆಗಳನು ಸೆರೆಹಿಡಿಯುತ್ತಿತ್ತು. ಅವೆಲ್ಲಾ ಸುದ್ದಿಜಾಲಗಳೇ ಆಗಿದ್ದು ಅತಂತ್ರ ಸ್ಥಿತಿಯ ವಿಧಾನಸಭೆ ಫಲಿತಾಂಶದ ಬಗ್ಗೆ ಭವಿಷ್ಯನುಡಿಯುತ್ತಿದ್ದವು.

ಪ್ರಮುಖವಾದ ಏಳು ಟಿವಿ ಮಾಧ್ಯಮಗಳು ೮ ವಾರಗಳ ಕಾಲ ಸತತ ಪ್ರಚಾರಮಾಡಿದಾಗಿಯೂ ಮತದಾರರ ಮೇಲೆ ಆದ ಪರಿಣಾಮವಾದರೂ ಏನು? ಚುನಾವಣಾಪೂರ್ವ ಸಮೀಕ್ಷೆಗಳು ಹೇಳಿದಂತೆಯೇ ಮತದಾರನ ತೀರ್ಪಿನಲ್ಲಿ ಬಿಕ್ಕಟ್ಟು ಕಾಣಿಸಿಕೊಳ್ಳುತ್ತದೆಯೆಂದು ದೇಶದ ಉದ್ದಗಳಕ್ಕೂ ಪತ್ರಿಕೆಗಳು ವರದಿ ಮಾಡಿದವು.

ಆದರೆ ಸ್ಥಳೀಯವಾಗಿ ದರ್ಬಾರು ಮಾಡುತ್ತಿರುವ ಸಾಮಾನ್ಯ ಮತದಾರರು ಮಾತ್ರ ಯಾವುದರ ಬಗ್ಗೆಯು ತಲೆಕೆಡಿಸಿಕೊಳ್ಳದೆ ಗೆಲ್ಲುವ ಅಭ್ಯರ್ಥಿಯತ್ತ ವಾಲುತ್ತಾ ಸ್ಪಷ್ಟ ಫಲಿತಾಂಶವನ್ನು ನೀಡಿದರು. ಅನೇಕಬಾರಿ ಅತಂತ್ರ ಫಲಿತಾಂಶವನ್ನು ಪೂರ್ವಸೂಚನೆಯಾಗಿ ನೀಡಿದಾಗ ಅನೇಕ ಮತದಾರರು ತಮ್ಮ ಮತದಾನದ ಬಗ್ಗೆ ನಿರಾಸಕ್ತರಾಗುತ್ತಾರೆ.

ಉದಾಹರಣೆಯೊಂದನ್ನು ಗಮನಿಸೋಣ: ಉ.ಪ್ರದಲ್ಲಿ ಅತಂತ್ರ ವಿಧಾನಸಭೆ ಬರುತ್ತದೆಯೆಂದು ಪ್ರಚಾರಮಾಡುತ್ತಿರುವ ಈ ಸುದ್ದಿಮಾಧ್ಯಮಗಳನ್ನು ೧೦೦ ಮಂದಿ ಮತದಾರರು ನೋಡುತ್ತಾರೆಂದು ಭಾವಿಸೋಣ. ಅವರಲ್ಲಿ ಐದು ಮಂದಿ ಮನಸ್ಸು ಬದಲಾಯಿಸಿಕೊಳ್ಳುತ್ತಾರೆ ಹಾಗೂ ೧೦ ಮಂದಿ ಮತಚಲಾಯಿಸಲು ಹೋಗುವುದಿಲ್ಲ. ಇಂಥ ಈ ೮ ವಾರಗಳಕಾಲ ಇದ್ದ ಅತಂತ್ರ ವಿಧಾನಸಭೆಯ ಪ್ರಚಾರ ಸುಮಾರು ೨೫ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಿರಬಹುದೇನೋ.

ಸುಮಾರು ಒಂದುವರೆ ದಶಕಗಳ ಕಾಲ ಅತಂತ್ರ ವಿಧಾನಸಭೆಯನ್ನು ಅನುಭವಿಸಿದ್ದ ರಾಜ್ಯವೊಂದು ೪೦೩ ಸೀಟುಗಳಿಗಾಗಿ ಚುನಾವಣೆ ನಡೆಸಿರುವಾಗ ೨೫ ಸೀಟುಗಳ ಫಲಿತಾಂಶ ಯಾವ ವ್ಯತ್ಯಾಸವನ್ನುಂಟುಮಾಡಬಹುದು. ಆದರೆ ಬಿಎಸ್‌ಪಿಯು ೨೦೬ ಸೀಟುಗಳನ್ನು ಗೆದ್ದು ಅಚ್ಚರಿಯನ್ನುಂಟುಮಾಡಿತು. ಆಕಸ್ಮಾತ್ತಾಗಿ ಈ ಸುದ್ದಿ ಮಾಧ್ಯಮಗಳು ಈ ಕೆಳಗಿನಂತೆ ಚುನಾವಣಾ ಪೂರ್ವ ಸಮೀಕ್ಷೆಯನ್ನು ವರದಿ ಮಾಡಿತ್ತೆಂದು ಭಾವಿಸೋಣ:

ಮುಕ್ತ ಮತ್ತು ನ್ಯಾಯಯುತವಾದ ಮತದಾನದ ಬಗ್ಗೆ ಚುನಾವಣಾ ಸಮಿತಿಯು ಸಾಕಷ್ಟು ಮುತುವರ್ಜಿ ವಹಿಸಿದಾಗಿಯೂ ಉ.ಪ್ರದ ಉದ್ದ ಗಲಕ್ಕೂ ಹೊಸ ಪಡೆಯೊಂದು ಮತಪೆಟ್ಟಿಗೆಗಳನ್ನು ಸೆರೆಹಿಡಿಯುತ್ತಿತ್ತು. ಅವೆಲ್ಲಾ ಸುದ್ದಿಜಾಲಗಳೇ ಆಗಿದ್ದು ಅತಂತ್ರ ಸ್ಥಿತಿಯ ವಿಧಾನಸಭೆ ಫಲಿ ತಾಂಶದ ಬಗ್ಗೆ ಭವಿಷ್ಯನುಡಿಯುತ್ತಿದ್ದವು. ಪ್ರಮುಖವಾದ ಏಳು ಟಿವಿ ಮಾಧ್ಯಮಗಳು ೮ ವಾರಗಳ ಕಾಲ ಸತತ ಪ್ರಚಾರ ಮಾಡಿದಾಗಿಯೂ ಮತದಾರರ ಮೇಲೆ ಆದ ಪರಿಣಾಮವಾದರೂ ಏನು? ಚುನಾವಣಾಪೂರ್ವ ಸಮೀಕ್ಷೆಗಳು ಹೇಳಿದಂತೆಯೇ ಮತದಾರನ ತೀರ್ಪಿನಲ್ಲಿ ಬಿಕ್ಕಟ್ಟು ಕಾಣಿಸಿಕೊಳ್ಳುತ್ತದೆಯೆಂದು ದೇಶದ ಉದ್ದಗಳಕ್ಕೂ ಪತ್ರಿಕೆಗಳು ವರದಿ ಮಾಡಿದವು. ಆದರೆ ಸಾಮಾನ್ಯ ಮತದಾರರು ಮಾತ್ರ ಯಾವುದರ ಬಗ್ಗೆಯು ತಲೆಕೆಡಿಸಿಕೊಳ್ಳದೆ ಗೆಲ್ಲುವ ಅಭ್ಯರ್ಥಿಯತ್ತ ವಾಲುತ್ತಾ ಸ್ಪಷ್ಟ ಫಲಿತಾಂಶವನ್ನು ನೀಡಿದರು.

–ಬಿಎಸ್‌ಪಿಯು ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮುತ್ತದೆ.

–ಸಮಾಜವಾದಿ ಪಕ್ಷ ಮತ್ತು ಬಿಜೆಪಿಯು ಸ್ಪರ್ಧೆಯಲ್ಲಿ ಸೋತರೆ, ಕಾಂಗ್ರೆಸ್ ತನ್ನ ಅವಸಾನವನ್ನು ತಲುಪುತ್ತದೆ.

–ಮಾಯಾವತಿಯ ದಲಿತ–ಬ್ರಾಹ್ಮಣ ಸಿದ್ಧಾಂತವು ಮುಸ್ಲಿಂರನ್ನು ಒಳಗೊಂಡಂತೆ ಪವಾಡಗಳನ್ನು ಮೆರೆದು ಬಿಎಸ್‌ಪಿ ಬಹುಸಂಖ್ಯಾತ ಬೆಂಬಲವನ್ನು ಪಡೆಯುತ್ತದೆ.

ಸುದ್ದಿಮಾಧ್ಯಮಗಳು ಈ ಸಂಗತಿಗಳನ್ನು ಪ್ರಚಾರ ಮಾಡಿದಿದ್ದರೆ ಬಿಎಸ್‌ಪಿಗೆ ೨೨೫ರಿಂದ ೨೫೦ ಸೀಟುಗಳು ಲಭಿಸುತ್ತಿದ್ದವಲ್ಲವೇ?

ಈ ಸುದ್ದಿ ಜಾಲಗಳ ಅಬ್ಬರದಿಂದಾಗಿ ಸುಮಾರು ೧೫ ಸೀಟುಗಳನ್ನು ಬಿಎಸ್‌ಪಿಯು ಕಳೆದುಕೊಂಡಿರಬಹುದು. ಅಂದರೆ ಈ ಸುದ್ದಿಮಾಧ್ಯಮಗಳು ಮತಪೆಟ್ಟಿಗೆಗಳನ್ನು ವಶಪಡಿಸಿಕೊಂಡವು. ಇದನ್ನೇ ನಾನು ಮತಪೆಟ್ಟಿಗೆಗಳ ಸೆರೆ ಎಂದು ಕರೆದದ್ದು.

ಉ.ಪ್ರದ ವಿಧಾನಸಭೆ ಸರಾಸರಿ ೨೫೦ ಮತಪಟ್ಟಿಗೆಗಳ ವಿಭಾಗಗಳನ್ನು ಹೊಂದಿರುತ್ತದೆ. ಓವಿ ಮಾಧ್ಯಮಗಳ ಪ್ರಚಾರದಿಂದಾಗಿ ಬಿಎಸ್‌ಪಿಯು ಸುಮಾರು ೧೫ ಸೀಟುಗಳನ್ನು ಕಳೆದುಕೊಂಡಲ್ಲಿ ಸುಮಾರು ೩,೭೫೦ ಮತಿಪೆಟ್ಟಿಗೆಗಳನ್ನು ಈ ಮಾಧ್ಯಮಗಳು ವಶಪಡಿಸಿಕೊಳ್ಳುತ್ತವೆ ಈ ಕಾರ್ಯದಲ್ಲಿ ತೊಡಗಿದ ಮಾಧ್ಯಮಗಳೆಂದರೆ ಸಿಎನ್

ಎನ್-ಐಬಿಎನ್, ಎನ್‌ಡಿಟಿವಿ ೨೪ಥ೭, ಎನ್‌ಡಿಟಿವಿ – ಇಂಡಿಯಾ, ಚಾನೆಲ್ ೭, ಟೈಮ್ಸ್ ನವ್, ಸ್ಟಾರ್ ನ್ಯೂಸ್ ಮತ್ತು ಇಂಡಿಯ ಟಿವಿ.

ಮಾನವರು ತಪ್ಪು ಮಾಡುತ್ತಾರೆ. ಅದನ್ನೇ ಈ ಸುದ್ದಿ ಜಾಲಗಳು ಮಾಡಿದ್ದು. ಆದರೂ ಈ ಪ್ರಶ್ನೆ ಹಾಗೆ ಉಳಿದುಕೊಳ್ಳುತ್ತದೆ– ಈ ತಪ್ಪು ಬಿಎಸ್‌ಪಿಗೆ ವರವಾಯಿತು ಹೇಗೆ? ಮಾರ್ಚ್ ೨೭ ೨೦೦೭ರಂದು ಸಿಎನ್‌ಎನ್-ಐಬಿಎನ್, ತನ್ನ ಆರಂಭಿಕ ಸಮೀಕ್ಷೆಯಲ್ಲಿ ಬಿಎಸ್‌ಪಿಗೆ ೨೬೨ ಸೀಟುಗಳು ದೊರೆಯುತ್ತದೆಯೆಂದು ಹೇಳಿತ್ತು. ಅಂದರೆ ಸುಮಾರು ೫೬ ಸೀಟುಗಳ ಹೆಚ್ಚಳ! ಸಿಎನ್ ಎನ್-ಐಬಿಎನ್‌ನ ಇದೊಂದು ತಪ್ಪು ಲೆಕ್ಕಾಚವಾರವಾಗಿ ಬಿಎಸ್‌ಪಿಗೆ ೫೬ ಸೀಟುಗಳನ್ನು ಹೆಚ್ಚಾಗಿ ಬಿಂಬಿಸಿತ್ತು. ಹಾಗೆಯೇ ಏಪ್ರಿಲ್ ೭, ೨೦೦೭ ರಂದು ಎನ್‌ಡಿಟಿವಿ ೨೪x೭, ತನ್ನ ತಪ್ಪು ಲೆಕ್ಕಾಚಾರ ಮಾಡಿ, ಬಿಎಸ್‌ಪಿಗೆ ೨೭೭ ಸೀಟುಗಳು ದೊರೆಯುತ್ತವೆ ಎಂದಿತ್ತು. ಅಂದರೆ ೭೧ ಸೀಟುಗಳ ಹೆಚ್ಚಳ! ಆದರೆ ಇದೇ ಟಿವಿ ಮತ್ತೊಮ್ಮೆ ತಪ್ಪು ಮಾಡಿ ಬಿಎಸ್‌ಪಿಗೆ ಕೇವಲ ೧೩೫ ಸೀಟುಗಳು ದೊರೆಯುತ್ತವೆ ಎನ್ನುತ್ತದೆ. ಅಂದರೆ ಬಿಎಸ್‌ಪಿ ಪಡೆದಿರುವ ಸೀಟುಗಳಲ್ಲಿ ೭೧ ಕಮ್ಮಿ! ಹೀಗೆಯೆ ಉಳಿದ ಟೈಮ್ಸ್ ನವ್, ಸ್ಟಾರ್ ನ್ಯೂಸ್ ಮತ್ತು ಇಂಡಿಯ ಟಿವಿಗಳೂ ಸಹ ತಪ್ಪು ಲೆಕ್ಕಾಚ್ಚಾರ ಮಾಡಿದ್ದವು.

ಹೀಗೆ ಈ ಮಾಧ್ಯಮಗಳು ತಮಗೆ ಅರಿವಿಲ್ಲದೆಯೇ ಮತಪಟ್ಟಿಗೆಗಳನ್ನು ವಶಪಡಿಸಿಕೊಂಡವು ಏಕೆ? ಭಾರತೀಯ ಶ್ರೀಮಂತ ಎಲೀಟರು ಇಂದು ಮುಖವಿಲ್ಲದವರಾಗಿ ಆಧುನಿಕತೆಯ ವಿರುದ್ಧ ತಿರುಗಿಬೀಳುತ್ತಿದ್ದಾರೆ. ಇದು ಚರಿತ್ರೆಯ ಆಶೋತ್ತರಗಳಿಗೆ ಪಕ್ಷಪಾತಿಧೋರಣೆಯಾಗಿದ್ದು, ಸಂವೇದನಾಹೀನಾ ಬೇಜವಾಬ್ದಾರಿಯಿಂದ ಕೂಡಿದೆ. ಈ ಎಲೀಟರು ಎಲ್ಲವನ್ನು ಬಲ್ಲವರೆಂಬಂತೆ ವರ್ತಿಸುತ್ತಿದ್ದಾರೆ. ಇವರು ದುರಾಹಂಕಾರಿಗಳಾಗಿದ್ದು ಬೌದ್ಧಿಕವಾಗಿ ದಿವಾಳಿಯಾಗುವುದೇ ಅವರ ಸ್ವತ್ತಾಗಿದೆ.

ದಲಿತ್ ಡೈರಿ ತನ್ನ ದೀರ್ಘವಾದ ಅಂಕಣಗಳಲ್ಲಿ ದೇಶದ ಗಂಭೀರ ಸಮಸ್ಯೆಗಳ ಬಗ್ಗೆ ಈ ಎಲೀಟರೊಡನೆ ಚರ್ಚಿಸಲು ಇಚ್ಛಿಸುತ್ತದೆ. ಈ ಮೂಲಕ ಆ ವರ್ಗ ತನ್ನ ಚಾರಿತ್ರಿಕ ಪ್ರಜ್ಞೆಯಿಂದ ಎಚ್ಚೆತ್ತುಕೊಳ್ಳುವ ಅಗತ್ಯವಿದೆ. ಈ ದಿಕ್ಕಿನಲ್ಲಿ ದಲಿತರು ಸಾಕಷ್ಟು ಮಾಡಿದ್ದಾರೆ. ಹಾಗೆಯೇ ಉ.ಪ್ರ. ದಲಿತೇತರ ಜನಸಾಮಾನ್ಯರು ಮಾಡಿದ್ದಾರೆ. ಅದಕ್ಕಾಗಿ ಈ ಸಾಪ್ತಾಹಿಕವನ್ನು ತಪ್ಪದೆ ಓದಲು ಮರೆಯಬೇಡಿ.

ಎಲ್ಲಾ ಸುದ್ದಿ ಮಾಧ್ಯಮಗಳಾದ ಸಿಎನ್‌ಎನ್-ಐಬಿಎನ್, ಎನ್‌ಡಿಟಿವಿ ೨೪ಥ೭, ಎನ್‌ಡಿಟಿವಿ-ಇಂಡಿಯಾ, ಚಾನೆಲ್ ೭, ಟೈಮ್ಸ್ ನವ್, ಸ್ಟಾರ್ ನ್ಯೂಸ್ ಮತ್ತು ಇಂಡಿಯಾ ಟಿವಿಗಳ ಲೆಕ್ಕಾಚಾರ ತಪ್ಪು ಎಂದು ಮೇ ೧೧, ೨೦೦೭ರಂದು ಸಾಧಿತವಾಯಿತು.

ಆ ಸಂಜೆ ಎಲ್ಲಾ ಸುದ್ದಿಮಾಧ್ಯಮಗಳ ಮಾಲೀಕರು, ಸಂಪಾದಕರು, ನಿರೂಪಣೆಕಾರರು ಹಾಗೂ ವರದಿಗಾರು ಅತಂತ್ರ ವಿಧಾನಸಭೆಯ ಮುನ್ಸೂಚನೆ ನೀಡಿದ್ದ ತಪ್ಪಿಗಾಗಿ ರಾಷ್ಟ್ರದ ಕ್ಷಮೆಯಾಚಿಸಲು ಒಂದುಗೂಡಿದ್ದರು.

ಬಿಎಸ್‌ಪಿಗೆ ೧೬೦-೧೬೮ ಸೀಟುಗಳು ದೊರೆಯಲಿವೆಯೆಂದು ಹೇಳಿ ಸತ್ಯಕ್ಕೆ ಹತ್ತಿರವಾಗಿದ್ದನ್ನು ಸಿಎನ್ ಎನ್-ಐಬಿಎನ್ ಮತ್ತು ಚಾನೆಲ್ ೭ ಯಾವುದೇ ಮುಜುಗರ ಅಥವಾ ಕ್ಷಮೆಯಾಚನೆ ಇಲ್ಲದೆ ತಮ್ಮ ವೀಕ್ಷಕರಿಗೆ ಹೇಳಿದರು. ಆದರೆ ಈ ೧೬೦-೧೬೮ ಸೀಟುಗಳ ಲೆಕ್ಕಾಚಾರ ಇನ್ನೇನು ಮತದಾನ ಮುಗಿಯಬೇಕು ಎನ್ನುವ ಸಮಯದಲ್ಲಿ, ಮೇ.೮ ರ ರಾತ್ರಿಯಷ್ಟೆ ಮುನ್ಸೂಚಿಸಿದ್ದು ಎಂಬುದನ್ನು ಅವರ್‍ಯಾರು ಒಪ್ಪಿಕೊಂಡಂತೆ ಕಾಣುತ್ತಿರಲಿಲ್ಲ.

ಸಮಾಜವಾದಿ ಪಕ್ಷಕ್ಕೆ ೧೫೫ ಸೀಟುಗಳು ಮತ್ತು ಬಿಎಸ್‌ಪಿಗೆ ೧೫೦ ಸೀಟುಗಳು ದೊರೆಯುತ್ತವೆಂದು ಮಾರ್ಚ್ ೨೭, ೨೦೦೭ರಂದು ಸಿಎನ್‌ಎನ್-ಐಬಿಎನ್ ಮುನ್ಸೂಚನೆ ನೀಡಿ ಅತಂತ್ರ ವಿಧಾನಸಭೆ ಆಗುತ್ತದೆನ್ನುವುದರ ನಾಯಕತ್ವವನ್ನು ವಹಿಸಿಕೊಂಡದ್ದನ್ನು ವೀಕ್ಷಕರಿಗೆ ಏಕೆ ತಿಳಿಸಲಿಲ್ಲ?

ಇದು ಕೇವಲ ಸುದ್ದಿ ಮಾಧ್ಯಮಗಳಿಗಷ್ಟೇ ಸೀಮಿತವಿಲ್ಲ. ಈ ಅತಂತ್ರ ವಿಧಾನಸಭೆಯ ಪ್ರಚಾರಕರಲ್ಲಿ ಅನೇಕ ಇತರ ವ್ಯಕ್ತಿಗಳೂ ಸೇರಿದ್ದರು. ಇವರಿಗೆಲ್ಲಾ ರಾಜಕೀಯ ಬೆಂಬಲ ಪಡೆದು ತಮ್ಮ ಭವಿಷ್ಯವನ್ನು ಉಜ್ವಲಪಡಿಸಿಕೊಳ್ಳಬೇಕೆಂಬ ಬಯಕೆಯಿದ್ದ ಕಾರಣ ಹಾಗೆ ಮಾಡಬೇಕಾಯಿತೆಂದು ಕಾಣುತ್ತದೆ.

ಇದೆಲ್ಲಾ ಭಾರತೀಯ ಕುಲೀನ ವರ್ಗಗಳ ಮುಂದುವರೆದಿರುವ ದುರಹಂಕಾರದ ನಾಟಕವಷ್ಟೆ. ಈ ಸುದ್ದಿ ಮಾಧ್ಯಮಗಳವರು ತಮ್ಮ ಬಯಕೆಗಳ ವಕ್ತಾರರೇನೂ ಅಲ್ಲ. ಅವರೆಲ್ಲಾ ಈ ಕುಲೀನವರ್ಗದ ಪ್ರತಿನಿಧಿಗಳಷ್ಟೆ.

ರಾಜ್ಯಕ್ಕೆ ಯಾವ ಪಕ್ಷದ ಸರ್ಕಾರ ಬೇಕು ಎಂಬುದನ್ನು ಈ ಕುಲೀನ ವರ್ಗ ಆಯ್ಕೆ ಮಾಡುವಂತೆ

ಉ.ಪ್ರದ ಜನ ಕೇಳಿಕೊಂಡರೆಂದು ಭಾವಿಸೋಣ. ಯಾರನ್ನವರು ಆಯ್ಕೆ ಮಾಡುತ್ತಾರೆ? ಅವರೇನಾದರೂ ಮಾಯಾವತಿಯ ನೇತೃತ್ವದ ಬಿಎಸ್‌ಪಿಯನ್ನು ಆರಿಸುತ್ತಿದ್ದರೆ? ಉತ್ತರ ನಮಗೆಲ್ಲಾ ಚೆನ್ನಾಗಿ ಗೊತ್ತು. ಸಮಸ್ಯೆ ನಾವು ಅರಿ ತುದಕ್ಕಿಂತಲೂ ಗಂಭೀರವಾಗಿದೆ. ಅದು ಅವರ ಆತ್ಮಸಾಕ್ಷಿ ಯಲ್ಲೇ ಬೇರುಬಿಟ್ಟಿದೆ.

ಉದಾಹರಣೆಗೆ, ಎಷ್ಟು ಮಂದಿ ದಲಿತ ಪತ್ರಕರ್ತರು ತಮ್ಮ ಈ ಸುದ್ದಿಜಾಲ ಕ್ಲಬ್‌ಗಳಲ್ಲಿ ಇದ್ದಾರೆಂಬುದನ್ನು ಅವರ್‍ಯಾರಾದರು ಹೇಳಬಹುದೇ? ಎಲ್ಲಾ ಸಂಭಾವನೀಯತೆಯಲ್ಲೂ ದಲಿತ ವ್ಯಕ್ತಿ ಅಲ್ಲಿಲ್ಲದಿದ್ದರೆ ಭಾರತೀಯ ಆತ್ಮಸಾಕ್ಷಿ ಎನ್ನುವುದು ಛಿದ್ರಗೊಂಡ ಪ್ರಜ್ಞೆಯಿಂದ ಕೂಡಿದೆ. ಈ ದೇಶದ ಆತ್ಮಸಾಕ್ಷಿಯೆಂದು ಮುಂಚೂಣಿಯಲ್ಲಿರುವ ಈ ಎಲೀಟರೆಲ್ಲಾ ಸೋಲುತ್ತಿದ್ದಾರೆ.

ಈ ಕುಲೀನವರ್ಗಗಳ ದುರಂತವೆಂದರೆ ಇವರೆಲ್ಲಾ ಬಹುಕಾರಣಗಳಿಂದಾಗಿ ಬಂಧಿತರಾಗಿದ್ದಾರೆ. ಅವುಗಳಲ್ಲಿ ಬಹುಮುಖ್ಯವಾದುದೆಂದರೆ ಅವರಿಗೆ ಒಂದು ತಾರ್ಕಿಕವಾದ ಚರಿತ್ರೆ ಇಲ್ಲದಿರುವುದು. ಇವರ್‍ಯಾರೂ ಸಹ ಯಾವುದೇ ತೀವ್ರವಾದ ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯಿಂದ ಬಂದವರಲ್ಲ.

ಇವರೆಲ್ಲಾ ಯಾವುದೇ ದುಡಿಮೆ ಇಲ್ಲದೆ ತಮ್ಮ ಪೂರ್ವಜರಿಂದ ದಕ್ಕಿಸಿಕೊಂಡ ಸವಲತ್ತುಗಳನ್ನು ಪಡೆದವರಾಗಿ ಅವನ್ನು ಉಳಿಸಿಕೊಳ್ಳುವುದರತ್ತಲೇ ಇರುವವರಾಗಿದ್ದಾರೆ. ಇವರೆಲ್ಲ ಬಯಸಿದ್ದನ್ನೆಲ್ಲಾ ಪಡೆದದ್ದು ಇಲ್ಲಿನ ಜಾತಿ ವ್ಯವಸ್ಥೆಯಿಂದಾಗಿಯಷ್ಟೆ

ಆದರೆ ಕಾಲ ಕಳೆದಂತೆ ನಗರೀಕರಣದ ನಾಗರೀಕತೆಯಿಂದಾಗಿ ಈ ಕುಲೀನವರ್ಗವು ತಲೆಮಾರುಗಳನ್ನು ದಾಟಿ ವರ್ತಮಾನಕ್ಕೆ ಬಂದವರಾಗಿದ್ದಾರೆ.

ಗೊತ್ತಿಗೆ ಬಿಗಿದವರಾಗಿರುವ ಈ ವರ್ಗವು ತಮ್ಮಷ್ಟಕ್ಕೇ ನಡೆಯಲಾಗದೇ ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಲಾಗದೇ ಇದ್ದಾರೆ. ಈ ವರ್ಗ ಒಂದು ದನದ ಕೊಟ್ಟಿಗೆಯಿಂದ ಮತ್ತೊಂದಕ್ಕೆ ಹೊಯ್ದಂತೆ ಕಾಣುತ್ತಾರೆ.

ಬೇರೆಡೆಗಳಲ್ಲಿ ಉದಾಹರಣೆಗೆ ಅಮೆರಿಕಾ ಅಥವಾ ಯೂರೋಪಿನಲ್ಲಿ ಈ ಕುಲೀನ ವರ್ಗಗಳ ಬೆಳವಣಿಗೆಯನ್ನು ಕಂಡರೆ ಅಲ್ಲಿ ನಡೆದ ನೋವುತುಂಬಿದ ಭೂತವನ್ನು ಮೆಟ್ಟಿದ ಸಾಮಾಜಿಕ ಸುಧಾರಣೆಯಿಂದಾಗಿ ಬಂದವರು.

ಈ ಸಮಾಜಗಳಲ್ಲಿನ ಕುಲೀನರು ತಮ್ಮ ಭೂತದ ಯಾವುದೇ ಹೊರೆಯಿಲ್ಲದೆ ಬಂದವರಾಗಿದ್ದಾರೆ. ಆದರೆ ಭಾರತದಲ್ಲಿ ಅವರು ಇಂಥ ಯಾವುದೇ ತಾರ್ಕಿಕ ವಿಕಾಸ ಇಲ್ಲದವರಾಗಿದ್ದಾರೆ.

ಇಂಥ ಯಾವುದೇ ಸಾಮಾಜಿಕ ಸುಧಾರಣೆಗಳಿಲ್ಲದೆ ವರ್ತಮಾನಕ್ಕೆ ಕಾಲಿರಿಸಿರುವ ಈ ಕುಲೀನರು ಭೂತದ ಹೊರೆಯಿಂದ ಶಾಪಗ್ರಸ್ತರಾಗಿದ್ದಾರೆ. ಸವಲತ್ತುಗಳ ವಿದ್ಯಮಾನದ ಕೂಸುಗಳಾಗಿರುವ ಭಾರತೀಯ ಕುಲೀನರು ಯಾವುದೇ ನಾಗರೀಕತೆಯ ಹೊರೆಯನ್ನು ಹೊತ್ತುಬಂದಿಲ್ಲವೆಂದ ಸತ್ಯವನ್ನು ಅರಿಯಲೂ ಸಹ ಅವರಿಂದ ಆಗದು.

ಕುಲೀನ ವರ್ಗದ ಬಯಕೆಗಳು

ಆಘಾತಕ್ಕೊಳಗಾಗಿರುವ ಕುಲೀನರು

ಹೀಗೆ ಪ್ರಜ್ಞೆಯು ಭೂತದಲ್ಲಿ ಹೂತುಹೋಗಿರುವುದರಿಂದ ಈ ಕುಲೀನರಿಗೆ ಭೂತವೇ ಸುವರ್ಣಯುಗವಾಗಿ ಕಂಡು, ಅದನ್ನು ಆಚರಿಸಿಕೊಳ್ಳುವುದೇ ಶ್ರೇಷ್ಠವೆಂದು ತಿಳಿದಿದ್ದಾರೆ.

ಹೀಗೆ ನಿದ್ರಾಸ್ಥಿತಿಯಲ್ಲಿರುವ ಅವರ ಪ್ರಜ್ಞೆಯು ರಾಜ್ಯಾಂಗದ ಕರ್ತವ್ಯಗಳು ಎಂದರೆ ಪರಕೀಯವಾದುದು. ಯಾವುದೇ ಆರೋಗ್ಯಕರ ರಾಷ್ಟ್ರಕ್ಕೆ ಈ ಸ್ಥಿತಿ ನಕಾರಾತ್ಮಕವಾದುದು.

ಈ ಕುಲೀನವರ್ಗಗಳ ಸ್ವ ಘೋಷಿತ ಪ್ರತಿನಿಧಿಗಳಾಗಿರುವ ಆ ಎಲ್ಲಾ ೭ ಸುದ್ದಿ ಮಾಧ್ಯಮಗಳೆಲ್ಲಾ ಅತಂತ್ರ ಸ್ಥಿತಿಯ ವಿಧಾನಸಭೆಯನ್ನು ಮುನ್ಸೂಚಿಸುವ ಮೂಲಕ ಕುಲೀನರ ಭೂತದ ಬಯಕೆಗಳನ್ನಷ್ಟೇ ಅಭಿವ್ಯಕ್ತಪಡಿಸುತ್ತಿದ್ದಾರೆ.

ಹೀಗೆ ಮಾಡುವ ಮೂಲಕ ಈ ಕುಲೀನರಿಗೆ ತಾವೇನು ಮಾಡುತ್ತಿದ್ದೇವೆಂದು ತಿಳಿದಂತಿಲ್ಲ. ಆಧುನಿಕತೆಯಿಂದ ಆಘಾತಕ್ಕೊಳಗಾಗಿರುವ ಮತ್ತು ಒಂದುಗೂಡುತ್ತಿರುವ ಸಮಾಜವನ್ನು ಈ ಕುಲೀನರು ಒಪ್ಪಿ ಸುಧಾರಣೆಗೊಳ್ಳಲು ತಯಾರಿಲ್ಲ. ಅಂದರೆ ಈ ಭೂತಕ್ಕೆ ನೇತು ಹಾಕಿಕೊಂಡಿರುವ ಕುಲೀನರಿಂದ ದೇಶದ ಭವಿಷ್ಯಕ್ಕೆ ಯಾವುದೇ ಪ್ರಯೋಜನವಿಲ್ಲ.

ಬಿಎಸ್‌ಪಿ ತಾನು ಎಷ್ಟು ಸೀಟುಗಳನ್ನು ಗೆದ್ದುಕೊಂಡಿತೋ ಅದಕ್ಕಿಂತಲು ಕಮ್ಮಿ ಗೆಲ್ಲುವುದೆಂದು ಎಲ್ಲಾ ಚುನಾವಣಾ ಪೂರ್ವ ಸಮೀಕ್ಷೆಗಳು ತಿಳಿಸಿದ್ದವು. ಭಾರತೀಯ ಕುಲೀನ ವರ್ಗಗಳ ಪ್ರತಿನಿಧಿಗಳಾದ ಈ ಎಲ್ಲಾ ನ್ಯೂಸ್ ಚಾನಲ್‌ಗಳ ಲೆಕ್ಕ ತಲೆಕೆಳಗಾದುದಾದರೂ ಹೇಗೆ?

ನನ್ನ ಸಂಗತಿಯನ್ನು ಮತ್ತೊಮ್ಮೆ ಹೇಳುವುದಾದರೆ, ಉ.ಪ್ರದಲ್ಲಿ ಅತಂತ್ರ ಸ್ಥಿತಿಯ ವಿಧಾನಸಭೆಯನ್ನು ಮುನ್ಸೂಚಿಸುವ ಪ್ರಚಾರ ಮಾಧ್ಯಮಗಳ ಮಾಲೀಕರು, ಸಂಪಾದಕರು, ನಿರೂಪಣೆಕಾರರು ಹಾಗೂ ವರದಿಗಾರು ತಮ್ಮ ಕ್ರಿಯೆಗಳ ಬಗ್ಗೆ ಯಾವುದೇ ಅರಿವು ಇಲ್ಲದಂತಿರುವುದರಿಂದ ಅವರ್ಯಾರು ಬಿಎಸ್‌ಪಿ ವಿರುದ್ಧ ಜಾತಿ ಪೂರ್ವಗ್ರಹದಿಂದ ವರ್ತಿಸಲಿಲ್ಲ. ಸಮಸ್ಯೆ ಊಹಿಸಿದಕ್ಕಿಂತಲೂ ತೀಕ್ಷ್ಣವಾದುದು.

ಮೇ.೧೧ ರ ಮಧ್ಯಾಹ್ನಕ್ಕಿಂತ ಸ್ವಲ್ಪಮೊದಲು ಪ್ರಸಾರವಾದ ವೀಡಿಯೋ ಕ್ಲಿಪ್ಪಿಂಗ್ ಗಮನಿಸಿದರೆ ಅಲ್ಲಿ ಕಾಣುವ ನಿರೂಪಕರ ದೈಹಿಕ ನಡಾವಳಿಗಳನ್ನು ಗಮನಿಸಿದಲ್ಲಿ ಭಾರತೀಯ ಕುಲೀನರ ಬಗ್ಗೆ ನಮಗೆ ಮಿತಿಯಿಲ್ಲದೆ ಸಂಗತಿಗಳು ಅರಿವಾಗುತ್ತವೆ. ಮೇ.೧೧ ರ ಮಧ್ಯಾಹ್ನಕ್ಕಿಂತ ಸ್ವಲ್ಪಮೊದಲು ಪ್ರಸಾರವಾದ ವೀಡಿಯೋ ಕ್ಲಿಪ್ಪಿಂಗ್‌ನ್ನು ಮೇ.೮ ರ ಸಂಜೆ ಪ್ರಸಾರ ಮಾಡಿದ ವೀಡಿಯೋ ಕ್ಲಿಪ್ಪಿಂಗ್‌ನೊಡನಿಟ್ಟು ಗಮನಿಸಿದಲ್ಲಿ ಕೊನೆಯ ಹಂತದ ಮತದಾನ ಮತ್ತು ಚುನಾವಣಾ ಪೂರ್ವ ಸಮೀಕ್ಷೆಗಳಿಗೆ ಸಂಬಂಧಿಸಿದಂತೆ ಅಜಗಜಾಂತರ ವ್ಯತ್ಯಾಸವನ್ನು ಕಾಣುತ್ತೇವೆ.

ಉ.ಪ್ರದಲ್ಲಿ ಅತಂತ್ರ ಸ್ಥಿತಿಯ ವಿಧಾನಸಭೆಯನ್ನು ಮುನ್ಸೂಚಿಸಿದ ನಿರೂಪಕರು ಮತ್ತು ವ್ಯಾಖ್ಯಾನಕಾರರ ಕಣ್ಣು, ತುಟಿ ಮತ್ತು ಧ್ವನಿಯಲ್ಲಿ ಸಮನಾದ ಖುಷಿಯನ್ನು ಗುರುತಿಸಬಹುದಿತ್ತು. ಮೇ. ೮ರಂದು ಅವರೆಲ್ಲಾ ರಾಷ್ಟ್ರಪತಿ ಆಡಳಿತವನ್ನು ಉ.ಪ್ರದಲ್ಲಿ ಕಾಣುತ್ತಿದ್ದರು. ಆದರೆ ಮೇ. ೧೧ರಂದು ಅವರು ಪೇಲವವಾಗಿ ಕಾಣುತ್ತಿದ್ದರು. ಅವರ ಧ್ವನಿ ಕ್ಷೀಣಿಸುತ್ತಿದ್ದು ಸಹಾಯಕ್ಕಾಗಿ ಯಾಚಿಸುವವರಂತೆ ಕಾಣುತ್ತಿತ್ತು. ಭಾರತೀಯ ಕುಲೀನರ ಮುಜುಗರವನ್ನು ಇದು ಸಂಕ್ಷಿಪ್ತವಾಗಿ ಸೂಚಿಸುತ್ತದೆ.

ವಾಸ್ತವ ಸಂಗತಿಯೆಂದರೆ ಈ ನ್ಯೂಸ್ ಚಾನಲ್‌ಗಳು ಮತ್ತು ನಿಪುಣ ವ್ಯಾಖ್ಯಾನಕಾರರ ಆಘಾತ ಸಾಮಾಜಿ ಕವಾಗಿ ಸವಲತ್ತುಗಳು ಬದಲಾಗುತ್ತಿರುವ ಎಲ್ಲಾ ಪ್ರಕ್ರಿಯೆ ಗಳನ್ನು ಸಂಕ್ಷಿಪ್ತವಾಗಿ ಸೂಚಿಸುತ್ತದೆ. ಅಂದರೆ ಈ ಕುಲೀನರು ತಮ್ಮದೇ ಆದ ಭೂತ ಮತ್ತು ಸಾಮಾಜಿಕ ವ್ಯವಸ್ಥೆಯ ಬಲಿಪಶುಗಳಾಗಿದ್ದಾರೆ. ಈ ಹೊಸ ಸಾಮಾಜಿಕ ಪರಿವರ್ತನೆಯಲ್ಲಿ ನಡೆಯುವ ಹೊಂದಾಣಿಕಾ ಪ್ರಕ್ರಿಯೆ ಗಳಿಗೆ ಕುಲೀನರ ಒಳತೋಟಿ ನಿರೋಧಕ ಶಕ್ತಿಯನ್ನು ಚರಿತ್ರೆಯಿಂದಲೇ ಪಡೆದುಕೊಂಡಿದ್ದು, ಅವರ ಈ ದುಃಸ್ಥಿತಿಯನ್ನು ನಾವು ಅರ್ಥೈಸಬಹುದಾಗಿದೆ.

ಮೇ. ೧೧ರ ಮಧ್ಯಾಹ್ನದ ನಂತರದಲ್ಲಿ ಈ ಕುಲೀನರು ಆಘಾತಕ್ಕೊಳಗಾಗಿದ್ದರು. ಹೀಗೆ ಕುಲೀನರು ತಮ್ಮೊಳಗೇ ಬೆಚ್ಚಗಿದ್ದ ಸ್ಥಿತಿಯಿಂದ ಹೊರಬರಲಾಗದೆ ಬಿಎಸ್‌ಪಿಯ ಗೆಲುವನ್ನು ಯಾವುದೋ ಪರಕೀಯ ಸಂಗತಿಯಾಗಿ ಎದುರಿಸುತ್ತಿದ್ದರು. ಈ ಅದ್ಭುತವಾದ ಕುಲೀನರ ಒಳತೋಟಿ ತಮ್ಮ ಕಣ್ಣು-ತುಟಿ-ಧ್ವನಿಗಳಲ್ಲಿ ತಾನೇ ತಾನಾಗಿ ಹೊರಹೊಮ್ಮುತ್ತಿತ್ತು. ಇದೆಲ್ಲಾ ಏಕಾಯಿತು ಎಂಬುದೇ ನಮ್ಮೆದುರು ಇರುವ ಪ್ರಶ್ನೆ.

ಭಾರತೀಯ ಮಾನವಶಾಸ್ತ್ರ ಇನ್ನೂ ಸಹ ತನ್ನ ಭ್ರೂಣಾವಸ್ಥೆಯಲ್ಲೇ ಇದೆ. ಆದ್ದರಿಂದ ಅದು ಕುಲೀನರ ಸಾಂಸ್ಕೃತಿಕ ನಡಾವಳಿಗಳನ್ನು ಇನ್ನೂ ಪತ್ತೆಹಚ್ಚಲಾಗದೆ ಅವರ ಪ್ರಜ್ಞೆಯನ್ನು ಇನ್ನು ಪ್ರವೇಶಿಸಲಾಗಿಲ್ಲ. ತಮ್ಮ ಒಳತೋಟಿಯಲ್ಲಿ ಕುಲೀನರಿಗೆ ದಲಿತರು ಯಾರಿಗೂ ಸಾಟಿಯಿಲ್ಲದ ಬಲಶಾಲಿ-ಸ್ವಾವಲಂಬಿಗಳಾಗಿ ಹೊರಹೊಮ್ಮಿದ್ದಾರೆ.

ಈ ಹಿಂದೆ ಮಾಯಾವತಿಯು ಬಿಜೆಪಿಯ ಬೆಂಬಲದೊಂದಿಗೆ ಮೂರು ಬಾರಿ ಉ.ಪ್ರದ ಮುಖ್ಯಮಂತ್ರಿಯಾದದ್ದು ಈ ಕುಲೀನರ ಒಳತೋಟಿಯ ವ್ಯವಸ್ಥೆಗೆ ಮತ್ತಷ್ಟು ಆಹಾರವನ್ನೊದಗಿಸಿತ್ತೆಂದು ಕಾಣುತ್ತದೆ. ಆದ್ದರಿಂದಲೇ ಈ ಬಾರಿಯೂ ಸಹ ಬಿಎಸ್‌ಪಿ ಬಹುಮತವನ್ನು ಪಡೆಯಲು ಸಾಧ್ಯವಿಲ್ಲದ ಮಾತಾಗಿದ್ದು ಭಾರತದ ಅತಿದೊಡ್ಡ ರಾಜ್ಯವನ್ನು ಅದು ಮುನ್ನಡೆಸಲಾರದು.

ವಿದ್ಯುನ್ಮಾನ ಮತ ಯಂತ್ರಗಳನ್ನು ಬಳಸಿದ್ದರಿಂದ ಫಲಿತಾಂಶ ಬೇಗನೇ ಹೊರ ಬಂದು ಕುಲೀನರಿಗೆ ಸಾವಧಾನವಾಗಿ ಪ್ರತಿಕ್ರಿಯೆ ನೀಡಲು ಸಮಯಾವಕಾಶವೂ ದೊರೆಯದಾಯಿತು. ಹೀಗಿರುವಾಗ ದಲಿತರು ಪ್ರಸ್ತುತದ ಸಾಮಾಜಿಕ ಚರಿತ್ರೆಯ ವ್ಯಾಕರಣವನ್ನು ದಲಿತರು ಹೊಸ ದಿಕ್ಕಿಗೆ ಹೊಯ್ಯುತ್ತಿದ್ದನ್ನು ಹೇಗೆ ಅರ್ಥೈಸಬೇಕೆಂದು ತಿಳಿಯದೆ ಅವರು ತಮ್ಮ ಒಳತೋಟಿಯಲ್ಲಿ ಹೊಯ್ದಾಡುತ್ತಿದ್ದರು.

ಆದ್ದರಿಂದ ಫಲಿತಾಂಶ ಹೊರಬರುತ್ತಿದ್ದಂತೆ ಈ ಕುಲೀನರು ಆಘಾತವನ್ನು ಅನುಭವಿಸಲಾರಂಭಿಸಿದರು. ಅವರಿಗೆ ರಾಷ್ಟ್ರಪತಿ ಆಡಳಿತವನ್ನು ಉ.ಪ್ರದಲ್ಲಿ ಇನ್ನಿಲ್ಲವಾಯಿತು. ಅಲ್ಲದೆ ಮಾಯಾವತಿಯ ಆಳ್ವಿಕೆಯನ್ನು ಉ.ಪ್ರ.ದಲ್ಲಿ ಒಪ್ಪಿಕೊಳ್ಳಲು ಅವರ ಒಳತೋಟಿ ಸಿದ್ಧವಿರಲಿಲ್ಲ. ಅಲ್ಲದೆ ಅವರ್ಯಾರು ತಮ್ಮ ಒಳತೋಟಿಗೆ ಇಂಥ ಪೆಟ್ಟು ಭಾರತದ ಪ್ರಜಾಪ್ರಭುತ್ವದಲ್ಲಿ ಸಾಧ್ಯ ಎಂಬುದನ್ನು ಊಹಿಸಲಾಗಿರಲಿಲ್ಲ.

ಅದೃಷ್ಟವಶಾತ್ ಉ.ಪ್ರದಲ್ಲಿ ಆಗಿರುವ ಈ ಚಾರಿತ್ರಿಕ ತೀರ್ಪು ದಲಿತರ ಸಿದ್ಧಮಾದರಿಗಳನ್ನು ಕೊಡವಿ, ಹೊಸದಾಗಿ ಉಗಮವಾಗುತ್ತಿರುವ ಸಾಮಾಜಿಕ ಹೊಂದಾಣಿಕೆಯ ವಿದ್ಯಮಾನದಲ್ಲಿ ದಲಿತ ಜಯಭೇರಿ ಬಾರಿಸುತ್ತಾನೆಂಬುದು ಸಾಬೀತಾಗಿದೆ. ತಮ್ಮದೇ ಆದ ಚರಿತ್ರೆಯಲ್ಲಿ ಹೂತುಹೋಗಿರುವ ಜಗತ್ತಿನ ಶ್ರೇಷ್ಠ ಚಿಂತಕಭಾವಡಿಯಾಗಿರುವ ಭಾರತೀಯ ಕುಲೀನರು ದಲಿತರ ಈ ಹೊಸ ಆಗಮನವನ್ನು ಗ್ರಹಿಸಲಾಗಿಲ್ಲ. ಏಕೆಂದರೆ ಅವರೆಲ್ಲಾ ತಮ್ಮ ಸುಪ್ತ ಪ್ರಜ್ಞೆಯಲ್ಲಿ ದಲಿತರೆಂದರೆ ಚಾರಿತ್ರಿಕವಾಗಿ ಇನ್ನು ಸುಪ್ತಾವಸ್ಥೆಯಲ್ಲೇ ಇರುವವರು. ಆದ್ದರಿಂದ ಉ.ಪ್ರದಲ್ಲಿ ಆಗುತ್ತಿರುವ ರಾಜಕೀಯ ಬದಲಾವಣೆಯನ್ನು ಗ್ರಹಿಸಲಾರರು.

ಆದ್ದರಿಂದ ಆ ಏಳು ಸುದ್ದಿ ಜಾಲಗಳನ್ನು ಜಾತಿವಾದಿಗಳೆಂದು ಮತ್ತು ದಲಿತ ವಿರೋಧಿಗಳೆಂದು ಬಿಂಬಿಸುವುದೆಂದರೆ ನಾವು ಒಂದು ಪೂರ್ವನಿರ್ಧರಿತ ತಪ್ಪುಲೆಕ್ಕಾಚಾರದಲ್ಲಿ ತೊಡಗಿದಂತೆ ಕಾಣುತ್ತದೆ.

ವಾಸ್ತವ ಸಂಗತಿಯೆಂದರೆ ಈ ನ್ಯೂಸ್ ಚಾನಲ್‌ಗಳು ಮತ್ತು ನಿಪುಣ ವ್ಯಾಖ್ಯಾನಕಾರರ ಆಘಾತ ಸಾಮಾಜಿಕವಾಗಿ ಸವಲತ್ತುಗಳು ಬದಲಾಗುತ್ತಿರುವ ಎಲ್ಲಾ ಪ್ರಕ್ರಿಯೆಗಳನ್ನು ಸಂಕ್ಷಿಪ್ತವಾಗಿ ಸೂಚಿಸುತ್ತದೆ. ಅಂದರೆ ಈ ಕುಲೀನರು ತಮ್ಮದೇ ಆದ ಭೂತ ಮತ್ತು ಸಾಮಾಜಿಕ ವ್ಯವಸ್ಥೆಯ ಬಲಿಪಶುಗಳಾಗಿದ್ದಾರೆ. ಈ ಹೊಸ ಸಾಮಾಜಿಕ ಪರಿವರ್ತನೆಯಲ್ಲಿ ನಡೆಯುವ ಹೊಂದಾಣಿಕಾ ಪ್ರಕ್ರಿಯೆಗಳಿಗೆ ಕುಲೀನರ ಒಳತೋಟಿ ನಿರೋಧಕ ಶಕ್ತಿಯನ್ನು ಚರಿತ್ರೆಯಿಂದಲೇ ಪಡೆದುಕೊಂಡಿದ್ದು, ಅವರ ಈ ದುಃಸ್ಥಿತಿಯನ್ನು ನಾವು ಅರ್ಥೈಸಬಹುದಾಗಿದೆ.

ಹೊಸದಾಗಿ ಹೊಮ್ಮುತ್ತಿರುವ ಸಾಮಾಜಿಕ ಆಶೋತ್ತರಗಳ ಭಾರತದಲ್ಲಿ ತಾವೇನಾದರೂ ಪ್ರಯೋಜಕಾರಿಯಾಗಬೇಕಾದರೆ ಕುಲೀನರು ಸಂಸ್ಕೃತಿಹೀನ ಹಂತವನ್ನು ಜೀವಿಸಲು ತಯಾರಾಗಿರಬೇಕಾಗಿದೆ. ಅದಕ್ಕಾಗಿ ಅವರು ತಮ್ಮನ್ನೇ ತಾವು ರೂಢಿಸಿಕೊಂಡಿರುವ ಸಂಸ್ಕೃತಿಯನ್ನು ಬಿಡಬೇಕಾಗುತ್ತದೆ. □

ಧರ್ಮಕ್ಕಿಲ್ಲ ದೇವರ ಹಂಗು

ಸಿ. ಎಚ್. ರಾಜಶೇಖರ್

ಬುದ್ಧಾಯಣ ೨೩

ಮನದಲ್ಲಿ ಮತ, ಧರ್ಮ, ನೈತಿಕತೆ ಮತ್ತು ಅನಂತತೆ ಹಾಗೂ ಯಾವುದು ಸತ್ಯ ಎಂಬ ಮೂಲ ಭೂತ ಸಮಸ್ಯೆಗಳಿಗೆ ಉತ್ತರ ಕಾಣದೆ ಚಿಂತಾಕ್ರಾಂತನಾಗಿದ್ದ. ಅಂತಹ ಸಂದರ್ಭದಲ್ಲಿ ಗೌತಮ ಬುದ್ಧನು ಜೇಟ ಅರಣ್ಯದಲ್ಲಿ ಅನಾಥ ಪಿಂಡಿಕ ನಿರ್ಮಿಸಿದ ವಿಹಾರದಲಿ ತಂಗಿರುವ ವಿಷಯ ಪೊತ್ತಪಾದನ ಕಿವಿಗೆ ಬೀಳುತ್ತದೆ. ತನ್ನ ಸಮಸ್ಯೆಗಳಿಗೆ ಮತ್ತು ಸಂಶಯಗಳಿಗೆ ಸರಿಯಾದ ಉತ್ತರ ನೀಡಿ ದಾರಿ ತೋರಿಸ ಬಲ್ಲ ಗುರುವೆಂದರೆ ಬುದ್ಧನೊಬ್ಬನೇ ಎಂದು ಕಂಡುಕೊಂಡು ತನ್ನ ಶಿಷ್ಯರೊಂದಿಗೆ ಬುದ್ಧನ ಬಳಿ ಬಂದು ವಂದಿಸಿ ಸಮೀಪ ಕುಳಿತ. ತನ್ನ ಪರಿಚಯವನ್ನು ಮಾಡಿಕೊಂಡ.

ಪೊತ್ತಪಾದ ಎಂಬುವನು ಒಬ್ಬ ಅಲೆಮಾರಿ ಸಂನ್ಯಾಸಿ. ಆತ ಬುದ್ಧನ ಸಮಕಾಲೀನ ಮತ್ತು ಬುದ್ಧನ ಪ್ರಥಮ ಶಿಷ್ಯರಲ್ಲಿ ಪ್ರಮುಖ ತತ್ವಶಾಸ್ತ್ರಜ್ಞ. ಬುದ್ಧನನ್ನು ಸಂಧಿಸಿ ಅವನ ಶಿಷ್ಯತ್ವ ಪಡೆಯುವ ಮುನ್ನ ತನ್ನದೆ ಆದ ತತ್ವಜಿಜ್ಞಾಸೆಯನ್ನು ಹೊತ್ತು ಊರೂರು ಅಲೆಯುತ್ತಿದ್ದ. ಅಂತಹ ಸಂದರ್ಭದಲ್ಲಿ ಇವನ ಅನುಯಾಯಿಗಳಾಗಿ ಮುನ್ನೂರು ಮಂದಿ ಶಿಷ್ಯರಿದ್ದರು. ಈ ಅಲೆಮಾರಿಯು ಒಮ್ಮೆ ಮಲ್ಲಿಕಾ ರಾಣಿಯ ಉದ್ಯಾನದಲ್ಲಿ ನಿರ್ಮಿಸಿದ್ದ ಭವನದಲ್ಲಿ ತಂಗಿದ್ದನು.

ಇವನ ಮನದಲ್ಲಿ ಮತ, ಧರ್ಮ, ನೈತಿಕತೆ ಮತ್ತು ಅನಂತತೆ ಹಾಗೂ ಯಾವುದು ಸತ್ಯ ಎಂಬ ಮೂಲಭೂತ ಸಮಸ್ಯೆಗಳಿಗೆ ಉತ್ತರ ಕಾಣದೆ ಚಿಂತಾಕ್ರಾಂತನಾಗಿದ್ದ. ಅಂತಹ ಸಂದರ್ಭದಲ್ಲಿ ಗೌತಮ ಬುದ್ಧನು ಜೇಟ ಅರಣ್ಯದಲ್ಲಿ ಅನಾಥಪಿಂಡಿಕಾ ನಿರ್ಮಿಸಿದ ವಿಹಾರದಲಿ ತಂಗಿರುವ ವಿಷಯ ಪೊತ್ತಪಾದನ ಕಿವಿಗೆ ಬೀಳುತ್ತದೆ. ತನ್ನ ಸಮಸ್ಯೆಗಳಿಗೆ ಮತ್ತು ಸಂಶಯಗಳಿಗೆ ಸರಿಯಾದ ಉತ್ತರ ನೀಡಿ ದಾರಿ ತೋರಿಸ ಬಲ್ಲ ಗುರುವೆಂದರೆ ಬುದ್ಧನೊಬ್ಬನೇ ಎಂದು ಕಂಡುಕೊಂಡು ತನ್ನ ಶಿಷ್ಯರೊಂದಿಗೆ ಬುದ್ಧನ ಬಳಿ ಬಂದು ವಂದಿಸಿ ಸಮೀಪ ಕುಳಿತ. ತನ್ನ ಪರಿಚಯವನ್ನು ಮಾಡಿಕೊಂಡ. ನಂತರ ಬುದ್ಧನನ್ನುದ್ದೇಶಿಸಿದ ಪೊತ್ತಪಾದ:

ಗುರುದೇವಾ, ನನ್ನನ್ನು ಕಾಡುತ್ತಿರುವ ಹಲವು ಸಮಸ್ಯೆಗಳಿಗೆ ಸಂಶಯಗಳಿಗೆ ನಿಮ್ಮಲ್ಲಿ ಸರಿ ಉತ್ತರ ಕಂಡುಕೊಳ್ಳಬೇಕೆಂದು ಬಯಸಿ ಬಂದಿದ್ದೇನೆ. ಅನುಗ್ರಹಿಸಿ ಹಾರೈಸಬೇಕೆಂಬುದು ನನ್ನ ಸವಿನಯ ವಿನಂತಿ.' ಎನ್ನಲು ಬುದ್ಧನು:

'ಗೆಳೆಯ ಪೊತ್ತಪಾದ, ನಿನ್ನ ಸಮಸ್ಯೆಗಳ ವಿಷಯವೇನು? ನಿನ್ನ ಸಂಶಯಗಳ ವಿಸ್ತಾರವೇನು? ಎಂಬುದನ್ನು ಮೊದಲು ವಿವರಿಸು' ಎನ್ನಲು ಪೊತ್ತಪಾದ:

'ಗುರುದೇವಾ, ಮತ ಮತ್ತು ಧರ್ಮ ಎಂಬುದು ಒಂದೆಯೇ? ಅಥವಾ ಬೇರೆ ಬೇರೆಯೇ? ಒಂದೇ ಆಗಿದ್ದರೆ ಅದು ಹೇಗೆ ಎಂಬುದನ್ನು ಅಥವಾ ಬೇರೆ ಎಂಬುದಾಗಿದ್ದಾರೆ ಹೇಗೆ? ಎಂಬುದನ್ನು ತಿಳಿಯ ಹೇಳಿ'

'ಪೊತ್ತಪಾದ, ಮತ ಮತ್ತು ಧರ್ಮ ಎಂದಿಗೂ ಒಂದೇ ವಿಷಯವಲ್ಲ. ಆ ಎರಡೂ ಬೇರೆ ಬೇರೆ.'

'ಗುರುದೇವಾ, ಹಾಗಾದರೆ ಮತ ಎಂದರೆ ಏನು?'

'ಮತ ಎಂಬುದು ಹಲವು ಅರ್ಥಗಳು ಒಂದು ಪದ. ಮತವು ಹಲವು ಹಂತಗಳಲ್ಲಿ ಮುಂದುವರಿದಿರುವುದೇ ಇದಕ್ಕೆ ಕಾರಣ. ಮಿಂಚು, ಮಳೆ ಮತ್ತು ಪ್ರವಾಹಗಳಂತಹ ಘಟನೆಗಳನ್ನು ವಿವರಿಸಲು ಪ್ರಾರಂಭದ ಹಂತದಲ್ಲಿ ಆದಿಮಾನವನಿಗೆ ಸಾಧ್ಯವಾಗಲಿಲ್ಲ. ಆಗ ಅದು ಮಂತ್ರ–ತಂತ್ರದೊಂದಿಗೆ ಅನನ್ಯ ರೂಪ ಪಡೆಯಿತು. ನಂತರದ ಹಂತದಲ್ಲಿ ನಂಬಿಕೆ, ಪ್ರಾರ್ಥನೆ ಮತ್ತು ಬಲಿಯಲ್ಲಿ ತನ್ನನ್ನು ಸಮೀಕರಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ದೇವರು ಮತ್ತು ಆತ್ಮದ ಅವಿಷ್ಕಾರ ಹುಟ್ಟಿತು. ವೈಯಕ್ತಿಕವಾಗಿರಬೇಕಾದ ಮತವು ಸಾರ್ವತ್ರಿಕಗೊಂಡಾಗ ದುರಂತ ಪ್ರಾರಂಭವಾಯಿತು. ಪದಾರ್ಥಗಳ ಉಗಮವನ್ನು ತಿಳಿಸಿರುವುದೇ ಮತ'

'ಗುರುದೇವಾ, ಧರ್ಮ ಎಂದರೆ ಏನು? ಅದರ ಅಗತ್ಯವೇನು? ಅದರ ಮೂಲವೇನು?'

'ಗೆಳೆಯಾ, ಧರ್ಮ ಎಂದರೆ ಸ್ವಾತಂತ್ರ್ಯ, ಯಾರಿಗೆ ಸ್ವಾತಂತ್ರ್ಯದ ಬಯಕೆ ಇದೆಯೋ, ಅವರು ಧರ್ಮವನ್ನು ಆಚರಿಸಲೇಬೇಕು. ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಮನುಷ್ಯ ಮನುಷ್ಯನ ನಡುವೆ ಸರಿಯಾದ ಸಂಪರ್ಕವನ್ನು ಇರಿಸುವುದೇ ಧರ್ಮದ ಅಗತ್ಯ ಮನುಷ್ಯ ಏಕಾಂಗಿ ಆಗಿ ಇದ್ದರೆ ಅಂತವನಿಗೆ ಧರ್ಮದ ಅಗತ್ಯವಿಲ್ಲ. ಸಂಘ ಜೀವನದ ಪ್ರಮುಖ ಅಂಗವೇ ಧರ್ಮ. ಧರ್ಮವಿಲ್ಲದೆ ಸಮಾಜವು ನಡೆಯಲಾರದು. ಧರ್ಮದ ಮೂಲವೆಂದರೆ ಪ್ರಜ್ಞೆ ಮತ್ತು ಕರುಣೆಗಳ ಸಂಗಮ. ಇವೆರಡೂ ಧರ್ಮದ ಕಣ್ಣುಗಳು ಅಥವಾ ಮೂಲೆ ಕಂಬಗಳು.'

'ಗುರುದೇವಾ, ಪ್ರಜ್ಞೆ ಎಂದರೆ ಏನು? ಅದರ ಅಗತ್ಯವೇನು?'
'ಪ್ರಜ್ಞೆ ಎಂದರೆ ಅರಿವು. ಇದು ಧರ್ಮದ ಒಂದು ಕಣ್ಣು ಅಥವಾ ಮೂಲೆ ಕಂಬ. ಅರಿವಿದ್ದ ಕಡೆ ಮೂಢನಂಬಿಕೆಗೆ ಅವಕಾಶ ವಿಲ್ಲ''ಗುರುದೇವಾ, ಕರುಣೆ ಎಂದರೆ ಏನು? ಕರುಣೆಯ ಅಗತ್ಯ ವೇನು?'
'ಕರುಣೆಯೇ ಪ್ರೀತಿ. ಅದಿಲ್ಲದೆ ಸಮಾಜವು ಬದುಕಲೂ ಸಾಧ್ಯ ವಿಲ್ಲ ಬೆಳೆಯಲೂ ಸಾಧ್ಯವಿಲ್ಲ. ಇದು ಧರ್ಮದ ಎರಡನೇಯ ಕಣ್ಣು ಅಥವಾ ಮೂಲೆ ಕಂಬ'

'ಗುರುದೇವಾ, ಪ್ರಜ್ಞೆ ಎಂದರೆ ಏನು? ಅದರ ಅಗತ್ಯವೇನು?'

'ಪ್ರಜ್ಞೆ ಎಂದರೆ ಅರಿವು. ಇದು ಧರ್ಮದ ಒಂದು ಕಣ್ಣು ಅಥವಾ ಮೂಲೆ ಕಂಬ. ಅರಿವಿದ್ದ ಕಡೆ ಮೂಢನಂಬಿಕೆಗೆ ಅವಕಾಶವಿಲ್ಲ'

'ಗುರುದೇವಾ, ಕರುಣೆ ಎಂದರೆ ಏನು? ಕರುಣೆಯ ಅಗತ್ಯವೇನು?'

'ಕರುಣೆಯೇ ಪ್ರೀತಿ. ಅದಿಲ್ಲದೆ ಸಮಾಜವು ಬದುಕಲೂ ಸಾಧ್ಯವಿಲ್ಲ ಬೆಳೆಯಲೂ ಸಾಧ್ಯವಿಲ್ಲ. ಇದು ಧರ್ಮದ ಎರಡನೇಯ ಕಣ್ಣು ಅಥವಾ ಮೂಲೆ ಕಂಬ'

'ಗುರುದೇವಾ, ಪ್ರಪಂಚವು ಅನಂತವಾದುದ್ದೇ? ಸಾಂತವಾದುದ್ದೇ? ಆತ್ಮ ಮತ್ತು ಶರೀರ ಬೇರೆ ಬೇರೆಯ ಪದಾರ್ಥವೆ? ಸತ್ಯವನ್ನು ಕಂಡುಕೊಂಡ ಮನುಷ್ಯನಿಗೆ ಪುನರ್ಜನ್ಮವಿದಿಯೇ? ಅಥವಾ ಇಲ್ಲವೆ?'

'ಗೆಳೆಯ ಪೊತ್ತಪಾದ. ನಾನು ಈ ಪ್ರಶ್ನೆಗಳಿಗೆ ಉತ್ತರಿಸಲಾರೆ. ಏಕೆಂದರೆ, ಅದು ಧರ್ಮಕ್ಕೆ ಸಂಬಂಧಿಸಿದಲ್ಲ. ನಿಜವಾದ ನಡತೆ ಅಥವಾ ನಿರ್ಲಿಪ್ತತೆಗೆ ಸಂಬಂಧಿಸಿದ್ದಲ್ಲ. ಲಾಲಸೆಗಳಿಂದ ಮುಕ್ತವಾಗಿ ಶುದ್ಧವಾಗುವುದಕ್ಕಾಗಲೀ ಶಾಂತ ಸ್ಥಿತಿಗಾಗಲಿ ಸಂಬಂಧಿಸಿದ್ದಲ್ಲ. ಹೃದಯ ಸಾಂತ್ವನಕ್ಕಾಗಲೀ, ನಿಜವಾದ ಜ್ಞಾನಕ್ಕಾಗಲೀ ಹಂಬಲಿಸುವಂತಹದ್ದಲ್ಲ. ಸನ್ಮಾರ್ಗದ ಮೇಲು, ಮೇಲಿನ ಹಂತಗಳ ಬಗ್ಗೆ ಒಳನೋಟ ಪಡೆಯುವುದಕ್ಕಾಗಲೀ ಅಥವಾ ಉನ್ನತ ಬದುಕಿನ ನಿರ್ಮಾಣಕ್ಕಾಗಲೀ ಅದು ನೆರವಾಗುವುದಿಲ್ಲ. ಆದ್ದರಿಂದ ಅದರ ಬಗ್ಗೆ ನಾನು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಲಾರೆ'

'ಗೆಳೆಯಾ, ಪೊತ್ತಪಾದ, ಅದಕ್ಕೆ ಬದಲಾಗಿ ದುಃಖ ಯಾವುದು? ಅದರ ಮೂಲ ಅದರ ನಿವಾರಣೆ ಹೇಗೆ ಎಂಬುದನ್ನು ವಿವರಿಸಿದ್ದೇನೆ. ಅತ್ತ ಕಡೆ ಗಮನ ಹರಿಸು'

ಗುರುದೇವಾ, ಹಾಗಾದರೆ ಮತದ ಉದ್ದೇಶವೇನು? ಮತ್ತು ಧರ್ಮದ ಉದ್ದೇಶವೇನು?'

'ಗೆಳೆಯಾ, ಇವೆರಡೂ ಉತ್ತರಧ್ರುವ ಮತ್ತು ದಕ್ಷಿಣ ಧ್ರುವಗ

ಳಂತೆ. ಪ್ರಪಂಚದ ಉಗಮವನ್ನು ವಿವರಿಸುವುದೇ ಮತದ ಉದ್ದೇಶ. ಪ್ರಪಂಚವನ್ನು ಪುನರ್ನಿಮಿಸುವುದೇ ಧರ್ಮದ ಉದ್ದೇಶ'

'ಗುರುದೇವಾ, ಮತದಲ್ಲಿ ನೈತಿಕತೆಯ ಸ್ಥಾನಮಾನವೇನು? ಅದರ ವಾದವೇನು? ಅದರ ಪರಿಣಾಮವೇನು?'

'ಸತ್ಯ ಸಂಗತಿ ಎಂದರೆ, ಮತದಲ್ಲಿ ನೈತಿಕತೆಗೆ ಯಾವ ಸ್ಥಾನವೂ ಇಲ್ಲ. ಏಕೆಂದರೆ ಎಲ್ಲಿ ಮನುಷ್ಯ ಮನುಷ್ಯನ ಸಂಬಂಧವಿರುತ್ತದೋ, ಎಲ್ಲಿ ಶಾಂತಿ ಮತ್ತು ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಪ್ರಶ್ನೆ ಉದ್ಭವಿಸುತ್ತದೋ, ಅಲ್ಲಿ ನೈತಿಕತೆಯ ಪ್ರಶ್ನೆ ಮೂಡುತ್ತದೆ. ಆದರೆ ದೇವರು, ಆತ್ಮ, ಪ್ರಾರ್ಥನೆಗಳು, ಪೂಜೆ, ಮತಾಚರಣೆಗಳು, ಮತೀಯ ಸಮಾರಂಭಗಳು ಮತ್ತು ಪ್ರಾಣಿಬಲಿ ಮುಂತಾದ ವಿಷಯಗಳನ್ನಷ್ಟೇ ಮತ ಒಳಗೊಂಡಿದೆ. ಹಾಗಾಗಿ ಮತವು ಒಂದು ಮುಮ್ಮೂಲೆಯ ತುಂಡು. ಮತದ ವಾದವೆಂದರೆ ನೀವಿಬ್ಬರೂ ದೇವರ ಮಕ್ಕಳಾದುದರಿಂದ ನಿಮ್ಮ ನೆರೆಯವನಿಗೆ ನೀನು ಒಳ್ಳೆಯವನಾಗಿರು. ಹೀಗೆ ಪ್ರತಿಯೊಂದು ಮತವೂ ನೈತಿಕತೆಯನ್ನು ಬೋಧಿಸಿದರೂ, ನೈತಿಕತೆಯು ಮತದ ಮೂಲವಲ್ಲ. ಆದ್ದರಿಂದ ಮತದ ಕಾರ್ಯನಿರ್ವಹಣೆಯಲ್ಲಿ, ನೈತಿಕತೆಯ ಪಾತ್ರ ಆಕಸ್ಮಿಕ ಮತ್ತು ಸಾಂದರ್ಭಿಕ ಹೀಗಾಗಿ ಮತದಲ್ಲಿ ನೈತಿಕತೆ ಪರಿಣಾಮಕಾರಿ ಆಗಿಲ್ಲ'

'ಗುರುದೇವಾ, ಧರ್ಮಕ್ಕೂ ದೇವರಿಗೂ ಸಂಬಂಧವಿದಿಯೆ? ನೈತಿಕತೆಯೂ ಉದ್ಭವಿಸುವುದು ಯಾವಾಗ? ಧರ್ಮದಲ್ಲಿ ನೈತಿಕತೆಯ ಸ್ಥಾನವೇನು?

'ಗೆಳೆಯಾ, ಪೊತ್ತಪಾದ, ಧರ್ಮಕ್ಕೆ ದೇವರ ಅಗತ್ಯವಿಲ್ಲ ಅಥವಾ ಧರ್ಮದಲ್ಲಿ ದೇವರಿಲ್ಲ. ಎಲ್ಲಿ ಮನುಷ್ಯ ಮನುಷ್ಯನನ್ನು ನೇರವಾಗಿ ಪ್ರೀತಿಸುವ ಅಗತ್ಯವಿರುತ್ತದೋ, ಅಲ್ಲಿ ನೈತಿಕತೆ ಉದ್ಭವಿಸುತ್ತದೆ. ಧರ್ಮದಲ್ಲಿ ದೇವರ ಸ್ಥಾನವನ್ನು ನೈತಿಕತೆ ತೆಗೆದುಕೊಳ್ಳುತ್ತದೆ. ಹಾಗಾಗಿ ನೈತಿಕತೆಯೇ ಧರ್ಮ ಮತ್ತು ಧರ್ಮವೇ ನೈತಿಕತೆ! ಪ್ರಾರ್ಥನೆಗೆ, ಪೂಜೆಗೆ, ತೀರ್ಥಯಾತ್ರೆಗೆ, ಮತಾಚರಣೆಗಳಿಗೆ, ಮತೀಯ ಸಮಾರಂಭಗಳಿಗೆ ಅಥವಾ ಬಲಿಗೆ ಇಲ್ಲಿ ಸ್ಥಾನವಿಲ್ಲ. ಇಲ್ಲಿ ದೇವರ ಅನುಮತಿಯ ಅಗತ್ಯವಿಲ್ಲ. ದೇವರನ್ನು ಸಂತೃಪ್ತಿಪಡಿಸುವುದಕ್ಕಾಗಿ ಮನುಷ್ಯನು ನೈತಿಕತೆಯನ್ನು ಹೊಂದಿದವನಾಗಿರಬೇಕಿಲ್ಲ. ತನ್ನ ಒಳ್ಳೆಯದಕ್ಕಾಗಿಯೇ ಮನುಷ್ಯನು ಮನುಷ್ಯನನ್ನು ಪ್ರೀತಿಸಬೇಕು. ನೈತಿಕತೆಯೇ ಧರ್ಮದ ಸಾರ ಅದನ್ನು ಬಿಟ್ಟು ಧರ್ಮವಿಲ್ಲ'

'ಪೊತ್ತಪಾದ, ಆದರೆ ಕೊನೆಯದಾಗಿ ನೆನಪಿರಲಿ: ಕೇವಲ ನೈತಿಕತೆಯೇ ಸಾಲದು ಅದು ಸರ್ವರ ಹಿತ ಕಾಪಾಡುವ ಪವಿತ್ರವೂ, ಭ್ರಾತೃತ್ವವೂ ಮತ್ತು ವಿಶ್ವವ್ಯಾಪಿಯೂ ಆಗಿರಬೇಕು!' ಎನ್ನಲು ಆಗ ಪೊತ್ತಪಾದನಿಗೆ ತನ್ನಲ್ಲಿದ್ದ ಪ್ರಶ್ನೆಗಳು ಮತ್ತು ಸಂಶಯಗಳಿಗೆ ಸರಿ ಉತ್ತರ ಸಿಕ್ಕಿ ತನ್ನ ಅಲೆದಾಟ ಸಾರ್ಥಕವೆನಿಸಿತು. ಯಾವ ಬುದ್ಧನ ಸಂದರ್ಶನಕ್ಕೆ ಕಲ್ಪಾಂತರಗಳಿಂದ ಹಂಬಲಿಸಿದ್ದನೋ ಅದು ಫಲಿಸಲು ಬುದ್ಧನನ್ನುದ್ದೇಶಿಸಿ ಹೀಗೆ ನಮಿಸಿದ;

'ಗುರುದೇವಾ, ಇಹದ ಏಳಿಗೆಗೆ ಪರಲೋಕಕ್ಕೆ ಕೈಚಾಚದ ನೀನು, ನಿಜಕ್ಕೂ ಜ್ಞಾನೋದಯಗೊಂಡ ಮಹಾ ಚಿಂತಕನೇ ಸರಿ! ಇಂದು, ಈಗ, ಈ ಕ್ಷಣವೇ ಮುಖ್ಯವೆಂದು ನೀನು ಇಳೆಯಲ್ಲಿಯೇ ಭೂಸ್ವರ್ಗ ಸಾಧ್ಯವೆಂದು ಸಾಧಿಸಿ ತೋರಿಸಿದ ಕರ್ಮಯೋಗಿ ನೀನು ನಿನ್ನ ಸಾಧನೆಗೆ ಶರಣೆಂದೆ ದೊರೆಯೆ...!!!' □

ಪ್ರಕೃತಿಗೆ ಮಿಗಿಲು ಗುರುವಿಲ್ಲ

ಬುದ್ಧ ಪ್ರಕೃತಿ ಮತ್ತು ಪುರುಷರಲ್ಲಿ ಸುಂದರವಾದದ್ದನ್ನು ಕಂಡರೆ ಅದೆಷ್ಟು ಸಂತೋಷಗೊಳ್ಳುತ್ತಿದ್ದ ಎಂದರೆ. ಬಹುಶಃ ಅವನನ್ನು 'ಸೌಂದರ್ಯ ಬುದ್ಧ'ನೆಂದು ಕರೆಯಬಹುದಿತ್ತು ಎಂದೆನಿಸುತ್ತದೆ. ಈ ಕಾರಣಕ್ಕಾಗಿಯೇ ಇರಬೇಕು ಅವನು ತನ್ನ ಬದುಕಿನ ಬಹುಭಾಗವನ್ನು ಪ್ರಕೃತಿಯ ಮಡಿಲಲ್ಲಿಯೇ ಕಳೆದದ್ದು. ಮನುಷ್ಯನಿಗೆ ಪ್ರಕೃತಿಯೇ ಮೊದಲ ಪಾಠಶಾಲೆ ಎಂದವನು ಬುದ್ಧ. ಮುಂದುವರೆದ ಆತ ಸೌಂದರ್ಯವೇ ವಿವೇಕವೆಂದ. ಮನುಷ್ಯ ಏನನ್ನು ಕಳೆದುಕೊಂಡರು ನಷ್ಟವಿಲ್ಲ. ಆದರೆ ವಿವೇಕವನ್ನು ಕಳೆದು ಕೊಂಡದಾದರೆ ಎಲ್ಲವನ್ನು ಕಳೆದು ಕೊಂಡಂತೆ ಎನ್ನುತ್ತಾನೆ.

ಬುದ್ಧ ಸೌಂದರ್ಯವನ್ನು ಮತ್ತು ವಿವೇಕವನ್ನು ಜೊತೆ ಜೊತೆಗೆ ಕಂಡವನು. ಬದುಕು ಮುಖ್ಯವೋ? ವಿವೇಕ ಮುಖ್ಯವೋ? ಎಂಬ ಪ್ರಸಂಗ ಬಂದಾಗ ವಿವೇಕದ ಕಡೆ ನಿಂತವನು.

ಒಮ್ಮೆ ಬುದ್ಧ ಊರಿಂದ ಊರಿಗೆ ಅಲೆಯುತ್ತಾ ದಟ್ಟ ಕಾಡಿನ ನಡುವೆ ತನ್ನ ಶಿಷ್ಯರೊಂದಿಗೆ ತಂಗಿದ್ದ. ಆ ಸಮಯದಲ್ಲಿ ಭಿಕ್ಷುವೊಬ್ಬನಿಗೆ ತನ್ನಲ್ಲಿ ಉದ್ಭವಿಸಿದ ಸಂಶಯವನ್ನು ನೀಗಿಸಿಕೊಳ್ಳುವ ಸಲುವಾಗಿ ಬುದ್ಧನ ಬಳಿ ಬಂದು ಆತನಿಗೆ ವಂದಿಸಿ ಸಮೀಪದಲ್ಲಿ ಕುಳಿತು ತನ್ನ ಜಿಜ್ಞಾಸೆಯನ್ನು ಹೀಗೆ ತೋಡಿಕೊಂಡ;

'ಗುರುವೇ, ಒಳ್ಳೆಯ ಮನಸ್ಥಿತಿಗಳು ಇನ್ನೂ ಹುಟ್ಟಿಲ್ಲದಿದ್ದಲ್ಲಿ ಅಥವಾ ಕೆಟ್ಟ ಮನಸ್ಥಿತಿಗಳು ನಾಶವಾಗದಿದ್ದಲ್ಲಿ ಅವರೆಡನ್ನೂ ಸರಿ ಮಾಡುವ ಶಕ್ತಿ ಯಾವುದಕ್ಕಿದೆ?'

'ಗೆಳೆಯ, ಪ್ರಕೃತಿಗೆ ಮಾತ್ರ! ನಾವು ಸುಂದರವಾಗಿರುವುದರ ಜೊತೆ ಸಖ್ಯವನ್ನು ಬೆಳಸಿಕೊಳ್ಳುವುದರಲ್ಲಿ ಮಾತ್ರ!!'

'ಗುರುವೆ. ಅದು ಹೇಗೆ? ಅದಕ್ಕೆ ಕಾರಣವೇನು?'

'ಗೆಳೆಯ, ಸುಂದರವಾಗಿರುವುದರೊಡನೆ ಸಖ್ಯ ಮಾಡಿಕೊಂಡಿರುವ ವ್ಯಕ್ತಿಯಲ್ಲಿ ಒಂದು ಪಕ್ಷ ಒಳ್ಳೆಯ ಮನಸ್ಥಿತಿಗಳು ಹುಟ್ಟಿಲ್ಲವಾದಲ್ಲಿ. ನೀನು ಪ್ರಕೃತಿಯಲ್ಲಿ ತನ್ನನ್ನು ಗಾಢವಾಗಿ ತೊಡಗಿಸಿಕೊಳ್ಳುವುದರಿಂದ ಒಳ್ಳೆಯ ಮನಸ್ಥಿತಿ ಎಚ್ಚೆತ್ತುಕೊಳ್ಳುತ್ತದೆ. ಕೆಟ್ಟ ಪ್ರವೃತ್ತಿಯ ಬಗ್ಗೆ ಅನಾದರ ಬೆಳೆಯುತ್ತದೆ. ಈ ಎರಡಕ್ಕೂ ನಿನ್ನಲ್ಲಿ ಇರುವ ವಿವೇಕವೇ ಮುಖ್ಯ ಅಥವಾ ಕ್ರಮಬದ್ಧವಾದ ಆಸಕ್ತಿಯೇ ಕಾರಣ'

'ಗುರುವೆ, ಸೌಂದರ್ಯದೊಂದಿಗೆ ಕ್ರಮಬದ್ಧವಾದ ಆಸಕ್ತಿ ಎಂದರೆ ಏನು?'

'ಗೆಳೆಯ, ಇಲ್ಲಿ ಯಾವುದು ಯಾರಿಗೂ ಉಚಿತವಾಗಿ ದೊರೆಯುವುದಿಲ್ಲ. ಎಲ್ಲವನ್ನು ತಮ್ಮ ತಮ್ಮ ಅಪಾರ ಪರಿಶ್ರಮದಿಂದಲೇ ಪಡೆಯಬೇಕು. ಹಾಗೆಯೇ ಪ್ರತಿಯೊಂದಕ್ಕೂ ಕ್ರಮಬದ್ಧತೆ. ಶಿಸ್ತು ಮತ್ತು ಆಸಕ್ತಿಬೇಕು. ಯಾರು ಕ್ರಮಬದ್ಧವಾದ ಆಸಕ್ತಿಯನ್ನು ತೋರಲಾರರೋ ಅವರಲ್ಲಿ ಜ್ಞಾನವು ಮೊಳೆಯುವುದಿಲ್ಲ. ಒಂದು ವೇಳೆ ಜ್ಞಾನವು ಈಗಾಗಲೇ ಮೊಳೆತಿದ್ದಲಿ ಅದು ಸಂಪೂರ್ಣವಾಗಿ ವಿಕಾಸ ಹೊಂದುವುದಿಲ್ಲ, ಇದು ಬಹು ದೊಡ್ಡ ಲೋಪ. ನಾವು ತುಂಬಿಕೊಳ್ಳಬೇಕಾದುದ್ದೇ ಈ ನಷ್ಟವನ್ನು'

'ಗುರುವೆ, ಇದು ಯಾವ ರೀತಿಯ ಲೋಪ ಯಾವ ರೀತಿಯ ನಷ್ಟ. ಗೆಳೆಯ ಬಂಧುವನ್ನು ಕಳೆದು ಕೊಂಡಾಗ ಆಗುವ ನಷ್ಟ ಸ್ವಲ್ಪ. ಅಥವಾ ಬಂಧಗಳು ಹೆಚ್ಚಾದಾಗ ಆಗುವ ಲಾಭ ಅತ್ಯಲ್ಪ. ಕೀರ್ತಿಯನ್ನು ಕಳೆದು ಕೊಂಡಾಗ ಆಗುವ ನಷ್ಟ ಅಲ್ಲ. ಸಂಪತ್ತನ್ನು ಕಳೆದು ಕೊಂಡಾಗ ಆಗುವ ನಷ್ಟ ಅತ್ಯಲ್ಪ. ಆದರೆ ಸೌಂದರ್ಯದೊಂದಿಗೆ ನಿನ್ನ ಸಖ್ಯ ಅಥವಾ ವಿವೇಕವನ್ನು ಕಳೆದು ಕೊಂಡರೆ ಅದರಿಂದ ಅಪಾರ ನಷ್ಟವನ್ನು ಅನುಭವಿಸುವೆ. ವಿವೇಕವೇ ಜ್ಞಾನ, ಜ್ಞಾನವೇ ಸೌಂದರ್ಯ. ಅದುವೆ ಪ್ರಕೃತಿಯ ಸಖ್ಯ. ಅದನ್ನೇ ನಾನು "ಗಣಿ" ಎನ್ನುವುದು'

'ಹೌದು ಗುರುದೇವಾ. ಸೌಂಧರ್ಯವೆ ಜ್ಞಾನ..! ಜ್ಞಾನವೇ ವಿವೇಕ...!! ಸುಂದರವಾದುದರ ಸಖ್ಯವೇ ಗಣಿ...!!! ವಂದನೆಯು ಗುರುವೆ ಎಂದ. □

*** 'ಗುರುವೇ, ಒಳ್ಳೆಯ ಮನಸ್ಥಿತಿಗಳು ಇನ್ನೂ ಹುಟ್ಟಿಲ್ಲದಿದ್ದಲ್ಲಿ ಅಥವಾ ಕೆಟ್ಟ ಮನಸ್ಥಿತಿಗಳು ನಾಶವಾಗದಿದ್ದಲ್ಲಿ ಅವರೆಡನ್ನೂ ಸರಿ ಮಾಡುವ ಶಕ್ತಿ ಯಾವುದಕ್ಕಿದೆ?'**

*** 'ಗೆಳೆಯ, ಪ್ರಕೃತಿಗೆ ಮಾತ್ರ! ನಾವು ಸುಂದರವಾಗಿರುವುದರ ಜೊತೆ ಸಖ್ಯವನ್ನು ಬೆಳಸಿಕೊಳ್ಳುವುದರಲ್ಲಿ ಮಾತ್ರ!!'**

'SAMVADA' Kannada Monthly, July 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:

* ಆ ದೀರ್ಘ ಮೌನ (ಇಂಗ್ಲೀಷ್ ಮೂಲ: ಶಶಿ ದೇಶಪಾಂಡೆ, ಅನು : ವಿಜಯ ಕರ್ಣೇಕಲ್ 120.00
* ಆರು ಅಡಿ ಭೂಮಿ (ಉರ್ದೂ ಮೂಲ: ಅಬ್ದುಸ್ಸಮದ್; ಅನು: ಪಂಚಾಕ್ಷರಿ ಹಿರೇಮಠ 150.00
* ಅರ್ಧನಾರೀಶ್ವರ (ಹಿಂದಿ ಮೂಲ: ವಿಷ್ಣು ಪ್ರಭಾಕರ್; ಅನು: ಎಸ್.ಎಮ್. ರಾಮಚಂದ್ರಸ್ವಾಮಿ) 250.00
* ನೀಲಿಚಂದಿರ (ಹಿಂದಿ ಮೂಲ: ಶಿವಪ್ರಸಾದ ಸಿಂಹ; ಅನು: ಪಿ. ಶಶಿಕಲಾ) 350.00
* ಚಿಟ್ಟಾಲಹು (ಪಂಜಾಬೀ ಮೂಲ: ನಾನಕ್ ಸಿಂಗ್; ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
* ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00

ಕಥಾ ಸಂಕಲನ:

* ಸ್ವರ್ಣಕಮಲಗಳು (ತೆಲುಗು ಮೂಲ: ಇಲ್ಲಿಂದಲ ಸರಸ್ವತೀದೇವಿ; ಅನು-ಪಿ. ವೇಣು-ಗೋಪಾಲ್) 300.00
* ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
* ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೊಮನಾಥ್) 125.00
* ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
* ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) 150.00
  ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) 160.00

ಕಾವ್ಯ:

* ಕನ್ನಡ ಸಾನೆಟ್ ಸಂಗ್ರಹ (ಸಂ.ಹೆಚ್.ಎಸ್. ವೆಂಕಟೇಶಮೂರ್ತಿ) 85.00
* ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
* ಸಂಬಂಧ (ಇಂಗ್ಲಿಷ್: ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) 50.00
* ತಮಿಳು ಕವಿತೆಗಳು (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ. ಎಲ್ ನಾಗಭೂಷಣ ಸ್ವಾಮಿ) 40.00
* ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
* ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

ಇತರ

* ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
* ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು: ವಿ. ಗೋಪಾಲಕೃಷ್ಣ) 200.00
* ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
* ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
* ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
* ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)

* ವ. ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
* ಜೆ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ